ತುಳಸಿ ಮತ್ತು ಪುದೀನಾ ಸಾರಭೂತ ತೈಲಗಳಲ್ಲಿರುವ ಪ್ರಮುಖ ಸಂಯುಕ್ತಗಳನ್ನು ಗುರುತಿಸಲು ವಿಶ್ಲೇಷಣೆ ಮಾಡಲಾಯಿತು. ಪುದೀನಾ ಸಾರಭೂತ ತೈಲದಲ್ಲಿ 29 ಸಂಯುಕ್ತಗಳಿವೆ, ಅದರಲ್ಲಿ ಪಿ ಮೆಂಥೇನ್–1,2,3–ಟ್ರಯೋಲ್, ಕ್ಯಾರಿಯೋಫಿಲ್ಲೀನ್ ಮತ್ತು ಜರ್ಮಕ್ರೀನ್–ಡಿ ಪ್ರಮುಖವಾದವು. ತುಳಸಿ ಸಾರಭೂತ ತೈಲಗಳಲ್ಲಿ 23 ಸಂಯುಕ್ತಗಳಿವೆ. ಅದರಲ್ಲಿ ಮಿಥೈಲ್ ಚಾವಿಕೋಲ್, ಕ್ಯಾರಿಯೋಫಿಲ್ಲೀನ್ ಮತ್ತು ಜರ್ಮಕ್ರೀನ್–ಡಿ ಪ್ರಮುಖವಾದವು. ತುಳಸಿ ಮತ್ತು ಪುದೀನಾ ಸಾರಭೂತ ತೈಲಗಳಲ್ಲಿರುವ ಆಂಟಿಆಕ್ಸಿಡೆಂಟ್ ಗುಣಗಳನ್ನು ಮೂಲಭೂತ ಶೇಖರಿಸುವ ವಿಧಾನ (ರೆಡಿಕಲ್ ಸ್ಕವೆಂಜಿಂಗ್) ಬಳಸಿ ಲೆಕ್ಕ ಮಾಡಲಾಯಿತು. ಹೆಚ್ಚುತ್ತಿರುವ ಪ್ರವೃತ್ತಿ ಜೊತೆಗೆ ಹೆಚ್ಚುತ್ತಿರುವ ಸುವಾಸನಾ ಸಂಯುಕ್ತಗಳು ಫಲಿತಾಂಶ ರೂಪದಲ್ಲಿ ದೊರೆತವು.

**ಆಂಧ್ರಪ್ರದೇಶದ ಹಣ್ಣು ಮತ್ತು ತರಕಾರಿ ಉತ್ಪನ್ನಗಳು (ಜ್ಯೋತಿರ್ಮಯಿ ಟಿ, ಸತ್ಯನಾರಾಯಣ ಎ)**

ಕರಬೂಜ ಹಣ್ಣಿನ ಉತ್ಪನ್ನಗಳಾದ ಹಣ್ಣಿನ ರೋಲ್‌ಗಳು, ಸಿರಪ್ ಮತ್ತು ಫೋಮ್ ಮ್ಯಾಟ್ ಒಣಗಿದ ಪುಡಿಗಳು ಗಾಢ ಕಿತ್ತಳೆ ಬಣ್ಣದಲ್ಲಿರುತ್ತದೆ. ಜೊತೆಗೆ ವಿಶಿಷ್ಟ ರುಚಿ ಮತ್ತು ಗಣನೀಯ ಪ್ರಮಾಣದ ವಿಟಮಿನ್ ಸಿ (21–289 ಮಿಲಿ ಗ್ರಾಮ್/100 ಗ್ರಾಮ್), ಒಟ್ಟೂ ಕ್ಯಾರೋಟೀನ್ (3.4–15.4 ಮಿಲಿ ಗ್ರಾಮ್/100 ಗ್ರಾಮ್) ಮತ್ತು ಪೊಲಿಫೆನೋಲ್ಸ್ (64–197 ಮಿಲಿ ಗ್ರಾಮ್/100 ಗ್ರಾಮ್) ಅನ್ನು ಹೊಂದಿರುತ್ತದೆ. ಫೋಮ್ ಮ್ಯಾಟ್ ಒಣಗಿದ ಪುಡಿಯನ್ನು ಐಸ್ಕ್ರೀಂ ಗೆ ಕ್ರಮವಾಗಿ 2 ಮತ್ತು 3% ನಲ್ಲಿ ಹಾಕಿದಾಗ ಸ್ವೀಕಾರಾರ್ಹ ಎಂದು ತಿಳಿದು ಬಂತು.

ಸಕ್ಕರೆಯನ್ನು ಉಪಯೋಗಿಸಿ ಕರೋಂದ (ಕರ್ಜಿಗೆ) ಹಣ್ಣಿನಿಂದ ತಯಾರಿಸಿದ ಕಟ್ಟಾ ಮೀಠಾ, ಬೆಲ್ಲದಲ್ಲಿ ತಯಾರಿಸಿದ್ದಕ್ಕಿಂತ ಹೆಚ್ಚು ಸ್ವೀಕಾರಾರ್ಹ ಕಂಡು ಬಂತು. ಅಂತೆಯೇ ಬೆಲ್ಲದ ಉತ್ಪನ್ನಗಳ ಜೊತೆ ಸ್ವಲ್ಪ ಕಹಿಯನ್ನು ಗಮನಿಸಲಾಯಿತು. ಕಟ್ಟಾ ಮೀಠಾವು ತೇವಾಂಶ (13.72%), ಆಮ್ಲತೆ (1.8%), ಕಡಿಮೆಗೊಳಿಸುವ ಸಕ್ಕರೆ (67.4%) ಮತ್ತು ಒಟ್ಟೂ ಸಕ್ಕರೆ (76.2%) ಹೊಂದಿರುತ್ತದೆ. ಅಂತೆಯೇ ಕರೋಂದ ಉಪ್ಪಿನಕಾಯಿಯನ್ನು, ಒಳ್ಳೆಯ ರಸ ಪಡೆಯಲು ಅದರ ತುಣುಕುಗಳನ್ನು ಮಸಾಲೆ ಪುಡಿಯೊಂದಿಗೆ ರುಬ್ಬುವುದರ ಮೂಲಕ ತಯಾರಿಸಲಾಯಿತು. ಅಂತೆಯೇ ಈ ಮಸಾಲೆ ಪುಡಿಯು ರಸಕ್ಕೆ ಒಳ್ಳೆಯ ಆಮ್ಲತೆ ನೀಡಿತು. ಕಿರು ನೆಲ್ಲಿಕಾಯಿಯ ಉತ್ಪನ್ನಗಳಾದ ಮುರಬ್ಬ, ಜೆಲ್ಲಿ ಮತ್ತು ಸಿರಪ್‌ಗಳು ಉತ್ತಮ ಪರಿಮಳ ಮತ್ತು ರುಚಿಯಿಂದ ಆಕರ್ಷಕವಾಗಿದ್ದವು ಅಲ್ಲದೇ, ವಿಟಮಿನ್ ಸಿ (13–28 ಮಿಲಿ ಗ್ರಾಮ್/100 ಗ್ರಾಮ್) ಮತ್ತು ಪೊಲಿಫೆನೋಲ್ಸ್ (115–128 ಮಿಲಿ ಗ್ರಾಮ್/100 ಗ್ರಾಮ್) ಇಂದ ಸಮೃದ್ಧವಾಗಿವೆ.

ಗೆಣಸು ಮತ್ತು ಕೆಸುವಿನ ಗೆಡ್ಡೆಯನ್ನು 0.3 ಮಿಲಿ ಮೀಟರ್ ದಪ್ಪ

ಹೋಳುಗಳನ್ನಾಗಿ ಮಾಡಿ 0.25% ಸಿಟ್ರಿಕ್ ಆಮ್ಲದಲ್ಲಿ ಕುದಿಸಿ, 0.1% ಕೆಎಮ್ಎಸ್ ದ್ರಾವಣದಲ್ಲಿ ಮುಳುಗಿಸಿ, 55 ಡಿಗ್ರಿ ಸೆಲ್ಸಿಯಸ್‌ನಲ್ಲಿ ಟ್ರೇ ಡ್ರಯಿಂಗ್ ಮಾಡಿ ನಿರ್ಜಲೀಕರಣ ಚಿಪ್ಸ್ ಅನ್ನು ತಯಾರಿಸಲಾಯಿತು. ಈ ರೀತಿ ತಯಾರಿಸಿದ ಚಿಪ್ಸ್ ಹೆಚ್ಚಿನ ನಾರಿನಂಶವನ್ನು ಹೊಂದಿತ್ತು (2–4%)

**ವಿರಳವಾಗಿ ಬಳಸಲ್ಪಟ್ಟ ಹಣ್ಣುಗಳು ಮತ್ತು ತರಕಾರಿಗಳು (ಗೊತ್ವಾಲ್ ಪಿ ಪಿ)**

ಮೌಲ್ಯಾಧಾರಿತ ಉತ್ಪನ್ನಗಳಾದ ಹಣ್ಣಿನ ತಿರುಳು, 10% ಹಣ್ಣಿನ ತಿರುಳಿರುವ ಪಾನೀಯ, ಅರ್‌ಟಿಎಸ್ ಪಾನೀಯಗಳು/ಮಕರಂದ/ಸ್ಕ್ವೇಶ್ ಗಿಡಮೂಲಿಕೆಗಳ ಜ್ಯಾಮ್ ಇವುಗಳನ್ನು ನೇರಳೆ (ಸೈಜೀಜಿಯಮ್ ಕ್ಯುಮಿನಿ), ರಾಸ್ಪ್ ಬೆರ್ರೀಸ್ (ರುಬಸ್ ರೊಸಿಫೊಲಿಯಸ್) ಮತ್ತು ಕಫಲ್ (ಮೈರಿಕಾ ನಾಗಿ) ಹಣ್ಣುಗಳಿಂದ ತಯಾರಿಸಲಾಯಿತು. ಮಾದರಿಗಳನ್ನು ಅವುಗಳ ಭೌತ ರಾಸಯನಿಕ ಅಧ್ಯಯನಕ್ಕೆ ಮತ್ತು ಜೀವಿತಾವಧಿ ತಿಳಿಯಲು ವಿಶ್ಲೇಷಿಸಲಾಯಿತು. ಮೇಲಿನ ಉತ್ಪನ್ನಗಳು ಅತೀ ಸಮೀಪದ ಸಂಯೋಜನಾ ವಿಶ್ಲೇಷಣೆಯಿಂದ (ಗಿಡಮೂಲಿಕೆ ಆಧಾರಿತ ಪೋಷಕಾಂಶ/ವಿಟಮಿನ್ ಮತ್ತು ಖನಿಜಗಳ ಮಿಶ್ರಣವನ್ನು ಹಾಕುವುದರ ಜೊತೆಗೆ) ಗಮನಾರ್ಹ ಮಟ್ಟದ ಅಗತ್ಯ ಸೂಕ್ಷ್ಮ ಪೋಷಕಾಂಶ ಮತ್ತು ಪೋಷಕಾಂಶಗಳನ್ನು ತೋರಿತು. ಶಾಖ ಸಂಸ್ಕರಿಸಿದ ತಿರುಳುಗಳಲ್ಲಿ 105 ದಿನಗಳ ಶೇಖರಣೆಯ ನಂತರ ಬ್ರೌನಿಂಗ್ ಅನ್ನು ಗಮನಿಸಲಾಯಿತು. ಆದರೆ ಇವುಗಳನ್ನು ಹೊರತುಪಡಿಸಿ ನೇರಳೆ, ರಾಸ್ಪ್ ಬೆರ್ರಿ ಮತ್ತು ಕಫಲ್ ಹಣ್ಣುಗಳಿಂದ ತೆಗೆದ ತಿರುಳು 90 ದಿನಗಳ ಶೇಖರಣೆಯ ನಂತರವೂ ಪರಿಮಳ ಮತ್ತು ಸ್ಥಿರತೆಯಲ್ಲಿ ಒಳ್ಳೆಯ ಸ್ಥಿತಿಯಲ್ಲಿದ್ದವು. ಆದಾಗ್ಯೂ ಧೀರ್ಘ ಕಾಲದ ಶೇಖರಣಾ ಸಮಯದಲ್ಲಿ ಒಟ್ಟೂ ಕರಗಬಲ್ಲ ಘನ ವಸ್ತುಗಳ ಪ್ರಮಾಣದಲ್ಲಿ ಗಮನಾರ್ಹ ಕಡಿತ ಗಮನಿಸಲಾಯಿತು. ಮೇಲಿನ ಸಂಸ್ಕರಿಸಿದ ಉತ್ಪನ್ನಗಳನ್ನು 7 ಮತ್ತು 37 ಡಿಗ್ರೀ ಸೆಲ್ಸಿಯಸ್ ತಾಪಮಾನ ಇರುವ ಕೋಣೆಯಲ್ಲಿ ಶೇಖರಿಸಿ ಅಧ್ಯಯನ ಮಾಡಿದಾಗ 6 ತಿಂಗಳುಗಳ ನಂತರವೂ ಅದರ ಒಟ್ಟೂ ಕರಗಬಲ್ಲ ಘನ ವಸ್ತುಗಳು, ಆಮ್ಲತೆ, ಒಟ್ಟೂ ಸಕ್ಕರೆ ಅಂಶ, ಖನಿಜಗಳು, ವಿಟಮಿನ್ ಸಿ, ಹಣ್ಣಿನ ನಾರು ಮತ್ತು ಸುವಾಸನೆಯಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಕಂಡು ಬರಲಿಲ್ಲ. ಮೇಲಿನ ಮೌಲ್ಯಾಧಾರಿತ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಬಹುದು ಮತ್ತು ವಾಣಿಜ್ಯೋದ್ಯಮಕ್ಕೆ ಉಪಯೋಗಿಸಬಹುದು.

**ಕೋಕಂ (ಮುರುಗಲು) (ಗಾರ್ಸಿನಿಯ ಇಂಡಿಕಾ)(ಬದ್ಗುಜಾರ್ ಪಿಎಮ್)**

ಕೋಕಂ ತೊಗಟೆಯ ಪೇಸ್ಟ್ ಅನ್ನು ತಯಾರಿಸಿ, ಅದನ್ನು ವಿವಿಧ ಧಾರಕಗಳಾದ ಲು ಲುಗ್ ಕ್ಯಾಪ್ ಬಾಟಲಿಗಳು, ಸ್ಟ್ಯಾಂಡಿ ಚೀಲಗಳು ಪಿಇಟಿ ಧಾರಕ, ಹೆಪ್ಪುಗಟ್ಟಿದ ಸ್ಥಿತಿಯಲ್ಲಿರುವ ಎಚ್‌ಡಿಪಿಇ ಚೀಲಗಳು, ಸ್ಕ್ರ್ಯೂ ಕ್ಯಾಪ್ ಪಿಇಟಿ ಧಾರಕ ಮತ್ತು ಸ್ಕ್ರ್ಯೂ ರೀತಿ ಕ್ಯಾಪ್ ಇರುವ ಎಚ್‌ಡಿಪಿಇ ಚೀಲಗಳಲ್ಲಿ ಸಂಗ್ರಹಿಸಲಾಯಿತು. ಲು ಲುಗ್ ಕ್ಯಾಪ್ ಬಾಟಲಿಗಳು, ಸ್ಟ್ಯಾಂಡಿ ಚೀಲಗಳು ಪಿಇಟಿ ಧಾರಕ, ಹೆಪ್ಪುಗಟ್ಟಿದ ಸ್ಥಿತಿಯಲ್ಲಿರುವ ಎಚ್‌ಡಿಪಿಇ ಚೀಲಗಳು ಇವುಗಳಲ್ಲಿ ಸಂಗ್ರಹ ಮಾಡಿದಾಗ ಅವುಗಳ ಉಳಿಕೆ ಕಾಲ 12 ತಿಂಗಳುಗಳು ಆಗಿದ್ದವು. ಆದರೆ, ಸ್ಕ್ರ್ಯೂ ಕ್ಯಾಪ್ ಪಿಇಟಿ ಧಾರಕ ಮತ್ತು ಸ್ಕ್ರ್ಯೂ ರೀತಿ ಕ್ಯಾಪ್ ಇರುವ ಎಚ್‌ಡಿಪಿಇ ಚೀಲಗಳಲ್ಲಿ ಅವುಗಳ ಉಳಿಕೆ ಕಾಲ 3 ಮತ್ತು 4 ತಿಂಗಳುಗಳು ಆಗಿದ್ದವು. ರಕ್ಷಿತ ಕೋಕಂ ಚೂರುಗಳನ್ನು, ರಕ್ಷಿತ ಕೋಕಂ ಪೇಸ್ಟ್ ಅನ್ನು ರಕ್ಷಿತ ಇಡೀ ಹಣ್ಣನ್ನು ಜೊತೆಗೆ ಲೈ ಪೀಲಿಂಗ್ (ಲೈ ದ್ರಾವಣದಲ್ಲಿ ಅದ್ದಿ ಹಣ್ಣಿನ ಸಿಪ್ಪೆ ಸೊಲಿಯುವುದು) ಮತ್ತು ಲೈ ಪೀಲಿಂಗ್ ಇಲ್ಲದೆ ತಯಾರಿಸಲಾಯಿತು. ಕೋಕಂ ಆಧಾರಿತ ಅರ್‌ಟಿಎಸ್ ಪಾನೀಯ, ಸ್ಕ್ವಾಷ್, ಗಜ್ಜರಿಯ ಅರ್‌ಟಿಎಸ್ ಪಾನೀಯ, ಖರ್ಜೂರದ ಅರ್‌ಟಿಎಸ್ ಪಾನೀಯ ಮತ್ತು ಇಂಗಾಲಾಮ್ಲದ ಅರ್‌ಟಿಎಸ್ ಪಾನೀಯಗಳನ್ನು ತಯಾರಿಸಲಾಯಿತು. ಅದೇ ರೀತಿ ಕೋಕಂ ಬಾರ್‌ಗಳನ್ನು ವಿವಿಧ ಪರಿಮಳಗಳಾದ ಜೀರಿಗೆ, ಹಣ್ಣು ಮತ್ತು ತರಕಾರಿ, ಮೊರಿಂಗ, ಗಜ್ಜರಿ, ಸೀಬೆ, ಬೆಂಡೆ ಬಾರ್ ಅನ್ನು ಎಳ್ಳು ಮತ್ತು ಗೇರುಬೀಜ ಉಪಯೋಗಿಸಿ ಮಾಡಲಾಯಿತು. ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಶೀತಕ ಮತ್ತು ಜೀರ್ಣಕಾರಕವಾಗಿ ಕುಡಿಯಲು ಉಪಯೋಗಿಸುವ ಸೋಲ್ಕಢಿ ಎಂಬ ಸಾಂಪ್ರದಾಯಿಕ ಪೇಯವನ್ನು ಕೋಕಂ ಪೇಸ್ಟ್ ನಿಂದ ನೀರು ಬಳಸಿ ಅದನ್ನು ತಿಳಿಗೊಳಿಸುವ ಮೂಲಕ ತಯಾರಿಸಲಾಯಿತು.

**ಜಟ್ರೋಫಾ (ಬೆಟ್ಟದ ಹರಳು) ಬೀಜದ ಕೇಕ್ (ಸೋಮಶೇಖರ ಡಿ)**

ಆರು ವಿವಿಧ ಶಿಲೀಂಧ್ರ ಕೃಷಿಗಳನ್ನು, ಘನ ರೂಪ (ಸೊಲಿಡ್ ಸ್ಟೇಟ್) ಹುದುಗಿಸುವಿಕೆ ಕ್ರಿಯೆಯನ್ನು ಜಟ್ರೊಫ ಬೀಜದ ಕೇಕ್ (ಜೆಎಸ್‌ಸಿ) ಅನ್ನು ನಿರ್ವಿಷೀಕರಣಗೊಳಿಸಲು ನಡೆಸಲಾಯಿತು. 6, 9 ಮತ್ತು 12 ನೆ ದಿನದ ಹುದುಗಿಸುವಿಕೆ ಕ್ರಿಯೆಯಲ್ಲಿ ಅಪೌಷ್ಟಿಕ ಘಟಕಗಳಾದ ಟ್ಯಾನಿನ್, ಫೈಟೇಟ್ಸ್, ಸೆಪೊನಿನ್ಸ್, ಲೆಕ್ಟಿನ್ ಮತ್ತು ಪ್ರೋಟಿಯೇಸ್ ನಿರೋಧಕ, ಫೋರ್ಬೋಲ್ ಎಸ್ಟರ್ಸ್ ಗಳಲ್ಲಿ ಕಡಿತವನ್ನು ವಿಶ್ಲೇಷಿಸಲಾಯಿತು. ಹುದುಗಿಸದ ಜೆಎಸ್‌ಸಿ ಯಲ್ಲಿ ಫೋರ್ಬೋಲ್ ಎಸ್ಟರ್ಸ್ ಅಂಶ 0.83 ಮಿಲಿ ಗ್ರಾಮ್/ಗ್ರಾಮ್. ಜೆಎಸ್‌ಸಿ ಯನ್ನು (ಕನ್ನಿಂಗ್‌ಹ್ಯಾಮೆಲ್ಲಾಎಚಿನುಲಟಾ) ಸಿಜೆಎಸ್–90 ರಲ್ಲಿ ಹುದುಗಿಸಿದಾಗ ಫೋರ್ಬೋಲ್ ಎಸ್ಟರ್ಸ್ ನ ಗರಿಷ್ಠ ವಿಘಟನೆ 75% ಮಟ್ಟಿಗೆ ವೀಕ್ಷಿಸಲಾಯಿತು. ಹುದುಗಿಸಿದ ಜೆಎಸ್‌ಸಿ ಯಲ್ಲಿ ಫೈಟೇಟ್ ವಿಘಟನೆಯ ವ್ಯಾಪ್ತಿ 65–96%. 6 ನೇ ದಿನದಿಂದ 12 ನೇ ದಿನಕ್ಕೆ ಜೆಎಸ್‌ಸಿಯಲ್ಲಿರುವ ಸೆಪೊನಿನ್ ಅಂಶದಲ್ಲಿ ಕ್ರಮೇಣ ಕಡಿತ ಉಂಟಾಯಿತು. ಸೆಪೊನಿನ್ ಕಡಿತವು ಘನ ಸ್ಥಿತಿ ಹುದುಗುವಿಕೆಯ ನಂತರ 55–99% ವ್ಯಾಪ್ತಿಯಲ್ಲಿತ್ತು. ಹುದುಗಿಸದ ಜೆಎಸ್‌ಸಿ ಯಲ್ಲಿ ಟ್ರಿಪ್ಸಿನ್ ಪ್ರತಿಬಂಧಕ ಕ್ರಿಯೆ ಮತ್ತು ಲೆಕ್ಟಿನ್ ಗಳು ಕ್ರಮವಾಗಿ 1680 ಟ್ರಿಪ್ಸಿನ್ ಪ್ರತಿಬಂಧಕ ಘಟಕಗಳು ಪ್ರತಿ ಗ್ರಾಮ್‌ಗೆ ಮತ್ತು 0.32 ಹಿಮೆಗ್ಲುಟಿನೇಟಿಂಗ್ ಘಟಕ ಇರುತ್ತವೆ. ಜೆಎಸ್‌ಸಿಯ 12ನೇ ದಿನದ ನಂತರ ಘನ ಸ್ಥಿತಿ ಹುದುಗುವಿಕೆಯಲ್ಲಿ ಟ್ರಿಪ್ಸಿನ್ ಪ್ರತಿಬಂಧಕ ಕ್ರಿಯೆ ಮತ್ತು ಲೆಕ್ಟಿನ್ ಅನ್ನು ಪತ್ತೆ ಮಾಡಲು ಸಾಧ್ಯವಿಲ್ಲ. ಹುದುಗಿಸದ ಜೆಎಸ್‌ಸಿಯಲ್ಲಿ 0.53% ಟ್ಯಾನಿನ್ಸ್ ಇದ್ದು, ಘನಸ್ಥಿತಿ ಹುದುಗಿಸುವಿಕೆಯ ನಂತರ ಪರಿಮಿತ ಹೆಚ್ಚಳ ಕಂಡುಬಂತು. ಫಲಿತಾಂಶಗಳು ಸೂಚಿಸುವುದೇನೆಂದರೆ ಜೈವಿಕ ನಿರ್ವಿಷೀಕರಣ ಕ್ರಿಯೆ ಜೆಎಸ್‌ಸಿ ಯಲ್ಲಿನ ಅಪೌಷ್ಟಿಕ ಸಂಯುಕ್ತಗಳು ಮತ್ತು ವಿಷಕಾರಿ ಜೀವಾಣುಗಳನ್ನು ಕಡಿತಗೊಳಿಸಲು ಒಂದು ಆಶಾದಾಯಕ ವಿಧಾನ ಇರಬಹುದು.

**ಕೃಷಿ ಮತ್ತು ಸಮುದ್ರ ತ್ಯಾಜ್ಯಗಳಿಂದ ಜೈವಿಕ ಚಟುವಟಿಕೆಗಳು**
(ಪೂರ್ಣಿಮಾ ಕೌಲ್ ಟಿಕು)

ತಾಳೆಯ ತಿರುಳು ಮತ್ತು ತೊಗರಿ ಬೇಳೆಯ ಗಿರಣಿ ತ್ಯಾಜ್ಯಗಳನ್ನು ಜೈವಿಕ ಕ್ರಿಯಾಶೀಲ ಪದಾರ್ಥಗಳು/ಪ್ರೋಟೀನ್ ಗಳನ್ನು ಪ್ರತ್ಯೇಕಿಸಲು ಬಳಸಲಾಯಿತು. ಸುಮಾರು 200 +/–10 ಕೆಡಿಎ ಅಣುದ್ರವ್ಯರಾಶಿಯುಳ್ಳ ಪ್ರಮುಖ ಸಂಗ್ರಹಿತ ಪ್ರೋಟೀನ್ ಅನ್ನು ಪ್ರತ್ಯೇಕಿಸಲಾಯಿತು. ಕೊಬ್ಬು ತೆಗೆದ ತಾಳೆ ಬೀಜದ ಎಣ್ಣೆಯಿಂದ ಶುದ್ಧೀಕರಿಸಲಾಯಿತು ಮತ್ತು ಗುಣಲಕ್ಷಣಗಳನ್ನು ನಿರೂಪಿಸಲಾಯಿತು. ಪ್ರೋಟೀನ್ ಮೂರು ಪ್ರಮುಖ ಉಪಘಟಕಗಳಿಂದ ಮಾಡಲ್ಪಟ್ಟಿದ್ದು, ಅವು ಒಂದು ಭಿನ್ನ ಜಾತಿಯ ಒಲಿಗೊಮರ್ ಆಗಿವೆ ಎಂದು ಕಡಿತಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ ಎಸ್‌ಡಿಎಸ್–ಪಿಎಜಿಇ ತೋರಿಸಿತು. ಪ್ರತ್ಯೇಕಿಸಿದ ಪ್ರೋಟೀನ್ ನ ಅಮೈನೋ ಆಮ್ಲದ ಅನುಕ್ರಮ ತಾಳೆಯ ಗ್ಲುಟಿಲಿನ್ ನ (ಇಲಾಯಿಸ್ ಗ್ವಿನೀನ್ಸಿಸ್) ಸಂಗ್ರಹಿತ ಪ್ರೋಟೀನ್ ಜೊತೆಗೆ ಹೋಲಿಕೆ ಹೊಂದಿತ್ತು. ಪ್ರೋಟೀನ್ ನ 3ಡಿ ರಚನಾತ್ಮಕ ವಿಶ್ಲೇಷಣೆಯು, 11ಎಸ್ ಗ್ಲೊಬ್ಯುಲಿನ್ ಬೀಜ ಸಂಗ್ರಹಿತ ಪ್ರೋಟೀನ್ ಜೊತೆಗೆ, ಪಿಡಿಬಿ ಹಿಟ್ಸ್ (ಜೆಪಿಆರ್‌ಇಡಿ3) ಉಪಯೋಗದಿಂದ ಸರಿ ಜೋಡಿ ಆಯಿತು. ಸಿಗ್ನಲ್ ಪೆಪ್ಟೈಡ್ ಸೀಳನ್ನು

ಗುರುತಿಸಲಾಯಿತು (ಸಿಗ್ನಲ್ ಪಿ–4). ಅಮೈನೋ ಆಮ್ಲದ ಪ್ರೊಫೈಲ್, ಪ್ರೋಟೀನ್ ಎನ್ನುವುದು ಅರ್ಜಿನೈನ್ (13.3 ಗ್ರಾಮ್%) ನಿಂದ ಭರಿತವಾಗಿದೆ ಎಂದು ತೋರಿಸುತ್ತದೆ. ಫೈರ್2 ಸರ್ವರ್ ಬಳಕೆಯಿಂದ ಪ್ರೋಟೀನ್ ನ ಅನುಕ್ರಮ ತೋರಿಸಿದ್ದೇನೆಂದರೆ ಪ್ರೋಟೀನ್ ಇದು ಬೀಟಾ ಬ್ಯಾರೆಲ್ ರಚನೆ ಹೊಂದಿದ್ದು, ಕ್ಯುಪಿನ್ ಕುಟುಂಬಕ್ಕೆ ಸೇರಿದೆ. ದ್ವಿತೀಯ ರಚನಾ ವಿಶ್ಲೇಷಣೆ ತೋರುವುದೇನೆಂದರೆ ಪ್ರೋಟೀನ್ ಹೊಂದಲು 16% ಆಲ್ಫಾ ಸುರುಳಿ, 32% ಬೀಟಾ ಎಳೆಗಳು ಮತ್ತು 42% ಅಸ್ತವ್ಯಸ್ತವಾದ ರಚನೆ ಅಗತ್ಯ. ಇನ್ನೊಂದು ಅಧ್ಯಯನದ ಪ್ರಕಾರ ಕೊಬ್ಬು ತೆಗೆದ ತೊಗರಿಯ ಗಿರಣಿ ತ್ಯಾಜ್ಯದ ಉಪ ಉತ್ಪನ್ನಗಳನ್ನು ಪ್ರೋಟೀನ್ ಮೂಲಗಳಾಗಿ ಬಳಸಲಾಯಿತು. ಮಿಶ್ರ ಗಿರಣಿಯಿಂದ ಪ್ರಕ್ರಿಯೆ ಮಾಡಿದಾಗ ದೊರೆಯುವ ಬೀಜದ ಉತ್ಪನ್ನಗಳು – ತೊಗರಿಯ ಪುಡಿ, ಕಡಿಗಳು, ಜೀವಾಂಕುರ ಪದರ ಮತ್ತು ಬೀಜ ಕವಚವನ್ನು ಒಳಗೊಂಡಿರುತ್ತದೆ. ಹೊಳಪಾದ ಪುಡಿ ಮತ್ತು ಕಡಿಗಳು (ಚುನಲ್/ಚುನ್ನಿ) ಒಳಗೊಂಡಿರುವ 15% ಪ್ರೋಟೀನ್ ಅನ್ನು ಸಾರೀಕೃತ ಪ್ರೋಟೀನ್ ತಯಾರಿಕೆಯಲ್ಲಿ ಬಳಸಲಾಯಿತು. ಸಾರೀಕೃತ ಪ್ರೋಟೀನ್ (68%) ಆಂಟಿಒಕ್ಸಿಡೆಂಟ್ ಕ್ರಿಯೆಯನ್ನು ಪ್ರದರ್ಶಿಸುತ್ತದೆ. (ಡಿಪಿಪಿಎಚ್ ಫ್ರೀ ರೇಡಿಕಲ್ ಶೇಖರಿಸುವ ಚಟುವಟಿಕೆ, ಕಡಿತಗೊಳ್ಳುತ್ತಿರುವ ಶಕ್ತಿ ಮತ್ತು ಲೋಹದ ಕೊಂಡಿ) ಪ್ರೋಟೀನ್ ನ ಪ್ರನಾಳಿಯ ಜೀರ್ಣ ಕ್ರಿಯೆಯು ಕರಗುವಿಕೆ ಮತ್ತು ಆಂಟಿಒಕ್ಸಿಡೆಂಟ್ ಕ್ರಿಯೆಯನ್ನು ಪ್ರದರ್ಶಿಸುತ್ತದೆ ಮತ್ತು ಕ್ರಿಯಾತ್ಮಕ ಪದಾರ್ಥಗಳ ಬಳಕೆಗೆ ಅನುಕೂಲಕರವಾಗಿರುವಂತೆ ಮಾಡುತ್ತದೆ.

**ಆಯ್ಕೆ ಮಾಡಿದ ಸಾಂಪ್ರದಾಯಿಕ ಆಹಾರಗಳ ಉಳಿಕೆ ಕಾಲದ ವಿಸ್ತರಣೆ** (ಜ್ಯೋತಿರ್ಮಯಿ ಟಿ, ಸತ್ಯನಾರಾಯಣ ಎ)

ಕಜ್ಜಿಕಾಯಲು (ಕರ್ಜಿಕಾಯಿ), ಒಂದು ಆಂಧ್ರಪ್ರದೇಶದ ಸಾಂಪ್ರದಾಯಿಕ ಸಿಹಿ. ಇದರಲ್ಲಿರುವ 6.5–13.0% ಪ್ರೋಟೀನ್ ಅಂಶವನ್ನು ಕಡಲೆ ಬೇಳೆ ಮತ್ತು ಶೇಂಗಾ ಮಿಶ್ರಣವನ್ನು ಬಳಸಿ, ಮಾರ್ಪಡಿಸುವ ಮೂಲಕ ಉತ್ಕೃಷ್ಟಗೊಳಿಸಲಾಯಿತು. ಹಾಗೆಯೇ, "ಸುನ್ನಿ ಉಂಡಲು" ವನ್ನು ಅದರ ಕ್ಯಾಲ್ಶಿಯಮ್ ಮಟ್ಟ ಹೆಚ್ಚಿಸಲು ಹುರಿದ ಉದ್ದಿನ ಬೇಳೆಯ ಪುಡಿ ಮತ್ತು ಹುರಿದ ರಾಗಿ ಹಿಟ್ಟಿನಿಂದ (10 ಮತ್ತು 20% ಮಟ್ಟದಲ್ಲಿ) ತಯಾರಿಸಲಾಯಿತು. ಹುರಿದ ರಾಗಿ ಹಿಟ್ಟಿನಿಂದ ಮಾಡಿದ ಉತ್ಪನ್ನವನ್ನು 10% ಮಟ್ಟದಲ್ಲಿ ಅಳವಡಿಸಿದಾಗ, ಸಾಂಪ್ರದಾಯಿಕ ಉತ್ಪನ್ನಕ್ಕಿಂತ ಒಳ್ಳೆಯ ಫಲಿತಾಂಶ ನೀಡಿತು. ಸಾಂಪ್ರದಯಿಕ ಉತ್ಪನ್ನವಾದ ಶಂಕರಪೋಳಿಯ ಕ್ಯಾಲ್ಶಿಯಮ್ ಮತ್ತು ಪ್ರೋಟೀನ್ ಅಂಶವನ್ನು ಹೆಚ್ಚಿಸಲು ಮೈದಾ ಹಿಟ್ಟಿನ ಬದಲಾಗಿ ರಾಗಿ ಮತ್ತು ಸೋಯಾ ಹಿಟ್ಟಿನಿಂದ ತಯಾರಿಸಲಾಯಿತು ಮತ್ತು ಈ ಉತ್ಪನ್ನದ ಕೊಬ್ಬಿನಾಂಶವನ್ನು ಕಡಿತಗೊಳಿಸಲು ಅದನ್ನು ಸುಟ್ಟು ತಯಾರಿಸಲಾಯಿತು.

**ಕಪ್ಪು ದ್ರಾಕ್ಷಿಗಳು** (ವಿಜಯಾನಂದ ಪಿ)

ಕಪ್ಪು ದ್ರಾಕ್ಷಿಗಳಿಂದ ಆಂಥೋಸಾಯನಿನ್ ಭರಿತ ಮೌಲ್ಯಾಧಾರಿತ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಾಯಿತು. ಸುಲಿದ ಇಡೀ ದ್ರಾಕ್ಷಿ ಹೊಂದಿರುವ ನೀಡಲು ಸಿದ್ಧವಿದ್ದ (ರೆಡಿ ಟು ಸರ್ವ್) ಪಾನೀಯದಲ್ಲಿ ಆಂಥೋಸಾಯನಿನ್ (2.52ಮಿಲಿ ಗ್ರಾಮ್/100ಗ್ರಾಮ್) ಪ್ರಮಾಣ ಸಾಮಾನ್ಯ ದ್ರಾಕ್ಷಿ ಪಾನೀಯ (1.52ಮಿಲಿ ಗ್ರಾಮ್/100ಗ್ರಾಮ್) ದಲ್ಲಿರುವುದಕ್ಕಿಂತ ಹೆಚ್ಚಾಗಿತ್ತು. ನಿರ್ಜಲೀಕರಣಗೊಂಡ ಕಪ್ಪು ದ್ರಾಕ್ಷಿಗಳು (48.5ಮಿಲಿ ಗ್ರಾಮ್/100ಗ್ರಾಮ್), ದ್ರಾಕ್ಷಿಯ ಜ್ಯಾಮ್ (2.4ಮಿಲಿ ಗ್ರಾಮ್/100ಗ್ರಾಮ್) ಮತ್ತು ಸುಲಿದ ದ್ರಾಕ್ಷಿಗಳಿಂದ ತಯಾರಿಸಿದ ದ್ರಾಕ್ಷಿಯ ಕ್ಯಾಂಡಿ (10.3ಮಿಲಿ ಗ್ರಾವ್/100ಗ್ರಾವ್). ಈ ಉತ್ಪನ್ನಗಳು ಗಣನೀಯವಾಗಿ ಹೆಚ್ಚಿನ ಆಂಥೋಸಾಯನಿನ್ ಅಂಶವನ್ನು ಹೊಂದಿದ್ದವು ಎಂದು ತೋರಿಸಿತು. ಉತ್ಪನ್ನಗಳ ರಾಸಾಯನಿಕ ಮತ್ತು ಸಂವೇದನಾ ಗುಣಮಟ್ಟದ ಪ್ರೊಫೈಲಿಂಗ್‌ಗಳು ಕೊಠಡಿ ತಾಪಮಾನದಲ್ಲಿ 3 ತಿಂಗಳುಗಳ ಅವಧಿಯಲ್ಲಿ ಸಂಗ್ರಹಿಸಿದ್ದ ಉತ್ಪನ್ನಗಳು ಹೆಚ್ಚು ಸ್ವೀಕಾರಾರ್ಹ ಎಂದು ತೋರಿಸಿತು.

**ಕಲ್ಲಂಗಡಿ** (ವಿಜಯಾನಂದ ಪಿ)

ಕಲ್ಲಂಗಡಿಯ ತಳಿಗಳಾದ ಕಡು ಹಸಿರು ಮತ್ತು ತೆಳು ಹಸಿರುಗಳ ಭೌತ ರಾಸಾಯನಿಕ ಸಂಯೋಜನೆಯನ್ನು ನಡೆಸಲಾಯಿತು. ಕಲ್ಲಂಗಡಿ ಪ್ಯೂರಿಯ (ಚೆನ್ನಾಗಿ ಜಜ್ಜಿ ಮಾಡಿದ ಕ್ರೀಂ) ಉಷ್ಣ ಕ್ರಿಯೆಯನ್ನು (ಥರ್ಮಲ್ ಪ್ರೊಸೆಸ್ಸಿಂಗ್) ಗಾಜಿನ ಬಾಟಲಿಗಳು ಮತ್ತು ಕ್ಯಾನ್‌ಗಳಲ್ಲಿ ನಡೆಸಲಾಯಿತು. ಪಾಕದಲ್ಲಿದ್ದ ಜಾಡಿಯಲ್ಲಿಟ್ಟು ರಕ್ಷಿಸಿದ ಕಲ್ಲಂಗಡಿ ತುಣುಕುಗಳು (ಲೈಕೊಪೀನ್ ಅಂಶ–26ಮೈಕ್ರೊ ಗ್ರಾಮ್/100ಗ್ರಾಮ್) ಮತ್ತು ಕಲ್ಲಂಗಡಿ ಕ್ಯಾಂಡಿ (ಲೈಕೊಪೀನ್ ಅಂಶ–483ಮೈಕ್ರೊ ಗ್ರಾವ್/100ಗ್ರಾವ್) ಗಳಿಂದ ಸಂಸ್ಕರಿಸಿದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಾಯಿತು. ಸಂವೇದನಾ ಗುಣಗಳಿಗೆ ಸಂಬಂಧಿಸಿದಂತೆ ಉತ್ಪನ್ನಗಳು ಆರ್‌ಟಿ ಯಲ್ಲಿ 90 ದಿನಗಳವರೆಗೆ ಹೆಚ್ಚು ಸ್ವೀಕಾರಾರ್ಹವಾಗಿತ್ತು.



**ಸಮುದ್ರ ಮುಳ್ಳು ಗಿಡದ ಪೀತವರ್ಣ ದ್ರವ್ಯ (ಪ್ಯೂರಿ)** (ಚೌಹಾಣ್ ಎ ಎಸ್)

ಸಮುದ್ರ ಮುಳ್ಳು ಗಿಡದ ಪೀತವರ್ಣ ದ್ರವ್ಯವನ್ನು (ಎಸ್‌ಬಿಟಿ 10–40%) ಪಾಸ್ತಾ ತಯಾರಿಕೆಯ ಸಾಧ್ಯತೆಯನ್ನು ಅನ್ವೇಷಿಸಲು ರವೆಯ ಜೊತೆ ಸೇರಿಸಲಾಯಿತು. 30% ಎಸ್‌ಬಿಟಿ ಪೀತವರ್ಣ ದ್ರವ್ಯವನ್ನು ರವೆಗೆ ಸೇರಿಸಿದಾಗ ಎಸ್‌ಬಿಟಿ ಪಾಸ್ತಾ ದ ಬಣ್ಣದ ತೀವ್ರತೆ ಮತ್ತು ಆಮ್ಲತೆಯ ಸಮತೋಲನಕ್ಕೆ ಕಾರಣವಾಯಿತು. ಆದರೆ 30% ಸಾಂದ್ರತೆಗಿಂತ ಕಡಿಮೆ ಎಸ್‌ಬಿಟಿ ಪೀತವರ್ಣ ದ್ರವ್ಯವನ್ನು ಸೇರಿಸಿದಾಗ ಪಾಸ್ತಾ ಎಳೆಗಳ ಬಣ್ಣದ ತೀವ್ರತೆ ಕಡಿಮೆಯಾಗಿರುವುದು ಕಂಡುಬಂತು. ಹಾಗೆಯೇ ಅತಿ ಹೆಚ್ಚಿನ ಸಾಂದ್ರತೆಯ ಎಸ್‌ಬಿಟಿ ಪ್ಯೂರಿಯನ್ನು ಸೇರಿಸಿದಾಗ ಅಮ್ಲೀಯ ಉತ್ಪನ್ನಗಳ ಅನರ್ಹವಾದ ಮಟ್ಟಕ್ಕೆ ಕಾರಣವಾಯಿತು. ಎಸ್‌ಬಿಟಿ ಪಾಸ್ತಾದಲ್ಲಿ ಸೋಡಿಯಮ್ ಬೈ ಕಾರ್ಬೋನೇಟ್ ನ ಸಾಂದ್ರತೆಯು ಆಮ್ಲತೆಯನ್ನು ಕಡಿಮೆಗೊಳಿಸಲಿಲ್ಲ. ಎಸ್‌ಬಿಟಿ ಪ್ಯೂರಿ ಪಾಸ್ತಾದ ಅಡುಗೆಯ ಗುಣಮಟ್ಟ, ಅಡುಗೆಯ ನಂತರವೂ ನಗಣ್ಯ ನಷ್ಟವಾಗಿದ್ದರಿಂದ ಹೆಚ್ಚು ಸ್ವೀಕಾರಾರ್ಹವಾಗಿ ಕಂಡುಬಂದಿತು.

**ಸಪೋಟಾ ಹಣ್ಣು** (ಕುಡಚಿಕರ್ ವಿಬಿ)

ಕಡಿಮೆ ತಾಪಮಾನದಲ್ಲಿ, ಪೋಸ್ಟ್‌ಹಾರ್ವೆಸ್ಟ್ ಚಿಕಿತ್ಸೆ, ಸಂಗ್ರಹಿಸುವ ರೀತಿ, ಗುಣಮಟ್ಟಗಳ ನಿರ್ವಹಣೆ, ಮತ್ತು ಸಪೋಟಾ ಹಣ್ಣುಗಳ ಸಂಗ್ರಹ ಕಾಲದ ವಿಸ್ತರಣೆಗಳ, 3% ಕ್ಯಾಲ್ಸಿಯಮ್ ಕ್ಲೋರೈಡ್ ಮತ್ತು 4.5% ಕ್ಯಾಲ್ಸಿಯಮ್ ಕ್ಲೋರೈಡ್‌ಗಳ ಜೊತೆಗಿನ ಸಪೋಟಾದ ಪೂರ್ವ ಚಿಕಿತ್ಸೆಯ ಉತ್ತಮಗೊಳಿಸುವಿಕೆಯ ಅಧ್ಯಯನವು ಹಣ್ಣಿನ ಬಣ್ಣದ ಒಳ್ಳೆಯ ಧಾರಣ, ವಿನ್ಯಾಸ ಮತ್ತು ಉಳಿದ ಗುಣಮಟ್ಟದ ನಿಯತಾಂಕಗಳನ್ನು ತೋರಿಸಿತು.

ಸಂಸ್ಕರಿಸಿದ ಸಪೋಟಾ ಹಣ್ಣುಗಳ ಉಳಿಕೆ ಕಾಲವನ್ನು 30 ದಿನಗಳವರೆಗೆ ವಿಸ್ತರಿಸಲಾಯಿತು. ಅಂತೆಯೇ ಸಂಸ್ಕರಿಸದ ಹಣ್ಣುಗಳನ್ನು ಎಲ್‌ಟಿ ಯಲ್ಲಿ ಸಂಗ್ರಹಿಸಿದಾಗ ಅದರ ಉಳಿಕೆ ಕಾಲ 16 ದಿನಗಳು ಆಗಿದ್ದವು. ಶೇಖರಣಾ ಅಧ್ಯಯನದ ನಂತರ ಈ ಚಿಕಿತ್ಸೆಗಳಿಂದಾದ ಸಂಪೂರ್ಣವಾಗಿ ಮಾಗಿದ ಹಣ್ಣಿನ ತಿರುಳುಗಳನ್ನು ನಿರ್ಜಲೀಕರಣ ಸಪೋಟಾ ಹೋಳುಗಳಾಗಿ ಸಂಸ್ಕರಿಸಲಾಯಿತು. ಈ ನಿರ್ಜಲೀಕರಣಗೊಂಡ ಸಪೋಟಾ ಚೂರುಗಳ ಗುಣಮಟ್ಟ ಆರ್‌ಟಿ ಯಲ್ಲಿ (22+/– 2 ಡಿಗ್ರೀ ಸಿ) 6 ತಿಂಗಳವರೆಗೆ, ಎಲ್ಲಾ ಒಟ್ಟಾರೆ ಗುಣಲಕ್ಷಣಗಳಿಗಿಂತ ಅತ್ಯುತ್ತಮವಾಗಿ ಕಂಡುಬಂದಿತು.

**ಟೇಬಲ್ ಗ್ರೇಪ್ಸ್ (ಸೇವನೆಗೆ ಬಳಸುವ ದ್ರಾಕ್ಷಿಗಳು)** (ಕುಡಚಿಕರ್ ವಿಬಿ)

ಟೇಬಲ್ ಗ್ರೇಪ್ಸ್‌ನ ಪ್ರಿ ಹಾರ್ವೆಸ್ಟ್ ತುಂತುರು ಚಿಕಿತ್ಸೆಗಳ ಸಾಂದ್ರತೆ ಮತ್ತು ಉಳಿಕೆ ಕಾಲದ ವಿಸ್ತರಣೆಗೆ ಸಂಗ್ರಹಿಸುವ ರೀತಿ ಮತ್ತು ಪೋಸ್ಟ್ ಹಾರ್ವೆಸ್ಟ್ ಗುಣಮಟ್ಟದ ನಿರ್ವಹಣೆಯನ್ನು ಉತ್ತಮಗೊಳಿಸುವಿಕೆಯ ಅಧ್ಯಯನ ಮಾಡಲಾಯಿತು (ದಿಲ್‌ಖುಶ್ ವಿಧ). ದ್ರಾಕ್ಷಿಯ ಹಣ್ಣುಗಳು ಕ್ಯಾಲ್ಷಿಯಮ್ ಕ್ಲೊರೈಡ್ (3 ಮತ್ತು 4.5%) ಮತ್ತು ಕ್ಯಾಲ್ಷಿಯಮ್ ಪ್ರೊಪಿಯೋನೇಟ್ (0.5 ಮತ್ತು 1%) ಗಳ ಜೊತೆಗೆ ಅವುಗಳ ಹಣ್ಣಿನ ಬಣ್ಣ, ವಿನ್ಯಾಸ ಉಳಿದ ಗುಣಮಟ್ಟಗಳ ನಿಯತಾಂಕಗಳ ಮತ್ತು ಎಲ್‌ಟಿ ಯಲ್ಲಿ ಅವುಗಳ ಉಳಿಕೆ ಕಾಲ 90 ದಿನಗಳವರೆಗೆ (2+/–1 ಡಿಗ್ರೀ ಸಿ; 90–95% ಆರ್‌ಎಚ್) ಇರುವಂತೆ ಒಳ್ಳೆಯ ಪ್ರತಿಕ್ರಿಯೆ ನೀಡಿದವು. ಆದರೆ ನಿಯಂತ್ರಿತ ದ್ರಾಕ್ಷಿಗಳನ್ನು 60 ದಿನಗಳವರೆಗೆ ಸಂಗ್ರಹಿಸಬಹುದು. ಪೂರ್ಣವಾಗಿ ಮಾಗಿದ ಹಣ್ಣುಗಳ ಸಂವೇದನಾತ್ಮಕ ಗುಣಮಟ್ಟವು ಆರ್‌ಟಿ ಯಲ್ಲಿ 3 ದಿನಗಳ ನಂತರ, ನಿಯಂತ್ರಿತ ಹಣ್ಣುಗಳಿಗೆ ಹೋಲಿಸಿದಾಗ ಉತ್ತಮ ಗುಣಮಟ್ಟದ ಹಣ್ಣುಗಳೆಂದು ಸೂಚಿಸಿದವು. ಮೇಲಿನ ಪ್ರಿ ಟ್ರೀಟ್‌ಮೆಂಟ್‌ಗಳಿಂದಾದ ಪೂರ್ಣವಾಗಿ ಮಾಗಿದ ಹಣ್ಣುಗಳಿಂದ ಒಣ ದ್ರಾಕ್ಷಿಗಳನ್ನು ಅಭಿವೃದ್ಧಿಪಡಿಸಲಾಯಿತು. ಇವುಗಳು ಒಟ್ಟಾರೆ ಗುಣಲಕ್ಷಣಗಳ ಅಂಶಗಳಲ್ಲಿ ಅತ್ಯುತ್ತಮವಾಗಿ ಕಂಡುಬಂದಿತು.

**ವಿರಳವಾಗಿ ಉಪಯೋಗಿಸಲ್ಪಡುವ ಧಾನ್ಯಗಳು** (ಶೀಲಾ ಭಟ್ಟಾಚಾರ್ಯ)

ಪ್ರೋಸೊ (ಬರಗು) ಮತ್ತು ನವಣೆ ತಳಿಗಳ ಭೌತಿಕ, ತಾಂತ್ರಿಕ ಮತ್ತು ಕ್ರಿಯಾತ್ಮಕ ಗುಣಗಳನ್ನು ಅವುಗಳ ಇಡೀ ಧಾನ್ಯ, ಹೊಟ್ಟು ತೆಗೆದ ಧಾನ್ಯ ಮತ್ತು ಹೊಳಪು ತರಿಸಿದ ಧಾನ್ಯಗಳಲ್ಲಿ ಅಧ್ಯಯನ ಮಾಡಲಾಯಿತು. ಈ ಪ್ರಭೇಧಗಳ ನಡುವಿನ ಭೌತಿಕ ಮತ್ತು ತಾಂತ್ರಿಕ ಗುಣಗಳಲ್ಲಿನ ಬದಲಾವಣೆಯು ಕನಿಷ್ಠವಾಗಿ ಕಂಡುಬಂದಿತು. ಹಾಗೆಯೇ, ಗಮನಾರ್ಹ ಬದಲಾವಣೆಯು ಕ್ರಿಯಾತ್ಮಕ ಗುಣಗಳಲ್ಲಿ ಕಂಡುಬಂದಿತು. ನವಣೆಗಳಲ್ಲಿ, ನೀರನ್ನು ಹೀರುವ ಸಾಮರ್ಥ್ಯವು (143 ಇಂದ 168%) ಪ್ರೋಸೊ ಧಾನ್ಯಗಳಿಗೆ (110 ರಿಂದ 143%) ಹೋಲಿಸಿದರೆ ಹೆಚ್ಚಾಗಿರುತ್ತದೆ. ರೂಪವಿಜ್ಞಾನ ಮತ್ತು ಊತಶಾಸ್ತ್ರಗಳ ಅಧ್ಯಯನವನ್ನು ನಡೆಸಿದಾಗ ಫೈಟೇಟ್ ಗಳ ಸಾಂದ್ರತೆ ಮೊಳಕೆಯಲ್ಲಿ (ಸ್ಕುಟೆಲ್ಲಂ) ಮತ್ತು ಎಲ್ಯುರೋನ್ (ಸಸ್ಯಗಳ ಬೀಜಗಳಲ್ಲಿ, ಹರಳುಗಳ ರೂಪದಲ್ಲಿರುವ ಸಂಗ್ರಹಿತ ಪ್ರೋಟೀನ್) ಪದರಗಳಲ್ಲಿ ಇರುತ್ತವೆ. ಹಾಗೆಯೇ, ಪೊಲಿಫಿನೋಲ್ ಗಳು ಮೊಳಕೆಯ ಕೋಶ ಗೋಡೆಗಳಲ್ಲಿ ಮತ್ತು ಎಲ್ಯುರೋನ್ ಪದರಗಳಲ್ಲಿ ಇರುತ್ತವೆ ಎಂದು ತೋರಿಸಿತು. ಪ್ರೋಟೀನ್‌ಗಳು ಪ್ರಮುಖವಾಗಿ ಎಲ್ಯುರೋನ್ ಮತ್ತು ಎಂಡೊಸ್ಪರ್ಮ್ ನ ಹೊರವಲಯದಲ್ಲಿ ಹಾಗೆಯೇ, ಕೊಬ್ಬು, ಎಲ್ಯುರೋನ್ ಮತ್ತು ಧಾನ್ಯದ ಮೊಳಕೆಯಲ್ಲಿ ಕೇಂದ್ರೀಕೃತವಾಗಿದೆ. ಪ್ರೋಸೊ ಧಾನ್ಯಗಳ ಜಲಸಂಚಯನ ಕ್ರಿಯೆಗಳ ಮೇಲೆ ಅಧ್ಯಯನ ನಡೆಸಿದಾಗ, ಅವುಗಳ ತೇವಾಂಶವು ಎಲ್ಲಾ ತಾಪಮಾನಗಳಲ್ಲಿ, ಆರಂಭಿಕ ಹಂತಗಳಲ್ಲಿ ತೀವ್ರವಾಗಿ ಹೆಚ್ಚಿತು ಮತ್ತು 85 ಡಿಗ್ರೀ ಸೆಲ್ಶಿಯಸ್‌ನಲ್ಲಿ ಎಲ್ಲಾ ಭಿನ್ನ ರಾಶಿಗಳ ತೇವಾಂಶದಲ್ಲಿ ಗುರುತಿಸಬಹುದಾದ ಹೆಚ್ಚಳ ಕಂಡುಬಂದಿತೆಂದು ತೋರಿಸಿತು. ಪ್ರತ್ಯೇಕಿಸುವ ನಷ್ಟ ಮತ್ತು ಪರಿಮಾಣ ವಿಸ್ತರಣೆಯು, ಸಮಯ ಮತ್ತು ತಾಪಮಾನಗಳ ಜೊತೆಗೆ ಹೆಚ್ಚಳವಾಯಿತು ಮತ್ತು 85 ಡಿಗ್ರೀ ಸೆಲ್ಶಿಯಸ್‌ನಲ್ಲಿ ಗರಿಷ್ಠವಾಗಿರುವುದು ಕಂಡುಬಂದಿತು. ಧಾನ್ಯಗಳ ಪಿಷ್ಟ ಗುಣಲಕ್ಷಣಗಳ ಅಧ್ಯಯನವನ್ನು ಮಡ್ಡಿಯ ಪರಿಮಾಣ ಊತಶಕ್ತಿ ಮತ್ತು ಕರಗುವಿಕೆಯ ನಿರ್ಣಯ ಇವುಗಳ ಮೂಲಕ ವಿವಿಧ ತಾಪಮಾನಗಳಲ್ಲಿ ಅಧ್ಯಯನ ಮಾಡಲಾಯಿತು. ಪ್ರೋಸೊ ಮತ್ತು ನವಣೆಗಳ ಮಡ್ಡಿಯ ಪರಿಮಾಣವು ಕ್ರಮವಾಗಿ 5.6 ಮತ್ತು 6.0 ಎಮ್‌ಎಲ್ ಹಾಗೂ ವಿಭಜನೆಯಾಗದ ಪಿಷ್ಟದ ಹರಳುಗಳು ಇರುವುದು ಕಂಡುಬಂದಿತು. ಪ್ರೋಸೊ ಮತ್ತು ನವಣೆ ಧಾನ್ಯಗಳೆರಡರ ಊತ ಶಕ್ತಿ ಮತ್ತು ಕರಗುವಿಕೆಯು ಹೆಚ್ಚುತ್ತಿರುವ ತಾಪಮಾನದ ಜೊತೆಗೆ ಹೆಚ್ಚಳವಾದವು. ನೀರಿನ ಕರಗುವಿಕೆಯ ಸೂಚ್ಯಂಕವೂ ಕೂಡಾ ಅದೇ ಪ್ರವೃತ್ತಿ ಪ್ರದರ್ಶಿಸಿತು. ಇದಕ್ಕೆ ಹಿಟ್ಟುಗಳ, ಕಣಗಳ ಗಾತ್ರಗಳಲ್ಲಿನ ವ್ಯತ್ಯಾಸ ಮತ್ತು ಪಿಷ್ಟ ಗುಣಲಕ್ಷಣಗಳು ಕಾರಣವಾಗಿರಬಹುದು. ಪ್ರೋಸೊ ಮತ್ತು ನವಣೆ ಧಾನ್ಯಗಳ ಹಿಟ್ಟಿನ ಕಣಗಳ ಸರಾಸರಿ ಗಾತ್ರವು ಕ್ರಮವಾಗಿ 93.3 ಮತ್ತು 157.3 ಮೈಕ್ರೋಎಮ್ ಆಗಿವೆ. ಈ ಫಲಿತಾಂಶಗಳು ಹೊರಹಾಕಿದ/ಸಿದ್ಧ ತಿನ್ನಲು ಬಳಸುವ ತಿಂಡಿಗಳ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಉಪಯುಕ್ತವಾದವು.

**ಸಸ್ಯ ಪ್ರೋಟೀನ್‌ಗಳ ಆಧಾರಿತ ಪ್ರಧಾನ ಆಹಾರ** (ಪ್ರಭಾಶಂಕರ್ ಪಿ)

ಪಾಸ್ತಾ ತಯಾರಿಕೆಯಲ್ಲಿ ಗೋಧಿಯ ವಿವಿಧ ವಾಣಿಜ್ಯ ತಳಿಗಳಾದ ಟ್ರಿಟಿಕಮ್ ಡ್ಯೂರಮ್ ಮತ್ತು ಟ್ರಿಟಿಕಮ್ ಈಸ್ಟಿವಮ್‌ಗಳ ಬದಲಾಗಿ ಉದ್ದನ್ನು (ವಿಜ್ಞ ಮುಂಗೊ) 30, 40, 50 ಮತ್ತು 60% ಪ್ರಮಾಣಗಳಲ್ಲಿ ಬಳಸಲಾಯಿತು. ಸಮೀಪದ ಅಧ್ಯಯನಗಳು ಬೂದಿ ಮತ್ತು ಪ್ರೋಟೀನ್ ಅಂಶದಲ್ಲಿ ಹೆಚ್ಚಳವನ್ನು ತೋರಿಸಿತು. ಹಾಗೆಯೇ ಮಿಶ್ರಣಕ್ಕೆ ಉದ್ದಿನ ಹಿಟ್ಟಿನ ಸೇರ್ಪಡೆಯು ಹೆಚ್ಚಾಗುತ್ತಿದ್ದಂತೆ, ತೇವಾಂಶವು ನಿಯಂತ್ರಣಕ್ಕಿಂತ ಕಡಿಮೆಯಾಯಿತು. ರಿಯೊಲೊಜಿಕಲ್ ಅಧ್ಯಯನಗಳಾದ ಫೆರಿನೊಗ್ರಾಫ್ ನೀರಿನ ಹೀರುವಿಕೆಯು (ಎಫ್ ಡಬ್ಲ್ಯು ಎ) ಡ್ಯೂರಮ್ ಮತ್ತು ಈಸ್ಟಿವಮ್ ಈ ಎರಡು ಮಿಶ್ರಣಗಳಲ್ಲಿ ಕ್ರಮವಾಗಿ 71% ಮತ್ತು 64% ನಲ್ಲಿ ಹೆಚ್ಚಳವನ್ನು ತೋರಿಸಿತು. ಹಿಟ್ಟಿನ ಮಿಶ್ರಣಕ್ಕೆ ಉದ್ದನ್ನು ಸೇರಿಸಿದಾಗ ಪ್ರೋಟೀನ್ ಅಂಶದಲ್ಲಿ ಹೆಚ್ಚಳವಾಗಿದ್ದರಿಂದ ಎಫ್‌ಡಬ್ಲ್ಯುಎ ಸಹ ಹೆಚ್ಚಾಯಿತು. ಪಾಸ್ತಾ ಅಡುಗೆಯ ಗುಣಮಟ್ಟದ ಲಕ್ಷಣಗಳು ತೋರಿಸಿದ್ದೇನೆಂದರೆ, ಎರಡು ತಳಿಗಳಿಗೆ ಉದ್ದಿನ ಹಿಟ್ಟನ್ನು ಸೇರಿಸಿದಾಗ ಅಡುಗೆಯ ನಷ್ಟವು ಹೆಚ್ಚಾಯಿತು. ಇದಕ್ಕೆ ಗ್ಲುಟೆನ್ ಮ್ಯಾಟ್ರಿಕ್ಸ್‌ನ ಸಾರಗುಂದುವಿಕೆ ಕಾರಣವಾಗಿರಬಹುದು. ಸಂವೇದನೆ, ಬಣ್ಣ, ಕಣಗಳ ಗಾತ್ರಗಳ ಹಂಚಿಕೆ, ಅಡುಗೆಯ ನಷ್ಟ ಮತ್ತು ವಿನ್ಯಾಸ ಅಧ್ಯಯನಗಳು, ಈಸ್ಟಿವಮ್ ಮತ್ತು ಡ್ಯೂರಮ್ ಈ ಎರಡೂ ಮಿಶ್ರಣಗಳನ್ನು 40%ಗಳವರೆಗೆ ಬದಲಾಯಿಸಿದಾಗ ಒಳ್ಳೆಯ ಫಲಿತಾಂಶ ನೀಡಿತೆಂದು ತೋರಿಸಿತು. ಆದ್ದರಿಂದ ಗೋಧಿ ಹಿಟ್ಟಿನ ಮಿಶ್ರಣಗಳ 40% ಬಳಕೆ ಪಾಸ್ತಾ ತಯಾರಿಕೆಗೆ ಚೆನ್ನಾಗಿ ಹೊಂದುತ್ತದೆಂದು ತಿಳಿಯಲಾಯಿತು. ಅಂತಿಮವಾಗಿ ಮಿಶ್ರಣಗಳ 40% ಮಟ್ಟವು ಹೊಂದುವುದರ ಆಧಾರದ ಮೇಲೆ, ಸುಟ್ಟ ಮತ್ತು ಸುಡಲ್ಪಡದ ಉದ್ದಿನ ಹಿಟ್ಟನ್ನು ಪಾಸ್ತಾ ತಯಾರಿಕೆಗೆ ಆಯ್ಕೆ ಮಾಡಲಾಯಿತು. ಈ ಪಾಸ್ತಾ ಮಾದರಿಗಳನ್ನು ಜೀವರಾಸಾಯನಿಕ ಮತ್ತು ಪೌಷ್ಠಿಕಾಂಶಗಳ ಮೌಲ್ಯಮಾಪನಕ್ಕೆ ಒಡ್ಡಲಾಯಿತು. ಎಸ್‌ಡಿಎಸ್ ಪೇಜ್ ತೋರಿಸಿದ್ದೇನೆಂದರೆ, ಪ್ರೋಟೀನ್ ಗುಂಪುಗಳ ಹೆಚ್ಚಳವು ಕಚ್ಚಾ ಪ್ರೋಟೀನ್‌ನ ಮೌಲ್ಯ (15%) ವರ್ಧನೆಗೆ (ಅವುಗಳ ನಿಯಂತ್ರಿತ ಸ್ಥಿತಿಗೆ (11%) ಹೋಲಿಸಿದಾಗ) ಕಾರಣವಾಯಿತೆಂದು ತೋರಿಸಿತು. ಪಿಷ್ಟ ಹರಳುಗಳಲ್ಲಿ ಪ್ರೋಟೀನ್ ಮ್ಯಾಟ್ರಿಕ್ಸ್ ಹಂಚಿಕೆಯ ಹೆಚ್ಚಳವನ್ನು ಎಸ್‌ಇಎಮ್ ಪ್ರದರ್ಶಿಸಿತು. ಪ್ರನಾಳಿಯ ಪ್ರೋಟೀನ್ ಜೀರ್ಣಶಕ್ತಿಯು (ಐವಿಪಿಡಿ) 70% ನಿಂದ (ನಿಯಂತ್ರಿತ) 89% ವರೆಗೆ (40% ಬಿಜಿ) ಹೆಚ್ಚಿತು. ನಿಯಂತ್ರಿತಕ್ಕೆ ಸಂಬಂಧಪಟ್ಟಂತೆ ಕಬ್ಬಿಣ ಮತ್ತು ಕ್ಯಾಲ್ಸಿಯಮ್‌ಗಳ ಖನಿಜಾಂಶಗಳು ಹೆಚ್ಚಾದವು. ಸಂವೇದನಾ ವಿಶ್ಲೇಷಣೆಯು ಮಾದರಿಗಳ ಜೊತೆಗೆ ಗ್ರಾಹಕರ ಹೆಚ್ಚಿನ ಸ್ವೀಕಾರವನ್ನು ತೋರಿಸಿತು. ಶೇಖರಣಾ

ಅಧ್ಯಯನಗಳು ಮತ್ತು ಉಳಿದ ಪೋಷಣಾ ನಿಯತಾಂಕಗಳು ಪಾಸ್ತಾ ಮಾದರಿಗಳ ಅಮೈನೋ ಆಮ್ಲದ ವಿಶ್ಲೇಷಣೆ ಮತ್ತು ಕೊಬ್ಬಿನ ಆಮ್ಲದ ಪ್ರೊಫೈಲ್‌ಗಳು ಇನ್ನೂ ಪ್ರಗತಿಯಲ್ಲಿವೆ.

**ಪಪ್ಪಾಯಾ ಬೀಜದ ಸತ್ವವು ಸಂರಕ್ಷಕದಂತೆ** (ಮಾಚೆ ಆರ್‌ಎಸ್)

ಪಪ್ಪಾಯಾ ಬೀಜಗಳ ಸಾರವನ್ನು ಹೊರತೆಗೆಯುವ ದ್ರಾವಕಗಳಾದ ಎಥೆನೋಲ್ ಮತ್ತು ಭಟ್ಟಿ ಇಳಿಸಿದ ನೀರಿನಿಂದ 45 ಡಿಗ್ರೀ ಸೆಲ್ಸಿಯಸ್‌ನಲ್ಲಿ, ರೋಟಾವೇಪರ್‌ನಲ್ಲಿ ಪಡೆಯಲಾಯಿತು. ಶೋಧಿಸುವ ಕಾಗದವನ್ನು ಸಾರಗಳಲ್ಲಿ 6 ರಿಂದ 8 ತಾಸುಗಳವರೆಗೆ ನೆನೆಸಲಾಯಿತು ಮತ್ತು ಅತಿಗೆಂಪು ದೀಪಗಳ ಅಡಿಯಲ್ಲಿ ಒಣಗಿಸಲಾಯಿತು. ನಂತರ ಒಲೆಯಲ್ಲಿ, 40 ಡಿಗ್ರೀ ಸೆಲ್ಸಿಯಸ್‌ನಲ್ಲಿ 3 ರಿಂದ 4 ಗಂಟೆಗಳವರೆಗೆ ಒಣಗಿಸಲಾಯಿತು ಮತ್ತು ಇದರ ಸೂಕ್ಷ್ಮಜೀವಿ ಪ್ರತಿರೋಧಕಗಳ ಚಟುವಟಿಕೆಯನ್ನು ಅಧ್ಯಯನ ಮಾಡಲಾಯಿತು. ಹಸಿರು ಬೀನ್ಸ್, ಮೆಂತ್ಯ ಎಲೆಗಳು ಮತ್ತು ಲಿಚಿ ಹಣ್ಣುಗಳನ್ನು ಪೊಲಿಪ್ರೊಪೈಲಿನ್ ತಟ್ಟೆಗಳಲ್ಲಿ ಸಾರ ತುಂಬಿದ ಶೋಧಕ ಕಾಗದದ ಮೇಲೆ ಇಡಲಾಯಿತು ಮತ್ತು ಅವುಗಳನ್ನು ಕೊಠಡಿ ತಾಪಮಾನದಲ್ಲಿ, 4 ಡೆಗ್ರೀ ಸೆಲ್ಸಿಯಸ್‌ನಲ್ಲಿ ಕಡಿಮೆ ಸಾಂದ್ರತೆಯುಳ್ಳ ಪೊಲಿಇಥೈಲಿನ್ ಅಂಟಿಕೊಂಡಿರುವ ಪದರಗಳಿಂದ ಸುತ್ತಿಡಲಾಯಿತು. ಹಾಗೆಯೇ ಹೊದಿಕೆ ಇಲ್ಲದ ಶೋಧಕ ಕಾಗದವನ್ನು ನಿಯಂತ್ರಿತವಾಗಿ ಬಳಸಲಾಯಿತು. ಮಾದರಿಗಳಲ್ಲಿ ಪ್ರತಿದಿನ ಶಾರೀರಿಕ, ಬ್ಯಾಕ್ಟೀರಿಯ ಮತ್ತು ಶಿಲೀಂಧ್ರ ಬೆಳವಣಿಗೆಯನ್ನು ವಿಶ್ಲೇಷಿಸಲಾಯಿತು. ವ್ಯಾಪಿಸಿರುವ ಕಾಗದದ ಮೇಲೆ ಸೂಕ್ಷ್ಮ ಜೀವಿ ಪ್ರತಿರೋಧಕ ಅಧ್ಯಯನಗಳನ್ನು ಮಾಡಿದಾಗ, ಬೆಸಿಲಸ್ ಸೀರಸ್‌ಗೆ 10ಮಿಲಿ ಮೀಟರ್, ಎಸ್. ಓರಿಯಸ್‌ಗೆ 12 ಮಿಲಿ ಮೀಟರ್ ಮತ್ತು ಇ ಕೊಲೈಗೆ 13 ಮಿಲಿ ಮೀಟರ್ ಪ್ರತಿಬಂಧಕ ವಲಯವನ್ನು ತೋರಿಸಿತು. ಸ್ಥಳೀಯ ಮಾರುಕಟ್ಟೆಯ ಲಿಚಿ ಹಣ್ಣನ್ನು ಕೊಠಡಿ ತಾಪಮಾನದಲ್ಲಿ ಸಂಗ್ರಹಿಸಿದಾಗ ಅವುಗಳ ಉಳಿಕೆ ಕಾಲವು ನಿಯಂತ್ರಿತ ಸ್ಥಿತಿಯಲ್ಲಿ 2 ದಿನಗಳ ಹೆಚ್ಚಳ ಮತ್ತು ಅವುಗಳನ್ನು ಸಂರಕ್ಷಿತ ಸ್ಥಿತಿಯಲ್ಲಿಟ್ಟಾಗ ಐದು ದಿನಗಳವರೆಗೆ ಕಂಡುಬಂದಿತು. ಹಸಿರು ಬೀನ್ಸ್ ಮತ್ತು ಮೆಂತ್ಯ ಎಲೆಗಳಲ್ಲಿ ಉಳಿಕೆ ಕಾಲವು 3 ರಿಂದ 5 ದಿನಗಳವರೆಗೆ ಹೆಚ್ಚಾಯಿತು. 4 ಡಿಗ್ರೀ ಸೆಲ್ಸಿಯಸ್‌ನಲ್ಲಿ ಉಳಿಕೆ ಕಾಲವು 5 ರಿಂದ 9 ದಿನಗಳವರೆಗೆ ಹೆಚ್ಚಾಯಿತು. ಆದ್ದರಿಂದ ಸಸ್ಯಶಾಸ್ತ್ರೀಯ ಸಾರ ಲೇಪಿತ ವಸ್ತುಗಳು ತಾಜಾ ಉತ್ಪನ್ನಗಳ ಉಳಿಕೆ ಕಾಲವನ್ನು ಕೊಠಡಿ ತಾಪಮಾನದಲ್ಲಿ ಮತ್ತು ಕಡಿಮೆ ತಾಪಮಾನದಲ್ಲಿ ವಿಸ್ತರಿಸಿದವು.



# ಆರೋಗ್ಯಯುತ ಆಹಾರ ಮತ್ತು ಪೋಷಣಖಾದ್ಯಗಳು

**ಮೊರಿಂಗಾದಿಂದ (ನುಗ್ಗೇಕಾಯಿ) ಜೀವಾಣುಗಳು** (ರಾಧಾ ಸಿ)

ಕೊಬ್ಬು ತೆಗೆದ ಮೊರಿಂಗಾ ಬೀಜದ ಹಿಟ್ಟಿನಿಂದ ಪ್ರೋಟೀನ್‌ಅನ್ನು ಮೇಲ್ಮೈ ಪ್ರತಿಕ್ರಿಯೆ ವಿಧಾನಗಳನ್ನು (ಆರ್‌ಎಸ್‌ಎಮ್) ಉಪಯೋಗಿಸಿ, ದ್ರಾವಕ ಮತ್ತು ಹಿಟ್ಟಿನ ಅನುಪಾತ, ಲವಣ ಸಾಂದ್ರತೆ ಮತ್ತು ತಾಪಮಾನ ಸ್ಥಿತಿಗಳಿಗೆ ಹೊಂದುವಂತೆ ತಯಾರಿಸಲಾಯಿತು. ಪ್ರೋಟೀನ್ ಐಸೋಲೇಟ್‌ಗಳು ಸುಧಾರಿತ ಕ್ರಿಯಾತ್ಮಕ ಗುಣಗಳಾದ ಎಣ್ಣೆ ಹೀರಿಕೊಳ್ಳುವ ಸಾಮರ್ಥ್ಯ, ನೊರೆ ಬರುವ ಸಾಮರ್ಥ್ಯ ಮತ್ತು ಸ್ಥಿರತೆ, ಎಮಲ್ಷನ್ ಸಾಮರ್ಥ್ಯವು ಆಹಾರ ವ್ಯವಸ್ಥೆಗಳಲ್ಲಿ ಪ್ರೋಟೀನ್ ಅಳವಡಿಕೆಯ ಸಾಧ್ಯತೆಯನ್ನು ತೋರಿಸಿತು. ಬೀಜದ ಹಿಟ್ಟಿನ ಸಾರಗಳು, ಎರಡೂ ಸ್ವತಂತ್ರ ಮತ್ತು ಬಂಧಿಸಲ್ಪಟ್ಟ ಸ್ಥಿತಿಗಳಲ್ಲಿ ಪೊಲಿಫೆನೊಲ್ಸ್ ಗಳು, ಒಳ್ಳೆಯ ಆಂಟಿಒಕ್ಸಿಡೆಂಟ್ ಚಟುವಟಿಕೆಯ ಜೊತೆಗೆ ಉಪಸ್ಥಿತಿಯಲ್ಲಿರುವುದನ್ನು ತೋರಿಸಿತು. 10 ಫೆನೊಲಿಕ್ ಸಂಯುಕ್ತಗಳನ್ನು ಗುರುತಿಸಲಾಯಿತು ಮತ್ತು ಅಳತೆ ಮಾಡಲಾಯಿತು. ಕೊಬ್ಬು ತೆಗೆದ ಮೊರಿಂಗಾ ಬೀಜದ ಹಿಟ್ಟಿನಲ್ಲಿ ಒಟ್ಟೂ ಆಹಾರದ ನಾರುಗಳು 33.5% ಇರುವುದನ್ನು ಅಂದಾಜಿಸಲಾಯಿತು. ಅವುಗಳಲ್ಲಿ 27% ಆಹಾರದ ಕರಗದ ನಾರನ್ನು ಒಳಗೊಂಡಿತ್ತು. ಪಿಷ್ಟ ಹೊಂದಿರದ ಪೊಲಿಸೆಕರೈಡ್‌ಗಳಲ್ಲಿ ಪ್ರಮುಖ ಸಕ್ಕರೆಗಳಾದ ರೇಮ್ನೋಸ್, ಅರೇಬಿನೋಸ್, ಕ್ಸೈಲೋಸ್ ಮತ್ತು ಗೆಲೆಕ್ಟೋಸ್‌ಗಳಿರುವುದನ್ನು ಗುರುತಿಸಲಾಯಿತು. ಕ್ಸೈಲಾನ್ ರೀತಿಯ ಪೊಲಿಸೆಕರೈಡ್‌ಗಳು ಅರೇಬಿನೊ ಗೆಲೆಕ್ಟನ್ಸ್‌ಗಳು ಮತ್ತು ರೇಮ್ನೋಗೆಲೆಕ್ಟೊನ್ಯೂರನ್ಸ್‌ಗಳೂ ಸಹ ಇರುವುದನ್ನು ಗುರುತಿಸಲಾಯಿತು. ಮೊರಿಂಗಾ ಬೀಜಗಳ ಗುಣಗಳಾದ ಅಧಿಕ ರಕ್ತದೊತ್ತಡ ವಿರೋಧಿ ಮತ್ತು ಹೈಪರ್ ಕೊಲೆಸ್ಟಿರೋಮಿಕ್ (ರಕ್ತದಲ್ಲಿ ಕೊಲೆಸ್ಟ್ರೋಲ್‌ನ ಅಧಿಕ ಪ್ರಮಾಣ) ಗುಣಗಳ ಅಧ್ಯಯನವು ಇನ್ನೂ ಪ್ರಗತಿಯಲ್ಲಿದೆ.

**ಪ್ರಿಬಯೋಟಿಕ್ ಒಲಿಗೋಸೆಕರೈಡ್‌ಗಳು** (ಪ್ರಫುಲ್ಲ ಎಸ್‌ಜಿ)

ಶಿಲೀಂಧ್ರ ತಳಿಗಳಿಂದ ಎ ಗ್ಲುಕೊಸೈಡೇಸ್ ಅನ್ನು ಮಾಲ್ಟೋಸ್ ಎಸ್ಪರ್ಜಿಲ್ಲಸ್ ನಿಡ್ಯುಲನ್ಸ್, ಎಸ್ಪರ್ಜಿಲ್ಲಸ್ ಜೆಪೊನಿಕಾಸ್ ಮತ್ತು ಎಸ್ಪರ್ಜಿಲ್ಲಸ್ ನೈಜರ್ ಪಿಎಫ್‌ಎಸ್ 08ಗಳಿಂದ (ಭತ್ತ ಗದ್ದೆಯಲ್ಲಿ ಮಣ್ಣನ್ನು ಪ್ರತ್ಯೇಕಿಸಬಹುದಾದ) ಐಸೋಮಾಲ್ಟೋಒಲಿಗೊಸೆಕರೈಡ್ಸ್ (ಐಎಮ್‌ಒ) ತಯಾರಿಸುವುದಕ್ಕೋಸ್ಕರ ಪ್ರದರ್ಶಿಸಲಾಯಿತು ಮತ್ತು ಇವುಗಳನ್ನು ಎ ಗ್ಲುಕೊಸೈಡೇಸ್ ಚಟುವಟಿಕೆಗೆ ಧನಾತ್ಮಕವಾಗಿ ಪರೀಕ್ಷಿಸಲಾಯಿತು. ಅವುಗಳಲ್ಲಿ ಪ್ರತ್ಯೇಕಿತ ಪಿಎಫ್‌ಎಸ್ 08 ಹೆಚ್ಚಿನ ಟ್ರಾನ್ಸ್‌ಗ್ಲುಕೊಸೈಲೇಶನ್ ಚಟುವಟಿಕೆ ಪ್ರದರ್ಶಿಸಿತು. ಪ್ರತಿಯೊಂದನ್ನು 3 ಹಂತಗಳಲ್ಲಿ, ಐದು ಅಂಶಗಳಾದ ಪಿಎಚ್ ಕ್ರಿಯೆ, ತಾಪಮಾನ, ಮಾಲ್ಟೋಸ್ ಸಾಂದ್ರತೆ, ಕಿಣ್ವ ಘಟಕಗಳು ಮತ್ತು ಪ್ರತಿಕ್ರಿಯಿಸುವ ಸಮಯ ಇವುಗಳ ಜೊತೆ ತಗುಚಿ ವಿಧಾನದ ಸಹಾಯದಿಂದ ಪ್ರಕ್ರಿಯೆ ನಿಯತಾಂಕಗಳನ್ನು ಹೊಂದುವಂತೆ ಮಾಡಲಾಯಿತು ಮತ್ತು ಪ್ರಾಯೋಗಿಕ ವಿನ್ಯಾಸಗಳನ್ನೂ ಬಳಸಲಾಯಿತು. ಸೂಕ್ತ ಪರಿಸ್ಥಿತಿಗಳಲ್ಲಿ 298.19 ಗ್ರಾಮ್/ಲೀ ಐಎಮ್‌ಓವನ್ನು ಉತ್ಪಾದಿಸಲಾಯಿತು. ಇದು ಊಹಿಸಿದ ಮೌಲ್ಯಕ್ಕೆ (310.71 ಗ್ರಾಮ್/ಲೀ) ಚೆನ್ನಾಗಿ ಹೊಂದುತ್ತದೆ. ಐಎಮ್‌ಒ ಉತ್ಪಾದನೆಯನ್ನು ಉತ್ತಮಗೊಳಿಸದ ಪ್ರತಿಕ್ರಿಯೆ ಸ್ಥಿತಿಗಳಿಗೆ (160ಗ್ರಾಂ/ಲೀಟರ್ ಐಎಮ್‌ಒ) ಹೋಲಿಸಿದಾಗ ಉತ್ತಮಗೊಳಿಸಿದ ಪ್ರತಿಕ್ರಿಯೆ ನಿಯತಾಂಕಗಳಲ್ಲಿ ಸುಮಾರು ಎರಡು ಸಲ ಹೆಚ್ಚಳವುಂಟಾಯಿತು. ಉತ್ಪನ್ನವನ್ನು ಇಎಸ್‌ಐ/ಎಮ್‌ಎಸ್ ನಿಂದ ನಿರೂಪಿಸಲಾಯಿತು.

ಗೆಲೆಕ್ಟೊಒಲಿಗೊಸೆಕರೈಡ್ (ಜಿಒಎಸ್) ಉತ್ಪಾದನೆಗೋಸ್ಕರ, ಶಿಲೀಂಧ್ರ ಮತ್ತು ಲ್ಯಾಕ್ಟಿಕ್ ಆಮ್ಲ ಬ್ಯಾಕ್ಟೀರಿಯಾ ತಳಿಗಳಿಂದ ಬಿ–ಗೆಲೆಕ್ಟೊಸೈಡೇಸ್ ಅನ್ನು ಲ್ಯಾಕ್ಟೋಸ್‌ನ ಟ್ರಾನ್ಸ್‌ಗೆಲೆಕ್ಟೊಸೈಲೇಶನ್‌ಗೆ ಒಡ್ಡಲಾಯಿತು. ಲ್ಯಾಕ್ಟೋಸ್ ನಿಂದ ಜಿಒಎಸ್ ಸಂಶ್ಲೇಷಣೆ ಮಾಡಲು ಬಿ–ಗೆಲೆಕ್ಟೊಸೈಡೇಸ್ ಅನ್ನು ಅತಿ ಹೆಚ್ಚು ಟ್ರಾನ್ಸ್‌ಗೆಲೆಕ್ಟೊಸೈಲೇಶನ್ ಫಲದಾಯಕತೆ ಹೊಂದಿರುವ ಲ್ಯಾಕ್ಟೊಬೆಸಿಲಸ್ ಪ್ಲಾಂಟಾರಮ್ ಎಮ್‌ಸಿಸಿ 2156 ಅನ್ನು ಎ–ಗೆಲೆಕ್ಟೊಸೈಡೇಸ್ ಮೂಲವಾಗಿ ಆಯ್ಕೆ ಮಾಡಲಾಯಿತು. ಪ್ರವೇಶ ಸಾಧ್ಯವಾದ ಎಲ್ ಪ್ಲಾಂಟಾರಮ್ ಜೀವಕೋಶಗಳು ಹೆಚ್ಚಿನ ಟ್ರಾನ್ಸ್‌ಗೆಲೆಕ್ಟೊಸೈಲೇಶನ್ ಕ್ರಿಯೆ ಹೊಂದಿದ್ದವು ಮತ್ತು ಇವು 12 ತಾಸಿನಲ್ಲಿ 50 ಡಿಗ್ರೀ ಸೆಲ್ಸಿಯಸ್‌ನಲ್ಲಿ 40% ಲ್ಯಾಕ್ಟೋಸ್ ಇಂದ 34% (ಡಬ್ಲು/ಡಬ್ಲು) ಜಿಒಎಸ್ ಅನ್ನು ಸಂಶ್ಲೇಷಣೆ ಮಾಡಿದವು. ಎಚ್‌ಪಿಎಲ್‌ಸಿ ವಿಶ್ಲೇಷಣೆಯು, ಜಿಒಎಸ್ ಗಳು 13% ಡೈಸೆಕರೈಡ್‌ಗಳಿಂದ (ಲ್ಯಾಕ್ಟೋಸ್ ಅಲ್ಲದ), 17% ಟ್ರೈಸೆಕರೈಡ್‌ಗಳು ಮತ್ತು 4% ಟೆಟ್ರಾಸೆಕರೈಡ್‌ಗಳಿಂದ ಆಗಿವೆ ಎಂದು ತೋರಿಸಿತು ಮತ್ತು ಅವುಗಳು ಇಎಸ್‌ಐ–ಎಮ್‌ಎಸ್ ನಿಂದ ಮತ್ತಷ್ಟು ದೃಢೀಕರಿಸಲ್ಪಟ್ಟಿತು. ಜಿಒಎಸ್‌ನ ತುಲನಾತ್ಮಕ ಪ್ರಿಬಯೊಟಿಕ್ ದಕ್ಷತೆ ಮತ್ತು ಪ್ರೊಬಯೊಟಿಕ್ ಲ್ಯಾಕ್ಟಿಕ್ ಆಮ್ಲ ಬ್ಯಾಕ್ಟೀರಿಯಾದ (ಎಲ್‌ಎಬಿ) ಬಳಕೆಯಿಂದ, ವಾಣಿಜ್ಯ ವೈರಸ್ ಜಿಒಎಸ್ ಅನ್ನು ಮೌಲ್ಯಮಾಪನ ಮಾಡಲಾಯಿತು. ಎಲ್‌ಎಬಿ ಮತ್ತು ಕೊಬ್ಬಿನ ಆಮ್ಲದ ಸಣ್ಣ ಸರಪಳಿ ಪ್ರೊಫೈಲ್ ಗಳ ಬೆಳವಣಿಗೆಯು ವಾಣಿಜ್ಯ ಜಿಒಎಸ್‌ಗೆ ತುಲನಾತ್ಮಕವಾಗಿತ್ತು.

**ಬೆಸಿಲಸ್ ಜಾತಿಗಳಿಂದ, ಹೊಸ ರೀತಿಯ ಫೈಬ್ರಿನೊಲಿಟಿಕ್ ಕಿಣ್ವ** (ಪ್ರಕಾಶ್ ಎಮ್ ಹಲಾಮಿ)

ಬಿ. ಸರ್ಕ್ಯುಲನ್ಸ್‌ಗಳಿಂದ ಫೈಬ್ರಿನೊಲಿಟಿಕ್ ಪ್ರೊಟಿಯೇಸ್, ಜೊತೆಗೆ ಎ–ಸರಪಣಿ ನಿರ್ದಿಷ್ಟ ಕ್ರಿಯೆಯನ್ನು ಶುದ್ಧೀಕರಿಸಲಾಯಿತು ಮತ್ತು ನಿರೂಪಿಸಲಾಯಿತು. ಕ್ರಮವಾಗಿ ಅಮೊನಿಯಮ್ ಸಲ್ಫೇಟ್‌ನ ಪತನ ಮತ್ತು ಸಿಫಾಡೆಕ್ಸ್ ಜಿ–75 ವರ್ಣರೇಖನಗಳಿಂದ ಕಿಣ್ವವನ್ನು ಭಾಗಶಃ (2.25) ಶುದ್ಧೀಕರಿಸಲಾಯಿತು. ಅದರ ಇಳುವರಿ 17.53% ಆಗಿತ್ತು. ಕಿಣ್ವವು ಹೆಚ್ಚಿನ ಫೈಬ್ರಿನೊ (ಜೀನೊ) ಲಿಟಿಕ್ ಕ್ರಿಯೆಯನ್ನು ತೋರಿಸಿತು ಮತ್ತು ನಿರ್ದಿಷ್ಟವಾಗಿ ಮಾನವ ಫೈಬ್ರಿನ್ ಗಳಾದ ಫೈಬ್ರಿನೋಜನ್‌ನ ಸರಪಣಿ ಎಎ ಮತ್ತು ಬಿಬಿ ಗಳ ಆಲ್ಫಾ ಸರಪಣಿ ಮೊಯಿಟಿಯನ್ನು (ಅಣುವಿನ ಒಂದು ಭಾಗ) ಸೀಳಲಾಯಿತು. 50ಡಿಗ್ರೀ ಸೆಲ್ಸಿಯಸ್ ಮತ್ತು ಪಿಎಚ್ 7.4 ನಲ್ಲಿ ಅತಿ ಹೆಚ್ಚಿನ ಚಟುವಟಿಕೆಗಳನ್ನು ಗಮನಿಸಲಾಯಿತು. ಲೋಹದ ಅಯಾನುಗಳಾದ ಎಮ್‌ಜಿ$^{2+}$ ಮತ್ತು ಎಮ್‌ಎನ್$^{2+}$ ಗಳು ಪ್ರೊಟಿಯೇಸ್ ಚಟುವಟಿಕೆಯನ್ನು ವೃದ್ಧಿಸಿರುವುದು ಕಂಡುಬಂದಿತು. ಹಾಗೆಯೇ, ಪಿಎಮ್‌ಎಸ್‌ಎಫ್ ಮತ್ತು ಇಡಿಟಿಎ ಪ್ರೊಟಿಯೇಸ್ ಚಟುವಟಿಕೆಯನ್ನು ಕಿಣ್ವದ ಸಿರಿನ್ ಪ್ರೊಟಿಯೇಸ್ ಗುಣವನ್ನು ನಿರ್ಣಯಿಸಿ, ಲೋಹದ ಅಯಾನುಗಳನ್ನು ಅದರ ಚಟುವಟಿಕೆಗಳಿಗೆ ಗುರಿ ಮಾಡಿಸುವುದರ ಮೂಲಕ ಪ್ರತಿಬಂಧಿಸುತ್ತದೆ. ಬಿ. ಸರ್ಕ್ಯುಲನ್ಸ್ ಸಿಎಫ್‌ಆರ್11 ನ ಎರಡು ಪ್ರೊಟಿಯೇಸ್‌ಗಳ ಎಮ್‌ಎಎಲ್‌ಡಿಐ ವಿಶ್ಲೇಷಣೆಯನ್ನು ನಡೆಸಲಾಯಿತು.

ಮತ್ತು ಕಿಣ್ವದ ಕಡಿತಗೊಳಿಸುವ ಅನುಕ್ರಮವು, ಸಬ್‌ಟಿಲ್ಸಿನ್ ರೀತಿಯ ಸಿರಿನ್ ಪ್ರೊಟಿಯೇಸ್‌ಗಳಿಗೆ ಸಂಬಂಧ ಹೊಂದಿದೆ.

**ಮಧುಮೇಹ ವಿರೋಧಿ ಮತ್ತು ಮೂತ್ರವರ್ಧಕ ಬಾಳೆಯ ಸ್ಯೂಡೊಸ್ಟೆಮ್ ರಸ** (ಆರಾಧ್ಯಾ ಎಸ್‌ಎಮ್)

ಬಾಳೆಯ ಸ್ಯೂಡೊಸ್ಟೆಮ್‌ಅನ್ನು ಜಜ್ಜುವುದರ ಮೂಲಕ ಸ್ಯೂಡೊಸ್ಟೆಮ್ ರಸವನ್ನು ತಯಾರಿಸಲಾಯಿತು. ಸ್ಯೂಡೊಸ್ಟೆಮ್ ನ ರಸವನ್ನು ಅವುಗಳ ಒಟ್ಟೂ ಕರಗುವ ಘನ ಅಂಶಗಳನ್ನು (6–12%), ಸಕ್ಕರೆ ಮತ್ತು ಸಿಟ್ರಿಕ್ ಆಮ್ಲ ಬಳಸಿ ಅವುಗಳ ಆಮ್ಲತೆಯನ್ನು (0.2–0.3%) ಹೆಚ್ಚಿಸುವುದರ ಮೂಲಕ ಆರ್‌ಟಿಎಸ್ ಪಾನೀಯವಾಗಿ ಬದಲಾಯಿಸಲಾಯಿತು. ತಯಾರಿಸಲ್ಪಟ್ಟ ಪಾನೀಯಗಳನ್ನು, ಅವುಗಳ ಸಂವೇದನಾ ಗುಣಮಟ್ಟ ಮತ್ತು ಒಟ್ಟಾರೆ ಸ್ವೀಕಾರಾರ್ಹತೆಯನ್ನು ಪರೀಕ್ಷಿಸುವುದರ ಮೂಲಕ ಪ್ರದರ್ಶಿಸಲಾಯಿತು. ರಸವು 1 ರಿಂದ 2 ತಾಸುಗಳವರೆಗೆ ಕದಡದೇ ಸಂಗ್ರಹ ಮಾಡುವ ಸಂದರ್ಭದಲ್ಲಿ ಬಿಳಿ ಸೆಡಿಮೆಂಟ್‌ಗಳ ಜೊತೆ ಆಕರ್ಷಕ ಬಿಳಿ ಬಣ್ಣದ ಕೆನೆಯನ್ನು ತೋರಿಸಿದವು. ರಸವನ್ನು ಬಿಸಿ ನೀರಿನಲ್ಲಿ (85 ಡಿಗ್ರೀ ಸೆಲ್ಸಿಯಸ್) 15 ನಿಮಿಷಗಳವರೆಗೆ, ಗಾಳಿ ತೂರದ ಸೀಲಿಂಗ್ ಮತ್ತು ಪಾಶ್ಚರೀಕರಣ ಮಾಡಿ ಶುದ್ಧ, ಜೀವಾಣುರಹಿತ ಬಾಟಲಿಗಳಲ್ಲಿ ತುಂಬಲಾಯಿತು. ರಸದ ಮೂತ್ರವರ್ಧಕ ಗುಣಗಳನ್ನು ಪ್ರಾಣಿಗಳ ಮಾದರಿಗಳನ್ನು ಅಧ್ಯಯನ ಮಾಡುವುದರ ಮೂಲಕ ದೃಢೀಕರಿಸಲಾಯಿತು.

**ಬಾಳೆಯ ಬೇರುಕಾಂಡ (ಮಾರ್ಪಡುಗೊಂಡಿರುವ, ನೆಲದಡಿಯಲ್ಲಿ ಬೆಳೆಯುವ ಕಾಂಡ)** (ಆರಾಧ್ಯಾ ಎಸ್‌ಎಮ್)

ಬಾಳೆಯ ಬೇರುಕಾಂಡದ ಪುಡಿಯ ತೀವ್ರ ಮತ್ತು ಉಪತೀವ್ರ ವಿಷತ್ವ ಅಧ್ಯಯನಗಳನ್ನು ಪ್ರಾಣಿಗಳ ಮಾದರಿಗಳನ್ನು ಉಪಯೋಗಿಸಿ ಮಾಡಲಾಯಿತು. ಇದರಿಂದ ಬಾಳೆಯ ಬೇರುಕಾಂಡದ ಪುಡಿಯು ವಿಷರಹಿತ ಮತ್ತು ಸೇವನೆಗೆ ಯೋಗ್ಯವಾದುದೆಂದು ಬಹಿರಂಗವಾಯಿತು.

**ಕುಕುರ್ಬಿಟಾ ಕುಟುಂಬಕ್ಕೆ ಸೇರಿದ ಹಣ್ಣುಗಳಿಂದ ಎಲ್–ಸಿಟ್ರುಲಿನ್** (ವಿಜಯಲಕ್ಷ್ಮಿ ಎಮ್‌ಆರ್)

ಕುಕುರ್ಬಿಟಾ ಕುಟುಂಬಕ್ಕೆ ಸೇರಿದ ಸವತೆಕಾಯಿ, ಕಲ್ಲಂಗಡಿಗಳು ಮತ್ತು ಸೋರೆಕಾಯಿಗಳ ಎಲ್–ಸಿಟ್ರುಲಿನ್ ಅಂಶವನ್ನು ವಿಶ್ಲೇಷಿಸಲಾಯಿತು. ಪರೀಕ್ಷಿಸಲ್ಪಟ್ಟ ಕುಕುರ್ಬಿಟ್ ಗಳಲ್ಲಿ ಸವತೆ, ಕರಬೂಜ ಮತ್ತು ಮಂಗಳೂರು ಸವತೆಗಳು ಅತಿ ಹೆಚ್ಚಿನ ಸಾಂದ್ರತೆಯ ಸಿಟ್ರುಲಿನ್ ಅನ್ನು ಹೊಂದಿದ್ದವು. ಅವು 42 ರಿಂದ 90 ಮಿಲಿ ಗ್ರಾಮ್/ಗ್ರಾಮ್‌ಗಳ (ಒಣ ತೂಕ) ನಡುವೆ ಇದ್ದವು.

**ಕಚ್ಚಾ ಮತ್ತು ಚೆನ್ನಾಗಿ ಮಾಗಿದ ಪಪ್ಪಾಯಾ ಪುಡಿ** (ವಿಜಯಾನಂದ್ ಪಿ)

ಕಚ್ಚಾ ಮತ್ತು ಚೆನ್ನಾಗಿ ಮಾಗಿದ ಪಪ್ಪಾಯಾಗಳ ಭೌತ ರಾಸಾಯನಿಕ ಸಂಯೋಜನೆಗಳು ಬಹಿರಂಗಪಡಿಸಿದ್ದೇನೆಂದರೆ, ಕಚ್ಚಾ ಪಪ್ಪಾಯಾವು ಎಸ್ಕೊರ್ಬಿಕ್ ಆಮ್ಲವನ್ನೊಂದನ್ನೇ ಹೆಚ್ಚಾಗಿ ಹೊಂದಿದೆ (86 ಮಿಲಿ ಗ್ರಾಮ್/100ಗ್ರಾಮ್). ಹಾಗೆಯೇ, ಚೆನ್ನಾಗಿ ಮಾಗಿದ ಪಪ್ಪಾಯಾವು ಕ್ಯಾರೊಟಿನೊಯ್ಡ್ಸ್ (2699 ಮೈಕ್ರೊ ಗ್ರಾಮ್/100ಗ್ರಾಮ್) ಮತ್ತು ಎಸ್ಕೊರ್ಬಿಕ್ ಆಮ್ಲವನ್ನು (43 ಮಿಲಿ ಗ್ರಾಮ್/100ಗ್ರಾಮ್) ಹೆಚ್ಚಾಗಿ ಹೊಂದಿದೆ. ಕಚ್ಚಾ ಮತ್ತು ಚೆನ್ನಾಗಿ ಮಾಗಿದ ಪಪ್ಪಾಯಾಗಳ ನಿರ್ಜಲೀಕರಣಗೊಂಡ ಘಟಕಗಳಾದ ಸಿಪ್ಪೆ, ತಿರುಳು ಮತ್ತು ಬೀಜಗಳನ್ನು ಅವುಗಳ ರಾಸಾಯನಿಕ ಸಂಯೋಜನೆ ಮತ್ತು ಪ್ರೋಟಿಯೋಲಿಟಿಕ್ ಕಿಣ್ವದ ಚಟುವಟಿಕೆಯನ್ನು ತಿಳಿಯಲು ವಿಶ್ಲೇಷಿಸಲಾಯಿತು. ಪ್ರೋಟಿಯೋಲಿಟಿಕ್ ಕಿಣ್ವದ ಚಟುವಟಿಕೆಯು ಕಚ್ಚಾ ಪಪ್ಪಾಯಾದ ತಿರುಳು ಮತ್ತು ಸಿಪ್ಪೆಯ ಭಾಗದಲ್ಲಿ ಹೆಚ್ಚಾಗಿ ಕಂಡುಬಂದವು. ಮಾಗಿದ ಪಪ್ಪಾಯಾ ಹಣ್ಣುಗಳ ತಿರುಳನ್ನು ಒಣಗಿಸಿದ ಸಿಂಪಡಿಸುವ ಪುಡಿಯನ್ನು ತಯಾರಿಸಲು ಬಳಸಲಾಯಿತು. ತಕ್ಷಣ ಪಪ್ಪಾಯಾ ಪಾನೀಯದ ಮಿಶ್ರಣವನ್ನು ಪಪ್ಪಾಯಾ ಪುಡಿಯಿಂದ ತಯಾರಿಸಲಾಯಿತು.

**ಪೋಷಣಾಖಾದ್ಯವನ್ನು ಹೆಚ್ಚಾಗಿ ಹೊಂದಿರುವ ಗೋಧಿಯ ಮೊಳಕೆಯ ತೈಲ** (ಚೇತನಾ ಆರ್, ಗೋಪಾಲಕೃಷ್ಣ ಎಜಿ, ಲೋಕೇಶ್ ಬಿಆರ್, ನಾಸಿರುಲ್ಲಾ, ಸುಕುಮಾರ್ ದೆಬ್‌ನಾಥ್, ಸುರೇಶ್ ಕುಮಾರ್ ಜಿ)

ಪೋಷಣಾಖಾದ್ಯವನ್ನು ಹೆಚ್ಚಾಗಿ ಹೊಂದಿರುವ ತೈಲದ ಹೊಸ ಮೂಲವನ್ನು ಗೋಧಿಯ ತೌಡು ಮತ್ತು ಗೋಧಿಯ ಮೊಳಕೆಯಿಂದ ಪರಿಶೋಧಿಸಲಾಯಿತು. ಗೋಧಿಯ ತೌಡಿನ ಎಣ್ಣೆಗಿಂತ ಆರು ಪಟ್ಟು ಹೆಚ್ಚು ಕ್ಯಾರಟಿನಾಯ್ಡ್ ಅಂಶವನ್ನು ಗೋಧಿಯ ಮೊಳಕೆ ತೈಲ ಹೊಂದಿತ್ತು. ಆಂಟಿಕ್ಸಿಡೆಂಟ್ ಚಟುವಟಿಕೆಗಳ ಅಧ್ಯಯನಗಳು, ಈ ತೈಲಗಳ ಸಾಮರ್ಥ್ಯವು ವಾಣಿಜ್ಯ ತರಕಾರಿಗಳ ಎಣ್ಣೆಗಿಂತ ಹೆಚ್ಚಿನವು ಎಂದು ಸೂಚಿಸಿದವು.

**ತಾಳೆ ಎಣ್ಣೆ ಉದ್ಯಮದ ಉಪಉತ್ಪನ್ನಗಳು** (ಗೋಪಾಲಕೃಷ್ಣ ಎಜಿ)

ಪೋಷಣಾ ಖಾದ್ಯ ಪುಷ್ಟೀಕರಿಸಿದ ತಾಳೆ ಕೊಬ್ಬನ್ನು ಕಚ್ಚಾ ತಾಳೆ ಎಣ್ಣೆಯಿಂದ ತಯಾರಿಸಲಾಯಿತು ಮತ್ತು ಇದನ್ನು ಒಂದು ಪೋಷಣಾ ಖಾದ್ಯ ಮೂಲವಾಗಿ, ಪೌಷ್ಟಿಕಾಂಶ ಹೆಚ್ಚಿರುವ ಬೆಣ್ಣೆಯ ಹರಡುವಿಕೆಯನ್ನು (ಬಟರ್ ಸ್ಪ್ರೆಡ್) ತಯಾರಿಸಲು ಬಳಸಲಾಯಿತು.

**ಕಚ್ಚಾ ತಾಳೆ ಎಣ್ಣೆಯ ವಿಭಾಗೀಕರಣ** (ಗೋಪಾಲಕೃಷ್ಣ ಎಜಿ)

ಕಚ್ಚಾ ತಾಳೆಯ ತೈಲವನ್ನು (ಸಿಆರ್‌ಪಿಒ), ರಾಸಾಯನಿಕ ಗುಣಲಕ್ಷಣಗಳು ಮತ್ತು ಪೋಷಣ ಖಾದ್ಯಗಳ ವಿತರಣೆಯ ಮೇಲಿನ ವಿಭಾಗೀಕರಣದ ಪರಿಣಾಮವನ್ನು ತಿಳಿಯಲು, 25 ಡಿಗ್ರೀ ಸೆಲ್ಸಿಯಸ್ ನಲ್ಲಿ ಒಣ ವಿಭಾಗೀಕರಣಗೊಳಿಸಲಾಯಿತು. ಕಚ್ಚಾ ತಾಳೆಯ ಒಲೀನ್ (ಸಿಆರ್‌ಪಿಒಎಲ್, 77%) ಮತ್ತು ಕಚ್ಚಾ ತಾಳೆಯ ಸ್ಟಿಯರಿನ್‌ಅನ್ನು (ಸಿಆರ್‌ಪಿಎಸ್, 23%) ಪಡೆಯಯಲಾಯಿತು. ಕಡಿಮೆ ಕರಗುವ ಮತ್ತು ಹೆಚ್ಚಿಗೆ ಕರಗುವ ಕಚ್ಚಾ ತಾಳೆಯ ಸ್ಟಿಯರಿನ್‌ಅನ್ನು (ಎಲ್‌ಎಮ್‌ಸಿಆರ್‌ಪಿಎಸ್, 14.3% ಮತ್ತು ಎಚ್‌ಎಮ್‌ಸಿಆರ್‌ಪಿಎಸ್, 8.7%) ಅಸಿಟೋನ್ ಜೊತೆಗೆ ಸಿಆರ್‌ಪಿಎಸ್‌ನ ಮತ್ತಷ್ಟು ವಿಭಾಗೀಕರಣದ ಮೂಲಕ ಪ್ರತ್ಯೇಕಿಸಲಾಯಿತು. ಸಿಆರ್‌ಪಿಒನ 514.7 ಎಮ್‌ಜಿ ಬಿ–ಕ್ಯಾರೋಟಿನ್/ಕೆಜಿಗಳನ್ನು ಕ್ರಮವಾಗಿ ಸಿಆರ್‌ಪಿಒಎಲ್ (82.6%), ಸಿಆರ್‌ಪಿಎಸ್(16.1%), ಎಲ್‌ಎಮ್‌ಸಿಆರ್‌ಪಿಎಸ್ (12.5%), ಮತ್ತು ಎಚ್‌ಎಮ್‌ಸಿಆರ್‌ಪಿಎಸ್(3.1%) ಗಳಲ್ಲಿ ವಿಭಿನ್ನವಾಗಿ ವಿತರಿಸಲಾಯಿತು. ಸಿಆರ್‌ಪಿಒ, ಸಿಆರ್‌ಪಿಒಎಲ್, ಸಿಆರ್‌ಪಿಎಸ್, ಎಲ್‌ಎಮ್‌ಸಿಆರ್‌ಪಿಎಸ್ ಮತ್ತು ಎಚ್‌ಎಮ್‌ಸಿಆರ್‌ಪಿಎಸ್ ಗಳಲ್ಲಿ ಫೈಟೊಸ್ಟಿರೊಲ್‌ನ ವಿತರಣೆ ಭಿನ್ನ ರಾಶಿಗಳಲ್ಲಿ ಕ್ರಮವಾಗಿ, 1870.2 ಎಮ್‌ಜಿ/ಕೆಜಿ, 1996.8 ಎಮ್‌ಜಿ/ಕೆಜಿ, 1190.9 ಎಮ್‌ಜಿ/ಕೆಜಿ, 1290.4 ಎಮ್‌ಜಿ/ಕೆಜಿ ಮತ್ತು 115.4 ಎಮ್‌ಜಿ/ಕೆಜಿ ಆಗಿವೆ. ಸಿಆರ್‌ಪಿಒ, ಸಿಆರ್‌ಪಿಒಎಲ್, ಸಿಆರ್‌ಪಿಎಸ್, ಎಲ್‌ಎಮ್‌ಸಿಆರ್‌ಪಿಎಸ್ ಮತ್ತು ಎಚ್‌ಎಮ್‌ಸಿಆರ್‌ಪಿಎಸ್‌ಗಳ ಒಟ್ಟೂ ಟೊಕೊಫೆರೊಲ್ ಸಂಯೋಜನೆಯು ಕ್ರಮವಾಗಿ, 535.5 ಎಮ್‌ಜಿ/ಕೆಜಿ, 5871.0 ಎಮ್‌ಜಿ/ಕೆಜಿ, 308.0 ಎಮ್‌ಜಿ/ಕೆಜಿ, 305.6 ಎಮ್‌ಜಿ/ಕೆಜಿ ಮತ್ತು 36.2 ಎಮ್‌ಜಿ/ಕೆಜಿ ಗಳಾಗಿವೆ. ಫಲಿತಾಂಶಗಳು, ಸಿಆರ್‌ಪಿಒನ ವಿಭಾಗೀಕರಣವು ಪೋಷಣಖಾದ್ಯ ಹೆಚ್ಚಾಗಿರುವ ಭಾಗಗಳ

ತಯಾರಿಕೆಯಲ್ಲಿ ನೆರವಾಗಬಲ್ಲವೆಂಬುದನ್ನು ತೋರಿಸಿದವು.

**ಕೆಂಪು ತಾಳೆ ಎಣ್ಣೆ** (ಗೋಪಾಲಕೃಷ್ಣ ಎಜಿ)

8.79% ಎಫ್‌ಎಫ್‌ಎಯ ಕಚ್ಚಾ ಕೆಂಪು ತಾಳೆಯ ಎಣ್ಣೆಯ ಆಮ್ಲತೆಯನ್ನು ಕಿಣ್ವ (ಚಲನೆಯಿಲ್ಲದ ರೈಸೊಮ್ಯುಕರ್ ಮೀಹಿ) ದ್ರಾವಕ (ಇಟಿಓಎಚ್) ಮತ್ತು ರಾಸಾಯನಿಕ (ಜಲೀಯ ಎನ್‌ಎಓಎಚ್) ಗಳಿಂದ ಕಡಿತಗೊಳಿಸಲಾಯಿತು. ತಟಸ್ಥ ತೈಲ ನಷ್ಟ ಮತ್ತು ಉತ್ಪನ್ನ ಇಳುವರಿಗಳ ಮೇಲೆ ವಿವಿಧ ಆಮ್ಲತೆಯನ್ನು ಕಡಿತಗೊಳಿಸುವ ವಿಧಾನದ ಪರಿಣಾಮವನ್ನು ಮೌಲ್ಯಮಾಪನ ಮಾಡಲಾಯಿತು. ಗುಣಮಟ್ಟದ ಗುಣಲಕ್ಷಣಗಳಾದ ಮುಕ್ತ ಕೊಬ್ಬಿನ ಆಮ್ಲಗಳು ( ಎಫ್‌ಎಫ್‌ಎ), ಪೆರೋಕ್ಸೈಡ್ ಮೌಲ್ಯ (ಪಿವಿ), ಅಯೋಡಿನ್ ಮೌಲ್ಯ (ಐವಿ), ಅನ್‌ಸೆಪೊನಿಫಿಯೆಬಲ್ (ಸೋಪನ್ನು ತಯಾರಿಸಲು ಯೋಗ್ಯವಲ್ಲದ) ಅಂಶ, ಗ್ಲಿಸರೈಡ್ ಸಂಯೋಜನೆ, ಕೊಬ್ಬಿನ ಆಮ್ಲದ ಸಂಯೋಜನೆ, ಟ್ರೈ ಗ್ಲಿಸರೈಡ್ ಪ್ರೊಫೈಲ್, ಪೋಷಣಖಾದ್ಯಗಳ ಧಾರಣ ಮತ್ತು ರೇಡಿಕಲ್ ಶೇಖರಿಸುವ ಚಟುವಟಿಕೆ; ಒಲೀನ್ ಮತ್ತು ಸ್ಟಿಯರಿನ್ ಇಳುವರಿ, ಅದರ ಕೊಬ್ಬಿನ ಆಮ್ಲದ ಸಂಯೋಜನೆ ಮತ್ತು ಟ್ರೈಅಸೈಲ್ ಗ್ಲಿಸರೋಲ್ (ಟಿಎಜಿ) ಪ್ರೊಫೈಲ್ ಗಳನ್ನು ವಿಶ್ಲೇಷಿಸಲಾಯಿತು. ಆರ್‌ಎಮ್‌ಆರ್‌ಪಿಓ ತಟಸ್ಥ ತೈಲ ನಷ್ಟವಿಲ್ಲದೆ 100% ಉತ್ಪನ್ನದ ಇಳುವರಿಯನ್ನು ತೋರಿಸಿತು. ಆರ್‌ಎಮ್‌ಆರ್‌ಪಿಓವನ್ನು ಇಟಿಓಎಚ್‌ಆರ್‌ಪಿಓ ಮತ್ತು ಎನ್‌ಎಓಎಚ್‌ಆರ್‌ಪಿಓ ಗಳಿಗೆ ಹೋಲಿಸಿದಾಗ, ಅತಿ ಹೆಚ್ಚಿನ ಸಾಬೂನೀಕರಣ ಮಾಡಲಾಗದ ಅಂಶ (0.91%), ಮೊನೊಗ್ಲಿಸರೈಡ್ (2.8%) ಮತ್ತು ಡೈಗ್ಲಿಸರೈಡ್‌ಅನ್ನು (18.7%) ಹೊಂದಿವೆ. ಎಲ್ಲಾ ಮಾದರಿಗಳ, ಕೊಬ್ಬಿನ ಆಮ್ಲದ ಸಂಯೋಜನೆಯ ಎಮ್‌ಎಜಿ, ಡಿಎಜಿ ಮತ್ತು ಟಿಎಜಿಗಳು ಆರ್‌ಎಮ್‌ಆರ್‌ಪಿಓ ನ  ಡಿಎಜಿ ಭಿನಾರಾಶಿಗಳನ್ನು ಹೊರತುಪಡಿಸಿ, ಯಾವುದೇ ಗಮನಾರ್ಹ ವ್ಯತ್ಯಾಸವನ್ನು ತೋರಿಸಲಿಲ್ಲ. ಆರ್‌ಎಮ್‌ಆರ್‌ಪಿಓ ನ  ಟಿಎಜಿ ಪ್ರೊಫೈಲ್, ಉಳಿದ ಮಾದರಿಗಳಿಗಿಂತ ಗಮನಾರ್ಹ ವ್ಯತ್ಯಾಸವನ್ನು ತೋರಿಸಿತು. ಆರ್‌ಎಮ್‌ಆರ್‌ಪಿಓ ವು ಪೋಷಣಖಾದ್ಯಗಳ ಧಾರಣಗಳಾದ ಕ್ಯಾರೊಟಿನೊಯ್ಡ್ಸ್ (94%), ಫೈಟೊಸ್ಟಿರೊಲ್ಸ್ (57%), ಒಟ್ಟೂ ಟೊಕೊಫೆರೊಲ್ಸ್ (71%), ಸ್ಕ್ವಲಿನ್ (72%), ಸಹಕಿಣ್ವ ಕ್ಯೂ10 (99%) ಮತ್ತು ಒಟ್ಟೂ ಫೆನೊಲಿಕ್ಸ್ (69%) ಜೊತೆಗೆ ಐಸಿ$_{50}$ ಮೌಲ್ಯದ 19.7 ಮಿಲಿಗ್ರಾಮ್ ನ ಎಣ್ಣೆ/ಎಮ್‌ಎಲ್ ಗಳನ್ನು ತೋರಿಸಿತು. ಆರ್‌ಎಮ್‌ಆರ್‌ಪಿಓ ವು ಹೆಚ್ಚಿನ ಸ್ಟಿಯರಿನ್ (47.4%) ಅನ್ನು ಯಾವುದೇ ನಷ್ಟವಿಲ್ಲದೆ ತೋರಿಸಿತು. ಆರ್‌ಎಮ್‌ಸಿಪಿಓ ನ ಭಿನ್ನರಾಶಿಗಳು ಉಳಿದ ಮಾದರಿಗಳಿಗಿಂತ (47.2%) ಸಂತೃಪ್ತ (41.6%) ಆಗಿದ್ದವು. ಫಲಿತಾಂಶಗಳು ತೋರಿಸಿದ್ದೇನೆಂದರೆ, ಆರ್‌ಎಮ್ ಆಧಾರಿತ ಆಮ್ಲತೆಯನ್ನು ಕಡಿತಗೊಳಿಸುವ ವಿಧಾನವನ್ನು ಪೋಷಣಖಾದ್ಯ ಉಳಿಸಿಕೊಂಡ ಆರ್‌ಪಿಓ ಗಳ ತಯಾರಿಕೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಯಿತು. ಆರ್‌ಎಮ್‌ಆರ್‌ಪಿಓ ನ ಮತ್ತಷ್ಟು ವಿಭಾಗೀಕರಣವು ಆರ್‌ಪಿಓ ಜೊತೆಗೆ ಸುಧಾರಿತ ಕೊಬ್ಬಿನ ಆಮ್ಲದ  ಸಂಯೋಜನೆಯನ್ನು ತಯಾರಿಸಲು ಸಹಾಯ ಮಾಡಿದವು.

**ಮೊರಿಂಗಾ ಒಲಿಫೆರ (ನುಗ್ಗೇಕಾಯಿ) ಬೀಜದ ಎಣ್ಣೆ** (ಗೋಪಾಲಕೃಷ್ಣ ಎಜಿ)

ನುಗ್ಗೇಕಾಯಿಯ ಜಫ್ನಾ ವಿಧದಿಂದ ಕಡಿಮೆ ಉಷ್ಣತೆಯಲ್ಲಿ ಒತ್ತಿದ ಮತ್ತು ಹೆಕ್ಸೇನ್ ಸಾರವನ್ನು ತೆಗೆದ ಮೊರಿಂಗಾ ಬೀಜದ ಎಣ್ಣೆಗಳನ್ನು (ಸಿಪಿಎಮ್‌ಎಸ್‌ಓ ಮತ್ತು ಎಚ್‌ಇಎಮ್‌ಎಸ್‌ಓ) ಅವುಗಳ ತೈಲ ಗುಣಮಟ್ಟ ಮತ್ತು ಆಂಟಿಓಕ್ಸಿಡೆಂಟ್ ಸಂಯೋಜನೆಯನ್ನು ತಿಳಿಯಲು ಮೌಲ್ಯಮಾಪನ ಮಾಡಲಾಯಿತು. ಸಿಪಿಎಮ್‌ಎಸ್‌ಓ ಮತ್ತು ಎಚ್‌ಇಎಮ್‌ಎಸ್‌ಓ ಗಳ ಭೌತರಾಸಾಯನಿಕ ಗುಣಲಕ್ಷಣಗಳಾದ ಅಯೋಡಿನ್ ಮೌಲ್ಯ, ಸಾಬೂನೀಕರಣ ಮೌಲ್ಯ ಮತ್ತು ಸಾಬೂನೀಕರಣ ಮಾಡಲಾಗದ ಅಂಶಗಳು ಕ್ರಮವಾಗಿ 67.8 ಮತ್ತು 68.5 ಗ್ರಾಮ್ ಐ$_2$/100 ಗ್ರಾಮ್ ಎಣ್ಣೆ, 190.4 ಮತ್ತು 191.2 ಎಮ್‌ಜಿ ಕೆಓಎಚ್/ಗ್ರಾಮ್ ಎಣ್ಣೆ ಮತ್ತು 0.59 ಮತ್ತು 0.65% ಇರುವುದೆಂದು ಕಂಡುಬಂದಿತು. ಸಿಪಿಎಮ್‌ಎಸ್‌ಓ ಮತ್ತು ಎಚ್‌ಇಎಮ್‌ಎಸ್‌ಓಗಳ ಒಟ್ಟೂ ಟೊಕೊಫೆರೋಲ್‌ಗಳು, 95.5 ಮತ್ತು 90.2 ಎಮ್‌ಜಿ/ಕೆಜಿ ಎಂದು ಕಂಡುಬಂದವು. ಸಿಪಿಎಮ್‌ಎಸ್‌ಓ ಮತ್ತು ಎಚ್‌ಇಎಮ್‌ಎಸ್‌ಓ ಗಳ ಕೊಬ್ಬಿನಾಮ್ಲದ ಸಂಯೋಜನೆಯು, ಒಲೀಕ್ ಆಮ್ಲ ಒಂದು ಪ್ರಮುಖ ಕೊಬ್ಬಿನಾಮ್ಲದಂತೆ (78–79%) ಎಂದು ತೋರಿಸಿತು. ಸಿಪಿಎಮ್‌ಎಸ್‌ಓಗಳ ಉತ್ಕರ್ಷಣಾಶೀಲ, ಉಷ್ಣ ಮತ್ತು ಹುರಿಯಲು ಯೋಗ್ಯವಾದ ಸ್ಥಿರತೆಗಳನ್ನು ವಾಣಿಜ್ಯ ಕಚ್ಚಾ ಮತ್ತು ಸಂಸ್ಕರಿಸಿದ ಕಡಲೆಕಾಯಿ ಎಣ್ಣೆಗಳಿಗೆ (ಜಿಎನ್‌ಓ ಮತ್ತು ಆರ್‌ಜಿಎನ್‌ಓ) ಹೋಲಿಸಲಾಯಿತು. ಸಿಪಿಎಮ್‌ಎಸ್‌ಓ ಜಿಎನ್‌ಓ ಗಿಂತ 79% ಕಡಿಮೆ ಪೆರೊಕ್ಸೈಡ್ ರಚನೆಯಾಗುವುದು ತೋರಿಸಿತು ಮತ್ತು ಸಾಕಷ್ಟು ಉಷ್ಣ ಸ್ಥಿರತೆ ಮತ್ತು ಒಳ್ಳೆಯ ಉತ್ಕರ್ಷಣಶೀಲ ಸ್ಥಿರತೆ ಹೊಂದಿರುವುದು ಕಂಡುಬಂದಿತು. ಸಿಪಿಎಮ್‌ಎಸ್‌ಓ, ಆರ್‌ಜಿಎನ್‌ಓಗಿಂತ, ಕ್ರಮವಾಗಿ (48%, 22 ಎಮ್‌ಇಕ್ಯೂ ಔ$_2$/ಕೆಜಿ ಮತ್ತು 52%) ಮುಕ್ತ ಕೊಬ್ಬಿನಾಮ್ಲದಲ್ಲಿ ಕಡಿಮೆ ಹೆಚ್ಚಳ (28%), ಪೆರೊಕ್ಸೈಡ್ ಮೌಲ್ಯ (10 ಎಮ್‌ಇಕ್ಯೂ ಔ$_2$/ಕೆಜಿ) ಮತ್ತು ಬಣ್ಣ (25%) ಇವುಗಳಲ್ಲಿ ಹುರಿದ ನಂತರವೂ, ಹುರಿಯಲು ಬೇಕಾಗಿರುವ ಸ್ಥಿರತೆ ಉತ್ತಮವಾಗಿದೆ ಎಂದು ತೋರಿಸಿತು. ನೈಸರ್ಗಿಕ ಆಂಟಿಓಕ್ಸಿಡೆಂಟ್‌ಗಳಾದ ಟೊಕೊಫೆರೊಲ್ಸ್ ಮತ್ತು ಫೆನೊಲಿಕ್ ಹಾಗೂ ಸಣ್ಣ ಸಂಯುಕ್ತಗಳು ಉದಾ: ಎಮ್‌ಎಸ್‌ಓಗಳಲ್ಲಿರುವ ಸ್ಟೀರೊಲ್ಸ್ ಮತ್ತು ಕ್ಯಾರೊಟಿನೊಯ್ಡ್ಸ್ ಮತ್ತು ಅದರ ಶೇಖರಿಸುವ ಚಟುವಟಿಕೆ ಇವುಗಳನ್ನು, ಒಣಗಿಸಿದ ತೆಂಗಿನ ಕರ್ನಲ್ (ಕೊಬ್ಬರಿ), ಕಚ್ಚಾ ತೈಲ (ಸಿಎನ್‌ಓ), ಎಳ್ಳಿನ ಕಚ್ಚಾ ತೈಲ (ಎಸ್‌ಇಎಸ್‌ಓ), ಹುಚ್ಚೆಳ್ಳಿನ ಕಚ್ಚಾ ತೈಲ (ಎನ್‌ಎಸ್‌ಓ), ತಾಳೆಯ ಕಚ್ಚಾ ತೈಲ (ಸಿಪಿಓ), ಅಕ್ಕಿಯ ತೌಡಿನ ಕಚ್ಚಾ ತೈಲ (ಆರ್‌ಬಿಓ) ಮತ್ತು ವಾಣಿಜ್ಯಕ್ಕಾಗಿ ಸಂಸ್ಕರಿಸಿದ ಕಡಲೆಕಾಯಿ ಎಣ್ಣೆ (ಜಿಎನ್‌ಓ) ಇವುಗಳಿಗೆ ಹೋಲಿಸಿ ಅಳತೆ ಮಾಡಲಾಯಿತು. ಎಮ್‌ಎಸ್‌ಓ, 88 ಪಿಪಿಎಮ್ ಒಟ್ಟೂ ಟೊಕೊಫೆರೊಲ್ ಗಳನ್ನು ಜೊತೆಗೆ ಎ–ಟೊಕೊಫೆರೊಲ್‌ಅನ್ನು (56.2 ಪಿಪಿಎಮ್) ಒಂದು ಪ್ರಮುಖ ಟೊಕೊಫೆರೊಲ್ ಆಗಿ ಒಳಗೊಂಡಿರುತ್ತದೆ. ಎಮ್‌ಎಸ್‌ಓ, 117.9 ಪಿಪಿಎಮ್ ಒಟ್ಟೂ ಫೆನೊಲಿಕ್ಸ್ ಜೊತೆಗೆ ಗ್ಯಾಲಿಕ್ ಆಮ್ಲ (48.5 ಪಿಪಿಎಮ್) ಎಂಬ ಪ್ರಮುಖ ಫೆನೊಲಿಕ್ ಅನ್ನೂ ಸಹ ಹೊಂದಿದೆ. ಎಮ್‌ಎಸ್‌ಓ ವು ಸಾಕಷ್ಟು ಸ್ಟಿರೊಲ್ಸ್ (1700.8 ಪಿಪಿಎಮ್) ಮತ್ತು ಕ್ಯಾರೊಟಿನೊಯ್ಡ್ಸ್ (17.9 ಪಿಪಿಎಮ್) ಅನ್ನು ಹೊಂದಿದೆ. ಎಮ್‌ಎಸ್‌ಓ, ಐಸಿ$_{50}$, 35.5 ಎಮ್‌ಜಿಎಮ್‌ಎಲ್$^{-1}$ ಮೌಲ್ಯವನ್ನು ತೋರಿಸಿತು. ಈ ಅಧ್ಯಯನಗಳು ತೋರಿಸಿದ್ದೇನೆಂದರೆ, ಎಮ್‌ಎಸ್‌ಓ ಆಂಟಿಓಕ್ಸಿಡೆಂಟ್ ಗುಣಲಕ್ಷಣಗಳನ್ನು ಹೊಂದಿದ್ದು, ಅವು ಸಿಎನ್‌ಓ ಗಿಂತ ಉತ್ತಮವಾಗಿದೆ ಮತ್ತು ಜಿಎನ್‌ಓ ಗೆ ಹೋಲಿಸಬಹುದಾಗಿದೆ.

**ಅಕ್ಕಿಯ ತೌಡಿನ ತೈಲದ ಡಿಯೊ ಡಿಸ್ಟಿಲೇಟ್** (ಗೋಪಾಲಕೃಷ್ಣ ಎಜಿ)

ಅಕ್ಕಿಯ ತೌಡಿನ ತೈಲದ ಡಿಯೊ ಡಿಸ್ಟಿಲೇಟ್‌ನ ಭೌತ ರಾಸಾಯನಿಕ ಗುಣಲಕ್ಷಣಗಳನ್ನು ಮೌಲ್ಯಮಾಪನ ಮಾಡಲಾಯಿತು ಮತ್ತು ಸಾಬೂನೀಕರಣ ಮಾಡಲಾಗದ ಅಂಶಗಳಿಂದ, 80–85% ಶುದ್ಧತೆಯನ್ನು ಹೊಂದಿರುವ ಶುದ್ಧೀಕರಿಸಿದ ಫೈಟೊಸ್ಟೀರೊಲ್ಸ್ ಅನ್ನು ಪಡೆಯಲಾಯಿತು. 80–85% ಆಲ್ಫಾಲಿನೊಲೆನಿಕ್ ಆಮ್ಲ ಹೊಂದಿರುವ, ಪುಫಾ ಹೆಚ್ಚಿರುವ ಕೊಬ್ಬಿನಾಮ್ಲಗಳನ್ನು ನಾರಗಸೆ ಎಣ್ಣೆಯಿಂದ ಪಡೆಯಲಾಯಿತು. ಫೈಟೋಸ್ಟೀರೋಲ್ಸ್ ಜೊತೆಗೆ, ಆಲ್ಫಾ ಲಿನೊಲೆನಿಕ್‌ಗಳ ಎಸ್ಟರಿಫಿಕೇಶನ್ ಕೆಲಸವು ಇನ್ನೂ ಪ್ರಗತಿಯಲ್ಲಿದೆ.

**ಅಕ್ಕಿಯ ತೌಡಿನ ತೈಲ** (ನಾಸಿರುಲ್ಲ, ಬೇಬಿ ಲತಾ)

ಗಂಡು ವಿಸ್ಟಾರ್ ಇಲಿಗಳ ದೇಹದ ತೂಕ ಮತ್ತು ಆಹಾರ ಸೇವನೆಯನ್ನು ಎರಡು ತಿಂಗಳುಗಳವರೆಗೆ, ಬಿಸಿ ಮಾಡಿದ (24 ಗಂ), ಹುರಿದ (24 ಗಂ), ಸಂಸ್ಕರಿಸದ ಅಕ್ಕಿಯ ತೌಡಿನ ತೈಲ (ಆರ್‌ಬಿಒ) ಮತ್ತು ಸೂರ್ಯಕಾಂತಿ ತೈಲಗಳನ್ನು ಎರಡು ತಿಂಗಳುಗಳ ಕಾಲ ಕೊಟ್ಟು ದಾಖಲಿಸಲಾಯಿತು. ರಕ್ತದ ಪ್ರೊಫೈಲ್, ಮೇದಸ್ಸಿನ ಉತ್ಕರ್ಷಣ ಮತ್ತು ಯಕೃತ್ತಿನ ಊತಕರೋಗಶಾಸ್ತ್ರ ಮತ್ತು ಮೂತ್ರ ಪಿಂಡ ಇವುಗಳು ಪ್ರಾಣಿಗಳ ಬಲಿದಾನದ ನಂತರ ಅಧ್ಯಯನ ಮಾಡಲಾಯಿತು. ರಕ್ತ ಸಾರದಲ್ಲಿ ವಿವಿಧ ಪ್ರಾಣಿಗಳ ಮೇಧಸ್ಸಿನ ಪ್ರೊಫೈಲ್ ಗಳು (ಟಿಜಿ, ಕೊಲೆಸ್ಟಿರೊಲ್, ಎಚ್‌ಡಿಎಲ್ ಮತ್ತು ವಿಎಲ್‌ಡಿಎಲ್)ಯಾವುದೇ ಗಮನಾರ್ಹ ವ್ಯತ್ಯಾಸಗಳನ್ನು ತೋರಿಸದಿದ್ದರೂ, ಬಿಸಿ ಮಾಡಿದ (6.3 ಎಮ್‌ಜಿ/ಎಮ್‌ಎಲ್, 2.40 ಎಮ್‌ಜಿ/ಎಮ್‌ಎಲ್) ಮತ್ತು ಸಂಸ್ಕರಿಸದ ಎಣ್ಣೆಗೆ (5.3, 1.85 ಎಮ್‌ಜಿ/ಎಮ್‌ಎಲ್) ಹೋಲಿಸಿದಾಗ ಕಡಿಮೆ ಸಾಂದ್ರತೆಯುಳ್ಳ ಲಿಪೊಪ್ರೋಟೀನ್ಸ್ (ಎಲ್‌ಡಿಎಲ್) ಮತ್ತು ಥಯೊಬಾರ್ಬಿಟ್ಯುರಿಕ್ ಆಮ್ಲ (ಟಿಬಿಎ) ಪ್ರತಿಕ್ರಿಯಾಕಾರಕಗಳು ಹುರಿದ ಎಣ್ಣೆಯಲ್ಲಿ (11.7 ಎಮ್‌ಜಿ/ಡಿಎಲ್, 2.63 ಎಮ್‌ಜಿ/ಎಮ್‌ಎಲ್) ಹೆಚ್ಚಳವಾಗಿದ್ದವು. ಬಿಸಿ ಮಾಡಿದ ಎಣ್ಣೆ ಮತ್ತು ಹುರಿದ ಎಣ್ಣೆ ಎರಡರಲ್ಲೂ, ರಕ್ತಸಾರದಲ್ಲಿ ಅಲ್ಕಲೈನ್ ಫೊಸ್ಫಟೇಸ್ ನ (ಎಎಲ್‌ಪಿ) ಹೆಚ್ಚಳ ಮತ್ತು ಯಕೃತ್ತಿನಲ್ಲಿ ಮೇಧಸ್ಸು ಪೆರಾಕ್ಸಿಡೇಸ್ ಹೆಚ್ಚಳಗಳು ಕಂಡುಬಂದವು. ಆದರೆ ಸಂಸ್ಕರಿಸದ ಎಣ್ಣೆಯಲ್ಲಿ (463 ಎಮ್‌ಯು, 66.4 ಯು) ಸ್ಪಷ್ಟವಾಗಿರಲಿಲ್ಲ. ಯಕೃತ್ತಿನ ಊತಶಾಸ್ತ್ರದ ಅಧ್ಯಯನವನ್ನು ಮಾಡಿದಾಗ, ಹುರಿದ ಎಣ್ಣೆ ಸೇವಿಸಿದ ಗುಂಪುಗಳ ಎರಡು ನ್ಯೂಕ್ಲಿಯಸ್ ಇರುವ ಜೀವಕೋಶಗಳು ಮತ್ತು ಉಳಿದ ಗುಂಪುಗಳಲ್ಲಿ ಸಾಮಾನ್ಯ ಜೀವಕೋಶಗಳು ಕಂಡುಬಂದವು. ಎಲ್ಲಾ ಇತರೇ ಗುಂಪುಗಳ ಮೂತ್ರಪಿಂಡಗಳಲ್ಲಿ ಅಂತಹ ಯಾವುದೇ ರೋಗಶಾಸ್ತ್ರೀಯ ಬದಲಾವಣೆಗಳು ಕಂಡುಬಂದಿಲ್ಲ. ಹುರಿದ ತೈಲವನ್ನು ಸೇವಿಸಿದ ಗುಂಪುಗಳಲ್ಲಿ, ಎಲ್‌ಡಿಎಲ್ ನ ಹೆಚ್ಚಿನ ಮಟ್ಟ ಮತ್ತು ಟಿಬಿಎ ಪ್ರತಿಕ್ರಿಯಾಕಾರಕಗಳು, ಉತ್ಕರ್ಷಣಾ ಎಲ್‌ಡಿಎಲ್ ಮತ್ತು ಹೆಚ್ಚಿನ ಮಟ್ಟದ ಎಎಲ್‌ಪಿಗಳನ್ನು ತಯಾರಿಸಲು ಪ್ರಾರಂಭಿಸಿದವು. ಇವು ಯಕೃತ್ತಿನ ಕಾರ್ಯಗಳಲ್ಲಿ ಅಸಹಜತೆಯನ್ನು ಸೂಚಿಸಿದವು. ಟಿಬಿಎ ಪ್ರತಿಕ್ರಿಯಾಕಾರಕಗಳ ಮಟ್ಟವು ಯಕೃತ್ತಿನಲ್ಲಿನ ಒತ್ತಡ ಸ್ಥಿತಿಯು ಹಿಪೇಟಿಕ್ ಮೈಟೋಜೆನಿಸಿಟಿ ಗೆ (ಬೈನ್ಯೂಕ್ಲಿಯೇಟೆಡ್ ಜೀವಕೋಶಗಳು) ಪ್ಲೊಯ್ಡಿ ಸ್ಥಿತಿಯನ್ನು ಸೂಚಿಸುತ್ತದೆ. ಆದ್ದರಿಂದ 24ಗಂ ಹುರಿದ ಅಕ್ಕಿಯ ತೌಡಿನ ಎಣ್ಣೆಯು, ಬಿಸಿ ಮಾಡಿದ ಎಣ್ಣೆಗಿಂತ ಹೆಚ್ಚು ವಿಷಕಾರಿ ಇರಬಹುದು ಎಂದು ತೀರ್ಮಾನಿಸಲಾಯಿತು.

**ಹುಚ್ಚೆಳ್ಳು ಬೀಜದ ಎಣ್ಣೆ** (ಗೋಪಾಲಕೃಷ್ಣ ಎಜಿ)

ಹುಚ್ಚೆಳ್ಳು ಬೀಜದ ಆಹಾರ/ಎಣ್ಣೆಯಿಂದ ಕೇಂದ್ರೀಕೃತ ಜೈವಿಕ ಕ್ರಿಯಾಶೀಲಗಳನ್ನು ತಯಾರಿಸಲಾಯಿತು ಮತ್ತು 10 ಪಟ್ಟು ಪರಿಣಾಮಗಳೊಂದಿಗೆ ಅವುಗಳ ಆಂಟಿಒಕ್ಸಿಡೆಂಟ್ ಮತ್ತು ಮುಕ್ತ ರೇಡಿಕಲ್ ನೀಗಿಸುವ ಚಟುವಟಿಕೆಯನ್ನು ಮೌಲ್ಯಮಾಪನ ಮಾಡಲಾಯಿತು. ಇಥೆನೋಲ್ ಸಾರವನ್ನು ತೆಗೆದ ಕೊಬ್ಬು ಹೆಕ್ಸೇನ್ ಸಾರ ತೆಗೆದ ಕೊಬ್ಬಿಗೆ ಹೋಲಿಸಿದಾಗ (ಐಸಿ$_{50}$ ಮೌಲ್ಯದ 40.3ಎಮ್‌ಜಿ/ಎಮ್‌ಎಲ್) 13.9 ಪಟ್ಟು ಹೆಚ್ಚು ಉತ್ಕರ್ಷಣಾಶೀಲ ಸ್ಥಿರತೆಯನ್ನು ಮತ್ತು ಹೆಚ್ಚು ರೇಡಿಕಲ್ ಶೇಖರಿಸುವ ಚಟುವಟಿಕೆಯನ್ನು ಐಸಿ$_{50}$ ಮೌಲ್ಯದ 9.2 ಎಮ್‌ಜಿ/ಎಮ್‌ಎಲ್) ತೋರಿಸುತ್ತದೆ. ವಾಣಿಜ್ಯಿಕವಾಗಿ ಲಭ್ಯವಿರುವ ಹುಚ್ಚೆಳ್ಳು (ಗ್ವಿಜೋಶಿಯಾ ಎಬಿಸಿನಿಕಾ (ಎಲ್.ಎಫ್) ಕಾಸ್.) ಬೀಜಗಳಿಂದ ಶೀತದಲ್ಲಿ ಒತ್ತಿ ತಯಾರಿಸಿದ ಮತ್ತು ದ್ರಾವಕಗಳ (ಹೆಕ್ಸೇನ್ ಮತ್ತು ಎಥೆನೋಲ್) ಸಾರ ತೆಗೆದ ತೈಲಗಳ ಮೇಧಸ್ಸು ವರ್ಗಗಳು ಮತ್ತು ಉಪವರ್ಗಗಳನ್ನು ಪರೀಕ್ಷಿಸಲಾಯಿತು. ಹುಚ್ಚೆಳ್ಳು ಬೀಜಗಳನ್ನು ಶೀತದಿಂದ ಒತ್ತಿ ಪಡೆಯಲಾದ ಎಣ್ಣೆಯ ಇಳುವರಿಯ 28.3 ಗ್ರಾಮ್/100ಗ್ರಾಮ್.

ಹಾಗೆಯೇ ಹೆಕ್ಸೇನ್ ಮತ್ತು ಎಥೆನೋಲ್ ಸಾರಗಳು ಕ್ರಮವಾಗಿ 38.3 ಮತ್ತು 29.7 ಗ್ರಾಮ್/100ಗ್ರಾಮ್ ಆಗಿದ್ದವು. ಸಾರತೆಗೆದ ಹುಚ್ಚೆಳ್ಳು ಬೀಜಗಳ ಎಣ್ಣೆಯ ಮೇಧಸ್ಸು ವರ್ಗೀಕರಣ ತೋರಿಸಿದ್ದೇನೆಂದರೆ, ಮೇಧಸ್ಸು (65.9 – 95.5 %), ಗ್ಲೈಕೊಲಿಪಿಡ್ಸ್ (2.7 –24.6%) ಮತ್ತು ಫೊಸ್ಫೊಲಿಪಿಡ್ಸ್ (1.8 –9.5%) ಸಾರ ತೆಗೆದ ಹುಚ್ಚೆಳ್ಳು ಬೀಜಗಳ ಎಣ್ಣೆಯ ತಟಸ್ಥ ಮೇಧಸ್ಸುಗಳ ಅಸೈಲ್‌ಗ್ಲಿಸರೋಲ್ ಸಂಯೋಜನೆಯು ಟ್ರೈ ಅಸೈಲ್‌ಗ್ಲಿಸರೋಲ್ (76.9 – 91.6%), ಡೈಅಸೈಲ್‌ಗ್ಲಿಸರೋಲ್ (3.9 – 7.3%) ಮತ್ತು ಮೊನೊ ಅಸೈಲ್‌ಗ್ಲಿಸರೋಲ್ (0.6 – 2.5%) ಗಳನ್ನು ತೋರಿಸಿತು. ಸಾರ ತೆಗೆದ ಹುಚ್ಚುಳ್ಳು ಬೀಜಗಳ ಎಣ್ಣೆಯ ಟ್ರೈ, ಡೈ ಮತ್ತು ಮೊನೊ ಅಸೈಲ್‌ಗ್ಲಿಸರೋಲ್ ಗಳ ಕೊಬ್ಬಿನಾಮ್ಲದ ಸಂಯೋಜನೆಯು, ಲಿನೊಲೀಕ್ ಆಮ್ಲವನ್ನು (66.7 – 71.6%) ಪ್ರಮುಖ ಕೊಬ್ಬಿನಾಮ್ಲವಾಗಿ ತೋರಿಸಿತು. ಸಾರ ತೆಗೆದ ಹುಚ್ಚೆಳ್ಳು ಬೀಜದ ಎಣ್ಣೆಯ ತಟಸ್ಥ ಮೇಧಸ್ಸುಗಳ ಟ್ರೈಅಸೈಲ್‌ಗ್ಲಿಸರೋಲ್ ಸಂಯೋಜನೆಯು, ಟ್ರೈಲಿನೊಲೀನ್ (39.2 – 40.3%) ಪ್ರಮುಖ ಟ್ರೈಅಸೈಲ್‌ಗ್ಲಿಸರೋಲ್ ಆಗಿರುವುದನ್ನು ತೋರಿಸಿತು. ಸಾರ ತೆಗೆದ ಹುಚ್ಚೆಳ್ಳು ಬೀಜದ ಎಣ್ಣೆಯು, ಒಟ್ಟೂ ಫೈಟೊಸ್ಟಿರೊಲ್ ಗಳ 1289.9 – 6215.8 ಪಿಪಿಎಮ್ ಜೊತೆಗೆ ಬಿ–ಸೈಟೊಸ್ಟಿರೊಲ್ (41.9 – 43.7%) ಅನ್ನು ಪ್ರಮುಖ ಫೈಟೊಸ್ಟಿರೊಲ್ ಗಳಾಗಿ ಹೊಂದಿವೆ. ಸಾರ ತೆಗೆದ ಹುಚ್ಚೆಳ್ಳು ಬೀಜದ ಎಣ್ಣೆಯಲ್ಲಿ ಅಸೈಲೇಟೆಡ್ ಸ್ಟಿರೈಲ್ ಗ್ಲುಕೊಸೈಡ್ (39.5 – 52.2%) ಒಂದು ಪ್ರಮುಖ ಗ್ಲೈಕೊಲಿಪಿಡ್ ಆಗಿತ್ತು. ಶೀತದಲ್ಲಿ ಒತ್ತಿ ಪಡೆಯಲಾದ ಮತ್ತು ಹೆಕ್ಸೇನ್ ಸಾರ ತೆಗೆದ ಹುಚ್ಚೆಳ್ಳು ಬೀಜದ ಎಣ್ಣೆಯಲ್ಲಿ ಫೊಸ್ಫಟಿಡೈಲ್‌ಕೊಲಿನ್ (49.6 ಮತ್ತು 47.9%) ಇವು ಪ್ರಮುಖ ಫೊಸ್ಫೊಲಿಪಿಡ್ ಆಗಿದ್ದವು ಮತ್ತು ಇಥೆನೋಲ್ ಸಾರ ತೆಗೆದ ಹುಚ್ಚೆಳ್ಳು ಬೀಜದ ಎಣ್ಣೆಯಲ್ಲಿ ಫೊಸ್ಫಟಿಡೈಲ್‌ಇಥೆನೊಲೆಮೈನ್ (57.1%) ಇದು ಪ್ರಮುಖ ಫೊಸ್ಫೊಲಿಪಿಡ್ ಆಗಿತ್ತು. ತೈಲ ಹೊರತೆಗೆಯುವಿಕೆಯ ವಿವಿಧ ವಿಧಾನಗಳ ಪರಿಣಾಮದಿಂದಾಗಿ, ಭಾರತೀಯ ಹುಚ್ಚುಳ್ಳು ಬೀಜದ ತೈಲದಲ್ಲಿ, ಮೇಧಸ್ಸಿನ ವರ್ಗ ಮತ್ತು ಉಪವರ್ಗಗಳಲ್ಲಿನ ಬದಲಾವಣೆಯ ಮೇಲೆ ಬಹುಶಃ ಇದೇ ಮೊದಲ ಬಾರಿಯ ವರದಿಯಾಗಿದೆ.

**ದೊಡ್ಡಗೋಣಿಸೊಪ್ಪು** (ಸುಕುಮಾರ್ ದೇಬ್ನಾಥ್)

ದೊಡ್ಡಗೋಣಿಸೊಪ್ಪಿನ ಜೈವಿಕಕ್ರಿಯಾಶೀಲ ಕಣಗಳ ಉಳಿಸುವಿಕೆ ಮತ್ತು ಆಂಟಿಒಕ್ಸಿಡೆಂಟ್ ಕ್ರಿಯೆಗಳ ಮೇಲಿನ ಅಧ್ಯಯನವನ್ನು, ಅವುಗಳ ಪುನರ್ಜಲೀಕರಣ ಗುಣಲಕ್ಷಣಗಳು ಮತ್ತು ವಿವಿಧ ಒಣಗಿಸುವ ಸಮಯದಲ್ಲಿ ಕೈಗೊಳ್ಳಲಾಯಿತು. ಒಟ್ಟೂ ಅಪರ್ಯಾಪ್ತ ಕೊಬ್ಬಿನ ಆಮ್ಲಗಳು (ಪುಫಾ) ಮತ್ತು ಎ– ಲಿನೊಲೆನಿಕ್‌ಗಳ (ಎಎಲ್‌ಎ) ವ್ಯಾಪ್ತಿಯ ಕ್ರಮವಾಗಿ, (47.9–59.9%) ಮತ್ತು (42.5–50%) ಆಗಿದ್ದು, ನಿರ್ವಾತ ಒಣಗಿಸಿದ ಮಾದರಿಗಳಲ್ಲಿ ಅತಿ ಹೆಚ್ಚಿನ ಮೌಲ್ಯದ ಎಎಲ್‌ಎಯನ್ನು ಪಡೆಯಲಾಯಿತು. ಒಣಗಿಸುವ ವಿಧಾನಗಳನ್ನು ಉಪಯೋಗಿಸಿ ಒಣಗಿಸಿದ ದೊಡ್ಡಗೋಣಿಸೊಪ್ಪುಗಳ ಬಿ– ಕೆರೋಟೀನ್‌ಗಳಲ್ಲಿ ಯಾವುದೇ ಗಮನಾರ್ಹ (ಪಿ> 0.05) ವ್ಯತ್ಯಾಸ ಕಾಣಲಿಲ್ಲ. ಗಳಿಸಿದ ಒಟ್ಟೂ ಪೋಲಿಫಿನೊಲಿಕ್ ಅಂಶಗಳು, (188–408 ಜಿಎಇ/100 ಗ್ರಾಂ) ವ್ಯಾಪ್ತಿಗಳಲ್ಲಿ ಕಂಡುಬಂದವು. ಇವುಗಳಲ್ಲಿ ನಿರ್ವಾತ ಒಣಗಿಸಿದ ದೊಡ್ಡಗೋಣಿಸೊಪ್ಪು ಹೆಚ್ಚಿನ ಧಾರಣ ಶಕ್ತಿಯನ್ನು ತೋರಿಸಿತು. ಆಂಟಿರೇಡಿಕಲ್ ಚಟುವಟಿಕೆಯು (33.0–88.8 ಮಿಗ್ರಾಂ/100ಗ್ರಾಂ) ವ್ಯಾಪ್ತಿಯಲ್ಲಿ ಕಂಡುಬಂದಿತು ಮತ್ತು ಇವುಗಳಲ್ಲಿ ನಿರ್ವಾತ ಒಣಗಿಸಿದ ದೊಡ್ಡಗೋಣಿಸೊಪ್ಪು ಹೆಚ್ಚಿನ ಮೌಲ್ಯವನ್ನು

ಉಳಿಸಿಕೊಂಡಿತು. ಪುನರ್ಜಲೀಕರಣದ ಅನುಪಾತವು 3.2–4.3 ವ್ಯಾಪ್ತಿಯಲ್ಲಿ ಕಂಡುಬಂದಿತು ಮತ್ತು ನಿರ್ವಾತ ಒಣಗಿಸಿದ ದೊಡ್ಡಗೋಣಿಸೊಪ್ಪು ಹೆಚ್ಚಿನ ಪುನರ್ಜಲೀಕರಣವನ್ನು ತೋರಿಸಿತು. ಇದರಿಂದ ದೊಡ್ಡಗೋಣಿಸೊಪ್ಪಿನ ನಿರ್ವಾತ ಒಣಗಿಸುವಿಕೆ ಕ್ರಿಯೆಯು ಜೈವಿಕಕ್ರಿಯಾಶೀಲ ಕಣಗಳ ಉಳಿಸುವಿಕೆಗೆ ಮತ್ತು ಒಳ್ಳೆಯ ಪ್ರತಿಬಂಧಕ ವರ್ತನೆಗೆ ಪರಿಣಾಮಕಾರಿ ವಿಧಾನವಾಗಿದೆ ಎಂದು ತೀರ್ಮಾನಿಸಬಹುದು. ದೊಡ್ಡಗೋಣಿಸೊಪ್ಪಿನ ಕೊಬ್ಬಿನಾಮ್ಲದ ಪ್ರೊಫೈಲ್‌ಗಳ ಮೇಲೆ ವಿವಿಧ ಅಡುಗೆಯ ವಿಧಾನಗಳ ಪರಿಣಾಮವನ್ನು ಅಧ್ಯಯನ ಮಾಡಲಾಯಿತು. ಪುಫಾವನ್ನು (63.09–68.96) ಉಳಿಸಿಕೊಳ್ಳಲು, ಸುಟ್ಟು ತಯಾರಿಸುವ ವಿಧಾನ ಉಳಿದ ಎಲ್ಲಾ ಅಡುಗೆಯ ವಿಧಾನಗಳಿಗಿಂತ ಉತ್ತಮವಾಗಿದೆ. ಬಹುಧಾನ್ಯ, ಎಣ್ಣೆ ಬೀಜಗಳು ಮತ್ತು ದೊಡ್ಡಗೋಣಿಸೊಪ್ಪುಗಳನ್ನಾಧರಿಸಿ, ಆರೋಗ್ಯಕರ ತಿಂಡಿಗಳ ಅಭಿವೃದ್ಧಿಗೆ ಪ್ರಯತ್ನಿಸಲಾಯಿತು. ಹುರಿಯುವುದರ ಬದಲಾಗಿ, ಮೈಕ್ರೋವೇವ್ ಸಂಸ್ಕರಣಾ ಕ್ರಿಯೆಯು ಉತ್ಪನ್ನದ ಸಂವೇದನಾ ಗುಣಮಟ್ಟಕ್ಕೆ ಯಾವುದೇ ಧಕ್ಕೆಯನ್ನುಂಟು ಮಾಡದೇ, ಎಣ್ಣೆ (24.44–8.12%) ಅಂಶದಲ್ಲಿ ಗಮನಾರ್ಹ (ಪಿ<0.05) ಕಡಿತ, ಪ್ರೋಟೀನ್ (2.19–29.36%) ಮತ್ತು ಒಮೇಗಾ–3 ಕೊಬ್ಬಿನಾಮ್ಲದಲ್ಲಿ (2.4–35.0%) ಹೆಚ್ಚಳವನ್ನು ತೋರಿಸಿತು.

**ಟ್ರಾನ್ಸ್–ಫ್ರೀ–ಮಾರ್ಗರಿನ್ಸ್ / ಬೆಣ್ಣೆ ಹರಡುವಿಕೆಗಳು** (ಜಯಾರಾಣಿ ಟಿ)

ಮಾವಿನ ತಿರುಳಿನ ಕೊಬ್ಬು ಮತ್ತು ಮಾರ್ಗರಿನ್‌ಗಳ (ಅಡುಗೆಗೆ ಬಳಸುವ ಜಿಡ್ಡು ಪದಾರ್ಥ) ಒಳಗೆ, ವಿವಿಧ ತಾಳೆ ಎಣ್ಣೆಯ ಮಿಶ್ರಣವನ್ನು 10 ರಿಂದ 40% ಮಟ್ಟದಲ್ಲಿ ಸೇರಿಸಿ ಸಸ್ಯ ತೈಲಗಳ ಬಳಕೆಯಿಂದ, ಟ್ರಾನ್ಸ್–ಫ್ರೀ–ಮಾರ್ಗರಿನ್ ಸೂಕ್ತ ಬೆರಿಕೆ ಬಳಸಿ ತಯಾರಿಸಲಾಯಿತು. ತಾಳೆ ಎಣ್ಣೆಯ ಅಂಶ ಹೆಚ್ಚಾದಂತೆ ಮಿಶ್ರಣಗಳ ಗಡಸುತನದಲ್ಲಿ ಇಳಿಕೆ ಕಂಡುಬಂದಿತು. ವಿವಿಧ ವಾಣಿಜ್ಯ ಬೆಣ್ಣೆಯ ತರಹದ ಮಾದರಿಗಳ ಜೊತೆ ಹೋಲಿಸಿದಾಗ 30% ತಾಳೆ ಎಣ್ಣೆಯನ್ನು ಹೊಂದಿರುವ ಮಿಶ್ರಣದ ಗಡಸುತನವು, ಒಂದು ವಾಣಿಜ್ಯ ಕೊಬ್ಬುಗಳಿಗೆ ಹತ್ತಿರವಾಗಿತ್ತು. ಬೆಣ್ಣೆಯ ನೈಸರ್ಗಿಕ ಸುವಾಸನೆಯನ್ನು ಪಡೆಯಲು, 10% ಬೆಣ್ಣೆಯನ್ನು ಸೇರಿಸಲಾಯಿತು. ಮಾದರಿಗಳ ಗಡಸುತನವು ಕಡಿಮೆಯಾದವು ಆದರೆ ಮಾರ್ಗರಿನ್‌ಗಳ ಸುವಾಸನೆ ಮತ್ತು ಹೊಳಪು ಸುಧಾರಿಸಿತು. ಮಾರ್ಗರಿನ್‌ಗಳ ಮೌಲ್ಯಮಾಪನವು ಬೇಕರಿ ಉತ್ಪನ್ನಗಳಲ್ಲಿ ಇನ್ನೂ ಪ್ರಗತಿಯಲ್ಲಿದೆ.

**ಪ್ರಿಬಯೋಟಿಕ್/ಕಡಿಮೆ ಸಕ್ಕರೆಯ ಬೋಂಬೆ ಹಲ್ವಾ** (ಚೇತನಾ ಆರ್)

ಬೋಂಬೆ ಹಲ್ವಾ, ಒಂದು ಸಾಂಪ್ರದಾಯಿಕ ಸಿಹಿ. ಇದನ್ನು ಸುಧಾರಿತ ಆರೋಗ್ಯ ಲಾಭಕ್ಕಾಗಿ, ಪರ್ಯಾಯ ಸಿಹಿಕಾರಕ, ಎಫ್‌ಒಎಸ್ ಮತ್ತು ದೊಡ್ಡ ಪತ್ರೆ (ಕೋಲಿಯಸ್ ಅರೋಮೆಟಿಕಸ್) ಮೂಲಿಕೆಯನ್ನು ಬಳಸಿ ತಯಾರಿಸಲಾಯಿತು. ಎಫ್‌ಒಎಸ್ ಇದು ಜೀರ್ಣವಾಗದ ಫ್ರುಕ್ಟೋಒಲಿಗೊಸೆಕರೈಡ್ ಮತ್ತು ಆಹಾರದ ನಾರು ಮತ್ತು ಕೊಲೋನ್‌ಗಳಲ್ಲಿ (ದೊಡ್ಡ ಕರುಳಿನ ಭಾಗ) ಆರೋಗ್ಯಕರ ಬ್ಯಾಕ್ಟೀರಿಯ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ ಇದು ಒಂದು ಪ್ರಿಬಯೊಟಿಕ್ ಕೂಡ ಆಗಿದೆ. ಬಣ್ಣ, ವಿನ್ಯಾಸ ಮತ್ತು ಸಂವೇದನಾ ಗುಣಮಟ್ಟಗಳ ಮೇಲೆ, ಪರ್ಯಾಯ ಸಕ್ಕರೆ ಜೊತೆಗೆ 0.5, 1.0, 1 ಮತ್ತು 1.5% ನಲ್ಲಿ ಸೇರಿಸಿದ ಮೂಲಿಕೆಗಳ ಪರಿಣಾಮವನ್ನು ಸಕ್ಕರೆಯಿಂದ ಮಾಡಿದ ಬೋಂಬೆ ಹಲ್ವಾಗಳ ಜೊತೆ ಹೋಲಿಸಿ, ಅಧ್ಯಯನ ಮಾಡಲಾಯಿತು. ವಿವಿಧ ಸಿಹಿಕಾರಕಗಳಿಂದ ತಯಾರಿಸಿದ ಹಲ್ವಾಗಳ ತೇವಾಂಶವು 7.8 ರಿಂದ 10.5%, 2.0 ರಿಂದ 2.5% ಕೊಬ್ಬು ಇವುಗಳ ವ್ಯಾಪ್ತಿಯಲ್ಲಿ ಕಂಡುಬಂದಿತು. ಸಕ್ಕರೆಯಿಂದ ಮತ್ತು ಎಫ್‌ಒಎಸ್‌ನಿಂದ ತಯಾರಿಸಿದ ಹಲ್ವಾಗಳ ವಿನ್ಯಾಸವನ್ನು ನಿರ್ಧರಿಸಲಾಯಿತು ಮತ್ತು ಫಲಿತಾಂಶಗಳು ತೋರಿಸಿದ್ದೇನೆಂದರೆ ಎಫ್‌ಒಎಸ್ ಬಳಸಿ ತಯಾರಿಸಿದ ಉತ್ಪನ್ನ ಹೆಚ್ಚು ಅಂಟಿನಂತಿತ್ತು ಮತ್ತು ಎರಡು ವಾರಗಳವರೆಗೆ ಸ್ವೀಕಾರಾರ್ಹವಾಗಿತ್ತು. ಹಾಗೆಯೆ, ಸಕ್ಕರೆಯಿಂದ ತಯಾರಿಸಿದ್ದು 10 ದಿನಗಳ ಕೊನೆಯಲ್ಲಿ ಮೆಲ್ಲುವ ವಿಶಿಷ್ಟ ವಿನ್ಯಾಸವನ್ನು ಕಳೆದುಕೊಂಡಿತು ಮತ್ತು ಕ್ರಮೇಣ ಹರಳುಗಳಾಗಿ ಪರಿವರ್ತನೆಯಾಯಿತು. ಫಲಿತಾಂಶಗಳು ತೋರಿಸಿದ್ದೇನೆಂದರೆ ದೊಡ್ಡಪತ್ರೆಯ ನೀರಿನ ಸಾರವು ರಚನೆಗೊಂಡ ಮುಕ್ತ ರೆಡಿಕಲ್ ಅನ್ನು ಫೆಂಟೋನ್ಸ್ ಕಾರಕವನ್ನು ಸೇರಿಸಿದಾಗ ತಣಿಸಿದವು. ಇದರಿಂದಾಗಿ ಅವು ಒಕ್ಸಿಡೇಟಿವ್ ಒತ್ತಡ ಪ್ರೇರಿತ ನಷ್ಟದಿಂದಾಗುವ ಡಿಎನ್‌ಎ ನಷ್ಟವನ್ನು ರಕ್ಷಿಸಿದವು. ಬೋಂಬೆ ಹಲ್ವಾದಲ್ಲಿ ಮೂಲಿಕೆಯ ಪುಡಿಯ (ಕೋಲಿಯಸ್ ಅರೊಮೆಟಿಕಸ್), ಅತೀ ಹೆಚ್ಚಿನ ಮಟ್ಟದಲ್ಲಿ ಸೇರಿಸಿದಾಗ ಡಿಎನ್‌ಎ ರಕ್ಷಿಸುವ ಚಟುವಟಿಕೆಯನ್ನು ತೋರಿಸಿತು. ಅಂದರೆ 1.5% ಮಟ್ಟವು ಮೂಲಿಕೆಯ ಪುಡಿಯ ಆಂಟಿಒಕ್ಸಿಡೆಂಟ್ ಕ್ರಿಯೆಯನ್ನು ಸೂಚಿಸುತ್ತದೆ.

**ಒಮೇಗಾ–3 ಕೊಬ್ಬಿನಾಮ್ಲಗಳು** (ಲೋಕೇಶ್ ಬಿಆರ್)

ಸಾರ್ಕೊಪ್ಲಾಸ್ಮಿಕ್ ರೆಟಿಕ್ಯುಲಮ್‌ನ (ಎಸ್‌ಆರ್) ಆಯ್ದ ಕಾರ್ಯಗಳು–ಪದರ ಸ್ರಾವತೆ, ಕೊಬ್ಬಿನಾಮ್ಲದ ಸಂಯೋಜನೆ ಕ್ಯಾಲ್ಸಿಯಮ್$^{2+}$ಮೆಗ್ನೆಶಿಯಮ್$^{2+}$ ಎಟಿಪೇಸ್ ಚಟುವಟಿಕೆ ಮತ್ತು ಕ್ಯಾಲ್ಸಿಯಮ್ ಸಾಗಣೆ ಇವುಗಳ ಮೇಲೆ ಒಮೇಗಾ–3 ಪುಫಾ ಪುಷ್ಟೀಕರಣದ ಪರಿಣಾಮವನ್ನು ಇಲಿಗಳಲ್ಲಿ ಎಮಲ್ಷನ್ ಮೂಲಕ ಅಧ್ಯಯನ ನಡೆಸಲಾಯಿತು. ಫಲಿತಾಂಶಗಳು ತೋರಿಸಿದ್ದೇನೆಂದರೆ, ಡೊಕೊಸಾ ಹೆಕ್ಸಾಇನೊಯಿಕ್ ಆಮ್ಲ (ಡಿಎಚ್‌ಎ) ಮಟ್ಟ ಹೆಚ್ಚಾದಂತೆ, ಎಸ್‌ಆರ್ ಪದರದ ಸ್ರಾವಕವೂ ಹೆಚ್ಚಾಯಿತು. ಇಲಿಗಳಿಗೆ ನಾರಗಸೆ ಎಣ್ಣೆಯನ್ನು ಮೈಕ್ರೊಎಮಲ್ಷನ್ ರೂಪದಲ್ಲಿ ನೀಡಿದಾಗ ಎಸ್‌ಆರ್ ಪದರಗಳ ಎನ್–6 ಇಂದ ಎನ್–3 ಗಳ ಅನುಪಾತದಲ್ಲಿ ಇಳಿಕೆಯಾದವು. ಲಿಪೊಯ್ಡ್ ಜೊತೆಗೆ ಮೈಕ್ರೊಎಮಲ್ಷನ್ ರೂಪದಲ್ಲಿ ಎಲ್‌ಎಸ್‌ಒ ಅನ್ನು ಇಲಿಗಳಿಗೆ ಕೊಟ್ಟಾಗ ಎಸ್‌ಆರ್ ಲಿಪಿಡ್‌ನ ಹೆಚ್ಚಳ ಮತ್ತು ಡಿಎಚ್‌ಎ ಯು ಕ್ಯಾಲ್ಸಿಯಮ್ ಹೀರುವಿಕೆ ಮತ್ತು ಕ್ಯಾಲ್ಸಿಯಮ್ ಮೆಗ್ನಿಶಿಯಮ್ ಎಟಿಪೇಸ್ ಚಟುವಟಿಕೆಯನ್ನು ಕಡಿಮೆ ಮಾಡಿತು. ಆದ್ದರಿಂದ ಮೈಕ್ರೊಎಮಲ್ಷನ್ ರೂಪದಲ್ಲಿ ಕೊಟ್ಟ ಒಮೇಗಾ–3 ಪುಫಾ ವು ಹೃದಯದ ಕಾರ್ಯಗಳನ್ನು ಬದಲಾಯಿಸುವಲ್ಲಿ ಲಾಭದಾಯಕವಾಯಿತು.

**ಕೋಳಿ ಆಧಾರಿತ ಕ್ರಿಯಾತ್ಮಕ ಆಹಾರಗಳು** (ಹರೀಶ್ ಪ್ರಶಾಂತ್ ಕೆವಿ, ಮೋದಿ ವಿಕೆ, ರಥಿನಾ ರಾಜ್ ಕೆ, ಸಚೀಂದ್ರ ಎನ್‌ಎಮ್, ಸಖಾರೆ ಪಿಝುಡ್, ಸುರೇಶ್ ಪಿವಿ.)

ಪಿಎಚ್ ಬದಲಾವಣೆ ವಿಧಾನದ ಮೂಲಕ, ಲೇಯರ್ ಕೋಳಿಯ ಯಕೃತ್ತಿನಿಂದ ತಯಾರಿಸಲಾದ ಪ್ರೋಟೀನ್ ಐಸೋಲೇಟ್‌ಗಳು, ಗಿಝಾರ್ಡ್‌ನಿಂದ ತಯಾರಿಸಿದ ಪ್ರೋಟೀನ್ ಐಸೋಲೇಟ್‌ಗಳಿಗೆ ಹೋಲಿಸಿದಾಗ, ನೀರನ್ನು ಹಿಡಿದಿಡುವ ಮತ್ತು ಎಣ್ಣೆಯನ್ನು ಹೀರಿಕೊಳ್ಳುವ ಒಳ್ಳೆಯ ಸಾಮರ್ಥ್ಯವನ್ನು ಹೊಂದಿದ್ದವು. ಆಮ್ಲದಲ್ಲಿ ಕರಗಿದ ಪ್ರೋಟೀನ್ ಐಸೋಲೇಟ್‌ಗಳು, ಅಲ್ಕಲಿಯಲ್ಲಿ ಕರಗಿದ ಪ್ರೋಟೀನ್ ಐಸೋಲೇಟ್‌ಗಳಿಗಿಂತ ಡಿಪಿಪಿಎಚ್ ಶೇಖರಿಸುವ ಚಟುವಟಿಕೆಯಲ್ಲಿ ಉತ್ತಮ ದಾಖಲೆ ನೀಡಿದವು. ಕೊಠಡಿ ತಾಪಮಾನದಲ್ಲಿ ಸಂಗ್ರಹಿಸಿದ ಬಿಳಿ ಮೊಟ್ಟೆಯ ಗುಣಮಟ್ಟ ಮತ್ತು ಸೂಕ್ಷ್ಮಜೀವಿವಿಜ್ಞಾನಗಳ ಮೇಲಿನ ಚಿಟೋಸನ್ ಲೇಪನಗಳ ಪರಿಣಾಮದ ಅಧ್ಯಯನವು ಸೂಚಿಸಿದ್ದೇನೆಂದರೆ, 2100 ಎಮ್‌ಪಿ.ಎಸ್ ಸ್ನಿಗ್ಧತೆ ಹೊಂದಿರುವ ಚಿಟೋಸನ್‌ನ 3 ಬಾರಿ ಲೇಪನವು, ಒಂದು ಬಾರಿ ಲೇಪನಕ್ಕಿಂತ, ತೂಕ ನಷ್ಟವನ್ನು ತಡೆಯುವಲ್ಲಿ ಹೆಚ್ಚು ಪರಿಣಾಮಕಾರಿ ಆಗಿದ್ದವು. 1224 ಎಮ್‌ಪಿ.ಎಸ್ ಸ್ನಿಗ್ಧತೆಯುಳ್ಳ ಚಿಟೋಸನ್ ಉಳಿದ ಪರೀಕ್ಷಿಸಿದ

ಚಿಟೊಸನ್ ಗಿಂತ ಹೆಚ್ಚಿನ ಸೂಕ್ಷ್ಮ ಜೀವಿ ಪ್ರತಿರೋಧಕ ಚಟುವಟಿಕೆಯನ್ನು ತೋರಿಸಿದವು ಮತ್ತು ಸೂಕ್ಷ್ಮ ವಿಜ್ಞಾನದ ಭಾರ ಮತ್ತು ಚಿಟೊಸನ್‌ನ ಉತ್ಕರ್ಷಣ ದರವನ್ನು ಪೂರೈಸಿದ ಮಟನ್ ಕೋಫ್ತಾಗಳನ್ನು ನಿಯಂತ್ರಿತ ಮಾದರಿಗಳಿಗೆ ಹೋಲಿಸಿದಾಗ ಕಡಿಮೆಯಾಗಿದ್ದವು. ಕೋಳಿ ಮಾಂಸಗಳಲ್ಲಿ ಸಾಲ್ಮೋನೆಲ್ಲಾವನ್ನು ಪತ್ತೆ ಹಚ್ಚಲು ಬೇಕಾದ ತಂತ್ರಜ್ಞಾನದ ಬೆಳವಣಿಗೆಯ ಮೇಲಿನ ಅಧ್ಯಯನವು, ಲಸಿಕೆ ಹಾಕಿದ ಕೋಳಿ ಮಾಂಸದ ಮಾದರಿಗಳಲ್ಲಿ ಸಾಲ್ಮೋನೆಲ್ಲಾವನ್ನು ಪತ್ತೆ ಹಚ್ಚಲು ಪಿಸಿಆರ್ ಸ್ಥಿತಿಗಳ ಅಭಿವೃದ್ಧಿ ತೋರಿಸಿತು. ಆದರೆ ಪತ್ತೆ ಹಚ್ಚುವಿಕೆಯು ಮಟ್ಟವು ತೃಪ್ತಿದಾಯಕವಾಗಿರಲಿಲ್ಲ. ಕೋಳಿಯ ಮಾಂಸಗಳಲ್ಲಿ ಪಿಸಿಆರ್ ಪ್ರತಿಬಂಧಕಗಳ ಸಂಭವನೀಯ ಉಪಸ್ಥಿತಿಯ ಮೌಲ್ಯಮಾಪನ ಅಗತ್ಯವಾಗಿದೆ ಮತ್ತು ಪುಷ್ಟೀಕರಣದ ಮೊದಲು ಪೂರ್ವಪುಷ್ಟೀಕರಣದ ಉಪಯೋಗವು ಒಳ್ಳೆಯ ಫಲಿತಾಂಶವನ್ನು ನೀಡಿ ತಂತ್ರಜ್ಞಾನದ ಸೂಕ್ಷ್ಮತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಯರ್ಸಿನಿಯಾ ಎಂಟೆರೊಕೊಲಿಟಿಕಾ ಗಳ ಪತ್ತೆಗೆ ಪಿಸಿಆರ್ ಸ್ಥಿತಿಗಳನ್ನು ಉನ್ನತೀಕರಿಸಲಾಯಿತು. ಅಡುಗೆ ಮತ್ತು ಶೇಖರಣೆಯ ಆಧಾರದ ಮೇಲೆ, ವಿವಿಧ ಮಾಂಸವನ್ನು ಗುರುತಿಸಲು, ಡಿಎನ್‌ಎ ಆಧಾರಿತ ಪೊಲಿಮರೇಸ್ ಸರಪಳಿ ಪ್ರತಿಕ್ರಿಯೆ ಪರಿಮಿತಿಯ ತುಣುಕಿನ ಉದ್ದದ ಬಹುರೂಪತೆಯ ಗುರುತಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಯಿತು. ಶೇಖರಿಸಲ್ಪಟ್ಟ ಮಾಂಸದ ಮಾದರಿಗಳಲ್ಲಿ ಜೀನೊಮಿಕ್ ಡಿಎನ್‌ಎ ಯ ಸ್ಥಿರತೆಗೆ (ಟಿಜಿಡಿ) ನಡೆಸಿದ ಪರೀಕ್ಷೆಯು ಬಹಿರಂಗಪಡಿಸಿದ್ದೇನೆಂದರೆ, ಟಿಜಿಡಿಯ 50–60% ಅವನತಿಯ ನಂತರವೂ ಮಾದರಿಗಳು ವರ್ಧಿಸಿದವು. ಎಂಪ್ಲಿಕೋನ್ ನಿಂದ ಕಚ್ಚಾ (0.01%) ಮತ್ತು ಬೇಯಿಸಿದ (1%) ಮಾಂಸದಲ್ಲಿ ಅತಿ ಕಡಿಮೆ ಮಟ್ಟದ ಕಲಬೆರಕೆ ಇರುವುದನ್ನು ಪರಿಣಾಮಕಾರಿಯಾಗಿ ಪತ್ತೆಮಾಡಲು ಸಾಧ್ಯವಾಯಿತು. 1.7% ಅಗರೋಸ್ ಜೆಲ್‌ಗಳಲ್ಲಿ ಮಿಶ್ರಣಗಳ 3 ರಿಂದ 100% ಕಲಬೆರಕೆಯ ಪರೀಕ್ಷೆಯು ಚೆನ್ನಾಗಿ ಗೋಚರಿಸುವಂತೆ ಮಾಡಿತು. ಆದರೆ 3% ಕೆಳಗೆ ಮಿಶ್ರಣಗಳ ದೃಶ್ಯೀಕರಣ ಅತೃಪ್ತಿಕರವಾಗಿತ್ತು.

**ಮೌಲ್ಯಾಧಾರಿತ ಮಾಂಸ ಮತ್ತು ಮೊಟ್ಟೆಯ ಉತ್ಪನ್ನಗಳು** (ಮೋದಿ ವಿಕೆ)

ಅಭಿವೃದ್ಧಿ ಹೊಂದಿದ ಎಗ್ ಸ್ಪ್ರೆಡ್‌ನ (ಇಎಸ್) ಸಂಗ್ರಹ ಸ್ಥಿರತೆಯನ್ನು ನಿಯತಕಾಲಿಕವಾಗಿ ಸುತ್ತಲಿನ ತಾಪಮಾನದಲ್ಲಿ (37 +/–2 ಡಿಗ್ರೀ ಸೆಲ್ಸಿಯಸ್) ಮತ್ತು ಶೈತ್ಯೀಕರಣಗೊಂಡ ತಾಪಮಾನದಲ್ಲಿ (4+/–2 ಡಿಗ್ರಿ ಸೆಲ್ಸಿಯಸ್) ನಡೆಸಲಾಯಿತು. ಒಟ್ಟೂ ತಟ್ಟೆಯ ಎಣಿಕೆ ಮತ್ತು ಸ್ಟೆಫೈಲೊಕೊಕ್ಕಸ್ ಗಳು ಸಂಗ್ರಹಿತ ಸಮಯದಲ್ಲಿ ~2.0ಲಾಗ್ ಸಿಎಫ್‌ಯು/ಗ್ರಾಮ್ ಆಗಿದ್ದವು. ಸಂಗ್ರಹಿತ ಸಮಯದುದ್ದಕ್ಕೂ ಯೀಸ್ಟ್, ಮೋಲ್ಡ್ಸ್, ಇ.ಕೊಲೈ ಮತ್ತು ಸಾಲ್ಮೊನೆಲ್ಲಾಗಳು ಪತ್ತೆಯಾಗಲಿಲ್ಲ. ಪಿಎಚ್ (3.4) ಮತ್ತು ಉತ್ಪನ್ನಗಳ ನೀರಿನ ಚಟುವಟಿಕೆಯು (0.91) ಕಡಿಮೆ ಇತ್ತು. 5, 10, 15% ಗಳಲ್ಲಿ ಕೋಳಿಯ ಮಾಂಸಗಳನ್ನೊಳಗೊಂಡಿರುವ ಎಗ್ ಸ್ಪ್ರೆಡ್ ನ ಪ್ರೋಟೀನ್ ಅಂಶವು ಕ್ರಮವಾಗಿ 12.44+/–0.77, 14.31+/–0.59 ಮತ್ತು 15.31+/–0.89% ಆಗಿದ್ದವು ಮತ್ತು ಮೇಧಸ್ಸಿನ ಅಂಶ ಕ್ರಮವಾಗಿ, 31.88+/–1.45, 32.14+/–1.87 ಮತ್ತು 32.74+/–1.45% ಇದ್ದವು. ಸುತ್ತಲಿನ ಮತ್ತು ಶೈತ್ಯೀಕರಣಗೊಂಡ ತಾಪಮಾನದಲ್ಲಿ ಸಂಗ್ರಹಿಸಿದ ಮಾದರಿಗಳು ಮೇಧಸ್ಸಿನ ಉತ್ಕರ್ಷಣೆಯಲ್ಲಿ ಯಾವುದೇ ಗಮನಾರ್ಹ ಬದಲಾವಣೆ (ಪಿ>=0.05) ತೋರಿಸಲಿಲ್ಲ. ಆದರೆ, ಸ್ನಿಗ್ಧತೆ, ಶೀರ್ ರೇಟ್ ಮತ್ತು ಬರಿಯ ಒತ್ತಡಗಳ ಗಮನಾರ್ಹ ಬದಲಾವಣೆ (ಪಿ<=0.05) ಕಂಡುಬಂದಿತು. ಸುತ್ತಲಿನ ತಾಪಮಾನಗಳಲ್ಲಿ 90 ದಿನಗಳ ಶೇಖರಣೆಯ ನಂತರ, ತಾಜಾ ಇಎಸ್ ನ ಬೆಲೆ ಕಟ್ಟುವಿಕೆಯ ಸರಾಸರಿಯು 7.95 ಮತ್ತು 7.79 (ಪಿ>=0.05) ಆಗಿದ್ದು, ಸೂಚಿಸುವುದೇನೆಂದರೆ ಗ್ರಾಹಕರು 10% ಕೋಳಿ ಮಾಂಸ ಹೊಂದಿರುವ ತಾಜಾ ಮತ್ತು ಶೇಖರಿಸಿದ ಇಎಸ್ ಅನ್ನು ಇಷ್ಟಪಟ್ಟಿದ್ದಾರೆ ಮತ್ತು 93% ಸಕಾರಾತ್ಮಕವಾಗಿ ಇಷ್ಟಪಡುವ ಪ್ರತಿಕ್ರಿಯೆಗಳು ಬಂದವು.

ಹಂಟರ್ ಬಣ್ಣದ ಪ್ರಮಾಣ, ವಿನ್ಯಾಸ ಪ್ರೊಫೈಲ್ ವಿಶ್ಲೇಷಣೆ, ಪ್ರವಹನ ಶಾಸ್ತ್ರಗಳ ಗುಣಗಳು, ಎಲೆಕ್ಟ್ರೊನ್ ಮೈಕ್ರೊಗ್ರಾಫ್ ಮತ್ತು ಫೊರಿಯರ್ ರೂಪಾಂತರ ಅತಿಗೆಂಪು ಸ್ಪೆಕ್ಟ್ರೊಸ್ಕೊಪಿ (ಎಫ್‌ಟಿಐಆರ್) ಇವುಗಳಿಗೆ ಸಂಬಂಧಿಸಿದಂತೆ ಮೊಟ್ಟೆಯ ಸಾಸೇಜ್ ಸಂಸ್ಕರಣೆಗೆ ಎಮಲ್ಶನ್ ಗುಣಗಳನ್ನು ಅಧ್ಯಯನ ಮಾಡಲಾಯಿತು. ತಾಜಾ ಇಡೀ ಮೊಟ್ಟೆಯ ಸಾಸೇಜ್ ಎಮಲ್ಷನ್‌ಗಳ ಪ್ರವಹನ ಶಾಸ್ತ್ರದ ಅಧ್ಯಯನವು, ಎನ್=0.28 ಜೊತೆಗೆ ಕೆ=83.312 ಪಿಎ/ಎಸ್ ಸ್ಥಿರತೆಯ ಹರಿವು ಸೂಚ್ಯಂಕದ ಜೊತೆಗೆ ಶಿಯರ್ ತಿಳಿಗೊಳಿಸುವ ಲಕ್ಷಣಗಳನ್ನು ತೋರಿಸಿತು. ತಾಜಾ ಇಎಎಸ್ ಮತ್ತು ಇವೈಎಸ್ ಗಳ ಹರಿವು ಸೂಚ್ಯಂಕ ಕ್ರಮವಾಗಿ, 0.43 ಮತ್ತು 0.46 ಆಗಿದ್ದವು. ಎಲ್ಲಾ ಮೂರೂ ಎಮಲ್ಶನ್ ಗಳ ಹರಿವು ಸೂಚ್ಯಂಕ ಅವುಗಳ ಸ್ಥಿರತೆಗೆ ವಿರುದ್ಧ ಅನುಪಾತದಲ್ಲಿರುತ್ತದೆ. ಎಲೆಕ್ಟ್ರೋನ್ ಸೂಕ್ಷ್ಮದರ್ಶಕದಡಿಯಲ್ಲಿ ಎಲ್ಲಾ ಮೊಟ್ಟೆ ಸೊಸೇಜ್‌ಗಳ ರಚನಾತ್ಮಕ ವಿರೂಪವನ್ನು ಗಮನಿಸಲಾಯಿತು. ಪ್ರೋಟೀನ್ ನ ತೀವ್ರತೆಯು ಸಂಗ್ರಹಿತ ಸಮಯದ ಸಂದರ್ಭದಲ್ಲಿ ಕಡಿಮೆಯಾಯಿತು ಎಂದು ಎಫ್‌ಟಿಐಆರ್ ಅಧ್ಯಯನಗಳು ತೋರಿಸಿದವು. ಸಂಗ್ರಹಿತ ಸಮಯದಲ್ಲಿ ಎಲ್ಲಾ ರೀತಿಯ ಎಮಲ್ಶನ್‌ಗಳ ಸೂಕ್ಷ್ಮ ಜೀವಿಯ ಎಣಿಕೆಗಳು 2ಲಾಗ್ ಸಿಎಫ್‌ಯು/ಗ್ರಾಮ್ ಗಳಿಗಿಂತ ಕಡಿಮೆ ಇದ್ದವು. ಸಂಗ್ರಹಿತ ಮೊಟ್ಟೆ ಸಾಸೇಜ್‌ಗಳಿಂದ ಸಂಸ್ಕರಿಸಿದ ಸಾಸೇಜ್‌ಗಳು ವಿನ್ಯಾಸ ಪ್ರೊಫೈಲ್ ವಿಶ್ಲೇಷಣೆ ಮತ್ತು ಸಂವೇದನಾ ಮೌಲ್ಯಮಾಪನಗಳ ವಿಷಯದಲ್ಲಿ ಸ್ವೀಕಾರಾರ್ಹವಾಗಿತ್ತು.

**ಫ್ಲೇವೊನೋಯ್ಡ್‌ಗಳ ಸಂಶ್ಲೇಷಣೆಯ ವರ್ಧನೆ** (ಭಾಗ್ಯಲಕ್ಷ್ಮಿ ಎನ್, ಗಿರಿಧರ್ ಪಿ, ನಂದಿನಿ ಪಿ ಶೆಟ್ಟಿ, ಶಾರದಾ ಆರ್)

ಗಜ್ಜರಿ ಗಡ್ಡೆಯ ಕೃಷಿಯ ಎರಡೂ ಘನ ಮತ್ತು ದ್ರವ ಮಾಧ್ಯಮದ ಕೃಷಿಯಲ್ಲಿ ಎಲಿಸಿಟರ್ ಚಿಕಿತ್ಸೆಗಳನ್ನು ಮಾಡಲಾಯಿತು ಮತ್ತು ಸ್ಪೆಕ್ಟ್ರೊಫೊಟೋಮೀಟರ್ ಮತ್ತು ಎಚ್‌ಪಿಎಲ್‌ಸಿಗಳನ್ನು ಬಳಸಿ, ಸಮಯದ ವಿವಿಧ ಮಧ್ಯಂತರಗಳಲ್ಲಿ ಪ್ರತಿಯೊಂದು ಚಿಕಿತ್ಸೆಯಲ್ಲಿ ಆಂಥೋಸಯನಿನ್ ಅಂಶವನ್ನು ಅಳತೆ ಮಾಡಲಾಯಿತು. ಎನ್‌ಸಿಬಿಐ ಪ್ರೈಮರ್ ಡಿಸೈನಿಂಗ್ ಇಂಟರ್ಫೇಸ್‌ಗಳ ಬಳಕೆಯಿಂದ ಪ್ರೈಮರ್‌ಅನ್ನು ವಿನ್ಯಾಸಗೊಳಿಸಲಾಯಿತು ಮತ್ತು ಇವುಗಳನ್ನು ಆಂಥೋಸಯನಿನ್ ಜೈವಿಕ ವಿಶ್ಲೇಷಣೆ ಮತ್ತು ಸಂವಹನಕ್ಕೆ ಹೊಂದಿಕೊಂಡಿರುವ ವಂಶವಾಹಿನಿ ಅಭಿವ್ಯಕ್ತಿತ ಪ್ರೊಫೈಲ್‌ಗಳ ವಿಶ್ಲೇಷಣೆಗೆ ಬಳಸಲಾಯಿತು. ನಿಯಂತ್ರಿತ ಮತ್ತು ಆಂಥೋಸಯನಿನ್ ಹೊಂದಿರುವ ಗಡ್ಡೆಯಲ್ಲಿ ಡೈಹೈಡ್ರೊಫ್ಲೇವೊನೊಲ್ 4–ರಿಡಕ್ಟೇಸ್ (ಡಿಎಫ್‌ಆರ್) ವಿಶ್ಲೇಷಣೆ ಆಂಥೋಸಯನಿನ್ ಜೈವಿಕ ಸಂಶ್ಲೇಷಣೆಗೆ ಪ್ರಮುಖ ವಂಶವಾಹಿನಿ ಬಹಿರಂಗಪಡಿಸಿದ್ದೇನೆಂದರೆ, ವಂಶವಾಹಿನಿಯು ಬಣ್ಣದ ಗಡ್ಡೆಗಳಲ್ಲಿ ಮಾತ್ರ ವ್ಯಕ್ತಪಡಿಸಿತು ಮತ್ತು ನಿಯಂತ್ರಿತದಲ್ಲಿ ವ್ಯಕ್ತಪಡಿಸಲಿಲ್ಲ. ಎಲಿಸಿಟರ್ ಚಿಕಿತ್ಸೆಯ ನಂತರ ಗಡ್ಡೆ ಮತ್ತು ದ್ರವ ಕೃಷಿಯಿಂದ ಉಳಿದ ಆಂಥೋಸಯನಿನ್ ಜೈವಿಕ ಸಂಶ್ಲೇಷಣೆಯ ವಂಶವಾಹಿನಿಗಳ (ಸಿಎಚ್‌ಎಸ್, ಸಿಎಚ್‌ಐ, ಎಫ್3ಎಚ್, ಡಿಎಫ್‌ಆರ್, ಎಲ್‌ಡಿಒಎಕ್ಸ್ ಮತ್ತು ಯುಎಫ್‌ಜಿಟಿ) ವ್ಯಕ್ತಪಡಿಸುವ ಪ್ರೊಫೈಲ್ ಮತ್ತು ಕುಹರಗಳಲ್ಲಿರುವ ಆಂಥೋಸಯನಿನ್ ಸಂವಹನದಲ್ಲಿ ಒಳಗೊಳ್ಳುವ ಸಾರಿಗೆಗಳು (ಎಬಿಸಿ, ಎಮ್‌ಎಟಿಇ, ಜಿಎಸ್‌ಟಿ) ಇವುಗಳನ್ನು ಉನ್ನತೀಕರಿಸಲಾಯಿತು. ಕ್ಷೇತ್ರಗಳ ಪರಿಸ್ಥಿತಿಯಡಿಯಲ್ಲಿ ಎಲಿಸಿಟರ್ ಮಧ್ಯಸ್ಥಿಕೆಯ ವಿಧಾನದಿಂದ ಐಸೋಫ್ಲೇವೊನ್ ಸಾಂದ್ರತೆಯ ಮಟ್ಟದಲ್ಲಿ ಮತ್ತು ಸೋಯಾಬೀನ ಬೀಜಗಳ ಒಟ್ಟೂ ಐಸೋಫ್ಲೇವೊನ್ ಅಂಶದಲ್ಲಿ ಹೆಚ್ಚಳವನ್ನು ಸಾಧಿಸಲಾಯಿತು. ಪ್ರಸ್ತುತ ಅಧ್ಯಯನದಲ್ಲಿ, ವಿವಿಧ

ಸಾಂದ್ರತೆಯಲ್ಲಿ ಬಳಸಿದ ಎಲ್ಲಾ ಅಜೀವಕ ಎಲಿಸಿಟರ್‌ಗಳು, ಸೋಯಾಬೀನ್ ಬೀಜಗಳಲ್ಲಿ ಐಸೋಫ್ಲೇವೊನ್ ಮಟ್ಟ ಮತ್ತು ಎಲ್ಲಾ ಫೋಲೇಟ್ ಅಂಶಗಳ ಮೇಲೆ ಪ್ರಭಾವ ಬೀರುತ್ತದೆ. ವಿವಿಧ ಎಲಿಸಿಟರ್ ಗಳ ಬಳಕೆಯಿಂದ ಐಸೋಫ್ಲೇವೊನ್ ಮತ್ತು ಫೋಲೇಟ್ ಅಂಶದಲ್ಲಿ ಗಮನಾರ್ಹ ಹೆಚ್ಚಳ ಜೊತೆಗೆ ಅತ್ಯುತ್ತಮ ಮಟ್ಟದ ಸೆಲಿಸಿಲಿಕ್ ಆಮ್ಲವನ್ನು ಗಮನಿಸಲಾಯಿತು ಮತ್ತು ಸಹಮೇಲ್ಮೈ ಪ್ರತಿಕ್ರಿಯೆ ವಿಧಾನವನ್ನು ಸೋಯಾ ದ್ರವ ಕೃಷಿ ಆಧಾರಿತ ಐಸೋಫ್ಲೇವೊನ್‌ಗಳ ಉತ್ಪಾದನೆಗೆ ಬಳಸಲಾಯಿತು.

**ಜೈವಿಕ ಕ್ರಿಯಾಶೀಲ ವಿಶೇಷ ಉತ್ಪನ್ನಗಳು** (ಜಗನ್ಮೋಹನ್ ರಾವ್ ಎಲ್, ನಾಗರಾಜನ್ ಎಸ್, ಪುರಾನಾಯಕ್ ಜೆ, ಶ್ರೀನಿವಾಸ್ ಪಿ)

ಮೈಕ್ರೋವೇವ್‌ನ ಅಡಿಯಲ್ಲಿ, ಕ್ಲೋರೋಫಾರ್ಮ್ ನಲ್ಲಿ, ಝಿಂಕ್ ಬ್ರೊಮೈಡ್ ಉಪಸ್ಥಿತಿಯಲ್ಲಿ, ಕಾರ್ವಕ್ರೊಲ್, ಥೈಮೊಲ್, ಪೆರಿಲಿಲ್ ಆಲ್ಕೋಹಾಲ್ ಮತ್ತು ಮೆಂಥೋಲ್ ಜೊತೆಗೆ 3,4,6–ಟ್ರೈ–ಒ–ಅಸಿಟೈಲ್–ಡಿ–ಗ್ಲುಕೊಲ್ ಇವಿಗಳ ಪ್ರತಿಕ್ರಿಯೆಯ, ಆಲ್ಫಾ–2,3 ಅಪರ್ಯಾಪ್ತ ಗ್ಲುಕೊಸೈಡ್ ಅಸಿಟೇಟ್ ಗಳಲ್ಲಿ ಅನುಗುಣವಾದ ಅಧಿಕ ಇಳುವರಿ (56 93%) ನೀಡಿತು. ಹತ್ತಿರದ ಪರಿಮಾಣಾತ್ಮಕ ಇಳುವರಿಯಲ್ಲಿ ಡಿಅಸಿಟೈಲೇಶನ್ ಗಳಿಂದ ಗ್ರಾಮ್ ಪ್ರಮಾಣದಲ್ಲಿ ಸಂಶ್ಲೇಷಿಸಿದ ಶುದ್ಧ ಸಂಯುಕ್ತಗಳನ್ನು ಅನುಗುಣವಾದ ಗ್ಲುಕೊಸೈಡ್ ಗಳಾಗಿ ಪರಿವರ್ತಿಸಲಾಯಿತು. ಪರ್ಯಾಯವಾಗಿ, ಆಲ್ಕೊಹೊಲ್ ಮತ್ತು ಫಿನೊಲ್ ಗಳ 2,3–ಅಪರ್ಯಾಪ್ತ ಗ್ಲುಕೊಸೈಡ್ ಅಸಿಟೇಟ್ ಗಳನ್ನು ಡಿಅಸಿಟೈಲೇಶನ್‌ನ ನಂತರ ಅನುಗುಣವಾದ 2,3–ಡೈಡಿಒಕ್ಸಿಗ್ಲುಕೊಸೈಡ್ ಅನ್ನು ನೀಡಲು ಹೈಡ್ರೊಜನೀಕರಿಸಲಾಯಿತು. ಮಸಾಲೆ ಘಟಕದ ಎರಡೂ 2,3–ಅಪರ್ಯಾಪ್ತ ಮತ್ತು 2,3–ಡೈಡಿಒಕ್ಸಿಗ್ಲುಕೊಸೈಡ್‌ಗಳಾದ ಕಾರ್ವಾಕ್ರೊಲ್, ಥೈಮೊಲ್, ಪೆರಿಲಿಲ್, ಆಲ್ಕೊಹೊಲ್ ಮತ್ತು ಮೆಂಥೊಲ್‌ಗಳು ಪ್ರಬಲವಾದ ಸೂಕ್ಷ್ಮ ಜೀವಿ ನಿರೋಧಕ ಮತ್ತು ಕ್ವೊರಮ್ ಸಂವೇದಿ ಪ್ರತಿಬಂಧಕ ಲಕ್ಷಣಗಳನ್ನು ತೋರಿಸಿದವು.

ಬಿ–ಬ್ರೊಮೊಟರ್ಟ್‌ಆಲ್ಕೊಹೊಲ್ (2) ನಿಂದ ಎ,ಬಿ–ಅಪರ್ಯಾಪ್ತ ಕೀಟೋನ್‌ಗಳ (3) ಒಂದು ಸಹವರ್ತಿ ನಿರ್ಜಲೀಕರಣ ಉತ್ಕರ್ಷಣವು ವರದಿಯಾಗಿದೆ. ಶುದ್ಧ ಎ–ಬ್ರೊಮೊಟರ್ಟ್‌ಆಲ್ಕೊಹೊಲ್, 0.5 ಮೋಲ್ ಸಮತೂಕದ ಇಂಡಿಯಮ್ ಪುಡಿಯ ಉಪಸ್ಥಿತಿಯಲ್ಲಿ ಡಿಎಮ್‌ಎಸ್‌ಒ (1 ಎಮ್‌ಎಲ್) ಜೊತೆ ವರ್ತಿಸಿ, ಒಂದು ಪ್ರಮುಖ ಸುವಾಸನೆಯುಕ್ತ ಸಂಯುಕ್ತವಾದ ಕಾರ್ವೋನ್ ಅನ್ನು ನೀಡಿತು. 70 ಡಿಗ್ರೀ ಸೆಲ್ಸಿಯಸ್ ನಲ್ಲಿ ಮತ್ತು 500 ವ್ಯಾಟ್ ನಲ್ಲಿ ಮೈಕ್ರೊವೇವ್ ಕರಣವು ಈ ಮಾರ್ಪಾಡಿನ ಮೇಲೆ ಪರಿಣಾಮವನ್ನು ಬೀರುತ್ತದೆ. ಈ ವಿಧಾನವನ್ನು ಇನ್ನೂ ಐದು ಹೆಚ್ಚಿನ ಸುವಾಸನೆಯುಕ್ತ ಸ್ಂಯುಕ್ತಗಳ ಸಂಶ್ಲೇಷಣೆಯಲ್ಲಿ ತೋರಿಸಲಾಯಿತು. ಇವು ಅಗ್ಗದ ಮತ್ತು ಸುಲಭವಾಗಿ ಲಭ್ಯವಿರುವ ಮೊನೊಟರ್ಪೀನ್ ಹೈಡ್ರೊಕಾರ್ಬನ್‌ಗಳಿಂದ, ಸುವಾಸನೆಯುಕ್ತ ರಸಾಯನಿಕಗಳ ತಯಾರಿಕೆಗೆ ಒಂದು ಹಚಿತದ ದ್ರಾವಕವಿಲ್ಲದ ಹಸಿರು ವಿಧಾನವಾಗಿದೆ. ಎನ್‌ಎಮ್‌ಆರ್ ಮತ್ತು ಎಮ್‌ಎಸ್ ಅಧ್ಯಯನಗಳಿಂದ ಶುದ್ಧ ಸುವಾಸನೆಯುಕ್ತ ಸಂಯುಕ್ತಗಳನ್ನು ವಿವರಿಸಲಾಗಿದೆ.




**ಅಹಿತಕರ ವಾಸನೆಯನ್ನು ತೆಗೆದ ಅರಿಶಿಣ ಪುಡಿ** (ಪುರಾನಾಯಕ್ ಜೆ)

ಅರಿಶಿಣ ಪುಡಿಯ ಸಾರ ತೆಗೆಯುವ ಒಂದು ಅಪೂರ್ವ ಪದ್ಧತಿಯು ಅದರ ಕರ್ಕ್ಯುಮಿನೊಯ್ಡ್ ಬಣ್ಣಗಳನ್ನು ಉಳಿಸುವುದರ ಜೊತೆಗೆ ಅನಪೇಕ್ಷಿತ ವಾಸನೆ, ಕಹಿ, ಸ್ಥಿರ ಎಣ್ಣೆ ಮತ್ತು ರಾಳೀಯ ಘಟಕಗಳನ್ನು ತೆಗೆದುಹಾಕಿತು. ಈ ಹೊಸ ಕಹಿ ತೆಗೆದ, ವಾಸನೆ ತೆಗೆದ ಅರಿಶಿಣದ ಡೈ ಅನ್ನು, 40–47% ಕರ್ಕ್ಯುಮಿನ್ ಮತ್ತು ಕರ್ಕ್ಯುಮಿನೊಯ್ಡ್ (98.0–100% ಶುದ್ಧತೆ) ಜೊತೆಗೆ, ಭಾರತೀಯ ಸಿಹಿಗಳಲ್ಲಿ (ಜಿಲೇಬಿ) ಸೇರಿಸಲಾಯಿತು ಮತ್ತು ಗರಿಷ್ಠ ಮಟ್ಟದ ಅಳವಡಿಕೆಯನ್ನು ಪ್ರಮಾಣೀಕರಿಸಲಾಯಿತು. ಜಿಲೇಬಿಯ ಸಂವೇದನಾತ್ಮಕ ಮೌಲ್ಯಮಾಪನವು ತೋರಿಸಿದ್ದೇನೆಂದರೆ, ನಿಯಂತ್ರಿತದ ಜೊತೆಗೆ ಉತ್ಪನ್ನವು ಚೆನ್ನಾಗಿ ಸ್ವೀಕಾರಾರ್ಹವಾಗಿತ್ತು.

**ಸಾಂದ್ರೀಕೃತ ದಿಢೀರ್ ಚಹಾ** (ಬೋರ್ಸ್ ಬಿಬಿ, ಜಗನ್ಮೋಹನ್ ರಾವ್ ಎಲ್, ಹಫೀಜಾ ಖಾನುಮ್)

ಕುದಿಯುವ ನೀರಿನ ಜೊತೆಗೆ ಚಹಾದ ಸಾರ ತೆಗೆಯಲಾಯಿತು (1:50), ಶೋಧಿಸಲಾಯಿತು (ಬ್ರಿಕ್ಸ್ 1) ಮತ್ತು ಎಸ್‌ಇಇ (ಬ್ರಿಕ್ಸ್ 22) ನಲ್ಲಿ ಕೇಂದ್ರೀಕರಿಸಲಾಯಿತು. ಸಕ್ಕರೆಯ ಜೊತೆಗೆ ಬೆರೆಸಿ (ಬ್ರಿಕ್ಸ್ 700), ಅವುಗಳನ್ನು ಪ್ಲಾಸ್ಟಿಕ್ ಸ್ಕ್ರೂ ಮುಚ್ಚಳ ಇರುವ ಧಾರಕಗಳಲ್ಲಿ ತುಂಬಲಾಯಿತು. ವಿವಿಧ ತಾಪಮಾನಗಳಲ್ಲಿ (ಶೈತ್ಯೀಕರಣ, ಕಾವು ಕೊಟ್ಟ, ಆರ್‌ಟಿ) ಮಾದರಿಗಳ ಉಳಿಕೆ ಕಾಲದ ಅಧ್ಯಯನವನ್ನು ಮಾಡಲಾಯಿತು ಮತ್ತು ಅವುಗಳನ್ನು 3 ತಿಂಗಳುಗಳ ಅವಧಿಯವರೆಗೆ ಸಂವೇದನಾ ಸ್ವೀಕಾರ ಮತ್ತು ಭೌತರಾಸಾಯನಿಕ ಗುಣಲಕ್ಷಣಗಳು, ಸೂಕ್ಷ್ಮಜೀವವಿಜ್ಞಾನಗಳ ಸ್ಥಿತಿ ಇವುಗಳನ್ನು ಗಮನಿಸಲಾಯಿತು ಮತ್ತು ಮಾದರಿಗಳನ್ನು ಅವುಗಳ ಆಂಟಿಒಕ್ಸಿಡೆಂಟ್ ಚಟುವಟಿಕೆಯನ್ನು ತಿಳಿಯಲು ನಿಯತಕಾಲಿಕವಾಗಿ ವಿಶ್ಲೇಷಿಸಲಾಯಿತು. ನಾಲ್ಕು ತಿಂಗಳುಗಳ ಅವಧಿಯವರೆಗೆ ಸಂಗ್ರಹಿಸಿದ ಮಾದರಿಗಳು, ಸೂಕ್ಷ್ಮ ಜೀವ ವೈಜ್ಞಾನಿಕವಾಗಿ ಕುಡಿಯಲು ಸುರಕ್ಷಿತವಾಗಿದ್ದವು ಮತ್ತು ಎಲ್ಲಾ ಮಾದರಿಗಳು ವಾಣಿಜ್ಯಿಕವಾಗಿ ಅಕಲುಷಿತವಾಗಿದ್ದವು. ಪಾನೀಯಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಲಾಯಿತು ಮತ್ತು ನಾಲ್ಕು ತಿಂಗಳುಗಳ ಸಂಗ್ರಹಿತ ಸಮಯದಲ್ಲಿ ತಿಂಗಳಿಗೊಮ್ಮೆಯಂತೆ ಸಂವೇದನಾತ್ಮಕವಾಗಿ ಮೌಲ್ಯಮಾಪನ ಮಾಡಲಾಯಿತು. ಪಾನೀಯಗಳನ್ನು ಬಾಟಲಿಗಳಲ್ಲಿ, ಸುತ್ತಲಿನ ಸಂಗ್ರಹಿತ ಸ್ಥಿತಿಯಡಿಯಲ್ಲಿ ರುಚಿ, ಸುವಾಸನೆ ಮತ್ತು ಒಟ್ಟಾರೆ ಸ್ವೀಕಾರಕ್ಕೆ ಸಂಬಂಧಿಸಿದಂತೆ ನಾಲ್ಕು ತಿಂಗಳುಗಳ ಉಳಿಕೆ ಕಾಲವನ್ನು ತೋರಿಸಿದವು.

**ಗೋಧಿ ಹುಲ್ಲಿನಿಂದ ಆರೋಗ್ಯಯುತ ಪಾನೀಯ** (ರೂಪಾ ಬಿಎಸ್)

ಗೋಧಿಯ ಹುಲ್ಲಿನ ಪಾನೀಯವನ್ನು ಜೀರಿಗೆ, ಏಲಕ್ಕಿ, ಶುಂಠಿ ಮತ್ತು ಮಾವಿನ ಸುವಾಸನೆಯೊಂದಿಗೆ ಮಾರ್ಪಡಿಸಿ ತಯಾರಿಸಲಾಯಿತು. ಉತ್ಪನ್ನಗಳನ್ನು ಪರಿಮಾಣಾತ್ಮಕ ವಿವರಣಾತ್ಮಕ ವಿಶ್ಲೇಷಣೆ ಮತ್ತು ಎಲೆಕ್ಟ್ರಾನಿಕ್ ಸಂವೇದನಾ ವ್ಯವಸ್ಥೆಯ ಜೊತೆ ಸಂಬಂಧಿಸಿ ಪ್ರೊಫೈಲ್ ಮಾಡಲಾಯಿತು. ಸಂವೇದನಾ ಮೌಲ್ಯಮಾಪನದ ಫಲಿತಾಂಶಗಳು ತೋರಿಸಿದ್ದೇನೆಂದರೆ, ಜೀರಿಗೆ ಸುವಾಸನೆಯೊಂದಿಗಿನ ಗೋಧಿ ಹುಲ್ಲಿನ ಪಾನೀಯವು, ಸರಾಸರಿ ಸಂವೇದನಾ ಅಂಕಗಳೊಂದಿಗೆ (11.5) ಹೆಚ್ಚು ಸ್ವೀಕಾರಾರ್ಹವಾಗಿತ್ತು. ಇವುಗಳ ನಂತರ ಏಲಕ್ಕಿ ಸೇರಿಸಿದ ಗೋಧಿ ಹುಲ್ಲಿನ ಪಾನೀಯ (9.5) ಮತ್ತು ಮಾವು ಸುವಾಸನೆಯ ಪಾನೀಯ (9.0) ಆಗಿದ್ದವು. ಸುವಾಸನೆ ಮತ್ತು ರುಚಿಯ ಪರಸ್ಪರ ಅಧ್ಯಯನಗಳು ತೋರಿಸಿದ್ದೇನೆಂದರೆ, ಉಪ್ಪು ಸೇರಿಸುವಿಕೆಯು ಜೀರಿಗೆ ಪರಿಮಳದ ಗೋಧಿ ಹುಲ್ಲಿನ ಪಾನೀಯದ ನೈಸರ್ಗಿಕ ಸಿಹಿ ರುಚಿಯನ್ನು ವರ್ಧಿಸಿತು. ಅಧ್ಯಯನಗಳು ತೀರ್ಮಾನಿಸಿದ್ದೇನೆಂದರೆ, ಪಾನೀಯದಲ್ಲಿ ಬಳಸಿದ ವಿವಿಧ ಪರಿಮಳಗಳು ಆಂಟಾಗೊನಿಸ್ಟಿಕ್ ಲಕ್ಷಣಗಳನ್ನು ಹೊಂದಿವೆ.

ಆದ್ದರಿಂದ ಹುಲ್ಲಿನ ಅನುಪಯುಕ್ತ ವಾಸನೆಯನ್ನು ಕಡಿಮೆಗೊಳಿಸುವುದು.

**ಗೋಧಿ ಕಡಿ ಆಧಾರಿತ ಖೀರು** (ಆಶಾ ಎಮ್‌ಆರ್)

ಗೋಧಿ ಕಡಿಗಳು, ಹೆಸರು ಬೇಳೆ, ಗೋಧಿ ರವೆ, ಬೆಲ್ಲ ಮತ್ತು ಉಳಿದ ಸಣ್ಣ ಪದಾರ್ಥಗಳನ್ನು ಬಳಸಿ ಗೋಧಿ ಕಡಿಯ ಖೀರನ್ನು ತಯಾರಿಸಲು ತತ್ಕ್ಷಣ ಮಿಶ್ರಣವನ್ನು ಅಭಿವೃದ್ಧಿಪಡಿಸಲಾಯಿತು. ಈ ಮಿಶ್ರಣವನ್ನು ಬಳಸಿ ತಯಾರಿಸಿದ ಖೀರು ಸಂವೇದನಾ ಅಧ್ಯಯನಗಳಲ್ಲಿ ಸ್ವೀಕಾರಾರ್ಹವಾಗಿದೆ. ತ್ವರಿತ ಮಿಶ್ರಣಗಳ ವಿಶಿಷ್ಟ ಗುಣಗಳು ಒಳಗೊಳ್ಳುವುದೇನೆಂದರೆ, ಉತ್ಪನ್ನವು ಮಾರುಕಟ್ಟೆಗಳಲ್ಲಿ ವಾಣಿಜ್ಯವಾಗಿ ಲಭ್ಯತೆ ಇಲ್ಲದೆ ಇರುವುದು, ರಾಸಾಯನಿಕ ಸಂರಕ್ಷಕಗಳ ಬೆರಕೆ ಇಲ್ಲದಿರುವುದು, ಬೆಲ್ಲ ಆಧಾರಿತ, ವೆಚ್ಚ ಪರಿಣಾಮಕಾರಿ ಮತ್ತು ಸುಲಭವಾದ ತಯಾರಿಕೆ.

**ನ್ಯೂಟ್ರಿಸಿರೀಲ್‌ಗಳು** (ಪೌಷ್ಟಿಕ ಬೇಳೆ ಕಾಳುಗಳು) (ಅಮುಧಾ ಸೆಂಥಿಲ್)

ಸಿದ್ಧ – ತಿನ್ನಲು ಮೌಲ್ಯಾಧಾರಿತ ಆರೋಗ್ಯ ಆಹಾರವನ್ನು, ದವಸ ಧಾನ್ಯಗಳು, ಬೇಳೆ ಕಾಳು, ಧಾನ್ಯ ಮತ್ತು ಬೀಜಗಳನ್ನು ಪ್ರಮುಖ ಘಟಕಗಳನ್ನಾಗಿ ಬಳಸಿ ತಯಾರಿಸಲಾಯಿತು. ನ್ಯೂಟ್ರಿಸಿರೀಲ್ ಇದು ಬೆಲ್ಲ ಆಧಾರಿತ ಆರೋಗ್ಯ ಆಹಾರವಾಗಿದೆ. ಇವುಗಳನ್ನು ಬಾಜ್ರ ಮತ್ತು ಹೆಸರುಕಾಳು ಹಿಟ್ಟಿನ ವಿವಿಧ ಪರಿಮಾಣಗಳಲ್ಲಿ ಮಿಶ್ರಣ ಮಾಡಿ ತಯಾರಿಸಲಾಗುತ್ತದೆ. ಬೀಜಗಳ ಮತ್ತು ಗೋಧಿ ಹಿಟ್ಟಿನ ಪರಿಮಾಣವನ್ನು ಅಧ್ಯಯನ ಮಾಡುವವರೆಗೂ 20:20 ಯಂತೆ ಸ್ಥಿರವಾಗಿ ಇಡಲಾಯಿತು. ಉತ್ಪನ್ನದ ಪೌಷ್ಟಿಕ ಸಂಯೋಜನೆ ಮತ್ತು ಸಂವೇದನಾ ಗುಣಮಟ್ಟವನ್ನು ವಿಶ್ಲೇಷಿಸಲಾಯಿತು ಮತ್ತು ಫಲಿತಾಂಶಗಳು ತೋರಿಸಿದ್ದೇನೆಂದರೆ, ಮಿಶ್ರಣದಲ್ಲಿ ಹೆಸರುಕಾಳು ಹಿಟ್ಟಿನ 10–70% ಹೆಚ್ಚಳವು ಅನುಗುಣವಾಗಿ ಉತ್ಪನ್ನದ ಪ್ರೋಟೀನ್ ಅಂಶವನ್ನು 7.87 ನಿಂದ 13.55% ವರೆಗೆ ಹೆಚ್ಚಿಸಿತು.

**ಸಿಹಿಕಾರಕಗಳು** (ಮಾಯ ಪ್ರಕಾಶ್)

ನಾಲ್ಕು ಸಿಹಿಕಾರಕಗಳನ್ನು (ಸುಕ್ರೋಸ್ 1–64 ಗ್ರಾಂ%, ಸುಕ್ರಾಲೋಸ್ 1–8ಗ್ರಾಂ%, ಆಸ್ಪರ್ಟೇಮ್ 1–8%ಗ್ರಾಂ ಮತ್ತು ಎಸೆಸಲ್ಫೇಂ–ಕೆ 1–8%ಗ್ರಾಂ) ಇ– ಭಾಷೆ ಬಳಸಿ ವಿಶ್ಲೇಷಿಸಲಾಯಿತು. ಸಂವೇದನಾ ಪ್ರತಿಕ್ರಿಯೆಗಳನ್ನಾಧರಿಸಿ ರಚಿತವಾದ ಪಿಸಿಎ ಪ್ಲೋಟ್‌ಗಳು ಸೂಚಿಸಿದ್ದೇನೆಂದರೆ, ಸಮೂಹಗಳಲ್ಲಿನ ಗಮನಾರ್ಹ ವ್ಯತ್ಯಾಸಗಳು ಮಾದರಿಗಳ ಸಾಂದ್ರತೆಯ ಕಾರ್ಯಗಳಾಗಿ ರೂಪುಗೊಂಡವು. ನಾಲ್ಕು ಸಿಹಿಕಾರಕಗಳಲ್ಲಿ – ಸುಕ್ರೋಸ್, ಸುಕ್ರಾಲೋಸ್, ಆಸ್ಪರ್ಟೇಮ್, ಎಸೆಸಲ್ಫೇಂ–ಕೆಗಳು ಪರಸ್ಪರ ಬೇರೆ ಆಗಿದ್ದು ಸೂಚಿಸುವುದೇನೆಂದರೆ, ಅವುಗಳ ಸಿಹಿಕಾರಕ ಅನುಭವವು ಬೇರೆಯಾಗಿತ್ತು. ಸಿಹಿಕಾರಕ ಸಮೂಹಗಳ ದೂರಗಳ ನಡುವಿನ ವ್ಯತ್ಯಾಸವು ಅವುಗಳ ಸಿಹಿ ಗ್ರಹಿಕೆ ಮತ್ತು ರುಚಿಗೆ ಸಂಬಂಧಿಸಿದಂತೆ ವ್ಯತ್ಯಾಸವನ್ನು ಸೂಚಿಸುತ್ತದೆ.

**ನುಗ್ಗೆಕಾಯಿ ಎಲೆಯ ಆಧಾರಿತ ಉತ್ಪನ್ನಗಳು:** (ಅಖಿಲೇಂದರ್ ನಾಯ್ಡು ಕೆ, ಆನಂದರಾಮಕೃಷ್ಣನ್ ಸಿ, ಇಬೋಯೈಮಾ ಸಿಂಘ್ ಎನ್, ಪ್ರಭಾಶಂಕರ್ ಪಿ, ರೇಣು ಅಗರ್‌ವಾಲ್, ಸತೀಶ್ ಎಚ್ ಎಸ್, ಶೀಲಾ ಭಟ್ಟಾಚಾರ್ಯ, ಉಷಾ ಧರ್ಮರಾಜ್, ವಿಜಯಾನಂದ್ ಪಿ, ಮನಿಶಾ ಗುಹಾ, ಶಶಿಕಲಾ ವಿಬಿ)

ಮೌಲ್ಯಾಧಾರಿತ ನುಗ್ಗೆಕಾಯಿ ಎಲೆಗಳ ಆಧಾರಿತ ಉತ್ಪನ್ನಗಳನ್ನು, ಪ್ರೋಟೀನ್, ಡೊಕೋಸಹೆಕ್ಸಾಇನೋಯಿಕ್ ಆಮ್ಲ(ಡಿಎಚ್‌ಎ), ಗೋಧಿಯ ಮೊಳಕೆಯ ತೈಲ, ಪ್ರೋಬಯೋಟಿಕ್ಸ್ ಮತ್ತು ಪ್ರಿಬಯೋಟಿಕ್ಸ್‌ಗಳ ಜೊತೆ, ತುಂತುರು/ ಡ್ರಮ್/ ಒಣಗಿಸಿದ ಪುಡಿ ಇವುಗಳ ರೂಪದಲ್ಲಿ, ಸೂಕ್ತವಾದ ಲೇಪನ ವಸ್ತುವಿನ ಜೊತೆಗೆ (ಹಾಲೊಡಕು ಪ್ರೋಟೀನ್ ಐಸೋಲೇಟ್, ಬಿ– ಸೈಕ್ಲೋಡೆಕ್ಸ್ಟ್ರಿನ್, ಮಾಲ್ಟೋಡೆಕ್ಸ್ಟ್ರಿನ್, ರಾಗಿ ಮಾಲ್ಟ್ ಮತ್ತು ಬಾರ್ಲಿ ಮಾಲ್ಟ್) ಇವುಗಳನ್ನು ವಿವಿಧ ಆಹಾರ ಪೂರಕಗಳಲ್ಲಿ ಸೂಕ್ತವಾಗಿ ಅಳವಡಿಸಲು ಬರುವಂತೆ ಅಭಿವೃದ್ಧಿಪಡಿಸಲಾಯಿತು. ಉತ್ಪನ್ನಗಳ ವಿವಿಧ ಭೌತರಾಸಾಯನಿಕ ಗುಣಲಕ್ಷಣಗಳನ್ನು, ಅವುಗಳ ಗುಣಮಟ್ಟವನ್ನು ನಿರ್ಧರಿಸುವ ಸಲುವಾಗಿ ಮೌಲ್ಯಮಾಪನ ಮಾಡಲಾಯಿತು.

ನುಗ್ಗೆಕಾಯಿ ಎಲೆಯ ಪಾನೀಯ ಮತ್ತು ಟ್ಯಾಬ್ಲೇಟ್‌ಗಳನ್ನು ತಯಾರಿಸಲಾಯಿತು. ತಯಾರಿಸಿದ ಆರ್‌ಟಿಎಸ್ ಪಾನೀಯವು ಒಳ್ಳೆಯ ನೋಟದ ಜೊತೆಗೆ, ಹಸಿರು ಬಣ್ಣ ಮತ್ತು ರುಚಿ (ಕಹಿ ಅಥವಾ ಎಲೆಯ ರುಚಿಯಿಲ್ಲದೆ) ತೋರಿಸಿತು. ಆದರೆ ಶೇಖರಣೆಯ ಸಮಯದಲ್ಲಿ ಬಣ್ಣ ಕೆಡುವಿಕೆಯನ್ನು ಗಮನಿಸಲಾಯಿತು. ಅಂತೆಯೇ ಗೋಧಿ ಹಿಟ್ಟಿನ ಬದಲಾಗಿ 5, 10 ಮತ್ತು 15% ನುಗ್ಗೆಕಾಯಿ ಎಲೆಯ ಪುಡಿಯನ್ನು (ಎಮ್‌ಎಲ್‌ಪಿ) ಬಳಸಿ, ಗೋಂದು ರಹಿತ ಬೇಕರಿ ಉತ್ಪನ್ನಗಳ ಗುಣಮಟ್ಟದ ಗುಣಲಕ್ಷಣಗಳು ಮತ್ತು ರಿಯೋಲೋಜಿಕಲ್ ಅಧ್ಯಯನಗಳ ಮೇಲಿನ ಪರಿಣಾಮವನ್ನು ಅಭ್ಯಸಿಸಲಾಯಿತು. ರಿಯೋಲೋಜಿಕಲ್ ಅಧ್ಯಯನಗಳು ಸೂಚಿಸುವುದೇನೆಂದರೆ, ಎಮ್‌ಎಲ್‌ಪಿಯ ಪ್ರಮಾಣವನ್ನು 0–15% ಹೆಚ್ಚಿಗೆ ಸೇರಿಸಿದಂತೆ ನೀರನ್ನು ಹೀರುವಿಕೆ, ಸೂಕ್ತ ಹಿಟ್ಟಿನ ಸ್ಥಿರತೆ, ಅಮೈಲೋಗ್ರಾಫ್ ಜಿಲೇಟಿನೈಜೇಶನ್ ತಾಪಮಾನದಲ್ಲಿ ಕಡಿತ, ಗರಿಷ್ಠ ಸ್ನಿಗ್ಧತೆ ಮತ್ತು ಛಿದ್ರಗಳಿಗೆ ಅಲ್ವಿಯೋಗ್ರಾಫ್ ಪ್ರತಿರೋಧಗಳು ಹೆಚ್ಚಿದವು.

ಗ್ಲುಟೆನ್ ಮುಕ್ತ ಕುಕೀಸ್‌ಗಳನ್ನು (ಜಿಎಫ್‌ಸಿ), ಅಕ್ಕಿ ಹಿಟ್ಟು ಮತ್ತು ಎಮ್‌ಎಲ್‌ಪಿ ಮಿಶ್ರಣಗಳನ್ನು ಬಳಸಿ, ಹೊರಗಿನಿಂದ ಪಡೆಯುವ ಪ್ರೋಟೀನ್ ಮತ್ತು ಸೇರ್ಪಡೆಗಳಿಲ್ಲದೇ ಅವುಗಳ ಜೊತೆಗೆ ತಯಾರಿಸಲಾಯಿತು. ಉತ್ಪನ್ನ ಗುಣಮಟ್ಟ ಮತ್ತು ಸಂವೇದನಾ ಮೌಲ್ಯಮಾಪನಗಳು ತೋರಿಸಿದ್ದೇನೆಂದರೆ, 5% ಎಮ್‌ಎಲ್‌ಪಿ ಮತ್ತು 7.5% ಹೊರಗಿನಿಂದ ಪಡೆಯುವ ಪ್ರೋಟೀನ್‌ಗಳ ಜೊತೆ ಜಿಎಫ್‌ಸಿಯನ್ನು ಸೇರಿಸಿದಾಗ ಅವು ಸ್ವೀಕಾರಾರ್ಹವಾಗಿದ್ದವು. ಗೋಧಿ ಮೊಳಕೆ ಆಧಾರಿತ ಉತ್ಪನ್ನವನ್ನು ಅವುಗಳ ಉಳಿಕೆ ಕಾಲವನ್ನು ವೃದ್ಧಿಸಲು ಮೌಲ್ಯಮಾಪನ ಮಾಡಲಾಯಿತು. ಮೊರಿಂಗಾ ಎಲೆ ಆಧಾರಿತ ತಿನ್ನಲು–ಸಿದ್ಧ ಆಹಾರಗಳಾದ ಸಾಂಬಾರ್ ಮತ್ತು ಕರಿಗಳನ್ನು ರಿಟೋರ್ಟ್ (ಸಾಮಾನು ಕಟ್ಟುವ) ಚೀಲಗಳಲ್ಲಿ ಅಭಿವೃದ್ಧಿಪಡಿಸಲಾಯಿತು. ಗದ್ದೆಗಳಿಂದ ಎಲೆಗಳ ಸುಲಭ ಸಾಗಾಣಿಕೆಗೆ ಒಣ ಮೊರಿಂಗಾ ಎಲೆಗಳ ಬ್ರಿಕೆಟ್ಸ್ ಅನ್ನು ತಯಾರಿಸುವ ಕೆಲಸವನ್ನು ಪ್ರಾರಂಭಿಸಲಾಯಿತು. ಮೊರಿಂಗಾ ಎಲೆಗಳ ಜೊತೆ, ಧಾನ್ಯ ಆಧಾರಿತ ತಯಾರಿಸಲು ಸಿದ್ಧ ಆಹಾರ ಮಿಶ್ರಣಗಳಾದ–



ಪೆಸರಟ್ಟು, ಪೊಂಗಲ್, ಸಾಂಬಾರ್ ಕಿಚಡಿಗಳನ್ನು ತಯಾರಿಸಲಾಯಿತು. ಉತ್ಪನ್ನಗಳ ಬಣ್ಣ ಮತ್ತು ರುಚಿಯ ಮೌಲ್ಯಗಳು ಸಂಸ್ಕರಣಾ ವಿಧಾನಗಳನ್ನು ಅವಲಂಬಿಸಿ ಗಣನೀಯವಾಗಿ ಬದಲಾವಣೆ ತೋರಿಸಿದವು. ತುಂತುರು ಒಣಗಿಸುವ ಕ್ರಿಯೆಯಿಂದ ಮೊರಿಂಗಾ ಎಲೆಯ ನೀರಿನ ಸಾರ ಆಧಾರಿತ ಉತ್ಪನ್ನವನ್ನು, ತೋಟದ ಜೊಂಡು ತೈಲ (5ಗ್ರಾಂ) (ಜಿಸಿಒ/ಸಾರದ 100ಎಂಎಲ್) ಮತ್ತು ಹಾಲೊಡಕು ಪ್ರೋಟೀನ್ ಸಾಂದ್ರತೆಯನ್ನು (40ಗ್ರಾಂ) ಬಳಸಿ ತಯಾರಿಸಲಾಯಿತು. ಉತ್ಪನ್ನದ ಕಾರ್ಬೋಹೈಡ್ರೇಟ್ (20.6ಮಿಗ್ರಾಮ್/ಗ್ರಾಮ್ ತೇವ ತೂಕ), ಪ್ರೋಟೀನ್ (80 ಮಿಗ್ರಾಮ್/ಗ್ರಾಮ್ ತೇವ ತೂಕ) ಮತ್ತು ವಿಟಮಿನ್ ಃ3 (ನಿಯಾಸಿನ್, 34.4 ಎಮ್‌ಜಿ/ಜಿ ತೇವ ತೂಕ) ಅಂಶಗಳನ್ನು ಅಂದಾಜಿಸಲಾಯಿತು.

**ಮೊರಿಂಗಾ ಎಲೆಗಳ ಪೌಷ್ಠಿಕಾಂಶದ ಪ್ರೊಫೈಲ್** (ಭಾಗ್ಯಲಕ್ಷ್ಮಿ ಎನ್, ಭಾಸ್ಕರನ್ ವಿ, ರೇಣು ಅಗರ್‌ವಾಲ್)

ತಾಜಾ ಮತ್ತು ಸಂಸ್ಕರಿಸಿದ ಮೊರಿಂಗಾ ಎಲೆಗಳ ಎಸ್ಕೋರ್ಬಿಕ್ ಆಮ್ಲ, ಕೆರೋಟಿನೋಯ್ಡ್ಸ್, ಎ–ಟೋಕೋಫೆರೋಲ್, ಒಟ್ಟೂ ಕಬ್ಬಿಣ, ಒಟ್ಟೂ ಫೋಲೇಟ್ ಮತ್ತು ಪ್ರೋಟೀನ್ ಅಂಶವನ್ನು ನಿರ್ಧರಿಸಲಾಯಿತು. ಎಲೆಗಳ ಒಣಗಿಸುವಿಕೆ ಮತ್ತು ಶೇಖರಣೆಯ ನಂತರ ಸಸ್ಯ ಘಟಕಗಳ ಮಟ್ಟಗಳಲ್ಲಿ ನಷ್ಟವಾಯಿತು. ಲಯೋಫಿಲಿಸೇಶನ್ ಮತ್ತು ಕ್ಯಾಬಿನೆಟ್ ಟ್ರೇ ಒಣಗಿಸುವಿಕೆಯಿಂದ ಎಲೆಯ ಸಸ್ಯ ಘಟಕಗಳು ಮತ್ತು ಆಂಟಿಒಕ್ಸಿಡೆಂಟ್ ಚಟುವಟಿಕೆಯು ಒಲೆ ಮತ್ತು ಸೂರ್ಯನ ಬಿಸಿಲಿನಲ್ಲಿ ಒಣಗಿಸುವ ವಿಧಾನಕ್ಕೆ ಹೋಲಿಸಿದಾಗ, ಚೆನ್ನಾಗಿ ಸಂರಕ್ಷಿಸಲ್ಪಟ್ಟವು. ವಿವಿಧ ವಯಸ್ಸಿನ ಎಲೆಗಳಲ್ಲಿನ ಒಟ್ಟೂ ಪ್ರೋಟೀನ್ ಅಂಶವು 6 ರಿಂದ 11% ಗಳ ನಡುವೆ ವೈವಿಧ್ಯತೆಯನ್ನು ತೋರಿಸಿತು. ಎಲೆಗಳ ಎಚ್‌ಪಿಎಲ್‌ಸಿ ಸಕ್ಕರೆ ಪ್ರೊಫೈಲ್ ಪ್ರತಿಪಾದಿಸಿದ್ದೇನೆಂದರೆ, ರೆಫಿನೋಸ್ ಮಟ್ಟವು 18.16ಮಿಗ್ರಾಂ% ಆಗಿತ್ತು ಮತ್ತು ಡೈಸೆಕರೈಡ್‌ಗಳಲ್ಲಿ ಮಾಲ್ಟೋಸ್, ಸುಕ್ರೋಸ್, ಗ್ಲುಕೋಸ್ ಮತ್ತು ಫ್ರುಕ್ಟೋಸ್‌ಗಳ ಮಟ್ಟವು ಕ್ರಮವಾಗಿ (ಮಿಗ್ರಾಂ%) 80.8 ಮತ್ತು 22.5, 74.9 ಮತ್ತು 22.5 ಆಗಿದ್ದವು. ತಾಜಾ ಎಲೆಗಳಿಗಿಂತ ವಿವಿಧ ತಳಿಯ ಸಂಸ್ಕರಿಸಿದ ಎಲೆಗಳಲ್ಲಿ ಪೌಷ್ಠಿಕಾಂಶ ವಿರೋಧಿ ಅಂಶಗಳು (ಗ್ಲುಕೋಸೈನೋಲೇಟ್ಸ್) ಕಡಿಮೆ ಇದ್ದವು.

**ಮೊರಿಂಗಾ ಎಲೆಯ ಪ್ರೋಟೀನ್** (ಭಾಸ್ಕರನ್ ವಿ, ಗೋವಿಂದರಾಜು ಕೆ)

ಪಿಎಚ್ ಹೊಂದಾಣಿಕೆಯಿಂದ ಮತ್ತು ಬೇರ್ಪಡಿಸುವಿಕೆಯ ಪ್ರಕ್ರಿಯೆಯಿಂದ ಮೊರಿಂಗಾ ಎಲೆಯ ಪ್ರೋಟೀನ್ ಅನ್ನು ಕ್ಷಾರ ಕರಗುವಿಕೆಯ ಕ್ರಿಯೆಯಿಂದ ಬೇರ್ಪಡಿಸಲಾಯಿತು. ಪ್ರೋಟೀನ್ ಅವಕ್ಷೇಪವನ್ನು (8–9%) ನೀರಿನಲ್ಲಿ ಕರಗಿಸಲಾಯಿತು ಮತ್ತು ಅದರ ಕರಗುವ ಪ್ರೋಟೀನ್ ಅಂಶವನ್ನು ವಿಶ್ಲೇಶಿಸಲಾಯಿತು (4–5 ಗ್ರಾಂ). ಇಡೀ ಎಲೆಯ ತೇವಾಂಶ ಮತ್ತು ಪ್ರೋಟೀನ್ ಅಂಶವು 76.82% ಮತ್ತು 7.8–8.8% ವ್ಯಾಪ್ತಿಯಲ್ಲಿ ಕಂಡುಬಂದವು. ಆದರೆ, ವಿವಿಧ ಪಿಎಚ್‌ಗಳಲ್ಲಿ ಕರಗುವ ಪ್ರೋಟೀನ್ ಅಂಶವು 3–5% ಗಳ (ಇಳುವರಿ 23–38%) ವ್ಯಾಪ್ತಿಯಲ್ಲಿ ಕಂಡುಬಂದಿತು. ವಿವಿಧ ಪಿಎಚ್‌ಗಳಲ್ಲಿ ನೀರಿನಲ್ಲಿ ಪ್ರೋಟೀನ್ ಕರಗುವಿಕೆಯು 39–55% ವ್ಯಾಪ್ತಿಯಲ್ಲಿದ್ದು, 39% ಕನಿಷ್ಠ ಕರಗುವಿಕೆ ಹೊಂದಿತ್ತು. 1ಎಮ್ ಸೋಡಿಯಮ್ ಕ್ಲೋರೈಡ್‌ನಲ್ಲಿ ಪ್ರೋಟೀನ್ ಕರಗುವಿಕೆಯು 46–63% ಆಗಿತ್ತು. ಪಿಎಚ್ 4.0 ನಲ್ಲಿ ಕನಿಷ್ಠ ಕರಗುವಿಕೆಯು 46.7% ಆಗಿತ್ತು. ಅಧ್ಯಯನವು ತೋರಿಸಿದ್ದೇನೆಂದರೆ, ಐಸೋಎಲೆಕ್ಟ್ರಿಕ್ ಪಿಎಚ್‌ನಲ್ಲಿ ಪ್ರೋಟೀನ್ ಕರಗುವಿಕೆಯು ಹೆಚ್ಚಾಗಿರುತ್ತದೆ.




**ಮೊರಿಂಗಾ ಎಲೆಯ ಪ್ರೋಟೀನ್ ಆಧಾರಿತ ಆರೋಗ್ಯ ಆಹಾರ** (ಭಾಸ್ಕರನ್ ವಿ, ಆನಂದರಾಮಕೃಷ್ಣನ್ ಸಿ)

ಮೊರಿಂಗಾ ಎಲೆಗಳಿಂದ ಬಿ–ಕೆರೋಟೀನ್, ಲ್ಯುಟೀನ್ (ಕಣ್ಣಿನ ರಕ್ಷಣಾತ್ಮಕ ಕೆರೋಟಿನೋಯ್ಡ್‌ಗಳು) ಮತ್ತು ಕರಗುವ ಪ್ರೋಟೀನ್ ಅನ್ನು ತಯಾರಿಸಲಾಯಿತು. ರಾಗಿ ಮತ್ತು ಬಾರ್ಲಿ ಮಾಲ್ಟ್ ಆಧಾರಿತ ತುಂತುರು ಒಣಗಿಸಿದ ಪೌಷ್ಠಿಕ ಆಹಾರಗಳನ್ನು ಪೈಲಟ್ ಸಸ್ಯ ಪ್ರಮಾಣಗಳಲ್ಲಿ ಕೆರೋಟಿನೋಯ್ಡ್ಸ್ ಮತ್ತು ಪ್ರೋಟೀನ್ ಜೊತೆಗೆ ಅಭಿವೃದ್ಧಿಪಡಿಸಲಾಯಿತು. ಉತ್ಪನ್ನಗಳಿಗೆ ಉಳಿದ ಅಗತ್ಯ ಪೋಷಕಾಂಶಗಳನ್ನು ಪೂರೈಸಲಾಯಿತು. ಪ್ರೋಟೀನ್, ಕಾರ್ಬೋಹೈಡ್ರೇಟ್, ಪ್ರೊವಿಟಾಮಿನ್ ಎ ಮತ್ತು ಲ್ಯುಟೀನ್ ಗಳನ್ನು




ಮೊರಿಂಗಾ ಎಲೆ ಮತ್ತು ರಾಗಿ ಹಿಟ್ಟಿನಿಂದ ಪಡೆಯಲಾಗಿದೆ. ಇದು ಉತ್ಪನ್ನದ ಅನನ್ಯತೆಯಾಗಿದೆ. ಉತ್ಪನ್ನದ ವೆಚ್ಚವು ಉಳಿದ ಯಾವುದೇ ವಾಣಿಜ್ಯ ಸೂತ್ರಗಳಿಗಿಂತ ಅತಿ ಕಡಿಮೆಯದ್ದಾಗಿದೆ.

**ನುಗ್ಗೆಕಾಯಿ ಎಲೆಗಳಿಂದ ಪ್ರೋಟೀನ್ ಹೈಡ್ರೋಲೈಸೇಟ್‌ಗಳು** (ಸಿಂಧು ಕನ್ಯಾ ಟಿಸಿ)

ನುಗ್ಗೆಕಾಯಿ ಎಲೆಗಳಿಂದ ಪ್ರೋಟೀನ್ ಹೈಡ್ರೋಲೈಸೇಟ್‌ಗಳನ್ನು ನಿಯಂತ್ರಿತ ಹೈಡ್ರೊಲಿಸಿಸ್ ಜೊತೆಗೆ ಸಾಧಿಸಲಾಯಿತು. ಸಂಯುಕ್ತ ಐಸೊಲೇಟ್‌ಗಳು ಸುಮಾರು 60% ಪ್ರೋಟೀನ್ ಅನ್ನು ಒಳಗೊಂಡಿವೆ. ಪರಿಸ್ಥಿತಿಗಳ ಗುಣಮಟ್ಟದ ನಂತರ ಅವುಗಳನ್ನು, ನಿರ್ದಿಷ್ಟ ಸಮಯದವರೆಗೆ ಕ್ಷಾರೀಯ ಪಿಎಚ್ 8.0ನಲ್ಲಿ ಶಿಲೀಂಧ್ರ ಪ್ರೋಟಿಯೇಸಸ್ ಬಳಸಿ ಜಲವಿಚ್ಛೇದನೆಗೊಳಿಸಲಾಯಿತು. ಅಮೈನೊ ಆಮ್ಲದ ಸಂಯೋಜನೆಯ ವಿಶ್ಲೇಷಣೆಯು ಎಲ್ಲಾ ಅಮೈನೊ ಆಮ್ಲಗಳು ಅಗತ್ಯ ಪ್ರಮಾಣದಲ್ಲಿ ಇವೆ ಎಂಬುದನ್ನು ಬಹಿರಂಗಪಡಿಸಿತು. ಮೊರಿಂಗಾ ಪ್ರೋಟೀನ್ ಗಳ ಮೇಲಿನ ಅಧ್ಯಯನವು ಬಹಿರಂಗಪಡಿಸಿದ್ದೇನೆಂದರೆ,

ಟ್ರಿಸ್–ಹೈಡ್ರೊಕ್ಲೋರಿಕ್ ಆಮ್ಲದಲ್ಲಿ (ಪಿಎಚ್ 8.0) ಸುಲಭವಾಗಿ ಕರಗುವ ಅಮೋನಿಯಮ್ ಪ್ರೆಸಿಪಿಟೇಶನ್‌ನಿಂದ ಒಟ್ಟೂ ಪ್ರೋಟೀನ್ ನ 59.3% ಪ್ರತ್ಯೇಕೀಕರಣ ಸಾಧ್ಯ. ಅಲ್ಕಲೇಸ್ ಚಿಕಿತ್ಸೆಯು ಪ್ರೋಟೀನ್ ವಿಘಟನೆಯ ಸ್ಪಷ್ಟ ಸೂಚನೆಯನ್ನು ನೀಡಿತು. ಇವುಗಳನ್ನು ಎಸ್‌ಡಿಎಸ್–ಪಿಎಜಿಇ ಸೂಚಿಸುವ ಹೆಚ್ಚಿನ ಕರಗುವಿಕೆಯನ್ನು ಹೊಂದಿರುವ ಜೊತೆಗೆ ಪೆಪ್ಟೈಡ್‌ಗಳ ಸಣ್ಣ ಸರಪಳಿಯ ರಚನೆಯು ಬಹಿರಂಗಪಡಿಸಿತು. ನಂತರ, ಕಿಣ್ವಗಳ ಚಟುವಟಿಕೆಗಳಾದ ಎ–ಮೆನೋಸೈಡೇಸ್, ಎ–ಗೆಲೆಕ್ಟೋಸೈಡೇಸ್, ಬಿ–ಗ್ಲುಕೊಸೈಡೇಸ್ ಮತ್ತು ಬಿ–ಗ್ಲುಕ್ಯುರೋನಿಡೇಸ್ ಇವುಗಳು ನೀರು, ಸೋಡಿಯಮ್ ಕ್ಲೋರೈಡ್ ಮತ್ತು ಟ್ರಿಸ್/ಸುಕ್ರೋಸ್ ಸಾರಗಳಲ್ಲಿ ಕಂಡುಬಂದವು ಮತ್ತು ಅವುಗಳು ಭಿನ್ನವಾಗಿ ಪಡೆದವುಗಳೆಂದು ತೋರಿಸಲ್ಪಟ್ಟಿತು. ಪುಷ್ಟೀಕರಿಸಿದ ಮೈಕ್ರೊನ್ಯೂಟ್ರಿಯಂಟ್ ಗಳು ಮತ್ತು ವರ್ಧಿತ ಜೈವಿಕ ಲಭ್ಯತೆಯ ಜೊತೆಗೆ ಪ್ರೋಟೀನ್ ಮಿಶ್ರಣ ತಯಾರಿಕೆಯನ್ನು ಸಾಧಿಸಲಾಯಿತು. ಪೂರಕ ಆಹಾರ ಮಿಶ್ರಣದಲ್ಲಿರುವ ಸ್ಥಳೀಯ ಫೈಟೇಸ್ ಅನ್ನು ಸಕ್ರಿಯಗೊಳಿಸುವ ಮತ್ತು ಒಂದರಿಂದ ಮೂರು ತಾಸುಗಳವರೆಗೆ ಫೈಟೇಸ್ ನ ಗರಿಷ್ಠ ಸ್ಥಿತಿಯಲ್ಲಿ ಕಾವು ಕೊಡುವುದರಿಂದ ಬಯೋಎಕ್ಸೆಸ್ಸಿಬಲ್ ಕಬ್ಬಿಣವು ಎರಡು ತಾಸುಗಳವರೆಗೆ 7–8 ಪಟ್ಟು ಹೆಚ್ಚಳವಾಯಿತು ಮತ್ತು ಅದರ ನಂತರ ಕಡಿಮೆಯಾದವು. ಸತುವಿನ ಬಯೋಎಕ್ಸೆಸ್ಸಿಬಿಲಿಟಿ ಕಬ್ಬಿಣಕ್ಕಿಂತ ತುಸು ಜಾಸ್ತಿಯಾಗಿತ್ತು. ಆದರೆ, ಇದು ಪೂರಕ ಆಹಾರ ಮಿಶ್ರಣದಲ್ಲಿ ಕಡಿಮೆ ಇತ್ತು.

### ಕಡಿಮೆ ಕ್ಯಾಲೋರಿ ಹೊಂದಿದ ಹೆಚ್ಚು ಪ್ರೋಟೀನ್ ಇರುವ ಬಟರ್ ಸ್ಪ್ರೆಡ್ (ರಾಧಾ ಸಿ)

ಆರೋಗ್ಯ ಪ್ರಜ್ಞೆಯು ಕಡಿಮೆ ಕ್ಯಾಲೋರಿ ಮತ್ತು ಕಡಿಮೆ ಕೊಬ್ಬು ಇರುವ ಆಹಾರಗಳ ಬೇಡಿಕೆಯನ್ನು ಹೆಚ್ಚಿಸಿತು. ಹೆಚ್ಚಿನ ಪ್ರೋಟೀನ್ ಮತ್ತು ಕಡಿಮೆ ಕೊಬ್ಬು/ಕ್ಯಾಲೋರಿ ಜೊತೆಗೆ ಸ್ವೀಕಾರಾರ್ಹ ಬಣ್ಣ, ಬಾಯಿಯ ಅನುಭವ, ರುಚಿ ಮತ್ತು ವಿನ್ಯಾಸ ಇರುವ ನ್ಯೂಟ್ರಿ ಸ್ಪ್ರೆಡ್ ಅನ್ನು ತಯಾರಿಸಲಾಯಿತು. ಸಂವೇದನಾ ವಿಶ್ಲೇಷಣೆಯು ಸ್ಪ್ರೆಡ್ ಇದು ಸ್ವಲ್ಪ ಉಪ್ಪು ಜೊತೆಗೆ ಅಗತ್ಯ ಕೊಬ್ಬು, ಕೆನೆ ಮತ್ತು ಬೆಣ್ಣೆಯ ಪರಿಮಳಗಳ ತೀವ್ರತೆಯನ್ನು ಹೊಂದಿತ್ತೆಂದು ತೋರಿಸುತ್ತದೆ. ಉತ್ಪನ್ನವು ಕುಕೀಸ್ ಮತ್ತು ಬ್ರೆಡ್ ಸ್ಯಾಂಡ್ವಿಚ್‌ಗಳಿಗೆ ಸ್ಪ್ರೆಡ್‌ನಂತೆ ಮಾರಾಟವಾಗಬಹುದು ಮತ್ತು ಇದು ಹೆಚ್ಚು ಸ್ವೀಕಾರಾರ್ಹವಾಗಿ ಕಂಡುಬಂದಿತು.

**ಪೌಷ್ಟಿಕಾಂಶಗಳ ಮಾಹಿತಿ (100 ಗ್ರಾಂ ಗೆ)**

| | |
|---|---|
| ಶಕ್ತಿ | 360 ಕಿಲೋ ಕ್ಯಾಲೋರಿ |
| ಪ್ರೋಟೀನ್ | 25 ಗ್ರಾಮ್ |
| ಕಾರ್ಬೋಹೈಡ್ರೇಟ್‌ಗಳು | 20 ಗ್ರಾಮ್ |
| ಕೊಬ್ಬು | 20 ಗ್ರಾಮ್ |
| ಸೋಡಿಯಮ್ | 200 ಮಿಲಿ ಗ್ರಾಮ್ |

### ಕಿಣ್ವನಗೊಳಿಸಲ್ಪಟ್ಟ ಉತ್ಪನ್ನಗಳಿಗೆ ಸಂಬಂಧಿಸಿದ ಸುರಕ್ಷಿತತೆಯ ಅಧ್ಯಯನಗಳು (ಅವಿನಾಶ್ ಪಿ ಸತ್ತೂರ್)

ಐಎಮ್‌ಟೆಇಸಿಎಚ್ (IMTECH) ಗಳಿಂದ ಪಡೆದುಕೊಳ್ಳಲ್ಪಟ್ಟ ಜಿಆರ್‌ಎಎಸ್ (GRAS) ಘಟಕಗಳನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಂಡಿರದ ಧಾನ್ಯಗಳು ಮತ್ತು ಕಾಳುಗಳ ಮೇಲೆ ಬೆಳೆಯಲಾಗುತ್ತದೆ. ಅವುಗಳಲ್ಲಿ, ಪೆನಿಸಿಲಿಯಮ್ ರೋಕ್‌ಫರ್ಟಿ ಇದನ್ನು ಕೋಡೊ ಮಿಲ್ಲೆಟ್‌ನಲ್ಲಿ ಯಶಸ್ವಿಯಾಗಿ ಬೆಳೆಯಲಾಯಿತು. ಕಿಣ್ವನಗೊಳಿಸಲ್ಪಟ್ಟ ಉದ್ಧರಣಗಳನ್ನು ಹಲವಾರು ಕಿಣ್ವ ಪ್ರತಿರೋಧಕ ಪರೀಕ್ಷೆಗಳಿಗೆ ಒಳಪಡಿಸಲಾಯಿತು, ಈ ಪರೀಕ್ಷೆಯು ಸುಧಾರಿತ ಗ್ಲೈಕೇಷನ್ ಎಂಡ್ ಪ್ರಾಡಕ್ಟ್ ಫಾರ್ಮೇಷನ್‌ಗೆ ಪ್ರತಿಯಾಗಿ ಸುಮಾರು 55% ಪ್ರತಿರೋಧಕತೆಯನ್ನು ಪ್ರದರ್ಶಿಸಿತು. ಈ ರೀತಿಯಾಗಿ ಕಿಣ್ವನಗೊಳಿಸಲ್ಪಟ್ಟ ಫಂಗಲ್ ಉತ್ಪನ್ನದ ಒಂದು ಪ್ರಾಕ್ಸಿಮೇಟ್ ಮತ್ತು ಮಿನರಲ್ ವಿಶ್ಲೇಷಣೆಯನ್ನು ನಡೆಸಲಾಯಿತು. ಕಿಣ್ವನಗೊಳಿಸಲ್ಪಟ್ಟ ನಂತರ ಮತ್ತು ಇನ್ ವಿಟ್ರೋ ಜೀರ್ಣಕಾರಿ ಪ್ರಕ್ರಿಯೆಯ ಮೇಲೆ ಮೆಟಾಬೊಲೈಟ್‌ಗಳ ಎಚ್‌ಪಿಎಲ್‌ಸಿ ಪ್ರೊಫೈಲಿಂಗ್ ಅನ್ನು ನಿರ್ವಹಿಸಲಾಯಿತು. ಕಿಣ್ವನಗೊಳಿಸುವಿಕೆಯ ಸಂದರ್ಭದಲ್ಲಿ ಎರಡು ಹೊಸ ಫ್ಲ್ಯಾವೊನಾಯ್ಡ್ ಪೀಕ್‌ಗಳು ಕಂಡುಬಂದವು ಮತ್ತು ಇವುಗಳ ಸಂಸ್ಕರಣ ಪ್ರಕ್ರಿಯೆಯು ಪ್ರಗತಿಯಲ್ಲಿದೆ. 14 ದಿನದ ಸಿಂಗಲ್ ಡೋಸ್ ನಿಖರ ವಿಷಕಾರಿತ್ವ ಅಧ್ಯಯನವನ್ನು ನಡೆಸಲಾಯಿತು, ಈ ಅಧ್ಯಯನವು ಕಿಣ್ವನಗೊಳಿಸಲ್ಪಟ್ಟ ಆಹಾರವು ಸುರಕ್ಷಿತವಾಗಿರುತ್ತದೆ ಎಂಬುದನ್ನು ತೋರಿಸಿತು.

### ಫೋಲೇಟ್ಸ್ ಇನ್ ಅರಾಬಿಡೋಪ್ಸಿಸ್ (ಭಾಗ್ಯಲಕ್ಷ್ಮೀ ಎನ್)

ಕೊತ್ತಂಬರಿಯಲ್ಲಿ ಸ್ಯಾಲಿಸೈಕ್ಲಿಕ್ ಆಮ್ಲ (ಎಸ್‌ಎ)ದ ಸಂಸ್ಕರಣೆಯು ಫೋಲೇಟ್‌ಗಳನ್ನು ವರ್ಧಿಸುತ್ತದೆ ಮತ್ತು ಅವುಗಳ ಕಟಾವು–ನಂತರದ ಸ್ಥಿರತೆ ಹಾಗೆಯೇ ಜೈವಿಕ–ಲಭ್ಯತೆಯನ್ನೂ ಕೂಡ ಸುಧಾರಿಸುತ್ತವೆ ಎಂಬುದನ್ನು ಅಧ್ಯಯನಗಳು ತೋರಿಸಿವೆ. ಈ ದೃಷ್ಟಾಂತದಲ್ಲಿ ಕಂಡುಬರುವ ಜೀನ್‌ಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯುವುದಕ್ಕೆ ಮಾದರಿ ಪ್ಲಾಂಟ್‌-ಅರಾಬಿಡೋಪ್ಸಿಸ್‌ನಲ್ಲಿ ಅಧ್ಯಯನವನ್ನು ನಡೆಸಲಾಯಿತು, ಅಲ್ಲಿ ಎಸ್‌ಎ (300 μM) ಸಂಸ್ಕರಣೆಯಲ್ಲಿ ಎಲೆಗಳ ಸಮೂಹವು ಫೋಲೇಟ್‌ಗಳ ಸಾಕಷ್ಟು ಪ್ರಮಾಣದ ವೃದ್ಧಿಯನ್ನು ಮತ್ತು ಪುನಃಕ್ರಿಯಾಶೀಲ ಆಮ್ಲಜನಕ ವಿಧಗಳ ಮಟ್ಟಗಳಲ್ಲಿ ಇಳಿಕೆಯನ್ನು ತೋರಿಸಿತು. ಅರಾಬಿಡೋಪ್ಸಿಸ್‌ನಲ್ಲಿ ಎಸ್‌ಎ ಸಂಸ್ಕರಣೆಯ ಮೈಕ್ರೋಅರೇ ಮಾಹಿತಿಯ ವಿಶ್ಲೇಷಣೆಯನ್ನು ಆಧರಿಸಿ, 19 ಜೀನ್‌ಗಳ ಅಭಿವ್ಯಕ್ತಿ ಮಾದರಿಗಳನ್ನು qPCR ಮೂಲಕ ವಿಶ್ಲೇಷಿಸಲಾಯಿತು, ಫೋಲೇಟ್ ಜೈವಿಕವಿಶ್ಲೇಷಣಾ ಜೀನ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ–ನಿಯಂತ್ರಣವನ್ನು ಹೊಂದಿರುತ್ತವೆ, ಹಾಗೆಯೇ ಫೋಲೇಟ್ ಸ್ಥಿರೀಕರಣ ಜೀನ್‌ಗಳು ಅಪ್–ರೆಗ್ಯುಲೇಟೆಡ್ ಆಗಿರುತ್ತವೆ, ಮುಖ್ಯವಾಗಿ ಪ್ಲಾಂಟ್ ಫೋಲೇಟ್ ನಿರ್ಬಂಧದಲ್ಲಿ (At5G27830) ಪ್ಯುಟೇಟೀವ್ ಆಗಿರುತ್ತದೆ ಎಂಬುದನ್ನು ಈ ಅಧ್ಯಯನವು ಬಹಿರಂಗಪಡಿಸಿತು. ಪ್ಲಾಂಟ್ ಫೋಲೇಟ್ ನಿರ್ಬಂಧಕ ಪ್ರೋಟೀನ್‌ನ ಈ ಹೊಸ ಮಾಹಿತಿಯು ಫೋಲೇಟ್ ಚಯಾಪಚಯ ಇಂಜಿನಿಯರಿಂಗ್‌ಗೆ ಅದರಲ್ಲಿಯೂ ಮುಖ್ಯವಾಗಿ ಎಲೆಗಳಿಂದ ಕೂಡಿದ ತರಕಾರಿಗಳಿಗೆ ಒಂದು ಗುರಿಯಾಗಿ ಕಾರ್ಯನಿರ್ವಹಿಸುತ್ತದೆ.

### ಬಯೋಸೆನ್ಸಾರ್ಸ್ ಫಾರ್ ಫುಡ್ ಕ್ವಾಲಿಟಿ ಮಾನಿಟರಿಂಗ್ (ಆಹರ ಗುಣಮಟ್ಟ ನಿರ್ದೇಶನಕ್ಕೆ ಜೈವಿಕಸಂವೇದಕಗಳು) (ಠಾಕೂರ್ ಎಮ್‌ಎಸ್)

ಫೈರ್‌ಫ್ಲೈ ಮತ್ತು ಬ್ಯಾಕ್ಟೀರಿಯಲ್ ವ್ಯವಸ್ಥೆಯಿಂದ ಬಯೋಫೋಟಾನ್ ಉತ್ಪಾದನೆಗೆ ಕಿಣ್ವಗಳ ಪ್ರತ್ಯೇಕಗೊಳಿಸುವಿಕೆ ಮತ್ತು ಶುದ್ಧೀಕರಣವನ್ನು ನಿರ್ವಹಿಸಲಾಯಿತು. ಜೊತೆಗೆ ಜೈವಿಕರಾಸಾಯನಿಕ ಬಯೋಫೋಟಾನ್ ಉತ್ಪಾದನೆಯ ಜೈವಿಕರಾಸಾಯನಿಕ ಅಂಶಗಳು ಮತ್ತು ಸನ್ನಿವೇಶಗಳ ಗರಿಷ್ಠೀಕರಣವನ್ನು ಕೂಡ ನಿರ್ವಹಿಸಲಾಯಿತು. ಆಯ್ದ ಆಹಾರಜನ್ಯ ಬ್ಯಾಕ್ಟೀರಿಯಲ್ ವಿಷಕಾರಿಗಳ (ಅಫ್ಲಾಟಾಕ್ಸಿನ್ ಮತ್ತು ಸ್ಟ್ಯಾಫಿಲೋಕೋಕಸ್ ಎಂಟರೋಟಾಕ್ಸಿನ್ ಬಿ) ವಿರುದ್ಧ ಆ್ಯಂಟಿಬಾಡಿಗಳನ್ನು ಉತ್ಪಾದಿಸುವುದು, ಕ್ವಾಂಟಮ್ ಡಾಟ್‌ಗಳ ವಿಶ್ಲೇಷಣೆ ಮತ್ತು ಗೋಲ್ಡ್ ನ್ಯಾನೋಪಾರ್ಟಿಕಲ್‌ಗಳ ಕಾರ್ಯಗಳನ್ನು ನಿರ್ವಹಿಸಲಾಯಿತು. ಮಾಂಸ, ಮೀನು ಹಾಲು ಈ ಮುಂತಾದ ಉತ್ಪನ್ನಗಳ ಮೈಕ್ರೋಬಿಯಾಲ್ ಗುಣಮಟ್ಟ ಮತ್ತು ತಾಜಾತನವನ್ನು

ನಿರ್ಧರಿಸುವುದಕ್ಕೆ ಹಾಗೆಯೇ ಆಹಾರ ಶುಚಿತ್ವ/ನೈರ್ಮಲ್ಯವನ್ನು ನಿಯಂತ್ರಿಸುವುದಕ್ಕೆ ಬಯೋಲ್ಯುಮಿನೆಸೆನ್ಸ್ (ಜೈವದೀಪ್ತಿ) ಅನ್ನು ಆಧರಿಸಿದ ಪ್ರೋಟೋಟೈಪ್ ಜೈವಿಕಸಂವೇದಕದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಯಿತು. ಇದರ ಜೊತೆಗೆ, ಸಾಂಪ್ರದಾಯಿಕ ತಂತ್ರಜ್ಞಾನಗಳು ಮತ್ತು ಸಂಸ್ಕರಿತ ಮೀನಿನ ಮಾದರಿಗಳಲ್ಲಿ ಫಾರ್ಮಲ್‌ಡೀಹೈಡ್‌ನ ನಿಯಂತ್ರಣದ ಜೊತೆಗೆ ಜೈವಿಕಸಂವೇದಕಗಳ ಫಲಿತಾಂಶಗಳ ಸ್ಥಿರೀಕರಣವನ್ನೂ ಕೂಡ ನಿರ್ವಹಿಸಲಾಯಿತು.

**ಗಾರ್ಡನ್ ಕ್ರೆಸ್ ಸೀಡ್ ಆಯಿಲ್ (ಅಖಿಲೇಂದರ್ ನಾಯ್ಡು ಕೆ)**




7 ವಾರಗಳವರೆಗೆ 10% ರೈಸ್ ಬ್ರಾನ್ ಆಯಿಲ್, ಗಾರ್ಡನ್ ಕ್ರೆಸ್ ಆಯಿಲ್ ಮತ್ತು ಸೂರ್ಯಕಾಂತಿ ಎಣ್ಣೆಯ ಜೊತೆಗೆ ಒಂದು ಐಸೋ–ಕ್ಯಾಲರಿಕ್ ಆಹಾರ ಪೂರಕ ಅಂಶವನ್ನು ಹೊಂದಿರುವ ಆಹಾರಗಳನ್ನು ತಿನ್ನಿಸಲ್ಪಟ್ಟ ಇಲಿಗಳಲ್ಲಿ ಅಲ್ಸರೇಟೀವ್ ಕಲೈಟೀಸ್ ಅನ್ನು ಪ್ರಚೋದಿಸುವ ಮೂಲಕ ಜೊತೆಗೆ ಆಹಾರಯೋಗ್ಯ ಎಣ್ಣೆಗಳು ಮತ್ತು ಇದರ ಕ್ರಿಯೆಯ ಯಾಂತ್ರಿಕತೆಯನ್ನು ಬಳಸಿಕೊಂಡು ಅಲ್ಸರೇಟೀವ್ (ವ್ರಣವನ್ನುಂಟುಮಾಡುವಂತಹ) ಕಲೈಟೀಸ್‌ನ ಉತ್ತಮಗೊಳಿಸುವಿಕೆಯ ಅಧ್ಯಯನಗಳನ್ನು ನಡೆಸಲಾಯಿತು.

ಇಲಿಗಳಲ್ಲಿ ಕೊಲಾನಿಕ್ (ದೊಡ್ಡ ಕರುಳಿನ) ಅಂಗಾಂಶಗಳ ಹಿಸ್ಟೋಪ್ಯಾಥಲಾಜಿಕಲ್ ಚಿತ್ರಣ. (ಎ) ಹೀಮೋಟಾಕ್ಸಿನ್ ಮತ್ತು ಇಯೋಸಿನ್ (H&E) x 40 ಒರಿಜಿನಲ್ ಮ್ಯಾಗ್ನಿಫಿಕೇಷನ್ ಮೂಲಕ ಗುರುತಿಸಲ್ಪಟ್ಟ ನಿಯಂತ್ರಿತ ಇಲಿಗಳ ಸಾಮಾನ್ಯ ದೊಡ್ಡಕರುಳಿನ ಲೋಳೆ ಪೊರೆ. (ಬಿ) ಎಸ್‌ಎಫ್‌ಒ ತಿನಿಸಲ್ಪಟ್ಟ ಡಿಎಸ್‌ಎಸ್ ಇಲಿಗಳ (H&E) x 40 ಸಾಮಾನ್ಯ ದೊಡ್ಡಕರುಳಿನ ಲೋಳೆಪೊರೆ, ಇದು ಹೆಚ್ಚಿನ ಪ್ರಮಾಣದ ನ್ಯೂಟ್ರೋಫಿಲ್ಸ್ ಅಂತರ್ವ್ಯಾಪನ ಮತ್ತು ಗಾಬ್ಲಿಟ್ (goblet) ಕೋಶಗಳ ನಶಿಸುವಿಕೆಯನ್ನು ಪ್ರತಿಬಿಂಬಿಸುತ್ತದೆ. (ಸಿ) ಆರ್‌ಬಿಒ ತಿನಿಸಲ್ಪಟ್ಟ ಡಿಎಸ್‌ಎಸ್ ಇಲಿಗಳ (H&E) x 40 ದೊಡ್ಡಕರುಳಿನ ಲೋಳೆಪೊರೆಯು ಸಣ್ಣ ಪ್ರಮಾಣದ ನ್ಯೂಟ್ರೋಫಿಲ್ಸ್ ಅಂತರ್ವ್ಯಾಪನವನ್ನು ಪ್ರದರ್ಶಿಸುತ್ತದೆ ಮತ್ತು ಡಿಎಸ್‌ಎಸ್ ಪ್ರಚೋದಿತ ದೊಡ್ಡಕರುಳಿನ ನಶಿಸುವಿಕೆಯಿಂದ ಸುರಕ್ಷಿತವಾಗಿರುತ್ತದೆ. (ಡಿ) ಜಿಸಿಒ ತಿನಿಸಲ್ಪಟ್ಟ ಡಿಎಸ್‌ಎಸ್ ಇಲಿಗಳ ದೊಡ್ಡಕರುಳಿನ ಲೋಳೆಪೊರೆಯು ಮಧ್ಯಮ ಪ್ರಮಾಣದ ಕೋಶ ಅಂತರ್ವ್ಯಾಪನವನ್ನು ಮತ್ತು ಗಾಬ್ಲಿಟ್ ಕೋಶಗಳ ಸಣ್ಣ ಪ್ರಮಾಣದ ನಶಿಸುವಿಕೆಯನ್ನು ಪ್ರತಿಬಿಂಬಿಸುತ್ತದೆ.

ಸೂರ್ಯಕಾಂತಿ ಎಣ್ಣೆಯ ಗುಂಪಿಗೆ ಹೋಲಿಸಿ ನೋಡಿದಾಗ ರೈಸ್ ಬ್ರಾನ್ ಎಣ್ಣೆ ಮತ್ತು ಗ್ರಾಸ್ ಕ್ರೆಸ್ ಎಣ್ಣೆ ಇವುಗಳು ದೇಹದ ತೂಕವನ್ನು ಕಡಿಮೆಗೊಳಿಸುವುದಕ್ಕೆ, ದೊಡ್ಡಕರುಳಿನ ಗಾತ್ರವನ್ನು ಕುಗ್ಗಿಸುವುದಕ್ಕೆ, ಅಸ್ವಸ್ಥ ಚಟುವಟಿಕೆ ಸೂಚ್ಯಂಕ ಮತ್ತು ಮ್ಯಾಕ್ರೋಸ್ಕೋಪಿಕ್ ಮತ್ತು ಮೈಕ್ರೋಸ್ಕೋಪಿಕ್ ಕೊಲೈಟೀಸ್ ಅಂಶಗಳಿಗೆ ಸಂಬಂಧಿಸಿದಂತೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ. ಈ ಬದಲಾವಣೆಗಳು ದೊಡ್ಡಕರುಳಿನ ಸ್ವರೂಪ, ದೊಡ್ಡಕರುಳಿನ ಚಟುವಟಿಕೆಯಲ್ಲಿ ಗಮನಾರ್ಹವಾದ ಇಳಿಕೆ, ಆ್ಯಂಟಿಆಕ್ಸಿಡೆಂಟ್ ಕಿಣ್ವಗಳ ಮತ್ತು ದೊಡ್ಡಕರುಳಿನಲ್ಲಿ ಗ್ಲುಥಾಟಿಯೋನ್ ರಿಡಕ್ಟೇಸ್ ಮಟ್ಟಗಳನ್ನು ಗಣನೀಯ ಪ್ರಮಾಣದ ಪುನಃಸ್ಥಾಪನೆಯ ಜೊತೆಗೆ ಮ್ಯಾಲಂಡಿಯಾಲ್ಡೀಹೈಡ್ ಮಟ್ಟಗಳ ಭೇದನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ತಮಗೊಳಿಸುವಿಕೆಯ ಜೊತೆಗೆ ಸಂಬಂಧಿತವಾಗಿವೆ. ಅದಕ್ಕೂ ಹೆಚ್ಚಾಗಿ, ಇಲಿಗಳಲ್ಲಿ, ರೈಸ್ ಬ್ರಾನ್ ಆಯಿಲ್ ಮತ್ತು ಗ್ರಾಸ್ ಕ್ರೆಸ್ ಆಯಿಲ್ ನಿಗ್ರಹಿತ ಡೆಕ್ಸ್ಟ್ರಾನ್ ಸೋಡಿಯಮ್ ಸಲ್ಫೇಟ್ ಇದು ಇನ್‌ಫ್ಲಾಮೇಟರಿ ಮಾಧ್ಯಮಗಳಾದ ಎನ್‌ಒ, ಲ್ಯೋಕೋಟ್ರೀನ್ ಬಿ4 ಮತ್ತು ಪ್ರೋ–ಇನ್‌ಫ್ಲಾಮೇಟರಿ ಸೈಟೋಕೈನ್ ಟಿಎನ್‌ಎಫ್– ಕೊಲೈಟೀಸ್ ಉತ್ಪಾದನೆಗೆ ಪ್ರಚೋದನೆಯನ್ನು ಒದಗಿಸುತ್ತದೆ. ಸೀರಮ್ ಮತ್ತು ಮ್ಯೂಕೋಸದ ಕೊಬ್ಬಿನ ಆಮ್ಲದ ಅಂಶಗಳು ತೆಗೆದುಕೊಳ್ಳಲ್ಪಟ್ಟ ಆಹಾರದ ಎಣ್ಣೆಗಳ ಕೊಬ್ಬಿನ ಆಮ್ಲಗಳ ಸಂಯೋಜನೆಯನ್ನು ಪ್ರತಿಬಿಂಬಿಸಿದವು. ರೈಸ್ ಬ್ರಾನ್ ಆಯಿಲ್ ಮತ್ತು ಗ್ರಾಸ್ ಕ್ರೆಸ್ ಆಯಿಲ್‌ಗಳ ಪೂರೈಕೆಯು ಪ್ರಾಯೋಗಿಕವಾಗಿ ಪ್ರಚೋದಿಸಲ್ಪಟ್ಟ ಅಲ್ಸರೇಟೀವ್ ಕೊಲೈಟೀಸ್‌ನಲ್ಲಿ ಇನ್‌ಫ್ಲಾಮೇಟರಿ ಮಧ್ಯಮಗಳಾದ TNF-á, LTB4 ಮತ್ತು ಆಕ್ಸಿಡೇಟೀವ್ ಒತ್ತಡವನ್ನು ಬದಲಾಯಿಸುವಲ್ಲಿ ಪ್ರಯೋಜನಕಾರಿಯಾದ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಈ ಫಲಿತಾಂಶಗಳು ಸೂಚಿಸುತ್ತವೆ.

**ಹೆಲ್ತ್ ಫುಡ್ಸ್ ಫ್ರಾಮ್ ಕೋಕೋನಟ್ (ತೆಂಗಿನಕಾಯಿಯಿಂದ ಆರೋಗ್ಯಕರ ಆಹಾರಗಳು) (ಗೋಪಾಲಕೃಷ್ಣ ಎಜಿ)**

ತೆಂಗಿನಕಾಯಿ ನೀರಿನ ಘನಭಾಗಗಳು, ತೆಂಗಿನಕಾಯಿ ತಿರುಳು, ತೆಂಗಿನಕಾಯಿ ಕೇಕ್ ಮತ್ತು ತೆಂಗಿನಕಾಯಿ ಕೇಕ್ ಟೆಸ್ಟಾ ಪುಡಿ ಇವುಗಳನ್ನು ಆಧರಿಸಿ ಅಭಿವೃದ್ಧಿಗೊಳಿಸಲ್ಪಟ್ಟ ಆರೋಗ್ಯಕರ ಆಹಾರದ ದಾಸ್ತಾನು ಅಧ್ಯಯನಗಳನ್ನು ಸಂಪೂರ್ಣಗೊಳಿಸಲಾಗಿದೆ ಮತ್ತು ಕೋಣೆಯ ಉಷ್ಣಾಂಶದಲ್ಲಿ / ತೇವಾಂಶ ಸನ್ನಿವೇಶಗಳಲ್ಲಿ (27$^{o}$C/65%RH) ಕನಿಷ್ಠ ಪಕ್ಷ 6 ತಿಂಗಳ ಷೆಲ್ಫ್ ಲೈಫ್ ಅನ್ನು ಹೊಂದಿರುವುದು ಕಂಡುಬಂದಿದೆ.

ಕಚ್ಚಾ ಮತ್ತು ಬೇಯಿಸಲ್ಪಟ್ಟ ಕೊಪ್ರ (ಕೊಬ್ಬರಿ)ದ ಪೌಷ್ಟಿಕಾಂಶದ ಸಂಯುಕ್ತವನ್ನು ಪರೀಕ್ಷೆಗೆ ಒಳಪಡಿಸಲಾಯಿತು, ಇದು ತೇವಾಂಶ, ಕೊಬ್ಬು, ಬೂದಿ, ಕಚ್ಚಾ ಫೈಬರ್, ಪ್ರೋಟೀನ್, ಕಾರ್ಬೋಹೈಡ್ರೇಟ್‌ಗಳು ಮತ್ತು ಖನಿಗಳನ್ನು ಒಳಗೊಳ್ಳುತ್ತದೆ. ಎಲ್ಲಾ ಖನಿಜಗಳಲ್ಲಿ ಪೋಟಾಸಿಯಮ್ ಪ್ರಮಾಣವು ಹೆಚ್ಚಾಗಿರುವುದು ಕಂಡುಬಂದಿತು. ವರ್ಜಿನ್ ಕೋಕೋನಟ್ ಆಯಿಲ್ ಇಂಡಸ್ಟ್ರಿಯಿಂದ ಪಡೆದುಕೊಂಡ ಬಲಿತ ತೆಂಗಿನಕಾಯಿ ಮತ್ತು ಕೋಕೋನಟ್ ಆಯಿಲ್ ಇಂಡಸ್ಟ್ರಿಯಿಂದ ಪಡೆದುಕೊಂಡ ಕೊಪ್ರಾ ಕೇಕ್‌ಗಳ ಕಂದುಬಣ್ಣದ ಮೇಲ್ಮೈಯಲ್ಲಿ ಕಂಡುಬರುವ ಫಿನೋಲಿಕ್ ಸಂಯುಕ್ತಗಳನ್ನು ತ್ಯಾಜ್ಯ ಎಂಬುದಾಗಿ ಪರಿಗಣಿಸಲಾಗುತ್ತದೆ/ಉದ್ದಿಮೆಯ ಉಪ–ಉತ್ಪನ್ನಗಳನ್ನು ಆರೋಗ್ಯಕ್ಕೆ ಸಂಬಂಧಿಸಿದ ಆಹಾರ ಪದಾರ್ಥಗಳನ್ನು ತಯಾರಿಸುವುದಕ್ಕೆ ಉಪಯೋಗಿಸಲಾಗುತ್ತದೆ.

**ಪ್ರೊಬಯೋಟಿಕ್ ಆಗಿ ಬ್ಯಾಸಿಲಸ್ ಎಸ್‌ಪಿ. (ಶೋಭಾ ರಾಣಿ ಪಿ)**

ಕಚ್ಚಾ ಹಾಲು ಮತ್ತು ಮಣ್ಣಿನ ಮಾದರಿಗಳಿಂದ ಹಲವಾರು ವಿಧದ ಬ್ಯಾಸಿಲಸ್ ಸ್ವರೂಪಗಳನ್ನು ಪ್ರತ್ಯೇಕಗೊಳಿಸಲಾಯಿತು ಮತ್ತು ಅವುಗಳ ಪ್ರೊಬಯೋಟಿಕ್ ಪರಿಣಾಮಗಳಿಗಾಗಿ ಪರಿಶೀಲನೆಯನ್ನು ನಡೆಸಲಾಯಿತು. ಆ್ಯಂಟಿಮೈಕ್ರೋಬಿಯಲ್, ಆ್ಯಂಟಿಆಕ್ಸಿಡೆಂಟ್ ಮತ್ತು

ಎಂಜಿಮ್ಯಾಟಿಕ್ ಅಧ್ಯಯನಗಳನ್ನು ಒಳಗೊಂಡಂತೆ ಆಯ್ದ ಮಾದರಿಗಳಲ್ಲಿ ಕಾರ್ಯಾತ್ಮಕ ಅಂಶಗಳ ಬಗ್ಗೆ ಅಧ್ಯಯನಗಳನ್ನು ನಡೆಸಲಾಯಿತು. ಸಂಭಾವ್ಯ ಮಾದರಿಗಳನ್ನು ಜೈವಿಕರಾಸಾಯನಿಕ ಲಕ್ಷಣ ವರ್ಗೀಕರಣ, 16S rDNA ಸೀಕ್ವೆನ್ಸಿಂಗ್ ಮತ್ತು ಎಫ್‌ಎಎಮ್‌ಇ ವಿಶ್ಲೇಷಣೆಯ ಮೂಲಕ ಬಿ. ಮೆಗಾಟೆರಿಯಮ್, ಬಿ. ಫ್ಲೆಕ್ಸಸ್, ಬಿ. ಲಿಚೆನಿಫೋರ್ಮಿಸ್ ಮತ್ತು ಬಿ. ಸಬ್ಟೈಲಿಸ್ ಎಂಬುದಾಗಿ ಗುರುತಿಸಲಾಯಿತು. ಆ್ಯಂಟಿಮೈಕ್ರೋಬಿಯಲ್ ಸಂಯುಕ್ತವನ್ನು ಅಮೋನಿಯಮ್ ಸಲ್ಫೇಟ್ ಸ್ಯಾಚುರೇಷನ್ ಮತ್ತು ಅಯಾನ್ ವಿನಿಮಯ ಕ್ರೊಮಾಟೋಗ್ರಫಿಯ ಮೂಲಕ ಭಾಗಶಃ ಶುದ್ಧೀಕರಿಸಲಾಯಿತು. ಇದು ಪಿಎಚ್ (pH (2–10)) ನ ವ್ಯಾಪಕ ವ್ಯಾಪ್ತಿಯೊಳಕ್ಕೆ ಕ್ರಿಯಾಶೀಲವಾಗಿತ್ತು ಮತ್ತು 90°C ಉಷ್ಣಾಂಶದಲ್ಲಿಯೂ ಕೂಡ ಸ್ಥಿರವಾಗಿತ್ತು. ಆಯ್ದ ವಿಧಗಳನ್ನು ಬೈಲ್, ಕೊಲೆಸ್ಟರಾಲ್ ಆಕ್ಸಿಡೇಸ್ ಮತ್ತು ಕೊಲೆಸ್ಟರಾಲ್ ಅಸಿಮಿಲೇಷನ್ ವಿಧಾನದ ಜೊತೆಗೆ ಕೋ–ಪರ್ಸಿಪಿಟೇಷನ್ ಮೂಲಕ ಕೊಲೆಸ್ಟರಾಲ್ ಅನ್ನು ಕಡಿಮೆಗೊಳಿಸುವ ಪರಿಣಾಮವನ್ನು ಕಂಡುಹಿಡಿಯುವುದಕ್ಕೂ ಕೂಡ ಅಧ್ಯಯನಗಳನ್ನು ಕೈಗೊಳ್ಳಲಾಯಿತು. ಕೊಲೆಸ್ಟರಾಲ್ ಅನ್ನು ಕಡಿಮೆಗೊಳಿಸುವುದಕ್ಕೆ CDM4-3c (B. flexus1) ಸೂಚಿತ ಕೊಲೆಸ್ಟರಾಲ್ ಆಕ್ಸಿಡೇಸ್ (2.5 U), ಹಾಗೆಯೇ ಬೈಲ್ (ಪಿತ್ತರಸ)ನ ಅಸ್ತಿತ್ವವನ್ನು ತಿಳಿದುಕೊಳ್ಳುವುದಕ್ಕೆ CDM3-1 (B. flexus2) ಅನ್ನು ಕೋ–ಪರ್ಸಿಪಿಟೇಷನ್‌ಗೆ ಒಳಪಡಿಸಲಾಯಿತು. Csm1-1a (B. licheniformis) ಇದು ಗರಿಷ್ಠ ಪ್ರಮಾಣದಲ್ಲಿ (42%) ಕೊಲೆಸ್ಟರಾಲ್ ಕಡಿಮೆಗೊಳಿಸುವಿಕೆಯನ್ನು ಪ್ರದರ್ಶಿಸಿತು.

**ಹೈಪೋ ಇಮ್ಯುನೋಜೆನಿಕ್ ಗೋಧಿ ಆಧಾರಿತ ಆಹಾರ ಉತ್ಪನ್ನಗಳು (ಪ್ರಭಾಶಂಕರ್ ಪಿ)**

ವಾಣಿಜ್ಯವಾಗಿ ಲಭ್ಯವಿರುವ ಗೋಧಿ ಮಿಲ್ಡ್ ಮಾದರಿಗಳಾದ ಟಿ. ಆ್ಯಸ್ಟಿವಮ್ ಆಟ್ಟಾ (ಇಡಿ ಗೋಧಿ ಹಿಟ್ಟು), ಟಿ. ಆ್ಯಸ್ಟಿವಮ್ ಮೈದಾ (ಸಂಸ್ಕರಿಸಲ್ಪಟ್ಟ ಗೋಧಿ ಹಿಟ್ಟು), ಟಿ. ಆ್ಯಸ್ಟಿವಮ್ ಸೂಜಿ (ರವೆ), ಟಿ. ಡ್ಯುರಮ್ ಸೆಮೊಲಿನಾ ಮತ್ತು ಟಿ. ಡೈಕೋಕಮ್ ಸೆಮೊಲಿನಾ ಇವುಗಳನ್ನು ಸೀಲಿಆ್ಯಕ್ ರೋಗದಿಂದ ನರಳುತ್ತಿರುವ ರೋಗಿಗಳಿಗೆ ಸಹಾಯವನ್ನು ಒದಗಿಸುವುದಕ್ಕೆ ಕಡಿಮೆ ವಚ್ಚದಾಯಕ ಸುಧಾರಿತ ಗ್ಲ್ಯುಟೆನ್ ಉತ್ಪನ್ನವನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಅವುಗಳ ಲಕ್ಷಣಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ಒಂದು ಸಾಧಾರಣ ವಿಶ್ಲೇಷಣೆಯು ಇವುಗಳಲ್ಲಿ ಪ್ರೋಟೀನ್ ವ್ಯಾಪ್ತಿಯು 9.5% ದಿಂದ 13% ದವರೆಗೆ ಇತ್ತು ಎಂಬುದನ್ನು ತೋರಿಸಿತು. ಈ ಮಾದರಿಗಳನ್ನು ನಿಯಂತ್ರಿತ ಸನ್ನಿವೇಶಗಳಡಿಯಲ್ಲಿ ಕಿಣ್ವನಕಾರಿ ಬದಲಾವಣೆಗೆ ಒಳಪಡಿಸಲಾಯಿತು. ಜೊತೆಗೆ ಪ್ರೋಟೀನ್ ಹೈಡ್ರೋಲಿಸಿಸ್‌ನ ನಿಖರತೆಯನ್ನು SDS PAGE ಮೂಲಕ ನಿರ್ವಹಿಸಲಾಯಿತು. ಡಾಟ್ ಬ್ಲಾಟ್ ಮತ್ತು ವೆಸ್ಟರ್ನ್ ಬ್ಲಾಟ್ ಅನ್ನು ಬಳಸಿಕೊಂಡು ನಿರ್ವಹಿಸಲ್ಪಟ್ಟ ಇಮ್ಯುನೊಲಾಜಿಕಲ್ ಅಧ್ಯಯನಗಳು ಆ್ಯಂಟಿ–ಗ್ಲೈಡಿನ್ ಆ್ಯಂಟಿಬಾಡೀಸ್ ಮತ್ತು ಆ್ಯಂಟಿ–ರಾಬಿಟ್ ಐಜಿಜಿ–ಹಾರ್ಸ್ ರಾಡಿಶ್ ಪೆರಾಕ್ಸೈಡ್ (ಎಚ್‌ಆರ್‌ಪಿ) ಸಂಯುಕ್ತವನ್ನು ಬಳಸಿಕೊಳ್ಳುವ ಮೂಲಕ ಅಲರ್ಜಿಯ ಲಕ್ಷಣಗಳಲ್ಲಿ (ಅಲರ್ಜಿನಿಸಿಟಿ) ಇಳಿಕೆಯನ್ನು ನಿಖರಪಡಿಸಿದವು. ಮುಂದುವರೆದಂತೆ ಕಿಣ್ವ ಸಂಯೋಜಿತ ಇಮ್ಯುನೋಸಾರ್ಬೆಂಟ್ ನಿರ್ಧಾರಣವು (ELISA) ಈ ಫಲಿತಾಂಶಗಳನ್ನು ಧೃಡಪಡಿಸಿತು. ಹಿಟ್ಟಿನಲ್ಲಿನ ಗ್ಲೈಡಿನ್ ಇಮ್ಯುನೋಜೆನಿಸಿಟಿಯಲ್ಲಿನ ಇಳಿಕೆಯು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿತ್ತು (77%) ಮತ್ತು ಮೈದಾದಲ್ಲಿ (ಸಂಸ್ಕರಿತ ಗೋಧಿ ಹಿಟ್ಟು) ಈ ಪ್ರಮಾಣವು ಅತ್ಯಂತ ಕಡಿಮೆ (35%) ಇತ್ತು. ನಾದಲ್ಪಟ್ಟ ಹಿಟ್ಟಿನ ಅಭಿವೃದ್ಧಿ ಅವಧಿ ಮತ್ತು ಬ್ರೇಕ್‌ಡೌನ್‌ಗೆ ಸಂಬಂಧಿಸಿದಂತೆ ಸ್ಥಿರತೆಯ ಅವಧಿಗಳು ಕಿಣ್ವಗಳ ಸಂಯೋಜನೆಯ ಜೊತೆಗೆ ಇಳಿಮುಖವಾಗಲ್ಪಟ್ಟವು ಎಂಬುದನ್ನು ಸಂಸ್ಕರಿತ ಮತ್ತು ಸಂಸ್ಕರಿಸಲ್ಪಡದ ಹಿಟ್ಟುಗಳ ಪ್ರವಹನ ಶಾಸ್ತ್ರಕ್ಕೆ ಸಂಬಂಧಿಸಿದ ವಿಶ್ಲೇಷಣೆಗಳು ತಿಳಿಸಿದವು.

**ಪ್ರೊಬಯೋಟಿಕ್ ಲ್ಯಾಕ್ಟಿಕ್ ಆ್ಯಸಿಡ್ ಬ್ಯಾಕ್ಟೀರಿಯಾ ಇನ್ ಗಟ್ (ಪ್ರವೀಣಾ ಭಟ್ ಮುದಲಿಯಾರ್)**

ಆಚ್ಚುದ ಸಸ್ಯಗಳ ಪಾಲಿಫಿನಾಲ್ ಸಮೃದ್ಧ ಭಾಗಗಳನ್ನು ಪ್ರತ್ಯೇಕಿಸಲಾಯಿತು ಮತ್ತು ಅವುಗಳ ಒಟ್ಟೂ ಪಾಲಿಫಿನಾಲಿಕ್ ಅಂಶಗಳನ್ನು ನಿರ್ಧರಿಸಲಾಯಿತು. ಪರೀಕ್ಷೆಗೆ ಒಳಪಡಿಸಲ್ಪಟ್ಟ ಮಾದರಿಗಳಲ್ಲಿ ಪ್ಲೆಕ್ಟ್ರಾಂಥಸ್ ಆಂಬಿಯೋನಿಕಸ್‌ನ (Plectranthus amboinicus) ಎಲೆಗಳು ಮತ್ತು ಪೆಲ್ಟೋಫೋರಮ್ ಪ್ಟೆರೋಕಾರ್ಪಮ್‌ನ (Peltophorum pterocarpum) ಹೂವುಗಳು ಹೆಚ್ಚಿನ ಪ್ರಮಾಣದ ಒಟ್ಟಾರೆ ಪಾಲಿಫಿನಾಲ್ ಅಂಶಗಳನ್ನು (ಅನುಕ್ರಮವಾಗಿ 313.6 mg GAE/g and 222 mg GAE/g) ಹೊಂದಿರುವುದು ತಿಳಿದು ಬಂದಿತು. ಜೊತೆಗೆ, ಲ್ಯಾಕ್ಟೋಬ್ಯಾಸಿಲಸ್ ಪ್ಲ್ಯಾಂಟರಮ್‌ನ ಪ್ರೊಬಯೋಟಿಕ್ ಸ್ಟ್ರೇನ್‌ನ ಬೆಳವಣಿಗೆ ಮತ್ತು ಬದುಕುವ ಸಾಧ್ಯತೆಗೆ ಸಂಬಂಧಿಸಿದಂತೆ ಪ್ಲೆಕ್ಟ್ರಾಂಥಸ್ ಆಂಬಿಯೋನಿಕಸ್‌ನ ಎಲೆಗಳ ಬಗ್ಗೆ




ಅಧ್ಯಯನಗಳನ್ನು ನಡೆಸಲಾಯಿತು. ಕಿಣ್ವನಗೊಳಿಸಲ್ಪಟ್ಟ ಹಾಲಿನಲ್ಲಿ ಪೂರಕವಾಗಿ ಬಳಸಿಕೊಳ್ಳಲಾದ ಎಲೆಗಳ ಬಿಸಿ ನೀರಿನ ಉದ್ಧರಣ (HWE;1 mg/ml) ಮತ್ತು ತಾಜಾ ರಸವು (1% and 5%) ಬ್ಯಾಕ್ಟೀರಿಯಮ್‌ನ ಪೂರಕತೆ ಮತ್ತು ಕಾರ್ಯಸಾಧ್ಯತೆಯನ್ನು ಹೊರತುಪಡಿಸಿ ನಿಯಂತ್ರಿತ ಸ್ಥಿತಿಗೆ ಹೋಲಿಸಿ ನೋಡಿದಾಗ ಪರಿಣಾಮಕಾರಿಯಾಗಿ ಬೆಳವಣಿಗೆಯನ್ನು (1–2 ಪಟ್ಟು) ಪ್ರದರ್ಶಿಸಿತು ಎಂಬುದನ್ನು ಫಲಿತಾಂಶಗಳು ತೋರಿಸಿಕೊಟ್ಟವೆ. ಪೂರಕ ಸನ್ನಿವೇಶದ ಹೊರತಾಗಿ ನಿಯಂತ್ರಿತ ಸ್ಥಿತಿಗೆ ಹೋಲಿಸಿ ನೋಡಿದಾಗ 28 ದಿನಗಳ ಸಂಗ್ರಹಣ ಅವಧಿಯುದ್ದಕ್ಕೂ ಬ್ಯಾಕ್ಟೀರಿಯಾದ ಬದುಕುಳಿಯುವ ಸಾಧ್ಯತೆಯು $10^{9}$cfu/ml ಗಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಇತ್ತು, ಈ ಸಂದರ್ಭದಲ್ಲಿ ಸಂಗ್ರಹ ಅಥವಾ ದಾಸ್ತಾನು ಅವಧಿಯಲ್ಲಿ ಬ್ಯಾಕ್ಟೀರಿಯಾದ ಸಂಖ್ಯೆಯು ಸ್ಥಿರವಾಗಿ ಇಳಿಕೆಯಾಗಲ್ಪಟ್ಟಿತು.

**ಎಕ್ಸೋಪಾಲಿಸ್ಯಾಕರೈಡ್ಸ್ ಫ್ರಾಮ್ ಇಂಡಿಜೀನಿಯಸ್ ಫರ್ಮೆಂಟೆಡ್ ಫುಡ್ಸ್ (ಪ್ರಫುಲ್ಲಾ ಎಸ್‌ಜಿ)**

ಸ್ಥಾನಿಕವಾಗಿ ಕಿಣ್ವನಗೊಳಿಸಲ್ಪಟ್ಟ ಆಹಾರಗಳಾದ ಕಿಣ್ವನಗೊಳಿಸಲ್ಪಟ್ಟ ಹಾಲು, ಮೀನು, ಅಕ್ಕಿ, ಮತ್ತು ಡೋಕ್ಲಾ, ದೋಸೆ ಮತ್ತು ಜಿಲೇಬಿ ಹಿಟ್ಟು ಮತ್ತು ಕೆಲವು ನಾರ್ತ್ ಈಸ್ಟರ್ನ್ ಭಾಗದ ಕಿಣ್ವನಗೊಳಿಸಲ್ಪಟ್ಟ ಆಹಾರಗಳಾದ ಗನ್‌ಡ್ರಕ್, ಸಿಂಕಿ ಮತ್ತು ಸಾಸಿವೆ ಇವುಗಳನ್ನು ಲ್ಯಾಕ್ಟಿಕ್ ಆಮ್ಲದ ಬ್ಯಾಕ್ಟೀರಿಯಾವನ್ನು ಗುರುತಿಸುವುದಕ್ಕೆ ಸಂಶ್ಲೇಷಣೆಗೆ

ಒಳಪಡಿಸಲಾಯಿತು. ಶುದ್ಧ ಪ್ರತ್ಯೇಕಗಳನ್ನು ಪಡೆದುಕೊಳ್ಳುವುದಕ್ಕೆ ಪ್ಲೇಟ್ಸ್‌ನಿಂದ ಪ್ರತ್ಯೇಕಿಸಲ್ಪಟ್ಟ ಬ್ಯಾಕ್ಟೀರಿಯಲ್ ಅಂಶಗಳನ್ನು ಇನ್ನೂ ಸಂಶ್ಲೇಷಣೆಗೆ ಒಳಪಡಿಸಲಾಯಿತು ಮತ್ತು ಲ್ಯಾಕ್ಟಿಕ್ ಆಮ್ಲದ ಬ್ಯಾಕ್ಟಿರಿಯಾಗಳಾದ ಗ್ರಾಮ್ ಪ್ರತಿಕ್ರಿಯೆ, ಕ್ಯಾಟಲೇಸ್ ಉತ್ಪಾದನೆ ಮತ್ತು ಸ್ಪೋರ್ ನಿರ್ಮಾಣಕ್ಕೆ ಸಂಬಂಧಿಸಿದಂತಹ ಮೂಲಭೂತ ಲಕ್ಷಣಗಳನ್ನು ಗುರುತಿಸುವುದಕ್ಕೆ ಹೆಚ್ಚಿನ ಸಂಶೋಧನೆಯನ್ನು ನಡೆಸಲಾಯಿತು. ಗ್ರಾಮ್ ಪಾಸಿಟೀವ್, ಕ್ಯಾಟಲೇಸ್ ನೆಗೇಟೀವ್ ಐಸೋಲೇಟ್ಸ್‌ಗಳಿಂದ ಉತ್ಪಾದಿಸಲ್ಪಟ್ಟ ಎಕ್ಸ್ಟ್ರಾಸೆಲ್ಯುಲರ್ ಪಾಲಿಮರಿಕ್ ಶುಗರ್ಸ್ (ಇಪಿಎಸ್) ಅನ್ನು ರುಥೇನಿಯಮ್ ರೆಡ್ ಎಮ್‌ಆರ್‌ಎಸ್ ಅಗರ್‌ನ ಮೇಲೆ ಪರಿಶೀಲಿಸಲಾಯಿತು. ಇಪಿಎಸ್ ಉತ್ಪಾದಿತ ಐಸೋಲೇಟ್‌ಗಳು ರುಥೇನಿಯಮ್ ರೆಡ್ ಅಗರ್ ಪ್ಲೇಟ್ ಮೇಲೆ ಪಾರದರ್ಶಕವಾದ ಮ್ಯುಕಾಯ್ಡ್ ವಿಭಾಗಗಳಾಗಿ ಕಂಡುಬರುತ್ತವೆ ಮತ್ತು ಅವುಗಳನ್ನು ಇಪಿಎಸ್‌ನ ಕಿಣ್ವನಕಾರಿ ಉತ್ಪಾದನೆಗಾಗಿ ಪುನಃ ಪರೀಕ್ಷೆಗೆ ಒಳಪಡಿಸಲಾಯಿತು. ಒಟ್ಟೂ ಕಾರ್ಬೋಹೈಡ್ರೇಟ್‌ಗಳಿಗೆ ಸಂಬಂಧಿಸಿದಂತೆ ಫಿನಾಲ್–ಸಲ್ಫ್ಯೂರಿಕ್ ಆಮ್ಲದ ನಿರ್ಧಾರಣದ ಮೂಲಕ ಸುಧಾರಿತ ಎಮ್‌ಆರ್‌ಎಸ್ ಬ್ರಾತ್ [ಸುಕ್ರೋಸ್ ಬದಲಾಗಿ ಗ್ಲೂಕೋಸ್ ಅನ್ನು ಬಳಸಿಕೊಳ್ಳಲ್ಪಟ್ಟ (10% w/v)] ನಲ್ಲಿ ಮತ್ತು ಸರಳೀಕೃತ ಸಂಶ್ಲೇಷಿತ ಮಾಧ್ಯಮದಲ್ಲಿ ಉತ್ಪಾದಿಸಲ್ಪಟ್ಟ ಇಪಿಎಸ್‌ನ ಪರಿಮಾಣಾತ್ಮಕ ವಿಶ್ಲೇಷಣೆಯನ್ನು ನಿರ್ವಹಿಸಲಾಯಿತು. ಪ್ರೊಬಯೋಟಿಕ್ ಅಂಶಗಳು ಅಂದರೆ ಆಮ್ಲದ ಪ್ರತಿರೋಧಕತೆ, ಬೈಲ್ ಪ್ರತಿರೋಧಕತೆ, ಬೈಲ್ ಸಾಲ್ಟ್ ಹೈಡ್ರೋಲಿಸಿಸ್, ಆ್ಯಂಟಿಬಯೋಟಿಕ್ ಸಂಭಾವ್ಯತೆಯ ಪರೀಕ್ಷೆ, ಮೇಲ್ಮೈ ಹೈಡ್ರೋಫೋಬಿಸಿಟಿ ಮತ್ತು ಹೆಚ್ಚಿನ ಪ್ರಮಾಣದ ಇಪಿಎಸ್ ಉತ್ಪಾದಿಸುವ ಪ್ರತ್ಯೇಕಿಗಳ ಆಟೋ–ಅಗ್ರಿಗೇಷನ್ ಮುಂತಾದವುಗಳ ಬಗ್ಗೆ ಅಧ್ಯಯನ ನಡೆಸಲಾಯಿತು.

**ಚಿಕನ್ ಲಿವರ್ ಹೈಡ್ರೋಲೈಸೇಟ್ಸ್ (ಭಾಸ್ಕರ್ ಎನ್)**

ಕಿಣ್ವನಕಾರಿ ಮತ್ತು ಎಂಜೈಮ್ಯಾಟಿಕ್ ಹೈಡ್ರೋಲಿಸಿಸ್ ಈ ಎರಡು ಪ್ರಕ್ರಿಯೆಗಳ ಮೂಲಕ ತಯಾರಿಸಲ್ಪಟ್ಟ ಚಿಕನ್ ಲಿವರ್ ಹೈಡ್ರೋಲೈಸೇಟ್ಸ್ (ಸಿಎಲ್‌ಎಚ್) ಆ್ಯಂಟಿ– ಆಕ್ಸಿಡೇಟೀವ್ ಮತ್ತು ಆ್ಯಂಟಿ–ಬ್ಯಾಕ್ಟೀರಿಯಲ್ ಅಂಶಗಳನ್ನು ಪ್ರದರ್ಶಿಸುವುದು ತಿಳಿದುಬಂದಿತು. ಇದು ಬಹುಶಃ ಹೈಡ್ರೋಲಿಸಿಸ್ ಮತ್ತು ಅದಕ್ಕೂ ಹೆಚ್ಚಾಗಿ ಕಿಣ್ವನಕಾರಿ ಹೈಡ್ರೋಲಿಸಿಸ್ ಸಮಯದಲ್ಲಿ ನಿರ್ಮಾಣವಾಗಲ್ಪಟ್ಟ ಕೆಳಮಟ್ಟದ ಅಣುಗಳ ಪೆಪ್ಟೈಡ್‌ಗಳಿಂದಾಗಿರಬಹುದು, ಈ ಸಂದರ್ಭದಲ್ಲಿ ಬ್ಯಾಕ್ಟೀರಿಯೋಸಿನ್ಸ್ ಕೂಡ ಆ್ಯಂಟಿ–ಬ್ಯಾಕ್ಟೀರಿಯಲ್ ಅಂಶಗಳನ್ನು ಹೆಚ್ಚಿಸುವುದಕ್ಕೆ ಸಹಾಯ ಮಾಡುತ್ತವೆ. ಈ ಎರಡು ವಿಧಾನಗಳಿಂದ ತಯಾರಿಸಲ್ಪಟ್ಟ ಸಿಎಲ್‌ಎಚ್ 16.1 ದಿಂದ 17.1 ವ್ಯಾಪ್ತಿಯಲ್ಲಿ ಕಬ್ಬಿಣದ ಅಂಶವನ್ನು (mg per 100g) ಹೊಂದಿರುತ್ತದೆ, ಇದು ಕಬ್ಬಿಣದ ಅಂಶದಿಂದ ಸಮೃದ್ಧವಾದ ಉತ್ಪನ್ನಗಳನ್ನು/ಆಹಾರಗಳನ್ನು ತಯಾರಿಸುವುದಕ್ಕೆ ಲಭ್ಯವಿರುವ ಪೂರಕ ವಸ್ತುವಾಗಿ ಇದರ ಸಂಭವನೀಯತೆಯನ್ನು ಸೂಚಿಸುತ್ತದೆ.

# ಸಂಶೋಧನಾತ್ಮಕ ಆಹಾರ ಸಂಸ್ಕರಣೆ

**ಮೈಕ್ರೋವೇವ್ ಪ್ರಿಸರ್ವೇಷನ್ (ಮತ್ ಆರ್‌ಜಿ)**

ಆಮ್ಲೀಯ-ಅಲ್ಲದ ಮತ್ತು ಆಮ್ಲೀಯ ಹಣ್ಣುಗಳ ಮತ್ತು ತರಕಾರಿಗಳಿಂದ ಪಡೆದುಕೊಳ್ಳಲ್ಪಟ್ಟ ಹಣ್ಣಿನ ಪಲ್ಪ್‌ಗಳು ಮತ್ತು ರಸಗಳನ್ನು ವಿಭಿನ್ನ ಅನುಪಾತಗಳಲ್ಲಿ ಸಂಯೋಜಿಸಲಾಯಿತು ಮತ್ತು ನಿರಂತರವಾಗಿ-ಚಾಲ್ತಿಯಲ್ಲಿರುವ ಮೈಕ್ರೋವೇವ್ ಹೀಟಿಂಗ್ 2kW ವ್ಯವಸ್ಥೆಯ ಮೂಲಕ ವಿಶೇಷವಾಗಿ ವಿನ್ಯಾಸಗೊಳಿಸಲ್ಪಟ್ಟ ಹೀಲಿಕಲ್-ಸ್ಪೀರಿಕಲ್ ಅಪ್ಲಿಕೇಟರ್ ಅನ್ನು ಬಳಸಿಕೊಂಡು ಸಂಸ್ಕರಣೆಗೆ ಒಳಪಡಿಸಲಾಯಿತು. ಜ್ಯೂಸ್‌ಗಳ ಮೇಲೆ ಉದಾಹರಣೆಗೆ ಭೌತಿಕ-ರಾಸಾಯನಿಕ ಅಂಶಗಳು, ಪೌಷ್ಟಿಕಾಂಶಕ್ಕೆ ಸಂಬಂಧಿಸಿದ ಲಕ್ಷಣಗಳು ಇಂಜಿನಿಯರಿಂಗ ಅಂಶಗಳು ಮತ್ತು ಮೈಕ್ರೋಬಯಾಲ್ ನಶಿಸುವಿಕೆ (D, k, Z and $F_0$ values) ಮತ್ತು ಕಿಣ್ವಗಳ ನಿಷ್ಕ್ರಿಯೀಕರಣ ಮುಂತಾದ ಅಂಶಗಳ ಮೇಲೆ 250 ml/min ಹರಿವಿನ ಜೊತೆಗೆ 4.73 W/g ಮೈಕ್ರೋವೇವ್ ಉಷ್ಣಾಂಶದಲ್ಲಿನ ಪರಿಣಾಮಗಳ ಬಗ್ಗೆ ವಿಶ್ಲೇಷಣೆ ನಡೆಸಲಾಯಿತು ಮತ್ತು ಅವುಗಳ ಸಂಗ್ರಹಣೆಯ ಸಮಯದಲ್ಲಿನ ಅಂಶಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ತಾಜಾ ಜ್ಯೂಸ್‌ಗಳೊಂದಿಗೆ ಹೋಲಿಸಿ ನೋಡಿದಾಗ ಎಲ್ಲಾ ಸಂಯೋಜನೆಗಳು ಯಾವುದೇ ರೀತಿಯ ಗಮನಾರ್ಹವಾದ ಭಿನ್ನತೆಯನ್ನು ಹೊಂದಿಲ್ಲ ಎಂಬುದು ಒಂದು ವರ್ಷದ ಕೊನೆಯ ನಂತರದಲ್ಲಿ ಸಂಗ್ರಹಣೆಯ ಬಗೆಗಿನ ಮಾಹಿತಿಯಿಂದ ತಿಳಿದು ಬಂದಿತು. ಸೂಕ್ಷ್ಮ ಜೀವಕೋಶಗಳಲ್ಲಿ ಮೈಕ್ರೋವೇವ್ ವಿಕಿರಣದ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸುವುದಕ್ಕೆ ವಿಶೇಷವಾಗಿ ವಿನ್ಯಾಸಗೊಳಿಸಲ್ಪಟ್ಟ ಮೂರು ಗ್ಲಾಸ್ ಹೀಲಿಕಲ್ ಕಾಯಿಲ್ ಅನ್ವಯಿಕೆಗಳನ್ನು ಪರಿಚಯಿಸಲಾಯಿತು. ಕಾಯಿಲ್‌ನ ವ್ಯಾಸವು ಹಿಗ್ಗಿದಂತೆ ಮತ್ತು ಕಡಿಮೆ ವೆಲಾಸಿಟಿಯಲ್ಲಿ (ವೇಗದಲ್ಲಿ) ಎನರ್ಜಿ ಹೀರಿಕೆಯ ಪ್ರಮಾಣವು ಏರಲ್ಪಟ್ಟಿತು. ನಶಿಸುವಿಕೆಯ ಪ್ರಮಾಣವು ಶಕ್ತಿ ಮತ್ತು ಉಷ್ಣಾಂಶಕ್ಕೆ ನೇರವಾದ ಅನುಪಾತದಲ್ಲಿರುತ್ತದೆ. ವೇಗವು ಹೆಚ್ಚಾದಂತೆ ನಷ್ಟದ ಪ್ರಮಾಣವು ಇಳಿಕೆಯಾಗುವುದು ಕಂಡುಬಂದಿತು. ಈ ಫಲಿತಾಂಶಗಳನ್ನು ಆಧರಿಸಿ, ನಿರಂತರವಾದ ಮೈಕ್ರೋವೇವ್ ಪಾಶ್ಚರೀಕರಣ (45 l/hr)/ಸ್ಟರಿಲೈಸೇಷನ್ (30 l/hr) ವನ್ನು ಅಭಿವೃದ್ಧಿಗೊಳಿಸಲಾಯಿತು. ನಿರ್ದಿಷ್ಟವಾದ ಶಕ್ತಿಯ ಬಳಕೆಯು 0.16 KW-hr/kg ಇತ್ತು ಮತ್ತು 1 ಕೆಜಿ ಸಂಯೋಜಿತ ಜ್ಯೂಸ್ ಸಂಸ್ಕರಣೆಯ ಶಕ್ತಿಯ ವೆಚ್ಚವು ರೂ. 1.12 (ಐಎನ್‌ಆರ್) ಇತ್ತು, ಇದರ ಸಾಂಪ್ರದಾಯಿಕ ವೆಚ್ಚವು ಸರಿಸುಮಾರು ರೂ. 4.9 (1kWh=Rs. 7.00 (INR)) ಇತ್ತು. ಮೈಕ್ರೋವೇವ್ ಹೀಟಿಂಗ್ ಸಮಯದಲ್ಲಿ ~337% ಶಕ್ತಿಯ ಅಥವಾ ಇಂಧನದ ಉಳಿಕೆಯನ್ನು ಮಾಡಲಾಯಿತು ಮತ್ತು ಸಾಂಪ್ರದಾಯಿಕ ವಿಧಾನಕ್ಕೆ ತುಲನಾತ್ಮಕವಾಗಿ ಸಂಸ್ಕರಣೆಯ ಅವಧಿಯನ್ನು 3 ಪಟ್ಟು ಕಡಿಮೆ ಮಾಡಲಾಯಿತು, ಇದು ಸಂಸ್ಕರಣೆ ಮಾಡಲ್ಪಟ್ಟ ಜ್ಯೂಸ್‌ನ ಉತ್ಪಾದನೆಯಲ್ಲಿ ಹೆಚ್ಚಳವನ್ನು ಸೂಚಿಸಿತು.

**ಫಿಷ್ ಪ್ರೊಸೆಸಿಂಗ್ ಇಕ್ವಿಪ್‌ಮೆಂಟ್ (ಮೀನು ಸಂಸ್ಕರಣಾ ಸಾಧನ) (ಭಾಸ್ಕರ್ ಎನ್)**

ಸಣ್ಣ ಪ್ರಮಾಣದ ಮೀನು ಸಂಸ್ಕರಣಾ ಉದ್ದಿಮೆಗಳಲ್ಲಿ ಉತ್ಪಾದನಾ ಕಾರ್ಯದಕ್ಷತೆಯನ್ನು ಹೆಚ್ಚಿಸುವುದಕ್ಕೆ ಮತ್ತು ಕಾರ್ಮಿಕ-ತೀವ್ರತಾ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಒಂದು ಎಸ್‌ಎಸ್ ಆಧಾರಿತ ಫಿಷ್-ಮೀಟ್ (ಮೀನು-ಮಾಂಸ) ಬೋನ್ ಸಪರೇಟರ್ (ಎಫ್‌ಎಮ್‌ಬಿಎಸ್) ಅನ್ನು ವಿನ್ಯಾಸಗೊಳಿಸಲಾಯಿತು ಮತ್ತು ಅಭಿವೃದ್ಧಿಗೊಳಿಸಲಾಯಿತು. ಚರ್ಮಸಹಿತ ಮೀನನ್ನು ಬಳಸಿಕೊಂಡು ಪಡೆದ ಪ್ರಕ್ರಿಯೆಯ ಉತ್ಪನ್ನವು ಕಡಿಮೆ ಮಾಂಸದ ನಷ್ಟದ ಜೊತೆಗೆ ಪೂರ್ಣ ಮೀನಿನ ತೂಕದ ಜೊತೆಗೆ 55-75% ಮತ್ತು 35-50% ವ್ಯಾಪ್ತಿಯಲ್ಲಿತ್ತು. ಮಾಂಸದ ಎಫ್‌ಎಮ್‌ಬಿಎಸ್‌ನ ಸಾಮರ್ಥ್ಯವು ಸುಮಾರು 70 kg/h ವರೆಗೆ ಇತ್ತು, ಇದನ್ನು ಕನ್‌ವೇಯರ್ ಬೆಲ್ಟ್‌ನ ಚಲನೆ ಮತ್ತು ಒತ್ತಡದ ಸ್ಥಿರ ವೇಗದಲ್ಲಿ (25 rpm) ಸ್ಯಾಂಪಲ್‌ನ ಮೊದಲ ಪಾಸ್‌ಗೆ ಪುನಃ ಸ್ಥಾಪನೆಗೊಳಿಸಲಾಯಿತು. ಮೂಳೆಯ ಅಂಶಕ್ಕೆ ಸಂಬಂಧಿಸಿದಂತೆ ಗುಣಮಟ್ಟದ ನಿರ್ಧಾರಕ ಅಂಶಗಳು ಫಸ್ಟ್ ಪಾಸ್‌ನಲ್ಲಿ ಮೂಳೆಯ ಅತ್ಯಲ್ಪ ಅಂಶದ ಜೊತೆಗೆ ಮೀನಿನ ಜಾತಿಗಳನ್ನು ಆಧರಿಸಿ 0.1 ದಿಂದ 0.2% ವ್ಯಾಪ್ತಿಯಲ್ಲಿದ್ದವು ಮತ್ತು ಅಂದಾಜು ಸಂಯೋಜನೆಯಲ್ಲಿ ಮಾಹಿತಿಗಳ ಫಲಿತಾಂಶಗಳು ಕತ್ತರಿಸಿದ ಮಾಂಸದ ಗುಣಮಟ್ಟದಲ್ಲಿ ಯಾವುದೇ ಹೆಚ್ಚಿನ ಬದಲಾವಣೆಗಳನ್ನು ಪ್ರದರ್ಶಿಸಲಿಲ್ಲ. ಫಿಷ್ ಫಿಲೆಟಿಂಗ್ ಯಂತ್ರದ ಪರಿಕಲ್ಪನೆಯನ್ನು ತಯಾರಿಸಲಾಯಿತು, ವಿನ್ಯಾಸವನ್ನು ರೂಪಿಸಲಾಯಿತು ಮತ್ತು ಅದನ್ನು ತಯಾರಿಸಲಾಯಿತು.

**ಫುಡ್ ಪ್ಯಾಕೇಜಿಂಗ್ ಅಪ್ಲಿಕೇಷನ್ಸ್ (ಕೇಶವ ಮೂರ್ತಿ ಪಿಎಸ್)**

ಸಿಲ್ವರ್ ನೈಟ್ರೇಟ್ (2-10%) ಮತ್ತು ಪೆಕ್ಟಿನ್‌ನ ವಿಭಿನ್ನ ಸಾಂದ್ರತೆಯನ್ನು ಕಡಿಮೆಗೊಳಿಸುವ ಮೂಲಕ ಪೆಕ್ಟಿನ್ ಮತ್ತು ಸಿಲ್ವರ್ ನೈಟ್ರೇಟ್ ಅನ್ನು ಬಳಸಿಕೊಂಡು ಸರಳ ಮತ್ತು ನೇರವಾದ ವಿಧಾನದ ಮೂಲಕ ಪೆಕ್ಟಿನ್/ಸಿಲ್ವರ್ ನ್ಯಾನೋ ಸಂಯೋಜಿತ ಫಿಲ್ಮ್‌ಗಳನ್ನು ತಯಾರಿಸಲಾಯಿತು. ಎಸ್‌ಇಎಮ್ ಮಾಹಿತಿಯು ನ್ಯಾನೋ ಕಂಪೋಸಿಟ್ ಫ್ಲಿಮ್‌ಗಳ ಮೇಲ್ಮೈ ಮಾರ್ಫೋಲಜಿಯಲ್ಲಿ (ರೂಪವಿಜ್ಞಾನ) ಟೆಟ್ರಾಗೊನಲ್ ಸಿಲ್ವರ್ ಸಣ್ಣಕಣಗಳ ನಿರ್ಮಾಣವಾಗುವಿಕೆಯನ್ನು ಪ್ರದರ್ಶಿಸಿತು, ಯಾಂತ್ರಿಕ ಮತ್ತು ಪ್ರತಿಬಂಧಕ ಗುಣಗಳನ್ನು ಸ್ಥಾಪಿಸುವ ಉದ್ದೇಶದಿಂದ ಇವುಗಳನ್ನು ಪುನಃ ವರ್ಗೀಕರಿಸಲಾಯಿತು. ಯಾಂತ್ರಿಕ ಶಕ್ತಿಗೆ ಸಂಬಂಧಿಸಿದಂತೆ, 2-10% ಸಿಲ್ವರ್ ನೈಟ್ರೇಟ್ ಸಂಯೋಜನೆಯು ಟೆನ್ಸೈಲ್ ಸ್ಟ್ರೆಂತ್ (ಟಿಎಸ್) ನಲ್ಲಿ ಗಮನಾರ್ಹವಾದ ಹೆಚ್ಚಳವನ್ನು ತೋರಿಸುವುದಿಲ್ಲ ಆದರೆ ಆಮ್ಲಜನಕ ವರ್ಗಾವಣೆ ಪ್ರಮಾಣ (ಒಟಿಆರ್) ಮತ್ತು ನೀರಿನ ಆವಿಯ ವರ್ಗಾವಣೆ ಪ್ರಮಾಣಗಳು (ಡಬ್ಲುವಿಟಿಆರ್) ಅನುಕ್ರಮವಾಗಿ



ಸಿಲ್ವರ್ ನ್ಯಾನೋ ಕಂಪೋಸಿಟ್ ಫಿಲ್ಮ್



ಪ್ಲೇನ್ ಪೆಕ್ಟಿನ್ ನ್ಯಾನೋ ಕಂಪೋಸಿಟ್ ಫಿಲ್ಮ್

2% ಮತ್ತು 4% ಸಿಲ್ವರ್ ನೈಟ್ರೇಟ್ ಸಂಯೋಜನೆಯ ಪರಿಣಾಮವಾಗಿ ಗಮನಾರ್ಹವಾದ ಬದಲಾವಣೆಯನ್ನು ತೋರ್ಪಡಿಸಿದವು. ಮೂರು ವಿಭಿನ್ನ ಬ್ಯಾಕ್ಟೀರಿಯಲ್ ಸ್ವರೂಪಗಳಿಗೆ ಪ್ರತಿಯಾಗಿ ಅಂದರೆ Escherichia coli, ಸ್ಟ್ಯಾಫಿಲೋಕೋಕಸ್ ಔರಿಯಸ್ ಮತ್ತು

ಸ್ಯುಡೋಮೊನಾಸ್ ಔರೆಜಿನೊಸಾಗಳಿಗೆ ಪ್ರತಿಯಾಗಿ ಪ್ಲೇನ್ ಪೆಕ್ಟಿನ್ ಫಿಲ್ಮ್‌ಗಳಿಗೆ ಹೋಲಿಸಿ ನೋಡಿದಾಗ ನ್ಯಾನೋಕಂಪೋಸಿಟ್ ಫಿಲ್ಮ್‌ಗಳಿಗೆ ನಿಖರವಾದ ಪ್ರತಿರೋಧಕ ವಲಯಗಳನ್ನು ಪ್ರದರ್ಶಿಸಿತು. ತಯಾರಿಸಲ್ಪಟ್ಟ ಹಸಿರು ಸಂಶ್ಲೇಷಿತ ನ್ಯಾನೋಕಂಪೋಸಿಟ್ ಫಿಲ್ಮ್‌ಗಳನ್ನು ಕ್ರಿಯಾಶಿಲ ಪ್ಯಾಕೇಜಿಂಗ್ ವ್ಯವಸ್ಥೆಗಳ ಅಭಿವೃದ್ಧಿಯಲ್ಲಿ ಬಳಸಿಕೊಳ್ಳಬಹುದಾಗಿದೆ.

ಸೋಡಿಯಮ್ ಕಾರ್ಬೋಕ್ಸೈಮೀಥೈಲ್ ಸೆಲ್ಯುಲೋಸ್/ಪಾಲಿವಿನೈಲ್ ಆಲ್ಕೋಹಾಲ್ ಜೊತೆಗೆ ಸಂಯೋಜಿತ ಫಿಲ್ಮ್‌ಗಳನ್ನು ಅವುಗಳ ಯಾಂತ್ರಿಕ ಮತ್ತು ಪ್ರತಿಬಂಧಕ ಅಂಶಗಳನ್ನು ಉತ್ತಮಗೊಳಿಸುವ ಸಲುವಾಗಿ ಗ್ಯಾಮ್ಮಾ ಇರೇಡಿಯೇಷನ್ (4, 6 & 8 kGy) ಜೊತೆಗೆ ಕ್ರಾಸ್–ಲಿಂಕ್ ಮಾಡಲಾಯಿತು ಮತ್ತು ನಂತರದಲ್ಲಿ ರಾಸಾಯನಿಕ ಕ್ರಾಸ್–ಲಿಂಕಿಂಗ್ ಅಂಶದ ಜೊತೆಗೆ ಸಂಯೋಜಿಸಲಾಯಿತು. ನಿಯಂತ್ರಿತ ಮಾದರಿಗಿಂತ ಇರೇಡಿಯೇಟೆಡ್ ಮಾದರಿಯು ಹೆಚ್ಚು ಏಕತಾನತೆಯನ್ನು ಹೊಂದಿತ್ತು ಎಂಬುದನ್ನು ಸ್ವರೂಪಾತ್ಮಕ ವರ್ಗೀಕರಣವು ಬಹಿರಂಗಪಡಿಸಿತು ಮತ್ತು ಫೋರಿಯರ್ ಟ್ರಾನ್ಸ್‌ಫಾರ್ಮೇಷನ್ ಇನ್‌ಫ್ರಾ ರೆಡ್ (ಎಫ್‌ಟಿಐಆರ್) ಸ್ಪೆಕ್ಟ್ರಾವು ಅಲ್ಲಿ ಎರಡು ಅಣುಗಳ ನಡುವೆ ಸಂಭವನೀಯ ಪರಸ್ಪರ ಕ್ರಿಯೆಯು ಇದೆ ಎಂಬುದನ್ನು ತೋರಿಸಿತು. ಕ್ರಾಸ್–ಲಿಂಕಿಂಗ್ ಇದು ಟೆನ್ಸೈಲ್ ಸ್ಟ್ರೆಂತ್‌ನಲ್ಲಿ 180% ಹೆಚ್ಚಳ, ಟೀರ್ ಸ್ಟ್ರೆಂತ್‌ನಲ್ಲಿ 1260% ಹೆಚ್ಚಳ ಮತ್ತು ಎಲಾಂಗೇಷನ್‌ನಲ್ಲಿ 500% ಹೆಚ್ಚಳಕ್ಕೆ ಕಾರಣವಾಯಿತು. 8 kGy ಇರೇಡಿಯೇಟೆಡ್ ಫಿಲ್ಮ್‌ಗಳಲ್ಲಿ ಆಮ್ಲಜನಕ ವರ್ಗಾವಣೆ ಪ್ರಮಾಣವು ಸುಮಾರು 270% ನಷ್ಟು ಏರಿಕೆಯಾಗಲ್ಪಟ್ಟಿತು. ಈ ಕ್ರಾಸ್–ಲಿಂಕ್ಡ್ ಫಿಲ್ಮ್‌ಗಳನ್ನು ಹಲವಾರು ಆಹಾರ ಪ್ಯಾಕೇಜಿಂಗ್ ಪ್ರಕ್ರಿಯೆಗಳಲ್ಲಿ ಅನ್ವಯಿಸಿಕೊಳ್ಳಬಹುದಾಗಿದೆ.

ಆಹಾರದಿಂದ ಉಂಟಾಗುವ ರೋಗಕಾರಕಗಳಾದ ಎಸ್ಚರಿಶೀಯ ಕೋಲಿ, ಸ್ಟ್ಯಾಫಿಲೋಕೋಕಸ್ ಔರಿಯಸ್ ಮತ್ತು ಸ್ಯುಡೋಮೊನಾಸ್ ಔರುಜಿನೊಸಾಗಳಿಗೆ ಪ್ರತಿಯಾಗಿ ಪ್ಲೇನ್ ಪೆಕ್ಟಿನ್ ಫಿಲ್ಮ್‌ಗಳಿಗೆ ಹೋಲಿಸಿ ನೋಡಿದಾಗ ನ್ಯಾನೋಕಂಪೋಸಿಟ್ ಫಿಲ್ಮ್‌ಗಳ ಸುತ್ತ ಪರಿಣಾಮಕಾರಿಯಾದ ಪ್ರತಿರೋಧಕ ವಲಯವು ಕಂಡುಬರುತ್ತದೆ ಎಂಬ ಅಂಶವನ್ನು ಬ್ಯಾಕ್ಟೀರಿಯಲ್ ವಿರೋಧಿ ಅಧ್ಯಯನಗಳು ತಿಳಿಯಪಡಿಸಿದವು.

**ಮೈಕ್ರೋವೇವ್ ಕುಕಿಂಗ್ ಎಂಡ್ ಮಿನರಲ್ ಬಯೋಆ್ಯಕ್ಸಿಸೆಬಿಲಿಟಿ (ಕಲ್ಪನಾ ಪ್ಲಾಟೆಲ್)**

ಪ್ರಾತಿನಿಧಿಕ ಪ್ರಮುಖ ಧಾನ್ಯಗಳು ಮತ್ತು ಕಾಳುಗಳನ್ನು ಮೈಕ್ರೋವೇವ್ ಕುಕಿಂಗ್‌ಗೆ ಒಳಪಡಿಸಲಾಯಿತು ಮತ್ತು ಬೇಯಿಸಲ್ಪಟ್ಟ ಮಾದರಿಗಳನ್ನು ಖನಿಜಗಳ ಜೈವಿಕಲಭ್ಯತೆಯನ್ನು ನಿರ್ಧರಿಸುವುದಕ್ಕೆ ಬಳಸಿಕೊಳ್ಳಲಾಯಿತು. ಗೋಧಿ, ಅಕ್ಕಿ, ಫಿಂಗರ್ ಮಿಲ್ಲೆಟ್ ಮತ್ತು ಮೆಕ್ಕೆಜೋಳಗಳಲ್ಲಿ ತಾಮ್ರದ ಜೈವಿಕಲಭ್ಯತೆಯು ಅನುಕ್ರಮವಾಗಿ 18.5%, 38.6%, 51.72% ಮತ್ತು 36.5% ಪ್ರಮಾಣದಲ್ಲಿ ಹೆಚ್ಚಳವನ್ನು ಕಂಡಿತು. ಧಾನ್ಯಗಳಲ್ಲಿ, ಮ್ಯಾಂಗ್‌ನೀಸ್ ಖನಿಜದ ಜೈವಿಕಲಭ್ಯತೆಯು ಅಕ್ಕಿಯಲ್ಲಿ 80.6% ಇಳಿಕೆಯನ್ನು ಮತ್ತು ಗೋಧಿಯಲ್ಲಿ 70.6% ಇಳಿಕೆಯನ್ನು ತೋರಿಸಿದವು. ಫಿಂಗರ್ ಮಿಲ್ಲೆಟ್ ಮತ್ತು ಮೆಕ್ಕೆಜೋಳದಲ್ಲಿ ಕ್ರೋಮಿಯಮ್‌ನ ಹೆಚ್ಚಳವು ಅನುಕ್ರಮವಾಗಿ 10% ಮತ್ತು 43% ಇರುವುದು ಕಂಡುಬಂದಿತು ಹಾಗೆಯೇ ಅಕ್ಕಿ ಮತ್ತು ಸೋರ್ಗಮ್‌ನಲ್ಲಿ ಈ ಖನಿಜವು ಅನುಕ್ರಮವಾಗಿ 14.3% ಮತ್ತು 29% ಹೆಚ್ಚಳವನ್ನು ಪ್ರದರ್ಶಿಸಿತು. ಧಾನ್ಯಗಳಿಂದ ತಾಮ್ರದ ಜೈವಿಕಲಭ್ಯತೆಯಲ್ಲಿ ಗಮನಾರ್ಹವಾದ ಹೆಚ್ಚಳವನ್ನು ಗಮನಿಸಲಾಯಿತು, ಈ ಹೆಚ್ಚಳವು ಸಿಪ್ಪೆತೆಗೆಯಲ್ಪಟ್ಟ ಗ್ರೀನ್ ಗ್ರಾಮ್‌ನಲ್ಲಿ 12.5% ದಿಂದ ಹೋಲ್ ಗ್ರೀನ್ ಗ್ರಾಮ್‌ನಲ್ಲಿ 64.3% ದ ವ್ಯಾಪ್ತಿಯಲ್ಲಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಬ್ಲ್ಯಾಕ್ ಗ್ರಾಮ್‌ನಲ್ಲಿ (20.5%) ಮತ್ತು ರಾಜ್‌ಮಾ (33.3%) ಇವುಗಳಲ್ಲಿ ತಾಮ್ರದ ಜೈವಿಕಲಭ್ಯತೆಯಲ್ಲಿ ಇಳಿಕೆಯು ಕಂಡುಬಂದಿತು. 29.1% (ರಾಜ್‌ಮಾ) ದಿಂದ 62.7% (ಬ್ಲಾಕ್‌ಗ್ರಾಮ್) ವರೆಗೆ ಇಳಿಕೆಯನ್ನು ತೋರಿಸುವ ಮೂಲಕ ಹೆಚ್ಚಿನ ಎಲ್ಲಾ ಧಾನ್ಯಗಳಲ್ಲಿ ಮ್ಯಾಂಗನೀಸ್‌ನ ಜೈವಿಕಲಭ್ಯತೆಯಲ್ಲಿ ಗಮನಾರ್ಹವಾದ ಇಳಿಕೆಯು ಕಂಡುಬಂದಿತು. ಕ್ರೋಮಿಯಮ್‌ನ ಜೈವಿಕಲಭ್ಯತೆಯಲ್ಲಿನ ಇಳಿಕೆಯು ಹೆಚ್ಚಿನ ಪ್ರಮಾಣದಲ್ಲಿತ್ತು; ಬ್ಲ್ಯಾಕ್‌ಗ್ರಾಮ್‌ನಲ್ಲಿ ಇಳಿಕೆಯು 10% ದಿಂದ ಇತರ ಎಲ್ಲಾ ಧಾನ್ಯಗಳಲ್ಲಿಯೂ ಮತ್ತು ಸಿಪ್ಪೆ ತೆಗೆಯಲ್ಪಟ್ಟ ಗ್ರೀನ್ ಗ್ರಾಮ್‌ಗಳಲ್ಲಿ 66% ದವರೆಗೆ ಇಳಿಕೆಯು ಕಂಡುಬಂದಿತು.

**ಎನ್‌ರಿಚ್‌ಮೆಂಟ್ ಆಫ್ ವೀಟ್ ಮಿಲ್ಲ್‌ಡ್, ಬೇಕರಿ, ಪಾಸ್ತಾ ಎಂಡ್ ಟ್ರಾಡಿಷನಲ್ ಪ್ರಾಡಕ್ಟ್ಸ್ (ಪ್ರಭಾಶಂಕರ್ ಪಿ, ಸಾಯಿ ಮನೋಹರ್ ಆರ್, ವೆಂಕಟೇಶ್ವರ ರಾವ್ ಜಿ)**

ಸಮೋಸಾ, ಕೋಕ್ಯುಮಾ ಅಮಡಾ ಪುಡಿ ಸಂಯೋಜಿತ ಸುವಾಸನಾಯುಕ್ತ ಸೂಪ್ ಕಡ್ಡಿಗಳು, ಸಕ್ಕರೆ ರಹಿತ ಕೇಸರಿ ಬಾತ್ ಮತ್ತು ಫೈಬರ್ ಸಮೃದ್ಧ ಬಾರ್‌ಗಳ ತಯಾರಿಸುವಿಕೆ ಮತ್ತು ಸಂಸ್ಕರಣ ಸನ್ನಿವೇಶಗಳನ್ನು ಸಮರ್ಪಕವಾಗಿ ನಿರ್ಮಿಸಲಾಯಿತು. 7.5% ಒಣಗಿಸಲ್ಪಟ್ಟ ಗೌರ್/ಕ್ಲಸ್ಟರ್ ಬೀನ್ ಪೌಡರ್ ಮತ್ತು 20% ರಾಜಮಾ (Cicer arietinum) ಅನ್ನು ಬಳಸಿಕೊಂಡು ತಯಾರಿಸಲ್ಪಟ್ಟ ಕಡಿಮೆ ಪ್ರಮಾಣದ ಜಿಐ ನೂಡಲ್‌ಗಳು ಸ್ಟಾರ್ಚ್‌ನ ಲಭ್ಯತೆಯಲ್ಲಿ ಗಮನಾರ್ಹವಾದ ಇಳಿಕೆ ಮತ್ತು ನಿಧಾನವಾಗಿ ಜೀರ್ಣವಾಗುವ ಸ್ಟಾರ್ಚ್‌ನಲ್ಲಿ ಹೆಚ್ಚಳಕ್ಕೆ ಕಾರಣವಾದವು. ಹಿಟ್ಟಿನ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಮಿಲ್‌ಗಳ (ಗಿರಣಿಗಳ) ವಿಭಿನ್ನ ಹಂತಗಳಲ್ಲಿ ಬೀಸುವಿಕೆ, ಪಿನ್, ಪ್ಲೇಟ್, ರೋಲರ್ ಮತ್ತು ಹ್ಯಾಮರ್ ಮುಂತಾದ ಹಂತಗಳಲ್ಲಿ ಸಂಸ್ಕರಣ ಸ್ಥಿತಿಗಳಾದ ಒಣಗಿಸುವಿಕೆಯ ಅವಧಿ, ಡಿಕ್ಸ್ ಗ್ಯಾಪ್ ಸೆಟ್ಟಿಂಗ್ಸ್ ಮುಂತಾದವುಗಳ ಪ್ರಭಾವವನ್ನು ಅಧ್ಯಯನ ಮಾಡಲಾಯಿತು. ಫೆನ್ಯುಗ್ರೀಕ್‌ನ ರೋಲರ್ ಮಿಲ್ಲಿಂಗ್ ಸಂದರ್ಭಗಳನ್ನು ಪ್ರಮಾಣೀಕೃತಗೊಳಿಸಲಾಯಿತು. ಫೈಬರ್‌ನಲ್ಲಿ ಸಮೃದ್ಧವಾಗಿರುವ ಅಂಶಗಳನ್ನು ಗುರುತಿಸಲಾಯಿತು. ಬ್ರೆಡ್ ತಯಾರಿಕೆಯಲ್ಲಿ 10% ಫೈಬರ್ ಸಮೃದ್ಧ ಅಂಶಗಳ ಸಂಯೋಜನೆಯು ಸಮರ್ಪಕ ಎಂಬುದಾಗಿ ಪರಿಗಣಿಸಲಾಯಿತು. ಸಂಸ್ಕರಿತ ಮಾವಿನ ಪಲ್ಪ್, ಬಿಸ್ಕೆಟ್‌ಗಳು, ಕುಕೀಸ್‌ಗಳು ಮತ್ತು ಮಫಿನ್‌ಗಳಲ್ಲಿ ಒಣ ಹಣ್ಣುಗಳನ್ನು ಬಳಸಿಕೊಳ್ಳುವುದರ ಬಗ್ಗೆ ತಿಳಿಯುವುದಕ್ಕೆ ಅಧ್ಯಯನಗಳನ್ನು ನಡೆಸಲಾಯಿತು. ವೇ ಪ್ರೋಟೀನ್‌ನ ಬಳಕೆಯ ಜೊತೆಗೆ ನಿಯಂತ್ರಿತ ಪಿಜಾದ ಹೊರತಾಗಿ 5% ಹೆಚ್ಚು ಪ್ರೋಟೀನ್ ಅನ್ನು ಹೊಂದಿರುವ ಪಿಜಾ ಬೇಸ್‌ಗೆ ವಿಧಾನವನ್ನು ರೂಪಿಸಲಾಯಿತು.

**ಫ್ಯಾಬ್ರಿಕೇಟೆಡ್ ಫುಡ್ಸ್ (ಭಟ್ಟಾಚಾರ್ಯ ಎಸ್)**

ಜೆಲ್ಲನ್, ಅಗರ್ ಮತ್ತು ಅವುಗಳ ಸಂಯೋಜನಗಳನ್ನು ಬಳಸಿಕೊಂಡು ಹೈಡ್ರೋಕೊಲಾಯ್ಡ್ ಆಧಾರಿತ ಜೆಲ್‌ಗಳ ಜೆಲ್ ಲಕ್ಷಣ ವರ್ಗೀಕರಣ ಮತ್ತು ಪ್ರವಹನಶಾಸ್ತ್ರಕ್ಕೆ ಸಂಬಂಧಿಸಿದ ಸ್ಥಿತಿಯನ್ನು ಸಂಶೋಧಿಸಲಾಯಿತು. ಈ ಜೆಲ್‌ಗಳು ಸ್ಟ್ರೇನ್ ಪ್ರಮಾಣಕ್ಕೆ ಮತ್ತು ಅನ್ವಯಿಸಲ್ಪಟ್ಟ ಸ್ಟ್ರೇನ್‌ನ ಪ್ರಮಾಣಕ್ಕೆ ಸಂವೇದನಶಿಲವಾಗಿರುತ್ತವೆ. ಮಾವಿನ ಪಲ್ಪ್, ಸಕ್ಕರೆ ಮತ್ತು ಫೆರಸ್ ಸಲ್ಫೇಟ್‌ಗಳ ಜೊತೆಗೆ ಜೆಲ್ಲನ್ ಅಂಟನ್ನು ಜೆಲ್ಲಿಂಗ್ ಅಂಶವನ್ನಾಗಿ ಬಳಸಿಕೊಂಡು ಪೌಷ್ಟಿಕಾಂಶಭರಿತ ಜೆಲ್‌ಗಳನ್ನು ತಯಾರಿಸಲಾಯಿತು.
ವಿಭಿನ್ನವಾದ ತೇವಾಂಶಕ್ಕೆ ಸಂಬಂಧಿಸಿದ ಅಂಶಗಳು (10–28%) ಮತ್ತು ಸ್ಟೀಮಿಂಗ್ ಅವಧಿಗಳಲ್ಲಿ (0–60 ನಿಮಿಷ) ಅಗ್ಲೋಮಿರೇಷನ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅರಿಷಿಣ ಪುಡಿಯ ಸೂಕ್ಷ್ಮ ಸ್ವರೂಪದ ಅವಲೋಕನವು ವಿಭಿನ್ನ ಗಾತ್ರಗಳ ಅಂದರೆ 50 ಮತ್ತು 160 μm ವ್ಯಾಪ್ತಿಯಲ್ಲಿರುವ ಮತ್ತು

ಸ್ಫಿರಾಯ್ಡ್ ನಿಂದ ಎಲೊಂಗೇಟ್ ಎಲಿಪ್ಸಾಯ್ಡ್‌ಗಳ ವ್ಯಾಪ್ತಿಯಲ್ಲಿರುವ ಆಕಾರಗಳನ್ನು ಹೊಂದಿರುವ ಸ್ಫಿರಾಯ್ಡ್‌ಗಳು ಮತ್ತು ಎಲಿಪ್ಸಾಯ್ಡ್‌ಗಳನ್ನು ತೋರ್ಪಡಿಸಿತು. ಗಾತ್ರಕ್ಕೆ ಸಂಬಂಧಿಸಿದ ಲಕ್ಷಣಗಳು ತೇವಾಂಶದ ಗುಣ/ಸ್ವೀಮಿಂಗ್ ಪ್ರಮಾಣದಲ್ಲಿನ ಹೆಚ್ಚಳದ ಜೊತೆಗೆ ಏರಿಕೆಯಾಗುತ್ತವೆ ಎಂಬುದನ್ನು ಚಿತ್ರಣ ವಿಶ್ಲೇಷಣೆಯು ಪ್ರಸ್ತುತಪಡಿಸುತ್ತದೆ. ಅರಿಷಿಣ ಪುಡಿಯ ಅಗ್ಲೋಮಿರೇಷನ್ ಪ್ರಕ್ರಿಯೆಯ ಬಗ್ಗೆ ಮಾಹಿತಿ ಪಡೆಯುವುದಕ್ಕೆ 2–10–8–4 ಸ್ವರೂಪವನ್ನು ಹೊಂದಿರುವಂತಹ ನಾಲ್ಕು–ಪದರದ ಕೃತಕ ನ್ಯೂರಲ್ ನೆಟ್‌ವರ್ಕ್ ಅನ್ನು ಅಭಿವೃದ್ಧಿಗೊಳಿಸಲಾಯಿತು.

**ಪಾನಿ ಪೂರಿ ಶೀಟಿಂಗ್ ಎಂಡ್ ಕಟ್ಟಿಂಗ್ ಮಷಿನ್ (ನಾಗರಾಜು ವಿಡಿ)**

ಪೂರಿ ಮಾಡುವಿಕೆಗೆ ಸಂಬಂಧಿಸಿದಂತೆ ಸಾಂಪ್ರದಾಯಿಕ ವಿಧಾನಗಳನ್ನು ಬಳಸಿಕೊಳ್ಳುವುದು ಮತ್ತು ಪ್ರಸ್ತುತದಲ್ಲಿ ಅಸ್ತಿತ್ವದಲ್ಲಿರುವ ಸಲಕರಣೆಗಳನ್ನು ಬಳಸಿಕೊಳ್ಳುವುದರ ಜೊತೆಗೆ ಪೂರಿಗಳನ್ನು ಮಾಡುವ ಪ್ರಕ್ರಿಯೆಗಳನ್ನು ಮಾನದಂಡತ್ಮಕವಾಗಿಸುವುದಕ್ಕೆ ಪ್ರಯೋಗಗಳನ್ನು ನಡೆಸಲಾಯಿತು. ಈ ಮೇಲಿನ ಮಾಹಿತಿಯನ್ನು ಆಧರಿಸಿ, ಒಂದು ವಿಷಯಾಧಾರಿತ ವಿನ್ಯಾಸವನ್ನು ರೂಪಿಸಲಾಯಿತು ಮತ್ತು ಘಟಕದ ತಯಾರಿಯ ಮೂರು ಹಂತಗಳ ಜೊತೆಗೆ ಅಂದರೆ ಎಕ್ಸ್ಟ್ರ್ಯೂಷನ್, ಮಲ್ಟಿಪಲ್ಸ್ ಆಫ್ ಕಂಪ್ರೆಷನ್ ಮತ್ತು ಅಂತಿಮವಾಗಿ ಗೋಲವಾಗಿರುವ ಮತ್ತು ಷಟ್ಕೋನಾಕೃತಿಯಲ್ಲಿರುವ ಡಿಸ್ಕಗಳನ್ನು ಕತ್ತರಿಸುವಿಕೆಗಳ ಜೊತೆಗೆ ಒಂದು ಕಾಲ್ಪನಿಕ ವಿಧಾನವನ್ನು ತಯಾರಿಸಲಾಯಿತು ಮತ್ತು ಸವಿವರವಾದ ವಿನ್ಯಾಸದ ಚಿತ್ರಣಗಳನ್ನು ತಯಾರಿಸಲಾಯಿತು. ಪ್ರೋಟೋಟೈಪ್ ಕಾರ್ಯನಿರ್ವಾಹಕ ಮಾದರಿಯನ್ನು ತಯಾರಿಸಲಾಯಿತು ಮತ್ತು ಕಾರ್ಯದಕ್ಷತೆಯನ್ನು ಗರಿಷ್ಠಗೊಳಿಸುವುದಕ್ಕೆ ಘಟಕವನ್ನು ಉತ್ಕೃಷ್ಟಗೊಳಿಸಲಾಯಿತು. ಯಂತ್ರವನ್ನು ಅದರ ತಾಳಿಕೆಯ ಶಕ್ತಿ ಮತ್ತು ವಾಣಿಜ್ಯೀಕರಣಕ್ಕೆ ಸಂಬಂಧಿಸಿದಂತೆ ಅವಲೋಕನಗಳನ್ನು ನಡೆಸಲಾಯಿತು.

**ಅಲ್ಟ್ರಾಸೌಂಡ್ ಏಯ್ಡೆಡ್ ಕಾನ್‌ಸಂಟ್ರೇಷನ್ ಆಫ್ ಫ್ರೂಟ್ ಜ್ಯೂಸಸ್ (ರಸ್ತೋಗಿ ಎನ್‌ಕೆ)**

ಸಪೋರ್ಟೆಡ್ ಲಿಕ್ವಿಡ್ ಮೆಂಬ್ರೇನ್ಸ್ (ಎಸ್‌ಎಲ್‌ಎಮ್) ಅನ್ನು ಆರ್ಗ್ಯಾನಿಕ್ ಆಮ್ಲಗಳನ್ನು ಪುನಃಶ್ಚೇತನಗೊಳಿಸುವುದಕ್ಕೆ ಬಳಸಿಕೊಳ್ಳಲಾಯಿತು, ಏಕೆಂದರೆ ಇದು ಹೆಚ್ಚಿನ ಫ್ಲಕ್ಸ್, ಆಯ್ಕಾತ್ಮಕ ಪ್ರತ್ಯೇಕೀಕರಣ, ಕಡಿಮೆ ಶಕ್ತಿಯ ಬಳಕೆ, ಕಾರ್ಯನಿರ್ವಹಣೆಯ ಮತ್ತು ಪುನಃ ಉತ್ಪತ್ತಿಮಾಡುವಿಕೆಗೆ ಸಂಬಂಧಿಸಿದಂತೆ ಸರಳತೆಯನ್ನು ಹೊಂದಿದೆ. ಪ್ರಸ್ತುತದ ಕೆಲಸಗಳಲ್ಲಿ ಬಳಸಿಕೊಳ್ಳಲ್ಪಟ್ಟ ಎಸ್‌ಎಲ್‌ಎಮ್ ಜೈವಿಕ ದ್ರಾವಕದ (toluene) ಜೊತೆಗೆ ಇಂಪ್ರೆಗ್ನೇಟ್ ಮಾಡಲ್ಪಟ್ಟ ಪೋರಸ್ ಮೆಂಬ್ರೇನ್ ಸಪೋರ್ಟ್ (ಪಿಟಿಎಫ್‌ಇ ಮೆಂಬ್ರೇನ್) ಅನ್ನು ಬಳಸಿಕೊಳ್ಳುತ್ತದೆ, ಇದರಲ್ಲಿ ಕಾಂಪ್ಲೆಕ್ಸಿಂಗ್ ಕ್ಯಾರಿಯರ್ (Aliquat 336) ಅನ್ನು ಕರಗಿಸಲಾಗುತ್ತದೆ. ಈ ಮೆಂಬ್ರೇನ್ ಫೀಡ್ ಮತ್ತು ಸ್ಟ್ರಿಪ್ ಹಂತಗಳನ್ನು ($Na_2CO_3$ /$NaHCO_3$ನ ದ್ರಾವಕ) ಪ್ರತ್ಯೇಕಿಸುತ್ತದೆ. ಸಿಟ್ರಿಕ್ ಆಮ್ಲವನ್ನು ದ್ರಾವಕ ಮತ್ತು ರಿಯಲ್ ದ್ರಾವಕಗಳಿಂದ ಅಂದರೆ ಸಿಟ್ರಸ್ ಹಣ್ಣಿನ ಜ್ಯೂಸ್‌ಗಳಾದ ಮೂಸಂಬಿ, ಲಿಂಬು, ಮತ್ತು ಕಿತ್ತಳೆ ಹಣ್ಣುಗಳಿಂದ ಆಯ್ದ ವಿಧಾನಗಳ ಮೂಲಕ ಪಡೆದುಕೊಳ್ಳಲಾಗುತ್ತದೆ. ಈ ಉದ್ಧರಣಗಳನ್ನು $Na_2CO_3$ /$NaHCO_3$ ನಲ್ಲಿ ಸಂಯೋಜಿಸಲಾಗುತ್ತದೆ ಮತ್ತು ಡಿಸ್ಟಿಲ್ಡ್ ನೀರು ಮತ್ತು ~100% ಮತ್ತು 33% ಸಿಟ್ರಿಕ್ ಆಮ್ಲದ ಉದ್ಧರಣಗಳನ್ನು ಸ್ಟ್ರಿಪ್ ದ್ರಾವಕವಾಗಿ ಬಳಸಿಕೊಳ್ಳುವಿಕೆಯನ್ನು 5.5 ಎಚ್ ನಲ್ಲಿ ಸಾಧಿಸಲಾಗಿದೆ. ಫಾರ್‌ವರ್ಡ್ ಓಸ್ಮೋಸಿಸ್ ಸಾಂದ್ರಕ ಪ್ರಕ್ರಿಯೆಯ ಜೊತೆಗೆ ಸಂಯೋಜಿತವಾದ ಕಾನ್‌ಸಂಟ್ರೇಷನ್ ಪೋಲರೈಸೇಷನ್ ಅನ್ನು ಕಡಿಮೆಗೊಳಿಸುವ ಮೂಲಕ ಟ್ರಾನ್ಸ್‌ಮೆಂಬ್ರೇನ್ ಫ್ಲಕ್ಸ್‌ನ ಪ್ರಮಾಣದ ಏರಿಕೆಯನ್ನು ಅಲ್ಟ್ರಾಸೌಂಡ್ ವಿಧಾನವನ್ನು ಬಳಸಿಕೊಳ್ಳಲಾಯಿತು. ಓಸ್ಮೋಟಿಕ್ ದ್ರಾವಕವು ಮೆಂಬ್ರೇನ್‌ನ ಸಪೋರ್ಟ್ ಲೇಯರ್ ಕಡೆಗಿದ್ದ ಸಂದರ್ಭದಲ್ಲಿ ಈ ಪರಿಣಾಮವು ಗಮನಾರ್ಹವಾಗಿತ್ತು, ಈ ಸಂದರ್ಭದಲ್ಲಿ, ಕಾನ್‌ಸಂಟ್ರೇಷನ್ ಪೋಲರೈಸೇಷನ್ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಬಳಸಿಕೊಳ್ಳಲ್ಪಟ್ಟ ದ್ರಾವಕವು ಕಡಿಮೆ ಪ್ರಮಾಣದ ಪೆಕ್ಟಿನ್ ಅನ್ನು ಹೊಂದಿದ್ದ ಸಂದರ್ಭದಲ್ಲಿ ಫ್ಲಕ್ಸ್‌ನ ಮೇಲೆ ಅಲ್ಟ್ರಾಸೌಂಡ್‌ನ ಪರಿಣಾಮವು ಗಮನಾರ್ಹವಾಗಿರುತ್ತದೆ. ಮೂಸಂಬಿ ಹಣ್ಣಿನ ಜ್ಯೂಸ್‌ನ ಮೇಲೆ ಅಲ್ಟ್ರಾಸೌಂಡ್‌ನ ಅನ್ವಯಿಕೆಯು 5.58 ದಿಂದ 6.95 $Lm^{-2}h^{-1}$ ಹೆಚ್ಚಿನ ಫ್ಲಕ್ಸ್‌ಗೆ ಕಾರಣವಾಗುವ ಮೂಲಕ ಸಾಮಾನ್ಯ ಫಾರ್‌ವರ್ಡ್ ಓಸ್ಮೋಸಿಸ್ ಪ್ರಕ್ರಿಯೆಗೆ ಹೋಲಿಸಿ ನೋಡಿದಾಗ ಜ್ಯೂಸ್‌ನ ತ್ವರಿತಗತಿಯ ಸಾಂದ್ರತೆಗೆ ಕಾರಣವಾಯಿತು.

**ಕ್ರಯೋ ಪಲ್ವರೈಸೇಷನ್ ಎಂಡ್ ಸ್ಪೌಟೆಡ್ ಬೆಡ್ ರೋಸ್ಟಿಂಗ್ ಆಫ್ ಕಾಫೀ ಬೀನ್ಸ್ (ಶ್ರೀಧರ್ ಬಿಎಸ್)**

ರೋಸ್ಟ್ ಮಾಡಬಹುದಾದ ಕಾಫೀ ಬೀಜಗಳ ವಿಧಗಳಿಗೆ ಅನುಗುಣವಾಗಿ ಮತ್ತು ಬೀಜಗಳನ್ನು ಹೆಚ್ಚು ಸುಡದೇ ಮತ್ತು ಪಾನೀಯದ ಸ್ವಾದವನ್ನು ಅಂತರ್ಗತಗೊಳಿಸುವುದಕ್ಕೆ ಒಂದು ಸಮರ್ಪಕವಾದ ರೋಸ್ಟಿಂಗ್ ವಿಧಾನವನ್ನು ಅಭಿವೃದ್ಧಿಗೊಳಿಸಲಾಯಿತು. ಏಕಪ್ರಕಾರವಾಗಿ ವಿನ್ಯಾಸಗೊಳಿಸಲ್ಪಟ್ಟ ಸ್ಪೌಟೆಡ್ ಬೆಡ್ ರೋಸ್ಟರ್ ಹಾಗೆಯೇ ನಂತರದಲ್ಲಿ ದ್ರವ ನೈಟ್ರೋಜೆನ್ ಮತ್ತು ಗ್ರೌಂಡ್ ಇನ್ ಕ್ರಯೋಗ್ರೈಂಡರ್ ಮತ್ತು ಹ್ಯಾಮರ್ ಮಿಲ್‌ನಲ್ಲಿ ರೋಸ್ಟ್ ಮಾಡಲ್ಪಟ್ಟ ಹಸಿರು ಕಾಫೀ ಬೀಜಗಳು (peaberry) ಸಾಂಪ್ರದಾಯಿಕ ಡ್ರಮ್ ರೋಸ್ಟಿಂಗ್‌ಗೆ ಪ್ರತಿಯಾಗಿ ಹೆಚ್ಚಿನ ಪ್ರಮಾಣದ ಕೆಫೀನ್ ಮತ್ತು ಕಡಿಮೆ ಪ್ರಮಾಣದ ಕ್ಲೋರೋಜೆನಿಕ್ ಆಮ್ಲ ಮತ್ತು ಅಸ್ಥಿರ ಸಂಯುಕ್ತಗಳನ್ನು ಹೊಂದಿರುತ್ತವೆ ಎಂಬುದು ತಿಳಿದು ಬಂದಿತು. ಬಣ್ಣ ಬದಲಾವಣೆಯ ಪ್ರಮಾಣ ಮತ್ತು ಬಣ್ಣ ನಶಿಸುವಿಕೆಯ ವಿಧಾನವು ಪ್ರಾಥಮಿಕ ಮಟ್ಟದಲ್ಲಿದೆ ಮತ್ತು ಸಾಂಪ್ರದಾಯಿಕ ಡ್ರಮ್ ರೋಸ್ಟಿಂಗ್ ವಿಧಾನಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದೆ ಎಂಬುದನ್ನು ಅವಲೋಕಿಸಲಾಯಿತು. ಪ್ರಸ್ತುತದ ಅಧ್ಯಯನದಲ್ಲಿ ಕಾಫೀ ಉದ್ಧರಣಗಳಿಂದ 15 ಸ್ವಾದಭರಿತ ಸಂಯುಕ್ತಗಳನ್ನು ಗುರುತಿಸಲಾಯಿತು, ಇದು ಸ್ವಾದಭರಿತ ಸಂಯುಕ್ತಗಳಾದ ಫ್ಯೂರನ್ಸ್ ಮತ್ತು ಥೈಯೋಲ್ಸ್‌ನ ಸ್ವಾದದ ಉಳಿಸಿಕೊಳ್ಳುವಿಕೆಗೆ ಕಾರಣವಾಯಿತು. ಮುಖ್ಯವಾದ ಸಂಯುಕ್ತಗಳೆಂದರೆ 1–ಪ್ರೊಪೆನ್–2–ಆ್ಯಸಿಟೇಟ್, 3–ಫ್ಯೂರಾನ್‌ಮಿಥಾನಲ್ ಮತ್ತು ಫ್ಯೂರಾನ್, 2 [methylthio] ಮೀಥೈಲ್. ಮೇಲ್ಮೈಯಲ್ಲಿ ಮತ್ತು ಬೀಜಗಳ ಒಳಗೆ ಶಾಖ ಮತ್ತು ಸಮೂಹ ವರ್ಗಾವಣೆ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಮಾದರಿ ವಿಧಾವನ್ನು ಸಿಂಧುವಾಗಿಸುವುದಕ್ಕೆ ಮಟೀರಿಯಲ್ ಬ್ಯಾಲೆನ್ಸ್, ಏರ್ ಹೀಟ್ ಬ್ಯಾಲೆನ್ಸ್ ಮತ್ತು ಹೀಟ್ ಬ್ಯಾಲೆನ್ಸ್‌ಗಳನ್ನು ಪರಿಗಣಿಸಿ ಒಂದು ಗಣಿತಶಾಸ್ತ್ರೀಯ ವಿಧಾನವನ್ನು ಪ್ರಸ್ತುತಪಡಿಸಲಾಯಿತು. ಪ್ರಸ್ತುತಪಡಿಸಲ್ಪಟ್ಟ ರೋಸ್ಟಿಂಗ್ ವಿಧಾನವು ಉತ್ತಮ ಗುಣಮಟ್ಟದ ಕಾಫೀ ಬೀಜಗಳನ್ನು ಉತ್ಪಾದಿಸುವುದಕ್ಕೆ ಮತ್ತು ಇದರ ಆರ್ಥಿಕ ಮೌಲ್ಯವನ್ನು ವರ್ಧಿಸುವುದಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿದೆ.

**ಶೆಲ್ಫ್ ಲೈಫ್ ಆಫ್ ಪಾಪ್ಯುಲರ್ ಸ್ನ್ಯಾಕ್ಸ್ (ಇಂದಿರಮ್ಮ ಎಜರ್)**

ಸಾಂಪ್ರದಾಯಿಕ ಜನಪ್ರಿಯ ತಿಂಡಿಗಳಾದ ತೆಂಗೊಳಲು ಮತ್ತು ಶಂಕರಪೋಳಿಗಳನ್ನು ವಿಭಿನ್ನವಾದ ಕರಿಯುವಿಕೆಯ ವಿಧಾನಗಳಾದ ಸಂಸ್ಕರಿತ ಸೂರ್ಯಕಾಂತಿ ಎಣ್ಣೆ, ಶೇಂಗಾ ಎಣ್ಣೆ, ಪಾಮ್ ಆಯಿಲ್ ಮತ್ತು ಕೊಬ್ಬರಿ ಎಣ್ಣೆಗಳನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಖಾದ್ಯಗಳು ಮತ್ತು ದೀರ್ಘವಾದ ಶೆಲ್ಫ್ ಲೈಫ್ ಅನ್ನು ನಿರ್ಧರಿಸುವ ಉದ್ದೇಶದಿಂದ

ಅತ್ಯುತ್ತಮವಾದ ಕರಿಯುವಿಕೆಯ ಮಾಧ್ಯಮವನ್ನು ಗುರುತಿಸಲಾಯಿತು. ಷೆಲ್ಫ್ ಲೈಫ್ ಅನ್ನು ಉತ್ತಮಗೊಳಿಸುವುದಕ್ಕೆ ಪ್ಯಾಕೇಜಿಂಗ್ ಸರಕುಗಳ ವಿಭಿನ್ನವಾದ ಅಂಶಗಳು ಮತ್ತು ನಿರ್ವಾತ ಮತ್ತು ವಿಭಿನ್ನ ಅನಿಲಗಳಾದ ಇಂಗಾಲದ ಡೈಆಕ್ಸೈಡ್ ಮತ್ತು ನೈಟ್ರೋಜೆನ್‌ಗಳ ಪ್ರಭಾವಗಳನ್ನೂ ಕೂಡ ಅಧ್ಯಯನ ಮಾಡಲಾಯಿತು. ಕರಿಯುವಿಕೆಯ ಮಾಧ್ಯಮ ಮತ್ತು ಲಭ್ಯವಿರುವ ಆಮ್ಲಜನಕಗಳು ಷೆಲ್ಫ್ ಲೈಫ್‌ನ ನಿರ್ಧಾರಣ ಮಾಡುವಿಕೆಯ ಪ್ರಮುಖ ಅಂಶಗಳಾಗಿವೆ ಎಂಬುದು ತಿಳಿದು ಬಂದಿತು. ಸೂರ್ಯಕಾಂತಿ ಎಣ್ಣೆ, ಶೇಂಗಾ ಎಣ್ಣೆ, ಪಾಲ್ಮ್ ಆಯಿಲ್ ಮತ್ತು ಕೊಬ್ಬರಿ ಎಣ್ಣೆಗಳಲ್ಲಿ ಅನುಕ್ರಮವಾಗಿ 1:2:5:>6 ಅನುಪಾತದಲ್ಲಿ ಕರಿಯಲ್ಪಟ್ಟ ಎರಡೂ ಉತ್ಪನ್ನಗಳ ಷೆಲ್ಫ್ ಲೈಫ್ ಮತ್ತು ನೈಟ್ರೋಜೆನ್ ಪ್ಯಾಕಿಂಗ್ ಏಕಪ್ರಕಾರದ ಸನ್ನಿವೇಶಗಳಲ್ಲಿ ಷೆಲ್ಫ್ ಲೈಫ್ ಅನ್ನು 3 ಪಟ್ಟು ಹೆಚ್ಚಿಸುತ್ತದೆ.

**ಎಲ್‌ಪಿಜಿ ಬೇಸ್‌ಡ್ ಲಿಕ್ವಿಡ್ ಫುಡ್ ಪ್ಯಾಶ್ಚರೈಸೇಷನ್ ಸಿಸ್ಟಮ್ (ಸಟೀಶ್ ಎಚ್‌ಎಸ್)**

ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಹೀಟಿಂಗ್‌ಗಾಗಿ ಎಲ್‌ಪಿಜಿ ಆಧಾರಿತ ದ್ರವ ಆಹಾರ ಪಾಶ್ಚರೀಕರಣ ವಿಧಾನವನ್ನು ವಿನ್ಯಾಸಗೊಳಿಸಲಾಯಿತು. ಪ್ರತ್ಯಕ್ಷವಾದ ವ್ಯವಸ್ಥೆಯಲ್ಲಿ, ಉತ್ಪನ್ನದ ಟ್ಯೂಬ್ ಬೆಂಕಿಯ ಉರಿಯ ಸಮೀಪದಲ್ಲಿರುತ್ತದೆ ಮತ್ತು ಈ ಸಂದರ್ಭದಲ್ಲಿ ಫೌಲಿಂಗ್ ಸಮಸ್ಯೆಯನ್ನು ಗಮನಿಸಲಾಯಿತು. ಈ ವಿನ್ಯಾಸದಲ್ಲಿ ಕ್ಲೀನ್–ಇನ್–ಪ್ಲೇಸ್ (ಸಿಐಪಿ)ನ ಸಂಯೋಜನೆಯ ಜೊತೆಗೆ ಫೌಲಿಂಗ್ ಅನ್ನು ನಿಯಂತ್ರಿಸಲಾಯಿತು ಆ ಮೂಲಕ ಪ್ರಕ್ರಿಯೆಯು ನಡೆಯುತ್ತಿರುವ ಸಂದರ್ಭದಲ್ಲಿ ಉತ್ಪನ್ನದ ಹರಿವು ಪೂರ್ಣಗೊಳ್ಳುವುದಕ್ಕೂ ಮುನ್ನ ತಣ್ಣಗೊಳಿಸುವ ನೀರು ವ್ಯವಸ್ಥೆಯೊಳಕ್ಕೆ ಹರಿದು ಬರುತ್ತದೆ. ಈ ವ್ಯವಸ್ಥೆಯನ್ನು ಹಾಲು ಮತ್ತು ಲಿಂಬು, ಕಿತ್ತಳೆ, ಮಾವು ಮತ್ತು ಟೊಮ್ಯಾಟೋದಂತಹ ವಿವಿಧ ಹಣ್ಣಿನ ಜ್ಯೂಸ್‌ಗಳಿಗೆ ಸಂಬಂಧಿಸಿದಂತೆ 6 l/min ನ ಗರಿಷ್ಠ ಹರಿವಿನ ಪ್ರಮಾಣದ ಜೊತೆಗೆ 65–85°C ನವರೆಗೆ ಬದಲಾಗುವ ಉಷ್ಣಾಂಶದ ಜೊತೆಗೆ ಪಾಶ್ಚರೀಕರಣ ಪ್ರಕ್ರಿಯೆಗಾಗಿ ಪರಿಶೀಲನೆಗೆ ಒಳಪಡಿಸಲಾಯಿತು. ಉತ್ಪನ್ನದ ಹರಿವು ಮತ್ತು ಇಂಧನದ ಹರಿವನ್ನು ಸರಿಪಡಿಸುವ ಮೂಲಕ ಉತ್ಪನ್ನದ ಉಷ್ಣಾಂಶವನ್ನು ನಿಯಂತ್ರಿಸಲಾಗುತ್ತದೆ. ಒಂದು ಅಪರೋಕ್ಷವಾದ ವ್ಯವಸ್ಥೆಯನ್ನೂ ಕೂಡ ವಿನ್ಯಾಸಗೊಳಿಸಲಾಯಿತು, ಇದರಲ್ಲಿ ಉತ್ಪನ್ನದ ಟ್ಯೂಬ್ ಹಬೆಯಲ್ಲಿರುತ್ತದೆ ಅಥವಾ ನೀರಿನ ಮಾಧ್ಯಮದಲ್ಲಿರುತ್ತದೆ.

ಪಾಶ್ಚರೀಕರಣ ವ್ಯವಸ್ಥೆಯ ಸ್ಯಾನ್ಸ್ ವಿದ್ಯುತ್ ವ್ಯವಸ್ಥೆಯನ್ನು ಪೂರ್ಣಗೊಳಿಸುವುದಕ್ಕೆ, ಒಂದು ಎಲ್‌ಪಿಜಿ ಆಧಾರಿತ ಶಾಖ ಪ್ರತಿಬಂಧಕವನ್ನೂ ಕೂಡ ವಿನ್ಯಾಸಗೊಳಿಸಲಾಯಿತು ಮತ್ತು ಅಭಿವೃದ್ಧಿಗೊಳಿಸಲಾಯಿತು. ಹಲವಾರು ಥರ್ಮೋ (ಶಾಖ) ಪ್ಲಾಸ್ಟಿಕ್‌ಗಳಿಗೆ ಪ್ರತಿಬಂಧಕದ ಕಾರ್ಯನಿರ್ವಹಣೆಯ ಪರಿಶೀಲನೆಯನ್ನೂ ಕೂಡ ನಡೆಸಲಾಯಿತು.

**ಇವ್ಯಾಲ್ಯುಯೇಷನ್ ಆಫ್ ಬೊಟಾನಿಕಲ್ಸ್ ಫಾರ್ ಇನ್‌ಸೆಕ್ಟಿಸೈಡಲ್ ಪೊಟೆನ್ಷಿಯಲ್ (ಸುಮಿತ್ರಾ ದೇವಿ ಎಸ್)**

ಸಸ್ಯದ ಘಟಕಗಳು ಉದಾಹರಣೆಗೆ ಫ್ಲಾಕ್ಸ್ ಬೀಜ, ಕಚೂರ್ ರಿಜೋಮ್ಸ್, ಜ್ಯಾಮೂನ್ ಬೀಜಗಳು ಮತ್ತು ಜ್ಯಾಮೂನ್ ಸೀಡ್ ಕೋಟ್ ಪುಡಿಗಳನ್ನು ಸೀಕ್ವೆನ್ಷಿಯಲ್ ಉದ್ಧರಣಕ್ಕೆ ಒಳಪಡಿಸಲಾಯಿತು, ಅಂದರೆ ಹೆಕ್ಸೇನ್–>ಕ್ಲೋರೋಫಾರ್ಮ್–>ಮಿಥೆನಾಲ್–>ನೀರು ಮತ್ತು ಈ ಉದ್ಧರಣಗಳನ್ನು ಎಸ್. ಒರೈಜ್‌ಗೆ ಪ್ರತಿಯಾಗಿ ಅವುಗಳ ಕೀಟನಾಶಕ ಸಂಭಾವ್ಯತೆಗಾಗಿ ಪರಿಶೀಲನೆಗೆ ಒಳಪಡಿಸಲಾಯಿತು. ಎಸ್. ಒರೈಜ್‌ನಲ್ಲಿ ನಿರಂತರತೆಯನ್ನು ಕಾಯ್ದಿರಿಸಿಕೊಳ್ಳುವಲ್ಲಿ 500 ಪಿಪಿಎಮ್ ಮತ್ತು 1000 ಪಿಪಿಎಮ್ ಗಳಲ್ಲಿ ಎಸ್. ಒರೈಜ್‌ಗೆ ಪ್ರತಿಯಾಗಿ ಗೋಧಿಯ ಮೇಲೆ ಈ ಮೇಲೆ ನಮೂದಿಸಿದ ಪ್ರತಿಯೊಂದು ಉದ್ಧರಣದ ಜೈವಿಕಪರಿಶೀಲನೆಯ ಫಲಿತಾಂಶಗಳು ಹೆಚ್ಚು ಕಾರ್ಯದಕ್ಷತೆಯನ್ನು ತೋರ್ಪಡಿಸುತ್ತವೆ ಎಂಬುದು ತಿಳಿದು ಬಂದಿತು. ಅವುಗಳ ಕಾರ್ಯಕ್ಷಮತೆಯು ಅನುಕ್ರಮವಾಗಿ 78.33, 53.33, 47.0, ಮತ್ತು 15.0%ದ ಮರಣ ಪ್ರಮಾಣದ ಜೊತೆಗೆ ಕಚೂರ್–>ಫ್ಲಾಕ್ಸ್ ಬೀಜ–>ಜ್ಯಾಮೂನ್ ಸೀಡ್ ಕೋಟ್–>ಜ್ಯಾಮೂನ್ ಸೀಡ್ ಮಾದರಿಯನ್ನು ಹೊಂದಿದ್ದವು. ಕ್ಲೋರೋಫಾರ್ಮ್ ಉದ್ಧರಣಗಳ ಜೊತೆಗೆ ಜ್ಯಾಮೂನ್ ಸೀಡ್ ಕೋಟ್ 45% ಕೀಟನಾಶಕ ಮರಣ ಪ್ರಮಾಣವನ್ನು ಪ್ರದರ್ಶಿಸಿದವು. F1 ಪ್ರೊಗೆನಿಯಲ್ಲಿ ಈ ಉದ್ಧರಣಗಳ ಪ್ರಭಾವದ ಜೊತೆಗೆ ಇದೇ ರೀತಿಯಾದ ಪ್ರವೃತ್ತಿಯನ್ನು ವೀಕ್ಷಿಸಲಾಯಿತು. F1 ಸಂಖ್ಯೆಯನ್ನು ಕಡಿಮೆಗೊಳಿಸುವಲ್ಲಿ ಅವುಗಳ ಕಾರ್ಯದಕ್ಷತೆಯು ಕಚೂರ್–>ಫ್ಲಾಕ್ಸ್ ಸೀಡ್–>ಜ್ಯಾಮೂನ್ ಸೀಡ್ ಕೋಟ್–>ಜ್ಯಾಮೂನ್ ಸೀಡ್ ಮಾದರಿಯನ್ನು ಒಳಗೊಂಡಿತ್ತು.

**ಮೈಕ್ರೋವೇವ್ ಪ್ರೊಸೆಸಿಂಗ್ ಆಫ್ ವೆಜಿಟೇಬಲ್ಸ್ ಎಂಡ್ ಸ್ಪೈಸಸ್ (ಉಮೇಶ್ ಹೆಬ್ಬಾರ್ ಎಚ್)**

ಗರಿಷ್ಠಗೊಳಿಸಲ್ಪಟ್ಟ ಸಂಸ್ಕರಣ ಸಂದರ್ಭಗಳಲ್ಲಿ, ರೆಡ್ ಬೆಲ್ ಪೇಪರ್ ತುಂಡುಗಳ ಮೇಲೆ ಮೈಕ್ರೋವೇವ್ ಬ್ಲ್ಯಾಂಚಿಂಗ್‌ನ ಅನ್ವಯಿಕೆಯು ಹೆಚ್ಚಿನ ಮಟ್ಟದಲ್ಲಿ ಎಸ್ಕೊರ್ಬಿಕ್ ಆಮ್ಲ (92.3%) ಮತ್ತು ಬಿ – ಕ್ಯಾರೊಟೀನ್‌ನ (79.5%) ಹಿಡಿದಿಟ್ಟುಕೊಳ್ಳುವಿಕೆಗೆ ಕಾರಣವಾಯಿತು ಹಾಗೆಯೇ ಉದ್ದೇಶಿತ ಮಟ್ಟಕ್ಕೆ ಪೆರಾಕ್ಸಿಡೇಸ್ ಮತ್ತು ಪಾಲಿಫಿನಾಲಾಕ್ಸಿಡೇಸ್ ಕಿಣ್ವಗಳ ನಿಷ್ಕ್ರಿಯಗೊಳಿಸುವಿಕೆಗೂ ಕೂಡ ಕಾರಣವಾಯಿತು. ಮತ್ತೊಂದು ಕಾರ್ಯವಿಧಾನದಲ್ಲಿ, ವಿಭಿನ್ನ ಉಷ್ಣಾಂಶಗಳಲ್ಲಿ ಸಂಸ್ಕರಣೆ ನಡೆಸುವ ಸಂದರ್ಭದಲ್ಲಿ ಬ್ಲ್ಯಾಕ್ ಪೆಪ್ಪರ್ (ಕಾಳುಮೆಣಸು) ನ ಶುದ್ಧೀಕರಣದ ಮೇಲೆ ಇನ್‌ಫ್ರಾರೆಡ್ (ಐಆರ್) ವಿಕಿರಣಗಳ ಪರಿಣಾಮದ ಬಗ್ಗೆಯೂ ಅಧ್ಯಯನ ನಡೆಸಲಾಯಿತು. ಹೆಚ್ಚಿನ ಉಷ್ಣಾಂಶದಲ್ಲಿ ಸಂಸ್ಕರಣೆ ನಡೆಸುವಿಕೆಯು ಕೋಲಿಫಾರ್ಮ್ಸ್, ಸಾಲ್ಮೋನೆಲ್ಲಾ, ಶಿಗೆಲ್ಲಾ ಮತ್ತು ಇ. ಕೋಲಿ ಇವುಗಳನ್ನು ಸಂಪೂರ್ಣವಾಗಿ ತೊಡೆದುಹಾಕುವಿಕೆಯನ್ನು ಸಾಧಿಸುವುದರಲ್ಲಿ ಪರಿಣಾಮಕಾರಿಯಾಗಿರುವುದು ಮಾತ್ರವಲ್ಲ ಅದರೆ ಒಟ್ಟೂ ಎರೋಬಿಕ್ ಮೆಸೋಫೈಲ್ಸ್ ಮತ್ತು ಒಟ್ಟು ಯೀಸ್ಟ್ ಮತ್ತು ಮೋಲ್ಡ್‌ಗಳನ್ನು ಉದ್ದೇಶಿತ ಮಟ್ಟಕ್ಕೆ ತರುವುದಕ್ಕೂ ಕೂಡ ಸಹಾಯ ಮಾಡುತ್ತದೆ. ಹೆಚ್ಚಿನ ಪ್ರಮಾಣದ ಉದ್ಧರಣದ ಕಾರಣದಿಂದಾಗಿ ಬೀಜಗಳ ಅಸ್ಥಿರ ಎಣ್ಣೆಯನ್ನು ಹಿಡಿದಿಟ್ಟುಕೊಳ್ಳುವಿಕೆಯು 100% ಕ್ಕಿಂತ ಹೆಚ್ಚಿನ ಮಟ್ಟದಲ್ಲಿರುವುದು ಕಂಡುಬಂದಿತು. ಕಡಿಮೆ ಉಷ್ಣಾಂಶಗಳಲ್ಲಿ ಶುದ್ಧೀಕರಿಸಲ್ಪಟ್ಟ ಬೀಜಗಳಲ್ಲಿ ಪೈಪ್‌ರಿನ್ ಮತ್ತು ರೆಸಿನ್ ಅಂಶವು ಯಾವುದೇ ಬದಲಾವಣೆಯನ್ನು ತೋರಿಸಲಿಲ್ಲ. 7 ನಿಮಿಷಗಳವರೆಗೆ ಕಾಳು ಮೆಣಸಿನ ಮೈಕ್ರೋವೇವ್ ಶುದ್ಧೀಕರಣವು ಉದ್ದೇಶಿತ ಮಟ್ಟದವರೆಗೆ ಮೈಕ್ರೋಬಯಾಲ್ ಅಂಶವನ್ನು ತೊಡೆದುಹಾಕುವಲ್ಲಿ ಪರಿಣಾಮಕಾರಿಯಾಗಿರುವುದು ಕಂಡುಬಂದಿತು. ಈ ಕಾರ್ಯವಿಧಾನದಲ್ಲಿ ತೇವಾಂಶವನ್ನು ವರ್ಧಿಸಿದ ಸಂದರ್ಭದಲ್ಲಿ ರೇಡಿಯೋ–ಫ್ರೀಕ್ವೆನ್ಸಿ ಉದ್ದೇಶಿತ ಮಟ್ಟದವರೆಗೆ ಮೈಕ್ರೋಬಯಾಲ್ ಅಂಶವನ್ನು ಪರಿಣಾಮಕಾರಿಯಾಗಿ ತೊಡೆದುಹಾಕುವುದು ಕಂಡುಬಂದಿತು.

**ಬಯೋಫಂಕ್ಷನಲ್ ಅಪ್ಲಿಕೇಷನ್ಸ್ ಆಫ್ ಮರೀನ್ ಕ್ಯಾರೊಟಿನಾಯ್ಡ್ಸ್ (ಭಾಸ್ಕರನ್ ವಿ)**

ಬೆಳಕು ಮತ್ತು ಶಾಖ ಸಂವೇದಿ ಜೈವಿಕಕ್ರಿಯಾಶೀಲ ಕ್ಯಾರಟಿನಾಯ್ಡ್ ಫ್ಯುಕೋಕ್ಸಾಂಥಿನ್‌ನ (FUCO) ಸ್ಥಿರತೆ ಮತ್ತು ಜೈವಿಕ ಲಭ್ಯತೆಯ ಸುಧಾರಣೆಯ ಬಗೆಗಿನ ಅಧ್ಯಯನಗಳನ್ನು ಕೈಟೋಸನ್‌ನಲ್ಲಿ (ಸಿಎಸ್)

FUCO ವನ್ನು ಎನ್‌ಕ್ಯಾಪ್ಸುಲೇಟ್– ಅಯಾನಿಕ್ ಗೆಲೇಷನ್ ವಿಧಾನದ ಮೂಲಕ ತಯಾರಿಸಲ್ಪಟ್ಟ ಸೋಡಿಯಮ್ ಟ್ರೈಪಾಲಿಫಾಸ್ಪೇಟ್ (ಟಿಪಿಪಿ) – ಗ್ಲೈಕೋಲಿಪಿಡ್ (ಜಿಎಲ್) ನ್ಯಾನೋಜೆಲ್ಸ್ – ಮಾಡುವ ಮೂಲಕ ನಿರ್ವಹಿಸಲಾಯಿತು. ಸ್ಕ್ಯಾನಿಂಗ್ ಎಲೆಕ್ಟ್ರಾನ್ ಮೈಕ್ರೋಸ್ಕೋಪ್ ಮತ್ತು ಡೈನಾಮಿಕ್ ಲೈಟ್ ಸ್ಕ್ಯಾಟರಿಂಗ್ ಪರಿಶೀಲನೆಗಳು CS: TPP (2.5:1), CS: GL (1:0.5) ತೂಕದ ಅನುಪಾತಗಳಲ್ಲಿ 300–600 ಎನ್‌ಎಮ್ ಗಾತ್ರದ ವ್ಯಾಪ್ತಿಯ ಜೊತೆಗೆ ಸುಗಮವಾದ ಮತ್ತು ಗೋಲಾಕೃತಿಯ ನ್ಯಾನೋಜೆಲ್‌ಗಳ ಇರುವಿಕೆಯನ್ನು ತೋರ್ಪಡಿಸಿದವು. FUCO + GL (+30 to 50 mV) ಜೊತೆಗೆ ಸಿಎಸ್–ಎನ್‌ಜಿ ಗಳ ಝೀಟಾ ಸಂಭಾವ್ಯತೆಯು ಗ್ಲೈಕೋಪಾಲಿಡ್ ರಹಿತವಾಗಿ (+15 mV) ಹೆಚ್ಚು ಸ್ಥಿರವಾಗಿತ್ತು. FUCO (ಫ್ಯೂಕೋ) ಮತ್ತು ಸಿಎಸ್ ಇವುಗಳ ನಡುವೆ ಒಂದು ತೀವ್ರವಾದ ಹೈಡ್ರೋಜೆನ್ ಬಂಧಿತ ಪರಸ್ಪರ ಕ್ರಿಯೆಯು ಸಂಭವಿಸುತ್ತದೆ ಎಂಬುದನ್ನು ಫೋರಿಯರ್ ಟ್ರಾನ್ಸ್‌ಫಾರ್ಮ್ ಇನ್‌ಫ್ರಾರೆಡ್ ಸ್ಪೆಕ್ಟ್ರೋಸ್ಕೋಪಿ ಅಧ್ಯಯನಗಳು ಪ್ರಸ್ತುತಪಡಿಸಿದವು. ಎಕ್ಸ್–ರೇ ಡಿಫ್ರ್ಯಾಕ್ಷನ್ (ವಿವರ್ತನ) ಮೂಲಕ ತೋರಿಸಲ್ಪಟ್ಟಂತೆ ಸಿಎಸ್–ಎನ್‌ಜಿ ಗಳಲ್ಲಿ ಫೊಹ್ಯೂಕೋ ವು ಒಂದು ಅಸಂಬದ್ಧವಾದ ಸ್ಥಿತಿಯಲ್ಲಿ ವಿಂಗಡಿಸಲ್ಪಟ್ಟಿದೆ. ಎನ್‌ಕ್ಯಾಪ್ಸುಲೇಷನ್ ಕಾರ್ಯದಕ್ಷತೆ, ಲೋಡಿಂಗ್ ಸಾಮರ್ಥ್ಯ ಮತ್ತು ನ್ಯಾನೋಜೆಲ್‌ಗಳ ಉತ್ಪನ್ನಗಳು ಅನುಕ್ರಮವಾಗಿ 90%, 85% ಮತ್ತು 70% ಇದ್ದವು. CS-NGs ಗಳಿಂದ ಬಿಡುಗಡೆಯಾಗಲ್ಪಟ್ಟ ಸಾಂದ್ರತೆ ಅವಲಂಬಿತ ಫ್ಯೂಕೋ ಪ್ರಾಥಮಿಕವಾಗಿ ಒಂದು ತ್ವರಿತಗತಿಯ ಬರ್ಸ್ಟ್ ಬಿಡುಗಡೆಯನ್ನು ನಂತರದಲ್ಲಿ ಜೀರೋ ಆರ್ಡರ್ ಕೈನೆಟಿಕ್ಸ್ (10 ಗಂಟೆಗಳವರೆಗೆ) ಅನ್ನು ನಂತರದಲ್ಲಿ 24 ಗಂಟೆಗಳವರೆಗೆ ಸ್ಥಿರವಾದ ಬಿಡುಗಡೆಯನ್ನು ಪ್ರದರ್ಶಿಸಿತು. CS-NGs ಗಳಲ್ಲಿ ಗ್ಲೈಕೋಲಿಪಿಡ್ ವರ್ಧಿತ ಫ್ಯೂಕೋ ಸ್ಥಿರತೆಯನ್ನು ಒದಗಿಸುತ್ತದೆ. ಜಿಎಲ್ ಜೊತೆಗೆ CS-NGs ದಿಂದ ಇನ್ ವಿಟ್ರೋ ಫ್ಯೂಕೋದ ಜೈವಿಕಲಭ್ಯತೆಯು ಜಿಎಲ್ ರಹಿತ ವಿಧಾನಕ್ಕೆ ಹೋಲಿಸಿ ನೋಡಿದಾಗ ಹೆಚ್ಚಿನ ಪ್ರಮಾಣದಲ್ಲಿತ್ತು.

**ಬಯೋಕೆಮಿಕಲ್ ಕ್ಯಾರೆಕ್ಟರೈಸೇಷನ್ ಆಫ್ ನ್ಯೂಟ್ರಾಸ್ಯುಟಿಕಲ್ಸ್ ಫ್ರಾಮ್ ಆಯಿಲ್‌ಸೀಡ್ಸ್ ಎಂಡ್ ಸೀರಿಯಲ್ಸ್ (ಶ್ರೀದೇವಿ ಎ ಸಿಂಗ್, ಜ್ಯೋತಿ ಲಕ್ಷ್ಮೀ ಎ)**

DOCA ಸಂಯೋಜಿತ ಹೈಪರ್‌ಟೆನ್ಸೀವ್ ಇಲಿಗಳಲ್ಲಿ ಪೋಸ್ಟ್–ಓರಲ್ ನಿಯಂತ್ರಣದ ಮೂಲಕ ಹೈಪೋಟೆನ್ಸೀವ್ ಪರಿಣಾಮದ ಬಗ್ಗೆ ತಿಳಿಯುವುದಕ್ಕೆ ರೈಸ್ ಬ್ರಾನ್ (ಆರ್‌ಬಿ) ಆರ್ಗಿನೀನ್ ಪೆಪ್ಟೈಡ್ ಅಂಶಗಳನ್ನು ಪರಿಶೀಲಿಸಲಾಯಿತು. ಫ್ರ್ಯಾಕ್ಷನ್‌ಗಳು ಸೈಕ್ಲಿಕ್ ಜಿಎಮ್‌ಪಿ ಮಟ್ಟಗಳನ್ನು ಮತ್ತು ಪ್ಲಾಸ್ಮಾ ಮತ್ತು ಕಿಡ್ನಿಯಲ್ಲಿ ನೈಟ್ರಿಕ್ ಆಕ್ಸೈಡ್ ಮಟ್ಟಗಳನ್ನು ಹೆಚ್ಚಿಸಿದವು ಮತ್ತು ಹೆಚ್ಚಿನ ಒತ್ತಡವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದವು.

ಸ್ಯಾಪೋನಿನ್‌ಗಳನ್ನು ಜರ್ಮಿನೇಟೆಡ್ ಸೋಯಾಬೀನ್ಸ್‌ನಿಂದ ಪಡೆದುಕೊಳ್ಳಲಾಗುತ್ತದೆ. ಮಾಸ್ ಸ್ಪೆಕ್ಟ್ರೋಮೆಟ್ರಿಕ್ ವಿಶ್ಲೇಷಣೆಯ ಮೂಲಕ ಗುಂಪು ಎ – Aa, Ab, Ae ಮತ್ತು Af ಮತ್ತು ಗುಂಪು ಬಿ– Bb (I), Bc (II) and Bb' (III) ಯ ಸ್ಯಾಪೋನಿನ್‌ಗಳನ್ನು ಪ್ರತ್ಯೇಕಗೊಳಿಸಲಾಯಿತು.

ಶಾಖ ಸಂಸ್ಕರಣೆಯ ವಿಭಿನ್ನ ವಿಧಾನಗಳು ಮತ್ತು ಯುವಿ ಕಿರಣಗಳಿಗೆ ಅನಾವರಣದ ಬಗೆಗಿನ ಅಧ್ಯಯನಗಳು ಸಾಸಿವೆ ಬೀಜಗಳಲ್ಲಿ ಗ್ಲ್ಯೂಕೋಸಿನೋಲೇಟ್‌ಗಳ ತೊಡೆದುಹಾಕುವಿಕೆಗೆ ಪ್ರಯತ್ನಗಳನ್ನು ನಡೆಸಿದವು. 15 ನಿಮಿಷಗಳವರೆಗೆ 95–105 °C ಯಲ್ಲಿ ಒಣಗಿಸುವಿಕೆಯು ಗ್ಲ್ಯೂಕೋಸಿನೋಲೇಟ್‌ಗಳನ್ನು ಕಡಿಮೆಗೊಳಿಸುವಲ್ಲಿ ಪರಿಣಾಮಕಾರಿಯಾಗಿರುವುದು ಕಂಡುಬಂದಿತು.

ನೈಸರ್ಗಿಕ ಕಪ್ಪು ಬಣ್ಣವನ್ನು ಸೆಸಮಿ (ಎಳ್ಳಿನ) ಹೊಟ್ಟಿನಿಂದ (142.6 mg/g) ಪಡೆದುಕೊಳ್ಳಲಾಗುತ್ತದೆ ಮತ್ತು ಕಂದುಬಣ್ಣವನ್ನು ಸಾಸಿವೆ ಹೊಟ್ಟಿನಿಂದ (54.5 mg/g) ಪಡೆದುಕೊಳ್ಳಲಾಗುತ್ತದೆ. ರಾಸಾಯನಿಕ ಪರೀಕ್ಷೆಗಳಿಗೆ ಅನುಗುಣವಾಗಿ, ಈ ಬಣ್ಣಗಳ ಯುವಿ–ಗೋಚರ ಹೀರಿಕೆ ಸ್ಪೆಕ್ಟ್ರಾ ಮತ್ತು ಎಫ್‌ಟಿಐಆರ್ ಸ್ಪೆಕ್ಟ್ರೋಸ್ಕೋಪಿಗಳನ್ನು 'ಮೆಲನಿನ್' ತರಹದ ಪಿಗ್‌ಮೆಂಟ್‌ಗಳು ಎಂಬುದಾಗಿ ಗುರುತಿಸಲ್ಪಟ್ಟಿವೆ.

ಸೋಯಾಬೀನ್, ಗ್ಲೈಸಿನಿನ್ ಮತ್ತು ಕಾಂಗ್ಲೈಸಿನಿನ್‌ಗಳ ಎರಡು ಪ್ರಮುಖ ಗ್ಲೋಬ್ಯುಲಿನ್‌ಗಳನ್ನು ಸೋಡಿಯಮ್ ಬೈಸಲ್ಫೇಟ್‌ನ ಅಸ್ತಿತ್ವದ ಜೊತೆಗೆ ಪ್ರತ್ಯೇಕಗೊಳಿಸಲಾಯಿತು, ಸೋಡಿಯಮ್ ಬೈಸಲ್ಫೇಟ್ ಇದು 16% ಗ್ಲೈಸಿನಿನ್ ಮತ್ತು 13.4% ಕಾಂಗ್ಲೈಸಿನಿನ್ ಅನ್ನು ಉತ್ಪತ್ತಿ ಮಾಡಬಲ್ಲ ಒಂದು ರಿಡಕ್ಟಂಟ್ ಆಗಿದೆ.

ಕಬ್ಬಿಣ:ಸತುವಿನ ವಿಭಿನ್ನ ಅನುಪಾತಗಳ ಜೊತೆಗೆ ಆಯಿಲ್‌ಸೀಡ್ ಹಿಟ್ಟುಗಳನ್ನು ಸಂಸ್ಕರಿಸಲಾಯಿತು, ಸತು ಖನಿಜವು ಕಬ್ಬಿಣದ ಜೈವಿಕಲಭ್ಯತೆಯನ್ನು ಕಡಿಮೆಗೊಳಿಸಿತು ಮತ್ತು ಇದರ ಕಬ್ಬಿಣವು ಸತುವಿನ ಜೈವಿಕಲಭ್ಯತೆಯನ್ನು ಕಡಿಮೆಗೊಳಿಸಿತು. ಅಮೈನೋ ಆಮ್ಲಗಳ ಸಂಯೋಜನೆಯು – ಹಿಸ್ಟಿಡೀನ್, ಸಿಸ್ಟಿಯೀನ್, ಮಿಥಿಯೋನಿನ್ ಮತ್ತು ಗ್ಲೈಸೀನ್‌ಗಳು ಕೋಮಿನರಲ್ ಶುದ್ಧೀಕರಣದ ಪ್ರತಿಬಂಧಕ ಪರಿಣಾಮದ ಮೇಲೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸಿದವು.

ಬ್ಯಾಸಿಲಸ್ ಎಸ್‌ಪಿ. CFR1601 ದಿಂದ ಪಡೆದುಕೊಂಡ ಎಂಡೋ–ಮ್ಯಾನನೇಸ್ ಅನ್ನು ಜಲೀಯ ಎರಡು ಹಂತದ ವ್ಯವಸ್ಥೆಯನ್ನು ಬಳಸಿಕೊಂಡು 70% ಪುನಃಶ್ಚೇತನಗೊಳಿಸುವಿಕೆಯ ಜೊತೆಗೆ 12.32–ಫೋಲ್ಡ್ ಶುದ್ಧೀಕರಣದ ಜೊತೆಗೆ ಸಮೃದ್ಧಗೊಳಿಸಲಾಯಿತು. ಸಂಸ್ಕರಿಸಲ್ಪಟ್ಟ ಎಂಡೋ–ಮ್ಯಾನನೇಸ್ ~ 46.0 kDa ಪರಮಾಣು ತೂಕವನ್ನು ಹೊಂದಿತ್ತು ಮತ್ತು ಗ್ಲೈಕೋಸಿಲ್ ಹೈಡ್ರೋಲೇಸ್ ಫ್ಯಾಮಿಲಿ 26 ನ ಒಂದು ಭಾಗವಾಗಿತ್ತು. ಬ್ಯಾಸಿಲಸ್ ಎಸ್‌ಪಿ. CFR1601 ಯಿಂದ ಪಡೆದುಕೊಳ್ಳಲ್ಪಟ್ಟ ಎಂಡೋ–ಮ್ಯಾನನೇಸ್ ಜೀನ್ ಅನ್ನು ಇ. ಕೋಲಿ ಬಿಎಲ್21 (ಡಿಇ3) ನಲ್ಲಿ ಪ್ರತ್ಯೇಕವಾಗಿ ಅಭಿವ್ಯಕ್ತಗೊಳಿಸಲಾಗುತ್ತದೆ ಮತ್ತು ಸಮರ್ಪಕವಾದ ಏಕಪ್ರಕಾರತೆಯನ್ನು ನಿರ್ವಹಿಸುವುದಕ್ಕೆ ಪುನಃಸಂಯೋಜಿತ ಕಿಣ್ವವನ್ನು ಒಂದೇ ಹಂತದಲ್ಲಿ ಶುದ್ಧೀಕರಿಸಲಾಗುತ್ತದೆ.

**ನ್ಯಾನೋಎನ್‌ಕ್ಯಾಪ್ಸುಲೇಷನ್ ಆಫ್ ಪಾಲಿಫಿನಾಲ್ಸ್ ಫಾರ್ ಫುಡ್ ಸಪ್ಲಿಮೆಂಟ್ (ಆನಂದರಾಮಕೃಷ್ಣನ್ ಸಿ)**

ಹಸಿರು ಚಹದ ಪಾಲಿಫಿನಾಲ್‌ಗಳ ಸ್ಥಿರತೆ ಮತ್ತು ಜೈವಿಕಲಭ್ಯತೆಯನ್ನು ಉತ್ತಮಗೊಳಿಸುವುದಕ್ಕೆ ನ್ಯಾನೋಎನ್‌ಕ್ಯಾಪ್ಸುಲೇಷನ್ ಅನ್ನು ಅನ್ವಯಿಸುವ ಪ್ರಯತ್ನವನ್ನು ನಡೆಸಲಾಯಿತು. ಹಸಿರು ಚಹ ಎಲೆಗಳನ್ನು 10 ನಿಮಿಷಗಳವರೆಗೆ 80°C ಉಷ್ಣಾಂಶದಲ್ಲಿ ಮೈಕ್ರೋವೇವ್ ಸಹಾಯದ ಮೂಲಕ ಪಡೆದುಕೊಳ್ಳಲ್ಪಟ್ಟ ಹಸಿರು ಚಹ ಪಾಲಿಫಿನಾಲ್‌ಗಳ ಸಮೃದ್ಧ ಉದ್ಧರಣಗಳನ್ನು ಫ್ರೀಜ್ ಡ್ರೈ ಮಾಡಲಾಯಿತು ಮತ್ತು ಜೋಳದಿಂದ ಪಡೆದುಕೊಳ್ಳಲ್ಪಟ್ಟ ಪ್ರೋಟೀನ್ ಆಧಾರಿತ ಬಯೋಪಾಲಿಮರ್ ಆದ ಝೀನ್ (zein) ಜೊತೆಗೆ ಸಂಯೋಜಿಸಲಾಯಿತು. ಎಲೆಕ್ಟ್ರೋಸ್ಪ್ರೇಯ್ಡ್ ಅಂಶಗಳು 100 ಎನ್‌ಎಮ್ ದಿಂದ 300 ಎನ್‌ಎಮ್ ವ್ಯಾಪ್ತಿಯವರೆಗೂ ವ್ಯಾಸವನ್ನು ಹೊಂದಿರುತ್ತವೆ ಎಂಬ ಅಂಶವನ್ನು ನ್ಯಾನೋಎನ್‌ಕ್ಯಾಪ್ಸುಲೇಟೆಡ್ ಗ್ರೀನ್ ಟೀ ಪಾಲಿಫಿನಾಲ್‌ಗಳ ರೂಪವಿಜ್ಞಾನವು ಬಹಿರಂಗಪಡಿಸಿತು. ಶುದ್ಧ ಝೀನ್ ಪುಡಿಯ ಫೋರಿಯರ್ ಟ್ರಾನ್ಸ್‌ಫಾರ್ಮ್ ಇನ್‌ಫ್ರಾ ರೆಡ್ ಸ್ಪೆಕ್ಟ್ರಮ್ ಝೀನ್‌ನ ಅಮೈಡ್ I ಮತ್ತು II ಕ್ಕೆ ಸಂಬಂಧಿಸಿದಂತೆ 1661.4 cm-1 and 1532.5

cm-1 ನಲ್ಲಿ ಎರಡು ತೀವ್ರವಾದ ಬ್ಯಾಂಡ್‌ಗಳನ್ನು ಪ್ರದರ್ಶಿಸಿತು. ಎನ್‌ಕ್ಯಾಪ್ಸುಲೇಟೆಡ್ ಮಾದರಿಗಳಿಗೆ ಈ ಬ್ಯಾಂಡ್‌ಗಳ ಗೋಚರಿಕೆಯು ಎನ್‌ಕ್ಯಾಪ್ಸುಲೇಷನ್ ಸಮಯದಲ್ಲಿ ಝೀನ್ ಮತ್ತು ಗ್ರೀನ್ ಟಿ ಗಳ ನಡುವೆ ರಾಸಾಯನಿಕ ಪ್ರತಿಕ್ರಿಯೆಯ ಅನುಪಸ್ಥಿತಿಯನ್ನು ಸೂಚಿಸುತ್ತದೆ. ನ್ಯಾನೋಎನ್‌ಕ್ಯಾಪ್ಸುಲೇಟ್‌ಗಳು 100 ಎನ್‌ಎಮ್ ದಿಂದ 300 ಎನ್‌ಎಮ್ ವ್ಯಾಪ್ತಿಯ ವ್ಯಾಸವನ್ನು ಹೊಂದಿದ್ದವು. ಎಲ್ಲಾ ಮಾದರಿಗಳಿಗೆ ಎನ್‌ಕ್ಯಾಪ್ಸುಲೇಷನ್ ಕಾರ್ಯದಕ್ಷತೆಯು 75% ಕ್ಕಿಂತ ಹೆಚ್ಚಿತ್ತು ಮತ್ತು ಕೋರ್:ವಾಲ್ ಅನುಪಾತದ (1:3) ಜೊತೆಗೆ ನ್ಯಾನೋಎನ್‌ಕ್ಯಾಪ್ಸುಲೇಟೆಡ್ ಮಾದರಿಯು ಅತ್ಯಂತ ಹೆಚ್ಚಿನ ಪ್ರಮಾಣದ ಡಿಪಿಪಿಎಚ್ (DPPH) ಮೂಲರೂಪದ ಸ್ಕ್ಯಾವೆಂಜಿಂಗ್ (ಶುದ್ಧೀಕರಣ) ಸಾಮರ್ಥ್ಯವನ್ನು ಪ್ರದರ್ಶಿಸಿತು. ಈ ನ್ಯಾನೋಎನ್‌ಕ್ಯಾಪ್ಸುಲೇಟ್‌ಗಳನ್ನು ಕಾರ್ಯಾತ್ಮಕ ಆಹಾರದ ಘಟಕವನ್ನಾಗಿ ಬಳಸಿಕೊಳ್ಳಬಹುದು ಅಥವಾ ಆಹಾರ ಪ್ಯಾಕೇಜಿಂಗ್ ವಸ್ತುಗಳ ಸಂಯೋಜಕಗಳಾಗಿಯೂ ಬಳಸಿಕೊಳ್ಳಬಹುದು.

**ಸೋರ್ಗಮ್ ಅಥವಾ ಹುಲ್ಲುಜೋಳದಿಂದ ಪ್ರೋಟೀನ್–ಸಮೃದ್ಧ ಪಾಸ್ತಾ**

ಇನ್‌ಫ್ರಾರೆಡ್ ಹೀಟಿಂಗ್‌ಗೆ ಸಂಬಂಧಿಸಿದಂತೆ ಹುಲ್ಲುಜೋಳದ ಹಿಟ್ಟಿನ ಷೆಲ್ಫ್–ಲೈಫ್ ಅನ್ನು ಉತ್ತಮಗೊಳಿಸುವುದಕ್ಕೆ ಒಂದು ಸಂಶೋಧನಾತ್ಮಕ ವಿಧಾನವನ್ನು ನಿರ್ವಹಿಸಲಾಯಿತು. ಇನ್‌ಫ್ರಾರೆಡ್ ಹೀಟಿಂಗ್ ಸಂದರ್ಭಗಳಾದ ಹುಲ್ಲುಜೋಳದ ಹಿಟ್ಟಿನ ಅವಧಿ ಮತ್ತು ಉಷ್ಣಾಂಶಗಳನ್ನು ಸೆಂಟ್ರಲ್ ಕಂಪೋಸಿಟ್ ರೊಟೇಟೆಬಲ್ ಡಿಸೈನ್ (ಕೇಂದ್ರ ಸಂಯೋಜಿತ ಆವರ್ತಕ ವಿನ್ಯಾಸ) ಅನ್ನು ಬಳಸಿಕೊಂಡು ಗರಿಷ್ಠಗೊಳಿಸಲಾಯಿತು. ಅದರ ಪರಿಣಮವಾಗಿ, ಕಡಿಮೆ ಕೊಬ್ಬಿನ ಅಂಶವನ್ನು ಹೊಂದಿರುವ (0.03%), ಲೈಪೇಸ್ ಚಟುವಟಿಕೆ (15 μeq.mg/h), ಮತ್ತು ಹೆಚ್ಚಿನ ವಿಸ್ಕೋಸಿಟಿ ಮೌಲ್ಯಗಳನ್ನು (294 ಬಿಯು) ಸಾಧಿಸಲಾಯಿತು. ಮತ್ತೊಂದು ಅಧ್ಯಯನದಲ್ಲಿ, ಸೋಯಾ ಪ್ರೋಟೀನ್ ಸಾಂದ್ರಕ (ಎಸ್‌ಪಿಸಿ) ಮತ್ತು ಬೆಂಗಲ್ ಗ್ರಾಮ್ ಫ್ಲೋರ್ ಜೊತೆಗೆ ಗೌರ್ ಗಮ್ ಮತ್ತು ಆ್ಯಂಟಿಆಕ್ಸಿಡೆಂಟ್ ಬಿಎಚ್‌ಎ ಅನ್ನು ಸಂಯೋಜಿಸುವ ಮೂಲಕ ಹುಲ್ಲುಜೋಳದ ಹಿಟ್ಟನ್ನು ಪ್ರತ್ಯೇಕವಾಗಿ ಸಂಯೋಜಿಸುವ ಮೂಲಕ ಪ್ರೋಟೀನ್ ಸಮೃದ್ಧ ಸೋರ್ಗಮ್ ಪಾಸ್ತಾವನ್ನು ತಯಾರಿಸಲಾಯಿತು. ಹೀಗೆ ತಯಾರಿಸಲ್ಪಟ್ಟ ಈ ಸೋರ್ಗಮ್ ಪಾಸ್ತಾವು ಹೆಚ್ಚಿನ ಸಂವೇದನಶೀಲ ಮಾನ್ಯತೆಯನ್ನು ಪಡೆದುಕೊಂಡಿತ್ತು ಮತ್ತು 8% ತೇವಾಂಶ, 13% ಪ್ರೋಟಿನ್, 5.6% ಕೊಬ್ಬು ಮತ್ತು 0.6% ಆ್ಯಷ್ ಅನ್ನು ಹೊಂದಿತ್ತು. ವಿಭಿನ್ನವಾದ ಸಂಯೋಜನೆಯ ಜೊತೆಗೆ ಸೋರ್ಗಮ್ ಪಾಸ್ತಾವು ಡ್ಯುರಮ್ ವೀಟ್ (ನಿಯಂತ್ರಿತ) ಪಾಸ್ತಾಕ್ಕೆ (5%) ಹೋಲಿಸಿ ನೋಡಿದಾಗ ಹೆಚ್ಚಿನ ಪ್ರಮಾಣದ ಕುಕಿಂಗ್ ನಷ್ಟವನ್ನು (6–14%) ಪ್ರದರ್ಶಿಸಿತು ಎಂಬ ಅಂಶವನ್ನು ಪಾಸ್ತಾದ ಕುಕಿಂಗ್ ಗುಣಮಟ್ಟವು ಬಹಿರಂಗಪಡಿಸಿತು.

**ಬಯೋಆ್ಯಕ್ಟೀವ್ ಫ್ಲೇವರೆಂಟ್ಸ್ (ನಾಗರಾಜನ್ ಎಸ್)**

ಬೆಳ್ಳುಳ್ಳಿಯಿಂದ ಸಂಭಾವ್ಯ ಜೈವಿಕಅಣುಗಳ ಪ್ರತ್ಯೇಕೀಕರಣ ಮತ್ತು ಸಮರ್ಪಕವಾದ ವಿಲೇವಾರಿ ಯಾಂತ್ರಿಕ ವ್ಯವಸ್ಥೆಯ ಜೊತೆಗೆ ಇದರ ಅನ್ವಯಿಕೆಯ ಬಗ್ಗೆ ಅಧ್ಯಯನ ನಡೆಸಲಾಯಿತು. ತಾಜಾ ಬೆಳ್ಳುಳ್ಳಿಯನ್ನು ಹಲವಾರು ಶಕ್ತಿಯ ಮಟ್ಟಗಳಿಗೆ ಸಂಬಂಧಿಸಿದಂತೆ ಒಂದು ಮೈಕ್ರೋವೇವ್ ವ್ಯವಸ್ಥೆಯ ಜೊತೆಗೆ ಒಣಗಿಸುವಿಕೆಯ ಕ್ರಿಯೆಗೆ ಒಳಪಡಿಸಲಾಯಿತು. ಈ ಪ್ರಕ್ರಿಯೆಯ ಫಲಿತಾಂಶವು ಬೆಳ್ಳುಳ್ಳಿಯ ಎಸಳುಗಳು ಭಾಗಶಃ ಬಣ್ಣಗಳನ್ನು ಮತ್ತು ಬಾಷ್ಪಶೀಲತೆಗಳನ್ನು ಹಿಡಿದಿಟ್ಟುಕೊಂಡಿವೆ ಎಂಬ ಅಂಶವನ್ನು ತಿಳಿಸಿತು. ಒಣಗಿಸಲ್ಪಟ್ಟ ಮತ್ತು ತಾಜಾ ಬೆಳ್ಳುಳ್ಳಿಯಿಂದ ಬಾಷ್ಪಶೀಲ ಎಣ್ಣೆಗಳನ್ನು ಪಡೆದುಕೊಳ್ಳಲಾಯಿತು ಮತ್ತು ಅದನ್ನು ಜಿಸಿ ಹಾಗೆಯೇ ನಂತರದಲ್ಲಿ ಜಿಸಿ–ಎಮ್‌ಎಸ್ ವಿಶ್ಲೇಷಣೆಗೆ ಒಳಪಡಿಸಲಾಯಿತು, ಇದು ಕನಿಷ್ಠಪಕ್ಷ 60 ಸಂಯೋಜಿತ ಅಂಶಗಳನ್ನು ಬಹಿರಂಗಪಡಿಸಿತು. ಜಜ್ಜಲ್ಪಟ್ಟ ಬೆಳ್ಳುಳ್ಳಿಯನ್ನು ದ್ರಾವಕ ಉದ್ಧರಣಕ್ಕೆ ಒಳಪಡಿಸಲಾಯಿತು ಮತ್ತು ಮುಂದುವರೆದಂತೆ ಪ್ರತ್ಯೇಕೀಕರಣ ಮತ್ತು ಕಾರ್ಯಚಟುವಟಿಕೆಗಳ ಪರಿಶಿಲನೆಯ ಅಧ್ಯಯನಗಳು ಪ್ರಗತಿಯಲ್ಲಿವೆ.

**ಮಲ್ಟಿ–ಸ್ಪೌಟೆಡ್ ಬೆಡ್ ರೋಸ್ಟರ್ ಫಾರ್ ರೋಸ್ಟಿಂಗ್ ಮಖನಾ (makhana) ಸೀಡ್ಸ್ (ಶ್ರೀಧರ್ ಬಿಎಸ್)**

ಮಖನಾ ಬೀಜಗಳಿಗೆ ಮಲ್ಟಿ–ಸ್ಪೌಟೆಡ್ ಬೆಡ್ ರೋಸ್ಟಿಂಗ್ ವಿನ್ಯಾಸ ಮತ್ತು ಮಖನಾದಿಂದ ಕೆಲವು ನಿರ್ದಿಷ್ಟ ಮೌಲ್ಯವರ್ಧಿತ ಉತ್ಪನ್ನಗಳ ಅಭಿವೃದ್ಧಿಯ ಬಗ್ಗೆ ಅಧ್ಯಯನ ನಡೆಸಲಾಯಿತು. ಪ್ರಾಥಮಿಕವಾಗಿ, ಸಾಧನದ ವಿನ್ಯಾಸದಲ್ಲಿ ಬಳಸಿಕೊಳ್ಳುವುದಕ್ಕೆ ಮತ್ತು ಈ ರೀತಿಯ ಉತ್ಪನ್ನಗಳನ್ನು ಸಂಸ್ಕರಣೆ ಮಾಡುವುದಕ್ಕೆ ಭೌತಿಕ ಮಾಹಿತಿ ಮತ್ತು ಭೌತಿಕ ಅಂಶಗಳನ್ನು ತೇವಾಂಶದ ಘಟಕದ ಕ್ರಿಯೆಯಾಗಿ ಬಿಂಬಿಸುವ ಕೋರಿಲೇಷನ್ ಇಕ್ವೇಷನ್‌ಗಳನ್ನು ತಯಾರಿಸಲಾಯಿತು. ಟೆಸ್ಟ್ ತೂಕ, ಹೆಚ್ಚಿನ ಸಾಂದ್ರತೆ, ಸರಂಧ್ರತೆ, ಆ್ಯಂಗಲ್ ಆಫ್ ರಿಪೋಸ್ ಮತ್ತು ಮಖನಾದ ಕೋಎಫಿಷಿಯೆಂಟ್ ಆಫ್ ಫ್ರಿಕ್ಷನ್‌ಗಳು ತೇವಾಂಶದ ಘಟಕದ ಜೊತೆಗೆ ಕ್ವಾಡ್ರಾಟಿಕಲಿ (ವರ್ಗೀಯ ಸಮೀಕರಣ ಮಾದರಿಯಲ್ಲಿ) ಬದಲಾಗಲ್ಪಟ್ಟಿತು. 0.54 ಎಮ್‌ಎಮ್ ದಿಂದ 0.87 ಎಮ್‌ಎಮ್ ಗೋಳಾಕೃತಿಯ ವ್ಯಾಪ್ತಿಯ ಜೊತೆಗೆ ಸರಾಸರಿ ವ್ಯಾಸವು 16.4 ಎಮ್‌ಎಮ್ ದಿಂದ 11.2 ಎಮ್‌ಎಮ್ ವ್ಯಾಪ್ತಿಯಲ್ಲಿತ್ತು. ಟರ್ಮಿನಲ್ ವೆಲಾಸಿಟಿ (ವೇಗ) ಮತ್ತು 8% ತೇವಾಂಶದಲ್ಲಿ ಡ್ರ್ಯಾಗ್ ಕೋಎಫಿಷಿಯೆಂಟ್ (ಒಣ ಆಧಾರದ ಮೇಲೆ) ಅನುಕ್ರಮವಾಗಿ 5.18 ದಿಂದ 7.20 ಎಮ್/ಎಸ್ ಮತ್ತು 0.72 ದಿಂದ 1.85 ವ್ಯಾಪ್ತಿಯಲ್ಲಿತ್ತು. ಈ ವಿಧಾನದ ಮೂಲಕ ಮಖನಾ ಆಧಾರಿತ ಮಲ್ಟಿಸ್ಪೌಟೆಡ್ ಸಂಸ್ಕರಣೆಯ ಯಾಂತ್ರಿಕ ವ್ಯವಸ್ಥೆಗೆ ಪ್ರಾಥಮಿಕ ವಿನ್ಯಾಸವನ್ನು ಪ್ರಾರಂಭಿಸಲಾಯಿತು. ಮಖನಾಕ್ಕೆ ಸಂಬಂಧಿಸಿದಂತೆ ಸವಿವರವಾದ ವಿನ್ಯಾಸದ ತಯಾರಿಕೆ ಮತ್ತು ಪ್ರೋಟೋಟೈಪ್ (ಮಾದರಿ) ಮಲ್ಟಿ–ಸ್ಪೌಟೆಡ್ ಬೆಡ್ ರೋಸ್ಟರ್ ಚಿತ್ರಣದ ವಿನ್ಯಾಸಗಳು ಪ್ರಗತಿಯಲ್ಲಿವೆ.

**ಅಲ್ಟ್ರಾಸೌಂಡ್ ಅಸಿಸ್ಟೆಡ್ ಒಜೋನೇಟರ್ ಫಾರ್ ದ ಪ್ರೊಸೆಸಿಂಗ್ ಆಫ್ ಲಿಕ್ವಿಡ್ ಫುಡ್ಸ್ (ರಸ್ತೋಗಿ ಎನ್‌ಕೆ)**

ದ್ರವ ಆಹಾರಗಳನ್ನು ಸಂಸ್ಕರಿಸುವುದಕ್ಕೆ ಅಲ್ಟ್ರಾಸೊನಿಕ್ ಪ್ರೋಬ್ ಜೊತೆಗೆ ಒಂದು ಒಜೋನ್ ಜನರೇಟರ್ ಮತ್ತು ಪ್ರತಿಕ್ರಿಯೆ ಚೇಂಬರ್ ಅನ್ನು ಹೊಂದಿದ ಅಲ್ಟ್ರಾಸೌಂಡ್ ಅಸಿಸ್ಟೆಡ್ ಒಜೋನೇಟರ್ ಅನ್ನು ಅಭಿವೃದ್ಧಿಗೊಳಿಸಲಾಯಿತು. E. coli ATCC 25922 ಅನ್ನು ಹೊಂದಿರುವ ಶುದ್ಧೀಕರಣ ಮಾಡಲ್ಪಟ್ಟ ಕಬ್ಬಿನ ಹಾಲಿನಲ್ಲಿ ಪ್ರತ್ಯೇಕವಾಗಿ ಅಲ್ಟ್ರಾಸೌಂಡ್ ಸಂಸ್ಕರಣೆಗಳಿಗೆ ಸಂಬಂಧಿಸಿದಂತೆ ಕಷ್ಟಕರವಾದ ಪರೀಕ್ಷೆಗಳನ್ನು ನಡೆಸಲಾಯಿತು. ಈ ಸಂಸ್ಕರಣೆಗಳು E. coli ATCC 25922 ಯ 5–ಲಾಗ್ ಕಡಿಮೆಗೊಳಿಸುವುದರಲ್ಲಿ ಹೆಚ್ಚಿನ ಪ್ರಮಾಣಕ್ಕೆ ಕಾರಣವಾದವು. ತಾಜಾ ಕಬ್ಬಿನಹಾಲಿನ ನೈಸರ್ಗಿಕ ಮಲಿನಕಾರಿಗಳ ಮೇಲೆ ಒಜೋನ್ ಮತ್ತು ಅಲ್ಟ್ರಾಸೌಂಡ್ ಸಂಸ್ಕರಣೆಗಳ ವೈಯುಕ್ತಿಕ ಪರಿಣಮವು 3–ಲಾಗ್ ಇಳಿಕೆಗಿಂತ ಹೆಚ್ಚಿನ ಇಳಿಕೆಗೆ ಕಾರಣವಾಯಿತು. ಆದಾಗ್ಯೂ, ಒಜೋನ್ ಮತ್ತು ಅಲ್ಟ್ರಾಸೌಂಡ್‌ಗಳ ಏಕಕಾಲಿಕ ಸಂಸ್ಕರಣೆಗಳು ನೈಸರ್ಗಿಕ ಮಲಿನಕಾರಿಗಳ 4.3–ಲಾಗ್ ಇಳಿಕೆಯನ್ನು ಮಾಡುವುದು ಮಾತ್ರವಲ್ಲ, ಆದರೆ ಪಾಲಿಫಿನಾಲೊಕ್ಸಿಡೇಸ್ ಮತ್ತು ಪೆರಾಕ್ಸಿಡೇಸ್‌ಗಳ ಚಟುವಟಿಕೆಗಳಲ್ಲಿ 90% ಕ್ಕಿಂತ ಹೆಚ್ಚಿನ ಇಳಿಕೆಗೆ ಕಾರಣವಾಯಿತು.

### ಕಂಟಿನ್ಯುಯಸ್ ವೆಟ್ ಕಮ್ ಡ್ರೈ ಗ್ರೈಂಡರ್ ಫಾರ್ ಗ್ರೈಂಡಿಂಗ್ ವ್ಯಾಕ್ಸಿ ರೈಸ್ (ವೆಂಕಟೇಶ್ ಮೂರ್ತಿ ಕೆ)

ವ್ಯಾಕ್ಸಿ ರೈಸ್ ಅನ್ನು ಬೀಸುವುದಕ್ಕೆ 3–5 ಕೆಜಿ/ಗಂಟೆ ಸಾಮರ್ಥ್ಯವನ್ನು ಹೊಂದಿರುವ ಒಂದು ನಿರಂತರವಾದ ತೇವ ಮತ್ತು ಒಣ ಗ್ರೈಂಡರ್ ಅನ್ನು ರೂಪಿಸುವುದಕ್ಕೆ ಪ್ರಯತ್ನವನ್ನು ನಡೆಸಲಾಯಿತು. ಗ್ರೈಂಡರ್‌ಗಳ ಮೂರು ವಿಭಿನ್ನತೆಗಳನ್ನು ವಿನ್ಯಾಸಗೊಳಿಸಲಾಯಿತು ಮತ್ತು ಅಭಿವೃದ್ಧಿಗೊಳಿಸಲಾಯಿತು; ಕೈಯಿಂದ ನಿರ್ವಹಿಸಲ್ಪಡುವ ಟೆಬಲ್ ಮೇಲಿರಿಸುವ ಗ್ರೈಂಡರ್, ಯಾಂತ್ರೀಕೃತ ಟೇಬಲ್ ಟಾಪ್ ಗ್ರೈಂಡರ್ ಮತ್ತು ಪೈಲಟ್ ಸ್ಕೇಲ್ ಗ್ರೈಂಡರ್. ಬೀಸುವುದಕ್ಕೆ ಅನುಕೂಲವಾಗುವಂತೆ ಮಾಡುವುದಕ್ಕೆ ಸುಮಾರು 3000 ಆರ್‌ಪಿಎಮ್ ಕಾರ್ಯನಿರ್ವಹಣೆಯ ವೇಗ ಮತ್ತು 4500 ಆರ್‌ಪಿಎಮ್ ಅನ್ನು ಉತ್ಪಾದಿಸುವುದಕ್ಕೆ ನಾಲ್ಕು ಹಂತದ ಒಂದು ಗೇರ್ ಟ್ರೇನ್ ಅನ್ನು ಹೊಂದಿರುವ ಕಾರ್ಬೋರಂಡಮ್ ಚಕ್ರದ ಒಂದು ಸೆಟ್ ಅನ್ನು ಆಧರಿಸಿ ಗ್ರೈಂಡರ್ ಅನ್ನು ವಿನ್ಯಾಸಗೊಳಿಸಲಾಯಿತು. 45 ಆರ್‌ಪಿಎಮ್ ಇನ್‌ಪುಟ್ ಆವರ್ತಕ ವೇಗವನ್ನು (ಕೈಯಿಂದ ತಿರಿಸುವ ವೇಗ) ಗಮನದಲ್ಲಿರಿಸಿಕೊಂಡು 75:1 ಗೇರ್ ಅನುಪಾತವನ್ನು ಹೊಂದಿರುವ ಒಂದು ಸಮರ್ಪಕವಾದ ಗೇರ್ ಬಾಕ್ಸ್ ಅನ್ನು ಆಯ್ಕೆ ಮಾಡಲಾಯಿತು. ಕೈಯಿಂದ ನಡೆಸಲ್ಪಡುವ ಯಂತ್ರವು 2 kg-m ಇನ್‌ಪುಟ್ ಟಾರ್ಕ್ ಅನ್ನು ಹೊಂದಿತ್ತು. ಕೈಯಿಂದ ನಡೆಸಲ್ಪಡುವ ಗೇರ್ ಹೆಡ್‌ನ ಔಟ್‌ಪುಟ್ ಟಾರ್ಕ್ 10 kg-m ಇತ್ತು. ಯಾಂತ್ರೀಕೃತ ಗ್ರೈಂಡರ್‌ನ ವಿದ್ಯುತ್ ಅವಶ್ಯಕತೆಯು ಸುಮಾರು 100 ವ್ಯಾಟ್ ಎಂಬುದಾಗಿ ಅಂದಾಜಿಸಲಾಯಿತು ಮತ್ತು ಯಾಂತ್ರೀಕೃತ ಗ್ರೈಂಡರ್‌ಗೆ 180 ವ್ಯಾಟ್‌ನ ಇಂಡಕ್ಷನ್ ಯಂತ್ರವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಕೈಯಿಂದ ನಡೆಸಲ್ಪಡುವ ಮತ್ತು ಯಾಂತ್ರೀಕೃತ ಎರಡೂ ಗ್ರೈಂಡರ್‌ಗೆ ಸಂಬಂಧಿಸಿದಂತೆ ಸವಿವರವಾದ ಯಾಂತ್ರಿಕ ಚಿತ್ರಣಗಳನ್ನು ತಯಾರಿಸಲಾಯಿತು.



Continuous Wet cum Dry Grinder

# ದೀರ್ಘಾವಧಿಯ ಯಾಂತ್ರಿಕ (ಸ್ಟ್ರಾಟೆಜಿಕ್) ಸಂಶೋಧನೆ

**ಆ್ಯಂಟಿ–ಕೊಲೆಥೊಜೆನಿಕ್ ಇನ್‌ಫ್ಲ್ಯುಯೆನ್ಸ್ ಆಫ್ ಡಯಟರಿ ಟೆಂಡರ್ ಕ್ಲಸ್ಟರ್ ಬೀನ್ಸ್** (ಶ್ರೀನಿವಾಸನ್ ಕೆ)

ಇಲಿಗಳಲ್ಲಿ 0.5% ಕೊಲೆಸ್ಟರಾಲ್ ಆಹಾರವನ್ನು (ಎಚ್‌ಸಿಡಿ) ಸಂಯೋಜಿಸುವ ಮೂಲಕ ಲಿಥೋಜೆನೆಸಿಸ್ ಅನ್ನು ಪ್ರಚೋದಿಸುವ ಮೂಲಕ ಟೆಂಡರ್ ಕ್ಲಸ್ಟರ್ ಬೀನ್ಸ್ (Cyamopsis tetragonoloba) ಮತ್ತು ಬೆಳ್ಳುಳ್ಳಿ (Allium sativum) ಗಳ ಸಂಯೋಜನೆಯ ಪರಿಣಾಮವನ್ನು ಪರಿಶೀಲಿಸಲಾಯಿತು. ಟೆಂಡರ್ ಕ್ಲಸ್ಟರ್ ಬೀನ್ಸ್ (ಸಿಬಿ) (10%) ಮತ್ತು ಬೆಳ್ಳುಳ್ಳಿ (1%) ಇವುಗಳನ್ನು ಹೆಚ್ಚಿನ ಕೊಬ್ಬಿನ ಅಂಶಗಳುಳ್ಳ ಆಹಾರದ ಜೊತೆಗೆ ಪ್ರತ್ಯೇಕವಾಗಿ ಮತ್ತು ಸಂಯೋಜಿತವಾಗಿ ಒಳಗೊಳ್ಳಲಾಯಿತು. ಸಿಬಿ, ಬೆಳ್ಳುಳ್ಳಿ ಮತ್ತು ಅವುಗಳ ಸಂಯೋಜನೆಯು ಕೊಲೆಸ್ಟರಾಲ್ ಗ್ಯಾಲ್‌ಸ್ಟೋನ್‌ಗಳ ನಿರ್ಮಾಣವಾಗುವಿಕೆಯನ್ನು ಅನುಕ್ರಮವಾಗಿ 44, 25 ಮತ್ತು 56% ಕಡಿಮೆಗೊಳಿಸಿತು, ಇದು ಬೈಲ್, ಸೀರಮ್, ಮತ್ತು ಲಿವರ್‌ಗಳಲ್ಲಿ ಅನುಕ್ರಮವಾಗಿ 23–48%, 16–24% ಮತ್ತು 24–58% ವರೆಗೆ ಇಳಿಕೆಯಾಗಲ್ಪಟ್ಟ ಕೊಲೆಸ್ಟರಾಲ್ ಪ್ರಮಾಣವನ್ನು ದಾಖಲಿಸಿತು. ಬೈಲ್ಯರಿ (ಪಿತ್ತರಸದ) ಕೊಬ್ಬಿನ ಸ್ಯಾಚುರೇಷನ್ ಸೂಚ್ಯಂಕ ಮತ್ತು ಅವುಗಳಿಗೆ ಸಂಬಂಧಿಸಿದ ಜೈವಿಕರಾಸಾಯನಿಕ ಸೂಚ್ಯಂಕಗಳು ಅಂದರೆ ಸೀರಮ್ ಮತ್ತು ಲಿವರ್‌ನಲ್ಲಿ ಕೊಲೆಸ್ಟರಾಲ್/ಫಾಸ್ಫೋಲಿಪಿಡ್ ಅನುಪಾತ, ಲಿಪಿಡ್ ಪೆರಾಕ್ಸೈಡ್‌ಗಳು ಈ ರೀತಿಯ ಆಹಾರದ ಪ್ರತಿರೋಧತೆಯು ಕಾರಣದಿಂದಾಗಿ ಗಮನಾರ್ಹವಾಗಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದಿತು, ಪ್ರತ್ಯೇಕವಾದ ಪರಿಣಾಮಗಳಿಗೆ ತುಲನೆ ಮಾಡಿ ನೋಡಿದಾಗ ಈ ಸಂಯೋಜನವು ಹೆಚ್ಚಿನ ಪರಿಣಾಮಗಳನ್ನು ಬೀರುತ್ತಿರುವುದು ಕಂಡುಬಂದಿತು. ಆದ್ದರಿಂದ, ಡಯಟರಿ ಸಿಬಿ ಮತ್ತು ಬೆಳ್ಳುಳ್ಳಿಯ ಆ್ಯಂಟಿಲಿಥೋಜೆನಿಕ್ ಪ್ರಭಾವವು ಪಿತ್ತರಸದಲ್ಲಿ ಇಳಿಮುಖವಾಗಲ್ಪಟ್ಟ ಕೊಲೆಸ್ಟರಾಲ್ ಹೈಪರ್–ಸೆಕ್ರೆಷನ್‌ನಿಂದ ಉಂಟಾಗಲ್ಪಟ್ಟಿದೆ ಮತ್ತು ಆದ್ದರಿಂದ ಕೊಲೆಸ್ಟರಾಲ್ ಸ್ಯಾಚುರೇಷನ್ ಸೂಚ್ಯಂಕ ಮತ್ತು ಪ್ರತ್ಯೇಕವಾದ ಸಂಯೋಜನಗಳಿಗೆ ಹೋಲಿಸಿ ನೋಡಿದಾಗ ಸಂಬಂಧಿತ ಜೈವಿಕರಾಸಾಯನಿಕ ಸೂಚ್ಯಂಕಗಳು ಸಿಬಿ ಮತ್ತು ಬೆಳ್ಳುಳ್ಳಿಯ ಸಂಯೋಜನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ.

**ಅಟೆನ್ಯುಯೇಷನ್ ಆಫ್ ಕೊಲೆಸ್ಟರಾಲ್ ಗ್ಯಾಲ್‌ಸ್ಟೋನ್ಸ್ ಬೈ ಡಯಟರಿ ಟೆಂಡರ್ ಕ್ಲಸ್ಟರ್ ಬೀನ್ಸ್ (ಶ್ರೀನಿವಾಸನ್ ಕೆ)**

ಇಲಿಗಳಲ್ಲಿ ಪೂರ್ವ–ಸ್ಥಾಪಿತವಾಗಲ್ಪಟ್ಟ ಕೊಲೆಸ್ಟರಾಲ್ ಗ್ಯಾಲ್‌ಸ್ಟೋನ್‌ಗಳ (ಸಿಜಿಎಸ್) ದ್ರಾವಕಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಮತ್ತು ಬೆಳ್ಳುಳ್ಳಿಯ ಜೊತೆಗಿನ ಸಂಯೋಜನದಲ್ಲಿ ಡಯಟರಿ ಟೆಂಡರ್ ಕ್ಲಸ್ಟರ್ ಬೀನ್ಸ್‌ನ (ಸಿಬಿ) ಪರಿಣಾಮಗಳನ್ನು ಅಧ್ಯಯನ ಮಾಡಲಾಯಿತು. 10 ವಾರಗಳವರೆಗೆ ಹೆಚ್ಚಿನ (0.5%) ಕೊಲೆಸ್ಟರಾಲ್ ಆಹಾರವನ್ನು ತಿನ್ನಿಸುವ ಮೂಲಕ ಸಿಜಿಎಸ್‌ಗಳನ್ನು ಪ್ರಚೋದಿಸಲಾಗುತ್ತದೆ. ಸಿಬಿ (10% ಫ್ರೀಜ್–ಡ್ರೈಡ್ ಪುಡಿ) ಮತ್ತು ಬೆಳ್ಳುಳ್ಳಿ (1% ಫ್ರೀಜ್–ಡ್ರೈಡ್ ಪುಡಿ) ಇವುಗಳನ್ನು ಪ್ರತ್ಯೇಕವಾಗಿ ಮತ್ತು ಸಂಯೋಜನೆಯ ಜೊತೆಗೆ ಗ್ಯಾಲ್‌ಸ್ಟೋನ್ ಸಂಯೋಜಿತ ಪ್ರಾಣಿಗಳ ಕನಿಷ್ಠಮಿತಿಯ ಆಹಾರದಲ್ಲಿ 5 ಮತ್ತು 10 ವಾರಗಳ ಅವಧಿಗಾಗಿ ಸಂಯೋಜಿಸಲಾಗುತ್ತದೆ. ಸಿಬಿ, ಬೆಳ್ಳುಳ್ಳಿ ಮತ್ತು ಅವುಗಳ ಸಂಯೋಜನೆಯು ಪೂರ್ವ–ಸ್ಥಾಪಿತವಾದ ಸಿಜಿಎಸ್ ಅನ್ನು 10 ವಾರಗಳಲ್ಲಿ ಅನುಕ್ರಮವಾಗಿ 61, 50 ಮತ್ತು 72% ವರಗೆ ಇಳಿಕೆ ಮಾಡಿತು. ಈ ಪರಿಣಾಮದ ಜೊತೆಗೆ ಎಚ್‌ಸಿಡಿ ಗುಂಪಿನಲ್ಲಿ 1.86 ದಿಂದ 0.749, 0.903 ಮತ್ತು 0.648 ವರೆಗೆ ಕೊಲೆಸ್ಟರಾಲ್ ಸ್ಯಾಚುರೇಷನ್‌ನಲ್ಲಿ ಇಳಿಕೆಯು ಕಂಡುಬಂದಿತು. ಆಹಾರದ ಈ ರೀತಿಯ ಬದಲಾವಣೆಗಳು ಪಿತ್ತರಸದಲ್ಲಿ ಕೊಲೆಸ್ಟರಾಲ್:ಪಿತ್ತರಸ ಮತ್ತು ಕೊಲೆಸ್ಟರಾಲ್:ಫಾಸ್ಫೋಲಿಪಿಡ್ ಬದಲಾಯಿಸಲ್ಪಟ್ಟ ಅನುಪಾತಗಳ ಒಂದು ಲಾಭದಾಯಕ ಬದಲಾವಣೆಯನ್ನು ಬೆಂಬಲಿಸಿದವು. ಇಲಿಗಳಲ್ಲಿ ಸಿಜಿಎಸ್ ಸಂಯೋಜನೆಯ ನಂತರ ಕನಿಷ್ಠಮಿತಿಯ ನಿಯಂತ್ರಿತ ಆಹಾರವು ಸಿಜಿಎಸ್ ನಲ್ಲಿ 10 ವಾರಗಳಲ್ಲಿ ಮಧ್ಯಸ್ಥ ಪ್ರಮಾಣದ ಅಂದರೆ 27% ಇಳಿಕೆಗೆ (ಹಿಂದಿನ ಸ್ಥಿತಿಗೆ ವಾಪಸಾಗುವಿಕೆಗೆ) ಕಾರಣವಾಯಿತು. ಪ್ರಾಣಿಗಳಲ್ಲಿ ಸಿಜಿಎಸ್‌ನ ಅಪಸರಣದ ವೇಗವು ಪ್ರಾಯೋಗಿಕ ಸಂಯೋಜನೆಯ ಸಮಯದಲ್ಲಿ ಸಿಜಿಎಸ್‌ನ ಪ್ರಸ್ತುತತೆಯನ್ನು ಕಡಿಮೆಗೊಳಿಸುವುದಕ್ಕೆ ಸಂಬಂಧಿಸಿದಂತೆ ಮುಂಚಿತವಾಗಿ ಗಮನಿಸಲ್ಪಟ್ಟ ಡಯಟರಿ ಸಿಬಿ ಯ ಆರೋಗ್ಯ ಲಾಭದಾಯಕ ಆ್ಯಂಟಿಲಿಥೋಜೆನಿಕ್ ಪ್ರಭಾವವನ್ನು ನಿಖರಪಡಿಸುತ್ತದೆ.

**ಅಟೆನ್ಯುಯೇಷನ್ ಆಫ್ ಡಯಾಬಿಟೀಸ್ (ಸಾಲಿಮಠ ಪಿವಿ)**

ಡಯಾಬಿಟಿಕ್ ಇಲಿಗಳ ಮೇಲೆ ಮಲ್ಬೆರಿ ಗಿಡದ ಬಲಿತ ಮತ್ತು ಎಳೆಯ ಎಲೆಗಳನ್ನು ತಿನ್ನಿಸುವುದರ ಜೊತೆಗೆ ಸ್ಟ್ರೆಪ್ಟೋಜೋಯಿನ್–ಸಂಯೋಜಿತ ಪ್ರಯೋಗಗಳು ತಿಳಿಯಪಡಿಸುವುದೇನೆಂದರೆ ಇದು ಮೂಲ ಅಂಶಗಳು ಅಂದರೆ ರಕ್ತದ ಗ್ಲೂಕೋಸ್, ಕಿಡ್ನಿ ಸೂಚ್ಯಂಕ ಮತ್ತು ಗ್ಲೊಮೆರುಲರ್ ಫಿಲಿಟ್ರೇಷನ್ ಪ್ರಮಾಣಗಳ ಮೇಲೆ ಒಂದು ಲಾಭದಾಯಕ ಪರಿಣಾಮವನ್ನು ಹೊಂದಿದೆ ಎಂದು. ನಿಯಂತ್ರಿತ ಸ್ಥಿತಿಯಲ್ಲಿರುವ ಪ್ರಾಣಿಗಳಿಗೆ ಹೋಲಿಸಿ ನೋಡಿದಾಗ ರಕ್ತದ ಗ್ಲೂಕೋಸ್ ಮಟ್ಟಗಳಿಗೆ ಸಂಬಂಧಿಸಿದಂತೆ ಡಯಾಬಿಟಿಕ್ ಪ್ರಾಣಿಗಳು 2–ಪಟ್ಟಿಗಿಂತಲೂ ಹೆಚ್ಚಿನ ಪ್ರಮಾಣದ ಹೆಚ್ಚಳವನ್ನು ಪ್ರದರ್ಶಿಸಿದವು. ಮಲ್ಬೆರಿಯ ಬಲಿತ ಮತ್ತು ಎಳೆಯ ಎಲೆಗಳನ್ನು ತಿನ್ನಿಸುವ ಮೂಲಕ ಈ ಹೆಚ್ಚಳವು ಅನುಕ್ರಮವಾಗಿ 19% ಮತ್ತು 31% ವರೆಗೆ ಮತ್ತೂ ಏರಿಕೆಯಾಗಲ್ಪಟ್ಟಿತು. ಡಯಾಬಿಟಿಕ್ ಇಲಿಗಳಲ್ಲಿ ಕಡಿಮೆ ಪ್ರಮಾಣದಲ್ಲಿದೆ ಎಂಬುದಾಗಿ ತಿಳಿಯಲ್ಪಟ್ಟ ಕಿಡ್ನಿ ಎಕ್ಸ್ಟ್ರಾಸೆಲ್ಯುಲರ್ ಮ್ಯಾಟ್ರಿಕ್ಸ್‌ನ ಒಂದು ಪ್ರಮುಖ ಅಂಶವಾದ ಗ್ಲೈಕೋಸ್ಯಾಮಿನೋಗ್ಲೈಕನ್ಸ್‌ನ ಮಟ್ಟಗಳ ಪರಿಣಾಮಗಳನ್ನು ಮಲ್ಬೆರಿ ಎಲೆಗಳನ್ನು ತಿನ್ನಿಸಲ್ಪಟ್ಟ ಇಲಿಗಳಲ್ಲಿ ಪುನಃಸ್ಥಾಪಿಸಲಾಯಿತು.



ರಕ್ತದ ಗ್ಲೂಕೋಸ್ ಮಟ್ಟಗಳಲ್ಲಿ ಮಲ್ಬೆರಿ ಎಲೆಗಳ ಪರಿಣಾಮಗಳು: ಎಸ್ಎಫ್ಸಿ:ನಿಯಂತ್ರಿತ; ಎಸ್ಎಫ್ಡಿ–ಡಯಾಬಿಟಿಕ್; 5ಎಮ್ಎಮ್ಎಫ್ಸಿ: ಬಲಿತ ಮಲ್ಬೆರಿ ಎಲೆಗಳಿಂದ ನಿಯಂತ್ರಿಸಲ್ಪಟ್ಟ ಇಲಿಗಳು; 5ಎಮ್ವೈಎಫ್ಸಿ:5ಎಮ್ಎಮ್ಎಫ್ಡಿ: ಬಲಿತ ಮಲ್ಬೆರಿ ಎಲೆಗಳು ಡಯಾಬಿಟಿಕ್ ಪ್ರಾಣಿಗಳು; ಎಳೆಯ ಮಲ್ಬೆರಿ ಎಲೆಗಳಿಂದ ನಿಯಂತ್ರಿಸಲ್ಪಟ್ಟ ಪ್ರಾಣಿಗಳು; 5ಎಮ್ವೈಎಫ್ಡಿ: ಡಯಾಬಿಟಿಕ್ ಪ್ರಾಣಿಗಳಿಗೆ ಎಳೆಯ ಮಲ್ಬೆರಿ ಎಲೆಗಳು

**ಪಥ್ಯಕ್ರಮದ ಬೆಳ್ಳುಳ್ಳಿ ಹಾಗೂ ಮೆಂತೆ ಬೀಜಗಳ ಹೈಪೋಲಿಪಿಡೆಮಿಕ್ ಪ್ರಭಾವ (ಸಾಲಿಮಠ ಪಿ ವಿ)**

ಪಥ್ಯಕ್ರಮದ ಮೆಂತ್ಯ (ಟ್ರೈಗೊನೆಲ್ಲಾ ಫ್ಲೀನಮ್–ಗ್ರೇಕಮ್) ಬೀಜಗಳು ಹಾಗೂ ಬೆಳ್ಳುಳ್ಳಿ (ಏಲಿಯಂಮ್ ಸೆಟೈವಮ್) ಗಳ ಹೈಪೊಕೊಲೆಸ್ಟಿರೋಲೆಮಿಕ್ ಹಾಗೂ ಆಂಟಿಆಕ್ಸಿಡೆಂಟ್ ಪ್ರಭಾವಗಳನ್ನು ಹಾಗೂ 8 ವಾರಗಳ ಅವಧಿಗೆ ಅಧಿಕ ಕೊಲೆಸ್ಟಿರಾಲ್ ಪಥ್ಯಕ್ರಮ (ಹೆಚ್ಸಿಡಿ)ದಲ್ಲಿ ಅವೆರಡರ ಸಂಯೋಜನೆಗಳನ್ನು ಸೇರಿಸಿ ಅವುಗಳನ್ನು ವಿಸ್ಟಾರ್ ಇಲಿಗಳಲ್ಲಿ ಮೌಲ್ಯಮಾಪನ ಮಾಡಲಾಯಿತು. ಪಥ್ಯಕ್ರಮದ ಮೆಂತ್ಯ, ಬೆಳ್ಳುಳ್ಳಿ ಅಥವಾ ಅವೆರಡರ ಸಂಯೋಜನೆಯು ಗಣನೀಯ ಪ್ರಮಾಣದಲ್ಲಿ ಹೈಪರ್ ಕೊಲೆಸ್ಟಿರೋಲೆಮಿಯವನ್ನು ಪ್ರತಿರೋಧಿಸುತ್ತದೆ. ಸಂಯೋಜನೆಯ ಈ ಪರಿಣಾಮವನ್ನು ಇನ್ನಷ್ಟು ಹೆಚ್ಚಿಸುತ್ತದೆ. ವಿಶೇಷವಾಗಿ ಎಲ್ಡಿಎಲ್–ಕೊಲೆಸ್ಟಿರಾಲ್ ಪ್ರತಿರೋಧಿಸಲ್ಪಟ್ಟಿದ್ದರೆ, ಹೆಚ್ಡಿಎಲ್–ಕೊಲೆಸ್ಟಿರಾಲ್ ಮರುಸ್ಥಾಪಿಸಲ್ಪಟ್ಟಿತು. ಈ ಪಥ್ಯಕ್ರಮದ ಮಧ್ಯಪ್ರವೇಶಿಕೆಯಿಂದ ಸಮನ್ವಯ ಕಳೆದುಕೊಂಡಿದ್ದ ಕೊಲೆಸ್ಟಿರಾಲ್, ಫಾಸ್ಫೋಲಿಪಿಡ್ ಅನುಪಾತ ಹಾಗೂ ಅಥೆರೋಜೆನೆಸಿಟಿ ಇವುಗಳು ತದ್ವಿರುದ್ಧವಾದವು. ಹಾಗೂ ಈ ಪರಿಣಾಮವು ಮೆಂತ್ಯ–ಬೆಳ್ಳುಳ್ಳಿ ಸಂಯೋಜನೆಯಲ್ಲಿ ಅತ್ಯಂತ ಹೆಚ್ಚು ಕಂಡುಬಂದಿತು. ಪಥ್ಯಕ್ರಮದ ಮೆಂತ್ಯ, ಬೆಳ್ಳುಳ್ಳಿ ಅಥವಾ ಅವುಗಳ ಸಂಯೋಜನೆಯಿಂದ ಹಿಪ್ಯಾಟಿಕ್ ಕೊಲೆಸ್ಟಿರಾಲ್ ಮಟ್ಟವು ತಗ್ಗಿಸಲ್ಪಟ್ಟಿತು. ಹೃದಯದಲ್ಲೂ ಕೊಲೆಸ್ಟಿರಾಲ್ ಅಂಶ ಹಾಗೂ ಕೊಲೆಸ್ಟಿರಾಲ್:ಫಾಸ್ಫೋಲಿಪಿಡ್ ಅನುಪಾತವು ಪಥ್ಯಕ್ರಮದ ಮೆಂತ್ಯ ಹಾಗೂ ಬೆಳ್ಳುಳ್ಳಿಯಿಂದಾಗಿ ಲಾಭದಾಯಕವಾಗಿ ಸೌಮ್ಯಗೊಳಿಸಲ್ಪಟ್ಟಿತು. ಇಲ್ಲೂ ಅವೆರಡರ ಸಂಯೋಜನೆಯು ಹೆಚ್ಚು ಪರಿಣಾಮಕಾರಿಯಗಿತ್ತು. ಹೆಚ್ಚಿದ ಲಿಪಿಡ್ ಪೆರಾಕ್ಸೈಡ್‌ಗಳು ಪಥ್ಯಕ್ರಮದ ಮೆಂತ್ಯ, ಬೆಳ್ಳುಳ್ಳಿ ಹಾಗೂ ಮೆಂತೆ+ಬೆಳ್ಳುಳ್ಳಿಯಿಂದ ಪರಿಣಾಮಕಾರಿಯಾಗಿ ಪ್ರತಿರೋಧಿಸಲ್ಪಟ್ಟಿತು. ಇದು ಪಿತ್ತಜನಕಾಂಗ ಹಾಗೂ ಹೃದಯದಲ್ಲಿ ವೈಟಮಿನ್–ಇ ಮರುಸ್ಥಾಪನೆಯಿಂದ ಜೊತೆಯಾಯಿತು ಮತ್ತು ಈ ಪರಿಣಾಮವೂ ಅವೆರಡರ ಸಂಯೋಜನೆ (ಮೆಂತ್ಯ+ಬೆಳ್ಳುಳ್ಳಿ)ಯಲ್ಲಿ ಅಧಿಕವಾಗಿ ಕಂಡುಬಂತು. ಸೀರಂ, ಪಿತ್ತಜನಕಾಂಗ ಹಾಗೂ ಹೃದಯದಲ್ಲಿನ ಗ್ಲುಟಾಥಯೋನ್ ಪೆರಾಕ್ಸಿಡೇಸ್‌ನ ಅನಪೇಕ್ಷಿತ ಚಟುವಟಿಕೆ ಹಾಗೂ ಸೀರಂನಲ್ಲಿನ ಕ್ಯಾಟಲೇಸ್ ಚಟುವಟಿಕೆಯು ಈ ಪಥ್ಯಕ್ರಮದ ಮಧ್ಯಪ್ರವೇಶದಿಂದ ಮರುಸ್ಥಾಪಿಸಲ್ಪಟ್ಟಿದ್ದು, ಇದು ಪಥ್ಯಕ್ರಮದ ಮೆಂತ್ಯ ಹಾಗೂ ಬೆಳ್ಳುಳ್ಳಿ ಜೊತೆಯಾಗಿ ಸೇವಿಸಿದಾಗ ಹೆಚ್ಚು ಪರಿಣಾಮಕಾರಿಯಾಗಿ ಹೃದಯ–ರಕ್ಷಣಾತ್ಮಕ ಪ್ರಭಾವವನ್ನು ಹೊಂದಿರಬಹುದು ಎನ್ನುವುದನ್ನು ಸೂಚಿಸುತ್ತದೆ. ಹಾಗೂ ಈ ಅಂಶವು ಈ ಎರಡು ಮಸಾಲೆ ಪದಾರ್ಥಗಳಿಂದ ಗರಿಷ್ಠ ಪ್ರಮಾಣದ ಪೋಷಕಾಂಶದ (ನ್ಯೂಟ್ರಾಸ್ಯೂಟಿಕಲ್) ಪ್ರಯೋಜನವನ್ನು ಪಡೆಯುವಲ್ಲಿ ನಿರ್ಧಾರಕವಾಗಬಲ್ಲವು.

**ಇಲಿ (ಮೈಸ್)ಗಳಲ್ಲಿ ಲ್ಯೂಟಿನ್ ಚಯಾಪಚಯ ಕ್ರಿಯೆ (ಮೆಟಬಾಲಿಸಮ್) (ಬಾಸ್ಕರನ್ ವಿ)**

ಆಲಿವ್ ಎಣ್ಣೆಯಲ್ಲಿ ಚೆದುರಿಸಿದ ಲ್ಯೂಟಿನ್‌ನ ಪುನರಾವರ್ತಿತ ಪ್ರಮಾಣ(ಡೋಸ್) ನೀಡಿದ ಇಲಿಗಳ ಪ್ಲಾಸ್ಮಾ, ಪಿತ್ತಜನಕಾಂಗ, ಕರುಳು, ಹಾಗೂ ಕಣ್ಣುಗಳಲ್ಲಿ ಲ್ಯೂಟಿನ್ ಚಯಾಪಚಯಕ್ರಿಯೆಯನ್ನು ಹೆಚ್‌ಪಿಸಿಎಲ ಹಾಗೂ ಎಲ್‌ಸಿ–ಎಂಎಸ್ ಯ ಮೂಲಕ ಕ್ಯಾರಕ್ಟರೈಸ್ ಮಾಡಲಾಯಿತು ಹಾಗೂ ಪ್ಲಾಸ್ಮಾ ಮತ್ತು ಪಿತ್ತಜನಕಾಂಗದಲ್ಲಿ ಕಂಡುಬಂದ ವಿಚ್ಛಿನ್ನಗೊಂಡ (ಛಿದ್ರಗೊಂಡ) ಲ್ಯೂಟಿನ್ ಆಕ್ಸಿಜನೇಟೆಡ್ ಉತ್ಪನ್ನಗಳಾದ ಲ್ಯೂಟಿನ್ನಿನ ಇಪಾಕ್ಸೈಡ್ ಹಾಗೂ ಅಪೋಕೆರೊಟಿನಾಲ್ಸ್ ಆಗಿರುವುದು ಕಂಡುಬಂದಿದೆ. ಇದು, ಲ್ಯೂಟಿನ್ ಪೆರಾಕ್ಸೈಲ್ ರ್‍ಯಾಡಿಕಲ್‌ನ ಸರಪಳಿ ಮುರಿವ (ಚೈನ್–ಬ್ರೇಕಿಂಗ್) ಕ್ರಿಯೆಯಲ್ಲಿ ಅಥವಾ ಏಕಕ ಆಮ್ಲಜನಕ (ಸಿಂಗ್ಲೆಟ್ ಆಕ್ಸಿಜನ್) ವನ್ನು ಅಡಗಿಸುವ ಕ್ರಿಯೆಯಲ್ಲಿ ಒಳಗೊಂಡಿದೆ ಎನ್ನುವುದನ್ನು ಸೂಚಿಸುತ್ತದೆ. ಕರುಳಿನ ಸಂದರ್ಭದಲ್ಲಿ, ಲ್ಯೂಟಿನ್ನಿನ ಮಿಥೈಲ್–ಹೊರತಾದ (ಡಿಮೆಥೈಲೇಟೆಡ್) ಹಾಗೂ ನಿರ್ಜಲೀಕೃತ ಉತ್ಪನ್ನಗಳನ್ನು ಪತ್ತೆ ಮಾಡಲಾಗುತ್ತಿರುವುದನ್ನು ಸೂಚಿಸುತ್ತದೆ. ಇದು ಜಲಜನಕದ ತೆಗೆದುಹಾಕುವಿಕೆ (ಡಿಹೈಡ್ರಾಕ್ಸಿಲೇಶನ್) ಹಾಗೂ ಮಿಥೈಲ್ ತೆಗೆದುಹಾಕುವಿಕೆ (ಡಿಮಿಥೈಲೇಶನ್) ಆಗುತ್ತಿರುವುದನ್ನು ಸೂಚಿಸುತ್ತದೆ. ಇದು ಕರುಳಿನ ಕುಹರದ ಪ್ರತ್ಯಾಮ್ಲೀಯ ಗುಣದಿಂದಾಗಿರಬಹುದು. ಜೊತೆಗೆ, ಕಣ್ಣುಗಳಲ್ಲಿ, ಲ್ಯೂಟಿನ್‌ನ ಚೂರುಗಳು ಪತ್ತೆಯಾಗಿದ್ದು, ವಿಭಜನೆ, ಡಿಮಿಥೈಲೇಶನ್ ಹಾಗೂ ಆಕ್ಸಿಡೇಶನ್ ಪ್ರತಿಕ್ರಿಯೆಗಳ ಮೂಲಕ ಯುವಿ ಹಾಗೂ ಸೂರ್ಯನ ಕಿರಣಗಳಿಂದ ಕಣ್ಣುಗಳಲ್ಲಿ ಉತ್ಪತ್ತಿಯಾಗುವ ಆಂತರಿಕ ಪ್ರೊ–ಆಕ್ಸಿಡೆಂಟ್‌ಗಳ ವಿರುದ್ಧ ರಕ್ಷಣೆಯನ್ನು ಒದಗಿಸುವಲ್ಲಿ ಲ್ಯೂಟಿನ್ ರಕ್ಷಣೆ ಒದಗಿಸುತ್ತಿರಬಹುದು ಎನ್ನುವುದನ್ನು ಅದು ಸೂಚಿಸುತ್ತದೆ. ವಿಸಿಬಲ್ ಹಾಗೂ ಯುವಿ–ವಿಕಿರಣಗಳಿಂದ ಉಂಟಾಗುವ ಆಕ್ಸಿಡೇಟಿವ್ ಮೆಟಬೊಲೈಟ್‌ಗಳ ರಚನೆಗೆ ಕಾರಣವಾಗುವ ಪ್ರೊ–ಆಕ್ಸಿಡೆಂಟ್‌ಗಳನ್ನು ಹೊರದೂಡುವುದರ ಮೂಲಕ ಲ್ಯೂಟಿನ್ ಕಣ್ಣುಗಳ ರಕ್ಷಣೆಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಸಮರ್ಥಿಸುತ್ತದೆ.

**ಇನ್ಸುಲಿನ್ ಸಿಗ್ನಲಿಂಗ್ ಮೇಲೆ ಪಥ್ಯಕ್ರಮದ ಅಂಶಗಳ ಪ್ರಭಾವ (ಸಾಲಿಮಠ ಪಿವಿ)**

ವೆಸ್ಟರ್ನ್ ಬ್ಲಾಟ್ ಅನಾಲಿಸಿಸ್ ನೆರವಿನಿಂದ ನ್ಯೂರೋನಲ್ ಇನ್ಸುಲಿನ್ ರಿಸೆಪ್ಟರ್ ಸಬ್ಸ್ಟ್ರೇಟ್ –ಫಾಸ್ಫಾಟಿಡಿಲ್ ಇನೋಸಿಟಾಲ್–3– ಕೈನೇಸ್ (IRS – PI3K) ಪಾತ್‌ವೇ ಹಾಗೂ ಗ್ಲೂಕೋಸ್ ವಾಹಕಗಳ ((GLUTs) ವಿವಿಧ ಘಟಕಗಳನ್ನು ವಿಶ್ಲೇಷಿಸುವುದರ ಮೂಲಕ ಮೆದುಳಿನಲ್ಲಿ ಇನ್ಸುಲಿನ್ ಸಿಗ್ನಲಿಂಗ್ ಮೇಲೆ ಕ್ವೆರ್ಸಟಿನ್, ನರಿನ್ಜೆನಿನ್ ಮತ್ತು ಬರ್ಬರಿನ್ ಇವೇ ಮೊದಲಾದ ಪಥ್ಯಕ್ರಮದ ಅಂಶಗಳ ಪಾತ್ರವನ್ನು ವಿಶ್ಲೇಷಣೆಗೆ ಒಳಪಡಿಸಲಾಯಿತು. ಫಲಿತಾಂಶಗಳು ಮೆದುಳಿನ ಇನ್ಸುಲಿನ್ ರಿಸೆಪ್ಟರ್ ಸಬ್ಸ್ಟ್ರೇಟ್ ಅನ್ನು ಬದಲಾವಣೆ ಮಾಡುವಲ್ಲಿ ಮಧುಮೇಹ (ಡಯಾಬಿಟಿಸ್) ದ ಪಾತ್ರ ಹಾಗೂ ರಕ್ತ–ಮೆದುಳಿನ ಅಡ್ಡಗೋಡೆಯನ್ನು (ಬ್ಯಾರಿಯರ್) ದಾಟಿ ಹೋಗುವ ಪಥ್ಯಕ್ರಮದ ಅಂಶಗಳ ಅನುಕೂಲಕರ ಪರಿಣಾಮಗಳನ್ನು ಸಹ ಸ್ಪಷ್ಟವಾಗಿ ಸೂಚಿಸುತ್ತದೆ.




SFC, BFC, NFC, QFC- ಇವು ನಿಯಂತ್ರಿತ ಪ್ರಾಣಿಗಳು–ಅನುಕ್ರಮವಾಗಿ ಪಿಷ್ಟ, ಬರ್ಬೆರಿನ್, ನರಿನ್ಜೆನಿನ್, ಹಾಗೂ ಕ್ವೆರ್ಸೆಟಿನ್. SFD, BFD, NFD ಹಾಗೂ QFD- ಅನುಕ್ರಮವಾಗಿ ಮಧುಮೇಹವುಳ್ಳ (ಡಯಾಬಿಟಿಕ್) ಪ್ರಾಣಿಗಳು.

ಗ್ಲೈಕೋಸಮಿನೋಗ್ಲೈಕಾನ್ಸ್ (GAGs) ಮೇಲೆ ಆಹಾರಕ್ರಮದಿಂದುಂಟಾದ ಹೈಪರ್ ಕೊಲೆಸ್ಟ್ರೋಮಿಯಾದ ಪಾತ್ರದ ಅಧ್ಯಯನವು GAGs ನಲ್ಲಿ ಅತ್ಯಂತ ಸೂಕ್ಷ್ಮವಾದ ರಚನಾತ್ಮಕ ಬದಲಾವಣೆಯನ್ನು, ವಿಶೇಷವಾಗಿ ಡೈಸ್ಯಾಕರೈಡ್ ಸಂಯೋಜನೆ ಹಾಗೂ ಅಣು ತೂಕದಲ್ಲಿನ ಬದಲಾವಣೆಯನ್ನು ತೋರಿಸುತ್ತದೆ. ಇದು ನಿಯಂತ್ರಿತ ಹಾಗೂ ಹೈಪೋಕೊಲೆಸ್ಟ್ರೋಲೆಮಿಕ್ ಇಲಿಗಳ ಲಾಮಿನಿನ್, ಫೈಬ್ರೋನೆಕ್ಟಿನ್ ಹಾಗೂ ಟೈಪ್ IV ಕೊಲಾಜೆನ್‌ಗೆ ಅಂಟಿಕೊಳ್ಳುವ ಕೆಂಪುರಕ್ತಕಣ (ಎರಿಥ್ರೋಸೈಟ್)ಗಳ ಸಾಮರ್ಥ್ಯದ ಮೇಲೆ ಅತಿಕ್ರಮಿಸಿತು. GAG ಸರಪಣಿಗಳನ್ನು ಡೈಜೆಸ್ಟ್ ಮಾಡಿದಾಗ ಅಂಟಿಕೊಳ್ಳುವಿಕೆಯು ಗಣನೀಯವಾಗಿ ನಾಶಮಾಡಲ್ಪಟ್ಟಿತು. ಇದರಿಂದ ಅದು ಕೋಶಕ್ಕೆ ಅಂಟಿಕೊಳ್ಳಲು (ಸೈಟೋ ಆಢಿಯರೆನ್ಸ್) ಅಗತ್ಯವಾದ ಅಣುವೆಂಬುದು ಸಿದ್ಧವಾಯಿತು.




ಚಿತ್ರ: ಕೆಂಪುರಕ್ತಕಣ ಕೊಲೆಸ್ಟಿರಾಲ್ ಹಾಗೂ ಗ್ಲೈಕೋಸಮಿನೋಗ್ಲೈಕಾನ್ಸ್ ಮೇಲೆ ಆಹಾರಕ್ರಮ–ಪ್ರೇರಿತ ಹೈಪರ್ ಕೊಲೆಸ್ಟ್ರೋಲೆಮಿಯ. ಮೌಲ್ಯಗಳನ್ನು ಪ್ರತಿ ಪ್ರಯೋಗಗಳ ಗುಂಪಿನ ಮೇಲೆ ನಡೆಸಿದ ಎರಡು ಸ್ವತಂತ್ರ ಪ್ರಯೋಗಗಳ ಮಧ್ಯಮ ± SD ಆಗಿ ನೀಡಲಾಗಿದೆ. # $p<0.001$, ‡ $p<0.01$ ಹಾಗೂ ns (ಗಣನೀಯವಾದುದಲ್ಲ)

**ಅರಾಬಿನೋಜೈಲಾನುಗಳ ಇಮ್ಯುನೋಮಾಡ್ಯುಲೇಟರೀ ಪರಿಣಾಮಗಳು (ಮುರಳೀಕೃಷ್ಣ ಜಿ)**

ಸ್ಪ್ಲೆನೋಸೈಟುಗಳ ವಿರುದ್ಧ ಒಂದು ಸಹಜವಾದ ಪ್ರತಿರಕ್ಷೆ ಪರಿವರ್ತಕ (ಇಮ್ಯುನೋಮಾಡ್ಯುಲೇಟರ್), ಆಂಟಿಮೈಕ್ರೋಬಿಯಲ್, ಹಾಗೂ ಪ್ರಿಬಯೋಟಿಕ್ ಆಗಿರುವ, ಶುದ್ಧೀಕರಿಸಿದ ಅರಾಬಿನೋಜೈಲಾನ್‌ಗಳ ಮೈಟೋಜೆನಿಕ್ ಚಟುವಟಿಕೆಗಳನ್ನು ಎಂಟಿಟಿ ಆಸೇ ಮೂಲಕ ನಡೆಸಲಾಯಿತು. ಹಾಗೂ ಮ್ಯಾಕ್ರೋಫೇಜುಗಳನ್ನು ಕ್ರಿಯಾಶೀಲವಾಗಿಸುವ ಅವುಗಳ ಸಾಮರ್ಥ್ಯವನ್ನು ಮ್ಯುರೈನ್ ಪೆರಿಟೋನಿಯಲ್ ಎಕ್ಸುಡೇಟ್ ಸೆಲ್ಸ್ (PECs)ನಿಂದ ನೈಟ್ರಿಕ್ ಆಕ್ಸೈಡ್‌ನ (NO) ಬಿಡುಗಡೆಯನ್ನು ಅಳೆಯುವುದರ ಮೂಲಕ ಅರ್ಥೈಸಲಾಯಿತು. ಇನ್–ವಿಟ್ರೋ ಫರ್ಮೆಂಟೇಶನ್ ಪ್ರಯೋಗಗಳನ್ನು ಫರ್ಮೆಂಟೇಶನ್ ಮಾಧ್ಯಮದೊಳಗೆ ಶುದ್ಧೀಕರಿಸಿದ ಪಾಲಿಸ್ಯಾಕರೈಡುಗಳನ್ನು ಸೇರಿಸುವುದರ ಮೂಲಕ ಹಾಗೂ ಲ್ಯಾಕ್ಟೋ ಬ್ಯಾಸಿಲಸ್‌ನ ಐದು ವಿಭಿನ್ನ ಪ್ರಭೇಧಗಳಾದ ಲ್ಯಾ. ಕೇಸಿ, ಲ್ಯಾ. ಫರ್ಮೆಂಟಮ್, ಲ್ಯಾ. ಪ್ಲಾಂಟೇರಮ್, ಲ್ಯಾ. ಅಸಿಡೋಫಿಲಸ್ ಹಾಗೂ ಲ್ಯಾ. ಬ್ರೆವಿಸ್‌ಗಳನ್ನು 24, 48, ಹಾಗೂ 72 ಗಂಟೆಗಳ ಕಾಲ $37^{0}$C. ನಲ್ಲಿ ಆ ಮಾಧ್ಯಮದಲ್ಲಿ ಬೆಳೆಸುವುದರ ಮೂಲಕ ನಡೆಸಲಾಯಿತು. 600 ಎನ್‌ಎಂ ನಲ್ಲಿ ಒಡಿ (O.D) ನಲ್ಲಿನ ಹೆಚ್ಚಳ ಹಾಗೂ pHನಲ್ಲಿನ ಕುಗ್ಗುವಿಕೆಯನ್ನು ಆಯಾ ನಿಯಂತ್ರಿತ ಪ್ರಯೋಗಗಳೊಂದಿಗೆ ತುಲನೆ ಮಾಡಲಾಯಿತು. ಶುದ್ಧೀಕರಿಸಿದ ಅರಬಿನೋಜೈಲಾನ್‌ಗಳು (BE, KE1 ಹಾಗೂ KE2) ಮ್ಯುರೈನ್ ಸ್ಪ್ಲೆನೋಸೈಟ್ ಬೆಳೆಯುವಿಕೆಯನ್ನು ಹಾಗೂ ಪೆರಿಟೋನಿಯಲ್ ಎಕ್ಸುಡೇಟ್ ಕೋಶಗಳಿಂದ ನೈಟ್ರಿಕ್ ಆಕ್ಸೈಡ್ ಉತ್ಪಾದನೆಯ ಮಟ್ಟವನ್ನು ಗಣನೀಯ ಪ್ರಮಾಣದಲ್ಲಿ ಪ್ರೇರೇಪಿಸಿದವು. ಲ್ಯಾಕ್ಟೋ ಬ್ಯಾಸಿಲ್ಲಸಿನ ಎಲ್ಲ ಪ್ರಭೇಧಗಳ ಬೆಳವಣಿಗೆಯು 48 ಗಂಟೆಗಳ ಅವಧಿಯಲ್ಲಿ ಗರಿಷ್ಠವಾಗಿತ್ತು ಹಾಗೂ ಅವುಗಳಲ್ಲಿ ಲ್ಯಾ. ಬ್ರೆವಿಸ್ ಇತರವುಗಳಿಗೆ ಹೋಲಿಸಿದಾಗ ಅತ್ಯಂತ ಹೆಚ್ಚಿನ ಬೆಳವಣಿಗೆಯನ್ನು ತೋರಿಸಿತು.

**ಅಕ್ರಿಲಮೈಡ್– ಪ್ರೇರಿತ ದುರ್ಬಲಗೊಳಿಸುವಿಕೆಯ ಕ್ಷೀಣತ್ವ (ಮುರಲೀಧರ, ಅಖಿಲೇಂದರ್ ನಾಯ್ಡು ಕೆ)**

ಇನುಲಿನ್ ಪೂರೈಕೆ ಮಾಡಿರುವ ಗರ್ಭಧರಿಸಿದ ವಿಸ್ಟಾರ್ ಇಲಿಗಳಲ್ಲಿ ಗರ್ಭಾವಸ್ಥೆಯ ನಿಯತಾಂಕಗಳ ಮೌಲ್ಯಮಾಪನೆಯು ಇನುಲಿನ್ ಚಿಕಿತ್ಸೆಯು ಎಸಿಆರ್–ಪ್ರೇರಿತ ಆತಂಕದಂತಹ ವರ್ತನೆಯನ್ನು ಕಡಿಮೆ ಮಾಡುತ್ತದೆ ಎನ್ನುವುದನ್ನು ಸೂಚಿಸಿತು. ಎಸಿಆರ್ ಚಿಕಿತ್ಸೆಯ ಕಾರಣವಾಗಿ ಭ್ರೂಣ/ಪ್ಲಾಸೆಂಟಾ (ಮಾಸುಚೀಲ)ದ ತೂಕದಲ್ಲಿನ ಕುಸಿತವು ಇನುಲಿನ್ ಪೂರೈಕೆಯಾದ ಇಲಿಗಳಲ್ಲಿ ಅಂಶಿಕವಾಗಿ ಪುನರ್ ಸ್ಥಾಪಿಸಲ್ಪಟ್ಟಿರುವುದು ಕಂಡುಬಂತು.

ಜೀವರಸಾಯನ ಮಾರ್ಕರುಗಳ ವಿಶ್ಲೇಷಣೆಯು ಮಾತೆಯ ಮೆದುಳಿನ ಪ್ರದೇಶಗಳಲ್ಲಿನ ಎಸಿಆರ್–ಪ್ರೇರಿತ ಆಕ್ಸಿಡೇಟಿವ್ ಸ್ಟ್ರೆಸ್ (ಒತ್ತಡ) ಇನುಲಿನ್ ಪೂರೈಕೆಯಿಂದ ಗಣನೀಯವಾಗಿ ದುರ್ಬಲಗೊಂಡಿರುವುದನ್ನು ತೋರಿಸಿತು. ಹಾಗೂ ಇಂತಹುದೇ ಪರಿಣಾಮವು ಬೆಳೆಯುತ್ತಿರುವ ಭ್ರೂಣದ ಮೆದುಳಿನಲ್ಲೂ ಕಂಡುಬಂದಿದ್ದು, ಭ್ರೂಣದ ಮೆದುಳಿನಲ್ಲಿ ಅಧಿಕ ಮಟ್ಟಕ್ಕೇರಿದ ಪ್ರೋಟೀನ್ ಕಾರ್ಬಾನಿಲ್‌ಗಳು ಇನುಲಿನ್ ಪೂರೈಕೆಯಿಂದ ಸಾಮಾನ್ಯ ಮಟ್ಟಕ್ಕೆ ಇಳಿಸಲ್ಪಟ್ಟವು. ನಿರ್ದಿಷ್ಟವಾಗಿ, ಭ್ರೂಣ/ಮಾತೆಯ ಮೆದುಳಿನಲ್ಲಿ ಎಸಿಆರ್–ಪ್ರೇರಿತ (ಕಾರ್ಟೆಕ್ಸ್/ಸ್ಟ್ರಯೇಟಲ್) ಕಡಿಮೆಯಾದ

ಡೋಪಮೈನ್ ಮಟ್ಟಗಳನ್ನು ಇನುಲಿನ್ ಚಿಕಿತ್ಸೆಯು ಗಮನಾರ್ಹವಾಗಿ ಕಡಿಮೆ ಮಾಡಿತು. ಅದಲ್ಲದೇ, ಇನುಲಿನ್ ಚಿಕಿತ್ಸೆಯು ಭ್ರೂಣದ ಮೆದುಳಿನ ಎಸಿಆರ್–ಪ್ರೇರಿತ ಅಸಿಟೈಲ್‌ಕೋಲಿನ್‌ಎಸ್ಟರೇಸ್ ಮಟ್ಟದ ಹೆಚ್ಚಳವನ್ನು ಪರಿಣಾಮಕಾರಿಯಾಗಿ ಕುಗ್ಗಿಸಿತು. ಇನುಲಿನ್ ಪೂರೈಕೆಯು ಭ್ರೂಣ ಮೆದುಳಿನಲ್ಲಿ ಕುಗ್ಗಿದ ಮೈಟೋಕಾಂಡ್ರಿಯಲ್ ರೆಡಾಕ್ಸ್ ಸ್ಥಿತಿಯ ((MTT ಇಳಿಕೆ) ವಿರುದ್ಧ ಗಣನೀಯವಾದ ರಕ್ಷಣೆಯನ್ನು ಒದಗಿಸಲು ಸಮರ್ಥವಾಗಿತ್ತು. ಇದು, ಮೈಟೋಕಾಂಡ್ರಿಯಾದ ಕಾರ್ಯಕ್ಷಮತೆಯ ವ್ಯತ್ಯಯವನ್ನು ಸರಿಪಡಿಸುವಲ್ಲಿ ಅದರ ಸಾಮರ್ಥ್ಯವನ್ನು ಸೂಚಿಸುತ್ತದೆ.

ಒಚಿದು ಪ್ರತ್ಯೇಕ ಅಧ್ಯಯನ (ಸ್ಯಾಟಲೈಟ್ ಸ್ಟಡಿ)ದಲ್ಲಿ ಚಿಕಿತ್ಸೆ ನೀಡಿರದ ಇಲಿಗಳಿಗೆ ಒದಗಿಸಿದ ಇನುಲಿನ್ ಪೂರಕಾಂಶಗಳು ಅವುಗಳಲ್ಲಿ ಸೀಕಂ ತೂಕ ಹಾಗೂ ಬೈಫಿಡೋ/ಲ್ಯಾಕ್ಟೋ ಬ್ಯಾಸಿಲ್ಲೈ ಸಂಖ್ಯೆಗಳು ಗಣನೀಯವಾಗಿ ಹೆಚ್ಚುವುದರಲ್ಲಿ ಪರಿಣಮಿಸಿತು.

**ವೈಟಮಿನ್ ಸಿ ಎಸ್ಟರ್– ಆಸ್ಕಾರ್ಬಿಲ್ ಸ್ಟಿಯರೇಟ್ (ಅಖಿಲೇಂದರ್ ನಾಯ್ದು ಕೆ)**

ಹ್ಯೂಮನ್ ಸರ್ವೈಕಲ್ ಕಾರ್ಸಿನೋಮಾ ಸೆಲ್ ಲೈನ್ (HeLa) ಬಳಸಿ ಹ್ಯೂಮನ್ ಸರ್ವೈಕಲ್ ಕಾರ್ಸಿನೋಮಾ ಸೆಲ್‌ಗಳಲ್ಲಿ ಆಸ್ಕಾರ್ಬಿಲ್ ಸ್ಟಿಯರೇಟಿನ ಆಂಟಿ–ಪ್ರೊಲಿಫರೇಟಿವ್ ಹಾಗೂ ಅಪೋಪ್ಟೋಟಿಕ್ ಪ್ರೇರೇಪಿಸುವ ಲಕ್ಷಣಗಳ ಹಿಂದಿರುವ ಮೊಲೆಕ್ಯುಲಾರ್ ಮೆಕ್ಯಾನಿಸಮ್ ಅನ್ನು ಅಧ್ಯಯನ ಮಾಡಲಾಯಿತು. $37^0$C ನಲ್ಲಿ $CO_2$ ಇನ್ಕ್ಯುಬೇಟರಿನಲ್ಲಿ ಶೇ.10 ರಷ್ಟು ಫೀಟಲ್ ಕಾಫ್ ಸೀರಮ್ ಒಳಗೊಂಡಿರುವ ಮಾರ್ಪಾಡು ಮಾಡಿರುವ ಈಗಲ್‌ನ ಮಾಧ್ಯಮ (MEM) ದಲ್ಲಿ ಬೆಳೆಯುತ್ತಿದ್ದ HeLa ಕೋಶಗಳನ್ನು ವಿವಿಧ ಸಾಂದ್ರತೆಯ ಆಸ್ಕಾರ್ಬಿಕ್ ಆಮ್ಲ ಹಾಗೂ ಆಸ್ಕಾರ್ಬಿಲ್ ಸ್ಟಿಯರೇಟ್‌ಗೆ ಒಡ್ಡಲಾಯಿತು ಹಾಗೂ, ಜೀವಕೋಶಗಳ ಬೆಳವಣಿಗೆಯನ್ನು ಎಂಟಿಟಿ ಆಸೇ ಮೂಲಕ 24 ಗಂಟೆ ಹಾಗೂ 48 ಗಂಟೆಗಳ ನಂತರ ಅಳತೆಮಾಡಲಾಯಿತು. ಆಸ್ಕಾರ್ಬಿಲ್ ಸ್ಟಿಯರೇಟ್ HeLa ಜೀವಕೋಶಗಳ ಹರಡುವಿಕೆಯನ್ನು ತಡೆಗಟ್ಟಿತು ಹಾಗೂ ಅದು ಡೋಸ್ (ಪ್ರಮಾಣ) ಆಧಾರಿತವಾಗಿತ್ತು. 24 ಗಂ ಹಾಗೂ 48 ಗಂಟೆಗಳಿಗೆ IC50 ಮೌಲ್ಯಗಳು ಅನುಕ್ರಮವಾಗಿ 190 μM ಹಾಗೂ 123 μM ಆಗಿದ್ದವು. ಆಸ್ಕಾರ್ಬಿಲ್ ಸ್ಟಿಯರೇಟ್ ನಿಂದ ಚಿಕಿತ್ಸೆ ನೀಡಲಾದ HeLa ಜೀವಕೋಶಗಳಲ್ಲಿ ಪ್ರೊಪೀಡಿಯಮ್ ಸ್ಟೈನಿಂಗ್ ಮಾಡಿದ ಫ್ಲೋರಸೆನ್ಸ್ ಮೈಕ್ರೋಸ್ಕೊಪಿಯು ಪ್ಲಾಸ್ಮಾಪೊರೆಯ ಬ್ಲೆಬಿಂಗ್‌ನೊಂದಿಗೆ ಗಣನೀಯ ಪ್ರಮಾಣದ ಅಪೋಪ್ಟೆಟಿಕ್ ಕಾಯಗಳನ್ನು ಹಾಗೂ ಕ್ರೊಮ್ಯಾಟಿನ್ ಕಂಡೆನ್ಸೇಶನ್ ತೋರಿಸಿತು. ಅಸ್ಕಾರ್ಬಿಲ್ HeLa ಜೀವಕೋಶಗಳಲ್ಲಿ ಸ್ಟಿಯರೇಟ್ ಬಯೋಅವೇಲಿಬಿಲಿಟಿ ಮೇಲಿನ ಅಧ್ಯಯನಗಳು ತೋರಿಸಿದಂತೆ ಅಸ್ಕಾರ್ಬಿಲ್ ಸ್ಟಿಯರೇಟ್ ಕೋಶಪೊರೆಯ ಮೂಲಕ ಒಳತೂರಿ ಅದರ ಒಂದು ಭಾಗವು ಅಸ್ಕಾರ್ಬಿಲ್ ರಾಡಿಕಲ್ ಆಗಿ HeLa ಜೀವಕೋಶಗಳಲ್ಲಿ ಎಸ್ಟರೇಸ್‌ಗಳ ಮೂಲಕ ಹೈಡ್ರೊಲೈಸ್ ಆಗುತ್ತದೆ. ಕ್ಯಾಸ್ಪೇಸಸ್–3, 9ನ ಅಭಿವ್ಯಕ್ತಿಯ ಮೇಲೆ ಆಸ್ಕಾರ್ಬಿಲ್ ಸ್ಟಿಯರೇಟ್ (50-200 μM) ವಿವಿಧ ಸಾಂದ್ರತೆಯ ಪರಿಣಾಮಗಳನ್ನು ಸಹ ವೆಸ್ಟರ್ನ್ ಬ್ಲಾಟ್ ಮೂಲಕ HeLa ಜೀವಕೋಶಗಳಲ್ಲಿ ಅಧ್ಯಯನ ಮಾಡಲಾಯಿತು. ಆಸ್ಕಾರ್ಬಿಲ್ ಸ್ಟಿಯರೇಟ್ ಡೋಸ್– ಆಧಾರಿತವಾಗಿ ಕ್ಯಾಸ್ಪೇಸಸ್–3 ಮತ್ತು ಕ್ಯಾಸ್ಪೇಸಸ್ 9 ನ ಅಭಿವ್ಯಕ್ತಿಯನ್ನು ತಡೆಹಿಡಿಯಿತು ಹಾಗೂ ಇದು ಅಪೋಪ್ಟೋಸಿಸ್ ಸೈಟೋಕ್ರೋಮ್ ಸಿ ಹಾಗೂ ಕ್ಯಾಸ್ಪೇಸಸ್ ಪಾತ್ ವೇ ಮೂಲಕ ಅಪೋಪ್ಟೋಸಿಸ್ ಪ್ರೇರಿತವಾಗುತ್ತದೆ ಎನ್ನುವುದನ್ನು ಸೂಚಿಸಿದೆ.



ನಿಯಂತ್ರಿತ HeLa ಜೀವಕೋಶಗಳ ಸ್ಟಿಯರೇಟ್ (123 μM)



HeLa ಜೀವಕೋಶಗಳು ಅಸ್ಕಾರ್ಬಿಲ್ ಚಿಕಿತ್ಸೆ 48 ಗಂ.ಯಿಂದ ಅಪೋಪ್ಟೋಸಿಸ್ ತೋರಿಸುತ್ತಿರುವುದು

**ಅರಸಿನ ಪೆಕ್ಟಿಕ್ ಪಾಲಿಸ್ಯಾಕರೈಡ್ (ಶೈಲಜಾ ಎಂ ಧರ್ಮೇಶ್)**

ಅಲ್ಸರೇಶನ್ ಮೇಲೆ ಕುರಿಯ ಕೆಂಪು ರಕ್ತಕಣಗಳು (SRBC) (ಇನ್ಫ್ಲಮೆಂಟ್) ಹಾಗೂ ಸೈಕ್ಲೋಫಾಸ್ಫಮೈಡ್ (ಇಮ್ಯೂನೋಸಪ್ರೆಸರ್) ಗಳ ಪರಿಣಾಮವು ತೋರಿಸಿದಂತೆ ಅದು ಅಲ್ಸರ್ ಇಂಡೆಕ್ಸ್ ಅನ್ನು ವೃದ್ಧಿಸುತ್ತದೆ. ಆಂಟಿ–ಇನ್‌ಫ್ಲಾಮೇಟರಿ ಸೈಟೋಕೈನ್ IL10 ಗಣನೀಯ ಪ್ರಮಾಣದಲ್ಲಿ ಕುಗ್ಗಿಸಲ್ಪಟ್ಟಿತು. ಹಾಗೂ ಅದು ಅಲ್ಸರ್ ಇನ್ನಷ್ಟು ತೀವ್ರ ಸ್ವರೂಪ ಪಡೆಯುವುದಕ್ಕೆ ಕಾರಣಗಳನ್ನು ಸೂಚಿಸಿತು. ಆಹಾರಕ್ರಮದ ಪೆಕ್ಟಿಕ್ ಪಾಲಿಸ್ಯಾಕರೈಡ್ (DPP) ಚಿಕಿತ್ಸೆಯು ಇನ್–ವೈವೋ ಸೈಟೋಕೈನ್ ಮಟ್ಟಗಳನ್ನು ಹೆಚ್ಚಿಸಿತು ಹಾಗೂ ಇದು ಅರಸಿನದ ಪೆಕ್ಟಿಕ್ ಪಾಲಿಸ್ಯಾಕರೈಡಿನ ಇಮ್ಯುನೋಮಾಡ್ಯುಲೇಟರಿ ಸಂಭವನೀಯತೆಯನ್ನು ಸೂಚಿಸಿತು. ಹೆಚ್ಚಳವಾದ IL10 ವು ಅಲ್ಸರ್ ಗುಣಪಡಿಸುವ ಸಾಮರ್ಥ್ಯವನ್ನು ಹೆಚ್ಚಿಸುವುದು ಈ ಮೊದಲೇ ತಿಳಿದುಬಂದಿದೆ; ಇದನ್ನು ನಮ್ಮ ಮಾದರಿಯಲ್ಲಿ ಜಠರ ಹಾಗೂ ಯಕೃತ್ತಿನ ಹಿಸ್ಟೋಪೆಥಾಲಾಜಿಕಲ್ ಅನಾಲಿಸಿಸ್ ಮೂಲಕ ಅಧ್ಯಯನ ಮಾಡಲಾಯಿತು. ದತ್ತಾಂಶಗಳು ಅಲ್ಸರೇಶನ್ ಸಮಯದಲ್ಲಿ ಬದಲಾದ ರಚನೆಗಳು ಹಾಗೂ ಪೀರಿಯಾಡಿಕ್–ಆಸಿಡ್ ಸ್ಕಿಫ್ ಸ್ಟೇನ್ (PAS) ಪಾಸಿಟಿವ್ ವಸ್ತುಗಳ ಉತ್ಪಾದನೆಯಲ್ಲಿ ವ್ಯತ್ಯಯವನ್ನು ಬಹಿರಂಗಪಡಿಸಿದವು; ಇವುಗಳು ಅರಸಿನದ ಪೆಕ್ಟಿಕ್ ಪಾಲಿಸ್ಯಾಕರೈಡಿನಿಂದ ಪರಿಣಾಮಕಾರಿಯಾಗಿ ಮಾರ್ಪಾಡುಮಾಡಲ್ಪಟ್ಟವು. ಯಕೃತ್ತಿನಲ್ಲಿ ಕಂಡುಬಂದ ಬದಲಾವಣೆಗಳಾದ ಕೆಂಪು/ಬಿಳಿ ಪಲ್ಪ್ ಮಾರ್ಪಾಡುಗಳು ಹಾಗೂ ಕ್ಯಾಪ್ಸೂಲ್ ಫೈಬ್ರೋಸಿಸ್–ಇವುಗಳು ಚಿಕಿತ್ಸೆಯ ಪರಿಣಾಮವಾಗಿ ಸಾಮಾನ್ಯ ಸ್ಥಿತಿಗೆ ತರಲ್ಪಟ್ಟವು.

**ಅಪ್ಟಾಮರ್ ಆಧಾರಿತ ಬಯೋಸೆನ್ಸರ್ (ಠಾಕುರ್ ಎಂ ಎಸ್)**

ಬೈಮೆಟಾಲಿಕ್ ಅಲಾಯ್ ನ್ಯಾನೋಪಾರ್ಟಿಕಲ್ ಗಳನ್ನು ನೋಬಲ್ ಮೆಟಲ್ ಲವಣಗಳನ್ನು ಬಳಸಿ ಸಂರಚಿಸಲಾಯಿತು. 510 nm ನ ಪೀಕ್ ಹೊಂದಿರುವ ಸರ್ಫೇಸ್ ಪರ್ಫಾರ್ಮೆನ್ಸ್ ರಿಸೊನೆನ್ಸ್ (SPR) ನೊಂದಿಗಿನ ನ್ಯಾನೋಪಾರ್ಟಿಕಲ್‌ಗಳು ವೈಟಮಿನ್ ಬಿ12 ಗಾಗಿ ಅಪ್ಟಾಮರ್ ಆಧಾರಿತ ಕಲರಿಮೆಟ್ರಿಕ್ ಸಂವೇದಕಗಳಿಗೆ ಬಳಸಲಾಯಿತು. ವೈಟಮಿನ್ ಬಿ12 ಪತ್ತೆಮಾಡಲು ವೈಟಮಿನ್ ಬಿ12ಗೆ ನಿರ್ದಿಷ್ಟವಾಗಿರುವ ಪರಿವರ್ತಿತ ಅಪ್ಟಾಮರ್ ಹಾಗೂ ಚಿನ್ನದ ನ್ಯಾನೋಪಾರ್ಟಿಕಲ್ (GNP) ಬಳಸಲಾಯಿತು. ನ್ಯಾನೋಪಾರ್ಟಿಕಲ್‌ಗಳ ದ್ರಾವಣದ ಕಲಿಲ (ಕೊಲಾಯ್ಡ್) ಸ್ಥಿತಿಯುಲ್ಲಿನ ಬದಲಾವಣೆಯ ಆಧಾರದಲ್ಲಿ ಪತ್ತೆಮಾಡಲಾಗುತ್ತದೆ. ಇದು ಲವಣ–ಪ್ರೇರಿತ ಕ್ರಾಸ್ ಲಿಂಕಿಂಗ್ ಅಗ್ರಿಗೇಶನ್ ಕಾರ್ಯಾಚರಣೆಯ ನೆರವಿನಿಂದ ಗುರಿ ಅಣುವಿನ

(ಟಾರ್ಗೆಟ್ ಮಾಲಿಕ್ಯೂಲ್) ನ ಪ್ರಸ್ತುತಿ ಅಥವಾ ಗೈರುಹಾಜರಾತಿಯ ಆಧಾರದ ಮೇಲೆ ಕೆಲಸ ಮಾಡುತ್ತದೆ. ವೈಟಮಿನ್ ಬಿ12 ನ ಗೈರುಹಾಜರಾತಿಯಲ್ಲಿ GNPs ದ್ರಾವಣವು ಕೆಂಪುವರ್ಣವನ್ನು ತೋರಿಸಿತು; ಅದೇ, ವೈಟಮಿನ್ ಬಿ12 ನ ಪ್ರಸ್ತುತಿಯಲ್ಲಿ ಬಣ್ಣವು ಕೆಂಪಿನಿಂದ ನೇರಳೆಗೆ ತಿರುಗುತ್ತದೆ. ಗರಿಷ್ಠಗೊಳಿಸಿದ ಲಕ್ಷಣಗಳೊಂದಿಗೆ ವೈಟಮಿನ್ ಬಿ12ನ ಪತ್ತೆಯಾಗಬಲ್ಲ ಮಿತಿಯು 0.1 μg/mL ಆಗಿತ್ತು. ಕೋಳಿಯಿಂದ ಪಡೆದ, ಬಿಸ್‌ಫೀನಾಲ್–ಎ ವಿರುದ್ಧದ IgY ಪ್ರತಿರಕ್ಷಕಗಳು (ಆಂಟಿಬಾಡಿ) ಹಾಗೂ ಸೋಡಿಯಮ್ ಸಲ್ಫೇಟ್ ಪ್ರೆಸಿಪಿಟೇಶನ್ ಬಳಸಿ ಪ್ರತ್ಯೇಕಗೊಳಿಸಲ್ಪಟ್ಟವು. ಪ್ರತಿರಕ್ಷಕಗಳ ಟೈಟರ್ ಮೌಲ್ಯಗಳು ಮೈಕ್ರೋಗ್ರಾಂಗುಗಳಲ್ಲಿ ಕಂಡುಬಂದಿದ್ದು, ಇವು ಬಿಸ್‌ಫೀನಲ್–ಎ ಪತ್ತೆಗೆ ಅಷ್ಟು ಸೂಕ್ಷ್ಮವಲ್ಲ.




ಚಿನ್ನ ಬೆಳ್ಳಿ ಮಿಶ್ರಲೋಹ ನ್ಯಾನೋಪಾರ್ಟಿಕಲ್‌ಗಳ ಮೇಲ್ಮೈ ಪ್ಲಾಸ್ಮೋರೆಸೊನೆನ್ಸ್ ಪೀಕ್ ತೋರಿಸುತ್ತಿರುವ ಅಬ್ಸಾರ್ಪ್ಶನ್ ಸ್ಪೆಕ್ಟ್ರಾ (ಹೀರು ರೋಹಿತ)

**OSMAC (ಒಂದು ಸ್ಟ್ರೇನ್ +/– ಹಲವು ಸಂಯುಕ್ತಗಳು) (One Strain ± Many Compounds) ವಿಧಾನದಿಂದ ರಾಸಾಯನಿಕ ವೈವಿಧ್ಯ (ಅವಿನಾಶ್ ಪಿ ಸತ್ತೂರು)**

ಆಲ್ಫಾ ಗ್ಲುಕೋಸಿಡೇಸ್ ಕಿಣ್ವದ ವಿರುದ್ಧ ವಿನೂತನ ಇನ್‌ಹಿಬಿಟರ್‌ಗಳನ್ನು ಗುರುತಿಸಲು ಹೆಚ್‌ಪಿಸಿಎಲ್ ಸಪರೇಶನ್ ತಂತ್ರ ಬಳಸಿ ಆಯ್ದ ಫಂಗಲ್ ಕಚ್ಚಾ ಎಕ್ಸ್ಟ್ರಾಕ್ಟ್ ನ ವಿಶ್ಲೇಷಣೆಯನ್ನು ಮಾಡಲಾಯಿತು. ಪ್ರಿಪರೇಟಿವ್ HPLC ಹಾಗೂ ಇತರ ಸಾಂಪ್ರದಾಯಿಕ ವಿಧಾನಗಳ ಬಳಕೆಯ ಮೂಲಕ ಕ್ರಿಯಾಶೀಲ ಭಾಗವನ್ನು ಶುದ್ಧೀಕರಿಸಲಾಯಿತು. ಕ್ರಿಯಾಶೀಲ ಭಾಗದ ರಚನೆಯು (ಸ್ಟ್ರಕ್ಚರಲ್ ಎಲುಸಿಡೇಶನ್) ಪ್ರಗತಿಯಲ್ಲಿದೆ. ಈ ತಂತ್ರವನ್ನು ಇದೇ ಮೊದಲ ಬಾರಿಗೆ ಬಹು–ಕ್ರಿಯೆಯುಳ್ಳ ಇಂತಹ ಹಲವಾರು ವಿನೂತನ ಅಣುಗಳನ್ನು ಒಂದೇ ಕಲ್ಚರಿನಲ್ಲಿ ಪತ್ತೆಮಾಡುವಲ್ಲಿ ಬಳಕೆ ಮಾಡಲಾಗಿದೆ.

**ಮೈಕ್ರೋಬ್–ಮೂಲದ ಎಲ್–ಆಸ್ಪಾರಿಜಿನೇಸ್ (ಮನೋನ್ಮಣಿ ಹೆಚ್ ಕೆ)**

ಪ್ರಯೋಗಶಾಲೆಯಲ್ಲಿ ನಿರ್ವಹಿಸಲಾದ ಬ್ಯಾಕ್ಟೀರಿಯಾದ ಪ್ರತ್ಯೇಕಿತ ಸಮೂಹಗಳನ್ನು ನ್ಯೂಟ್ರಿಯೆಂಟ್ ಅಗಾರ್ ಸ್ಲ್ಯಾಂಟುಗಳಲ್ಲಿ 48 ಗಂಟೆಗಳ ಕಾಲ ಆಮ್ಲಜನಕ– ಸಹಿತ ಪರಿಸ್ಥಿತಿಗಳಲ್ಲಿ $37^0$ಸೆ ನಲ್ಲಿ ಕಲ್ಚರ್ ಮಾಡಲಾಯಿತು. ಕೊಯಿಲು ಮಾಡಿದ ಮಾಧ್ಯಮದಿಂದ ಕೋಶದ ಮುದ್ದೆ (ಸೆಲ್ ಪೆಲೆಟ್ಸ್)ಗಳನ್ನು ಕನಿಷ್ಟ–ಮಾಧ್ಯಮದಲ್ಲಿ ಮರುತೂಗುಹಾಕಲಾಯಿತು. ಇದರ ಜೊತೆಗೆ 30 ಗಂಟೆಗಳ ಕಾಲ ಎಲ್–ಅಸ್ಪಾರಜಿನ್ (2 mM) ನೀಡುವುದರ ಮೂಲಕ ಪ್ರೇರೇಪಿಸಲಾಯಿತು. ಆಸ್ಪಾರಜಿನೇಸ್ ಉತ್ಪಾದನೆಗೆ ಸ್ಕ್ರೀನ್ ಮಾಡಿದ 40 ಮಣ್ಣಿನ ಬ್ಯಾಕ್ಟೀರಿಯಲ್ ಐಸೊಲೇಟ್‌ಗಳಲ್ಲಿ 12 ಜೀವಿಗಳು ಅಸ್ಪಾರಜಿನೇಸ್ ಉತ್ಪಾದನೆಯನ್ನು ತೋರಿಸಿದವು. ಆಂತರಿಕ ಹಾಗೂ ಬಾಹ್ಯ ಕಿಣ್ವಗಳ ಉತ್ಪಾದನೆಗಾಗಿ ಈ ಜೀವಿಗಳನ್ನು ಮತ್ತೆ ಸ್ಕ್ರೀನ್ ಮಾಡಲಾಯಿತು.

ಜಿನೋಮಿಕ್ ಡಿಎನ್‌ಎಯನ್ನು ಇವುಗಳಿಂದ ಪ್ರತ್ಯೇಕಿಸಲಾಯಿತು ಹಾಗೂ NCBI ದತ್ತಾಂಶ ಸಂಗ್ರಹದಲ್ಲಿ ಲಭ್ಯವಿರುವ ಆಸ್ಪಾರಜಿನೇಸ್ ಸರಣಿಗಳಿಗೆ ಪ್ರೈಮರುಗಳನ್ನು ವಿನ್ಯಾಸಗೊಳಿಸಲಾಯಿತು. ಇದಕ್ಕಾಗಿ ಪ್ರೈಮರ್ ವಿನ್ಯಾಸ ಮಾಡುವ ತಂತ್ರಾಂಶವನ್ನು ಬಳಸಲಾಯಿತು. $50^0$ಸೆ ಹಾಗೂ $70^0$ಸೆ ಗಳ ತಾಪಮಾನಗಳ ನಡುವೆ ಎಎಸ್‌ಎನ್ ಪ್ರೈಮರ್ ಬಳಸಿ ಗ್ರೇಡಿಯೆಂಟ್ ಪಿಸಿಆರ್ ಪ್ರಯೋಗವನ್ನು ನಡೆಸಲಾಯಿತು. PCR ನಳಿಕೆಗಳನ್ನು 8 ವಿಭಿನ್ನ ತಾಪಮಾನಗಳಲ್ಲಿರಿಸಲಾಯಿತು. ವೃದ್ಧಿ (ಆಂಪ್ಲಿಫಿಕೇಶನ್)ಗಾಗಿ ಬಳಕೆಮಾಡಿದ ಸೈಕಲ್ಲುಗಳ ಸಂಖ್ಯೆ 30. ಗರಿಷ್ಠಗೊಳಿಸಿದ ತಾಪಮಾನ, ಸಮಯ ಹಾಗೂ ಆಯ್ದ ಜೀವಿಯಿಂದ ಪಡೆದ ಜಿನೋಮಿಕ್ ಡಿಎನ್‌ಎಗಳನ್ನು ಬೃಹತ್ ಪ್ರಮಾಣದ ವೃದ್ಧಿಗಾಗಿ ಬಳಸಲಾಯಿತು. ಎಎಸ್‌ಎನ್ ಜೀನಿನ ಬೃಹತ್ ಪ್ರಮಾಣದ ಆಂಪ್ಲಿಫಿಕೇಶನ್ ಉತ್ಪನ್ನಗಳನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸಲಾಯಿತು ಹಾಗೂ ಅಗಾರೋಸ್ ಜೆಲ್ ಮೇಲೆ ತಯಾರಿಯ ಎಲೆಕ್ಟ್ರೋಫೋರೋಸ್ ಮಾಡಲಾಯಿತು. ಶುದ್ಧೀಕರಿಸಿದ ಎಎಸ್‌ಎನ್ ಜೀನಿನ ಪಿಸಿಆರ್ ಉತ್ಪನ್ನವನ್ನು pTZ57R/ T ವೆಕ್ಟರಿಗೆ ಲಿಗೇಟ್ ಮಾಡಲಾಯಿತು ಮತ್ತು ಇ.ಕೊಲೈ DH5α ನಲ್ಲಿ ಕ್ಲೋನ್ ಮಾಡಲಾಯಿತು. ಕ್ಲೋನ್ ಮಾಡಲಾದ ಪ್ರತ್ಯೇಕಿತ ಪ್ಲಾಸ್ಮಿಡ್ ಸೀಕ್ವೆನ್ ಮಾಡಲು ಕಳುಹಿಸಲ್ಪಟ್ಟಿತು. ಶುದ್ಧೀಕರಿಸಿದ ಪಿಸಿಆರ್ ಉತ್ಪನ್ನವನ್ನು ಲೀನಿಯರೈಸ್ಡ್ pET101 ಡೈರೆಕ್ಷನಲ್ ವೆಕ್ಟರ್‌ಗೆ "PET101 ಡೈರೆಕ್ಷನಲ್ TOPO ಕಿಟ್" ಬಳಸಿ ಲಿಗೇಟ್ ಮಾಡಲಾಯಿತು. ಪಿಸಿಆರ್ ಉತ್ಪನ್ನವು ಇ.ಕೊಲೈ BL 21 ರ ಕಾಂಪೊನೆಂಟ್ ಕೋಶಗಳಾಗಿ ಪರಿವರ್ತಿತವಾದವು. ಪರಿವರ್ತನೆಯಾದವುಗಳನ್ನು (ಟ್ರಾನ್ಸ್ಫಾರ್ಮೆಂಟ್) ಲೂರಿಯಾ ಆಂಟಿಬಯಾಟಿಕ್ ಅಗಾರ್ ಮೇಲೆ ಆಯ್ಕೆ ಮಾಡಲಾಯಿತು. ಆಯ್ಕೆಯಾದ ಕ್ಲೋನ್ ಅನ್ನು ಪ್ರೋಟೀನ್ ಎಕ್ಸ್‌ಪ್ರೆಶನ್‌ಗಾಗಿ ಪರೀಕ್ಷಿಸಲಾಯಿತು. ಆಯ್ಕೆಯಾದ ಕ್ಲೋನ್ ಅನ್ನು 10L ಫರ್ಮೆಂಟರ್‌ನಲ್ಲಿ ಬೆಳೆಸಲಾಯಿತು. ಫರ್ಮೆಂಟರ್ ಬೆಳೆದ ಕೋಶಗಳಿಂದ ಕ್ಲೋನ್ಸ್ ಕೊಯಿಲು ಮಾಡಲಾಯಿತು. ಕಿಣ್ವಗಳನ್ನು ಸೋನಿಕೇಶನ್ ಮೂಲಕ ಐಸೊಲೇಟ್ ಮಾಡಲಾಯಿತು ಹಾಗೂ Ni-NTA ಕಾಲಂ ಮೂಲಕ ಶುದ್ಧೀಕರಿಸಿ ಗುಣಲಕ್ಷಣಗಳನ್ನು ಪತ್ತೆಮಾಡಲಾಯಿತು. ಶುದ್ಧೀಕರಿಸಿದ ಕಿಣ್ವವನ್ನು ಆಂಟಿಪ್ರೊಲಿಫರೇಟಿವ್ ಚಟುವಟಿಕೆಗೆ ಎಹ್ರಿಲಿಚ್ ಎಸೈಟಿಸ್ ಕಾರ್ಸಿನೋಮಾ (EAC) ಸೆಲ್ ಲೈನ್ ಮೇಲೆ ಅಧ್ಯಯನ ಮಾಡಲಾಯಿತು. ಇಲ್ಲಿ, ಕಿಣ್ವ–ಚಿಕಿತ್ಸೆ ಪಡೆದ ಕೋಶಗಳಲಿ ಅಪೋಪ್ಟೋಸಿಸ್ ಕಂಡುಬಂತು. EAC ಮೂಲಕ ಪ್ರೇರೇಪಿತವಾದ ಇಲಿಗಳಲ್ಲೂ ಇದನ್ನು ಪ್ರಯತ್ನಿಸಲಾಯಿತು. L-Asn ಚಿಕಿತ್ಸೆಗೊಳಗಾದ ಪ್ರಾಣಿಯಲ್ಲಿ EAC ಯ ಬೆಳವಣಿಗೆಯು ತಡೆಹಿಡಿಯಲ್ಪಟ್ಟಿತು ಹಾಗೂ ಕಣ್ಣಿಗೆ ಕಾಣುವಂತಹ ಟಾಕ್ಸಿಸಿಟಿ ಇರಲಿಲ್ಲ.

**ಪೆನಿಸಿಲಿಯಮ್ ಪ್ರಭೇಧಗಳಿಂದ ದ್ವಿತೀಯಕ ಮೆಟಬೊಲೈಟ್ (ಚಯಾಪಚಯ ಉತ್ಪನ್ನ) ಗಳು (ರಾಮಸ್ವಾಮಿ ಕೆ)**

ವಿಭಿನ್ನ ಆಹಾರ ಮಾದರಿಗಳಿಂದ ಪೊಟೆಟೋ ಡೆಕ್ಸ್ಟ್ರೋಸ್ ಅಗಾರ್ ಮಾಧ್ಯಮ ಬಳಸಿ ಐಸೊಲೇಟ್ ಮಾಡಿರುವ ಹಾಗೂ ಅದೇ ಮಾಧ್ಯಮದಲ್ಲಿ ಶುದ್ಧೀಕರಿಸಿದ 29 ಪೆನಿಸಿಲಿಯಮ್ ಪ್ರಭೇಧಗಳನ್ನು ದ್ವಿತೀಯಕ ಚಯಾಪಚಯ ಕ್ರಿಯೆಯ ಉತ್ಪನ್ನಗಳಿಗೆ ಒಡ್ಡಲಾಯಿತು. ಇದಕ್ಕಾಗಿ 100 mL ಆಂಟಿಬಯಾಟಿಕ್ ಪರೀಕ್ಷಾ ಬ್ರಾತ್ (ATB) ನ್ನು ಶೇಕ್ ಫ್ಲಾಸ್ಕುಗಳಲ್ಲಿ ಪ್ರತಿ ನಿಮಿಷಕ್ಕೆ 120 rpm ನಲ್ಲಿ ರೋಟರಿ ಶೇಕರಿನಲ್ಲಿ 15 ದಿನಗಳ ಕಾಲ ಇರಿಸಲಾಯಿತು. 15 ದಿನಗಳ ನಂತರ ಬ್ರಾತ್ ಮತ್ತು ಮೈಸೀಲಿಯಾವನ್ನು ಸೋಸುವಿಕೆಯ ಮೂಲಕ ಪ್ರತ್ಯೇಕಿಸಲಾಯಿತು. ಹಾಗೂ ಸೋಸಲಾದ ಫ್ಲಿಲ್ಟ್ರೇಟ್‌ನ್ನು ಅದೇ ಪ್ರಮಾಣದ ಇಥೈಲ್ ಅಸಿಟೇಟ್ ನಲ್ಲಿ ಎಕ್ಸ್‌ಟ್ರ್ಯಾಕ್ಟ್ ಮಾಡಲಾಯಿತು. ನಂತರ, ಎಕ್ಸ್‌ಟ್ರ್ಯಾಕ್ಟ್ ಅನ್ನು ಫ್ಲ್ಯಾಶ್ ಇವ್ಯಾಪೊರೇಟರ್ ಬಳಸಿ ಸಾಂದ್ರೀಕರಿಸಲಾಯಿತು.

ಕಚ್ಚಾ ಎಕ್ಸ್‌ಟ್ರ್ಯಾಕ್ಟ್ ಅನ್ನು ಆಂಟಿಬ್ಯಾಕ್ಟೀರಿಯಲ್ ಚಟುವಟಿಕೆಗಾಗಿ ಪರೀಕ್ಷಿಸಲಾಯಿತು. ಹಾಗೂ ಎಲ್ಲಾ ಮೆಟಬೊಲೈಟುಗಳೂ ಆಂಟಿಬ್ಯಾಕ್ಟೀರಿಯಲ್ ಚಟುವಟಿಕೆಗಳನ್ನು ತೋರಿಸಿವೆ. ಈ ಫಲಿತಾಂಶಗಳ ಆಧಾರದಲ್ಲಿ, ಪ್ರತಿಯೊಂದು ಮೆಟಬೊಲೈಟಿನಲ್ಲಿರುವ ಸಂಭವನೀಯ ಅಂಶಗಳನ್ನು ಪ್ರತ್ಯೇಕಿಸುವ ಸಲುವಾಗಿ ಮುಂದಿನ ಕೆಲಸಗಳಾದ TLC, ಕಾಲಂ ಕ್ರೊಮಾಟೋಗ್ರಫಿಯನ್ನು ನಡೆಸಲಾಯಿತು.

**ಸಪೋನಿನ್ ಮಿಶ್ರಿತ ಗೋಧಿಹಿಟ್ಟಿನ ಕೀಟನಾಶಕ ಪರಿಣಾಮ (ಕೃಷ್ಣಯ್ಯ ಹೆಚ್‌ಇ)**

ವಿವಿಧ ಪ್ರಮಾಣದಲ್ಲಿ (ಅನುಪಾತಗಳಲ್ಲಿ) ಸಪೋನಿನ್ ಮಿಶ್ರ ಮಾಡಿದ ಗೋಧಿಹಿಟ್ಟನ್ನು ಟಿ ಕಾಸ್ಟೇನಿಯಮ್ (T. castaneum) ವಿರುದ್ಧ ಪರೀಕ್ಷಿಸಲಾಯಿತು. ಹಾಗೂ ಶೇ.5 ಮಟ್ಟದ ಸಪೋನಿನ್ ಟ್ರೈಲೋಬಿಯಮ್ ಪ್ರಭೇಧದ ಬೆಳವಣಿಗೆಯ ಮೇಲೆ ಪರಿಣಾಮ ಬೀರುವುದನ್ನು ಪತ್ತೆ ಮಾಡಲಾಯಿತು. ಶೇ.50 ರ ಷ್ಟು ತಡೆಗಟ್ಟುವಿಕೆಯೊಂದಿಗೆ ಬೆಳವಣಿಗೆಯು ಒಂದು ತಿಂಗಳು ಕಾಲ ವಿಳಂಬಿತಗೊಂಡಿತು. ತದನಂತರ ಇಂತಹುದೇ ಪ್ರಯೋಗಗಳನ್ನು ಸಿ ಸೆಫಲೋನಿಕಾ (C. cephalonica) ಹಾಗೂ ಇ. ಕೌಟೆಲ್ಲಾ (E. cautella) ಗಳ ಮೇಲೂ ಆಯೋಜಿಸಲಾಗಿವೆ.

**ಮಿಥೈಲ್ ಡಿರೈವೆಟಿವ್‌ಗಳು ಹಾಗೂ ಅವುಗಳ ಕೀಟನಾಶಕ ಚಟುವಟಿಕೆಗಳು (ಅಕ್ಮಲ್ ಪಾಶ)**

4–ಕ್ಲೋರೋ–3–ಮಿಥೈಲ್ ಫಿನಾಲ್ (0.03 M) ಹಾಗೂ 4–ಕ್ಲೋರೋ–3,5–ಡೈಮಿಥೈಲ್ ಫಿನಾಲ್ (0.03 M) ಗಳನ್ನು ಪ್ರತ್ಯೇಕವಾಗಿ 100 mL ಅಸಿಟೋನಿನಲ್ಲಿ ಕರಗಿಸಲಾಯಿತು. ಶುಷ್ಕ ಪೊಟ್ಯಾಸಿಯಮ್ ಕಾರ್ಬೊನೇಟ್ (10.0 g) ಅನ್ನು ಆ ಮಿಶ್ರಣಕ್ಕೆ ಸೇರಿಸಲಾಯಿತು. ನಂತರ O,O-ಡೈಇಥೈಲ್ ಕ್ಲೋರೋಥಯೋಫಾಸ್ಪೇಟ್ (0.03 M) ಅನ್ನು ಅದಕ್ಕೆ ಸೇರಿಸಲಾಯಿತು. (0.03 M). ಈ ಮಿಶ್ರಣವನ್ನು 3 ಗಂಟೆಗಳ ಕಾಲ ರಿಫ್ಲಕ್ಸ್ ಮಾಡಲಾಯಿತು. ಉತ್ಪನ್ನವನ್ನು ಟಿಎಲ್‌ಸಿ (TLC) ನೆರವಿನಿಂದ ವಿಶ್ಲೇಷಿಸಲಾಯಿತು. ಇದಕ್ಕೆ ಪೆಟ್ರೋಲಿಯಮ್ ಈಥರ್ (60-80°C) ನಲ್ಲಿ 15ಶೇ. ಡೈಇಥೈಲ್ ಈಥರ್ ಅನ್ನು ಬಳಸಲಾಯಿತು ಹಾಗೂ ಆ ಪ್ಲೇಟ್ ಅನ್ನು ನೇರಳಾತೀತ ಕಿರಣಗಳಲ್ಲಿ 254 nmನಲ್ಲಿ ನೋಡಲಾಯಿತು. ಉತ್ಪನ್ನವು Rf 0.51 ನಲ್ಲಿ ಒಂದು ಕಲೆ(ಸ್ಪಾಟ್)ಯಾಗಿ ಕಾಣಿಸಿಕೊಂಡಿತು. ಅದೇ, ಪ್ರತಿಕ್ರಿಯೆಯಲ್ಲಿ ಭಾಗವಹಿಸದ ಆರಂಭಿಕ ವಸ್ತುವು ವಿಭಿನ್ನ Rf ನಲ್ಲಿ ಕಾಣಿಸಿಕೊಂಡವು, 4–ಕ್ಲೋರೋ–3–ಮಿಥೈಲ್ ಫಿನಾಲ್ 0.17 ನಲ್ಲಿ ಹಾಗೂ O,O– ಡೈಇಥೈಲ್‌ಕ್ಲೋರೋಥಯೋಫಾಸ್ಪೇಟ್ 0.67 ನಲ್ಲಿ. ಅಶುದ್ಧವಸ್ತುಗಳನ್ನು ಹೊರಹಾಕಲು ಅಸಿಟೋನ್ ಎಲ್ಯೂಎಂಟ್ ಬಳಸಿ ಈ ಮಿಶ್ರಣವನ್ನು ಬೇಸಿಕ್ ಅಲುಮಿನಾದ ಮೂಲಕ ಹಾಯಿಸಲಾಯಿತು. ಉತ್ಪನ್ನವನ್ನು ಪಡೆಯಲು ಅಸಿಟೋನ್ ಅನ್ನು ಇವ್ಯಾಪೊರೇಟ್ ಮಾಡಲಾಯಿತು.

ಫಲಿತಾಂಶವಾಗಿ ಬಂದ ಡಿರೈವೆಟಿವ್‌ಗಳು ಅನುಕ್ರಮವಾಗಿ O–(4–ಕ್ಲೋರೋ–3–ಮಿಥೈಲ್‌ಫಿನೈಲ್) O,O–ಡೈಇಥೈಲ್ ಫಾಸ್ಪೋರೋಥಯೋಏಟ್ ಹಾಗೂ O–(4–ಕ್ಲೋರೋ–3, 5–ಡೈಮಿಥೈಲ್‌ಫಿನೈಲ್) O,O–ಡೈಇಥೈಲ್ ಫಾಸ್ಫೋರೋಥಯೋಏಟ್ ಆಗಿದ್ದವು.

**ಇಥೈಲ್ ಡಿರೈವೆಟಿವ್ಸ್ ಹಾಗೂ ಅವುಗಳ ಕೀಟನಾಶಕ ಚಟುವಟಿಕೆಗಳು (ಅಕ್ಮಲ್ ಪಾಶ)**

4– ಕ್ಲೋರೋ–3–ಮೆಥೈಲ್ ಫೀನಾಲ್ (0.03 M) ಹಾಗೂ 4–ಕ್ಲೋರೋ–3,5–ಡೈಮಿಥೈಲ್ ಫೀನಾಲ್ (0.03 M) ಗಳನ್ನು ಪ್ರತ್ಯೇಕವಾಗಿ 100 ಎಂಎಲ್ ಅಸಿಟೋನಿನಲ್ಲಿ ಕರಗಿಸಲಾಯಿತು. ಶುಷ್ಕ ಪೊಟ್ಯಾಸಿಯಮ್ ಕಾರ್ಬೊನೇಟ್ (10.0 g) ಅನ್ನು ಆ ಮಿಶ್ರಣಕ್ಕೆ ಸೇರಿಸಲಾಯಿತು. ನಂತರ O,O-ಡೈಮಿಥೈಲ್ ಕ್ಲೋರೋಥೈಯೋಫಾಸ್ಫೇಟ್ (0.03 M) ಅನ್ನು ಅದಕ್ಕೆ ಸೇರಿಸಲಾಯಿತು. ಈ ಮಿಶ್ರಣವನ್ನು 3 ಗಂಟೆಗಳ ಕಾಲ ರಿಫ್ಲಕ್ಸ್ ಮಾಡಲಾಯಿತು. ಉತ್ಪನ್ನವನ್ನು ಟಿಎಲ್‌ಸಿ (TLC) ನೆರವಿನಿಂದ ವಿಶ್ಲೇಷಿಸಲಾಯಿತು. ಇದಕ್ಕೆ ಪೆಟ್ರೋಲಿಯಮ್ ಈಥರ್ (60-80°C) ನಲ್ಲಿ 15ಶೇ. ಡೈಇಥೈಲ್ ಈಥರ್ ಅನ್ನು ಬಳಸಲಾಯಿತು ಹಾಗೂ ಆ ಪ್ಲೇಟ್ ಅನ್ನು ನೇರಳಾತೀತ ಕಿರಣಗಳಲ್ಲಿ 254 nmನಲ್ಲಿ ನೋಡಲಾಯಿತು. ಉತ್ಪನ್ನವು Rf 0.436 ನಲ್ಲಿ ಒಂದು ಬಿಂದು (ಸ್ಪಾಟ್) ವನ್ನು ತೋರಿಸಿತು. ಅದೇ, ಪ್ರತಿಕ್ರಿಯೆಯಲ್ಲಿ ಭಾಗವಹಿಸದ ಆರಂಭಿಕ ವಸ್ತುವು ವಿಭಿನ್ನ Rf, 4–ಕ್ಲೋರೋ–3–ಮಿಥೈಲ್ ಫೀನಾಲ್ 0.17ನಲ್ಲಿ. ಅಶುದ್ಧವಸ್ತುಗಳನ್ನು ಹೊರಹಾಕಲು ಅಸಿಟೋನ್ ಎಲ್ಯೂಎಂಟ್ ಬಳಸಿ ಈ ಮಿಶ್ರಣವನ್ನು ಬೇಸಿಕ್ ಅಲುಮಿನಾದ ಮೂಲಕ ಹಾಯಿಸಲಾಯಿತು. ಉತ್ಪನ್ನವನ್ನು ಪಡೆಯಲು ಅಸಿಟೋನ್ ಅನ್ನು ಇವ್ಯಾಪೊರೇಟ್ ಮಾಡಲಾಯಿತು. NMR ಬಳಸಿ ಉತ್ಪನ್ನದ ಗುಣಲಕ್ಷಣಗಳನ್ನು ಪತ್ತೆ ಮಾಡಲಾಯಿತು.

ಫಲಿತಾಂಶವಾಗಿ ಬಂದ ಡಿರೈವೆಟಿವ್‌ಗಳು ಅನುಕ್ರಮವಾಗಿ O–(4–ಕ್ಲೋರೋ–3–ಮಿಥೈಲ್‌ಫಿನೈಲ್) O,O–ಡೈಮಿಥೈಲ್ ಫಾಸ್ಪೋರೋಥಯೋಏಟ್ ಹಾಗೂ O–(4–ಕ್ಲೋರೋ–3,5 ಡೈಮಿಥೈಲ್‌ಫಿನೈಲ್) O,O–ಡೈಮಿಥೈಲ್ ಫಾಸ್ಫೋರೋಥಯೋಏಟ್. 4–ಕ್ಲೋರೋ–3,5–ಸೈಲಿನಾಲ್ ಹಾಗೂ ಪಿ–ಕ್ಲೋರೋ ಮೆಟಾ ಕ್ರೆಸಾಲ್ (ಇವೆರಡೂ ಆರಂಭಿಕ ವಸ್ತುಗಳಾಗಿವೆ) ಜೊತೆಗೆ ಅವುಗಳ ಡಿರೈವೆಟಿವ್‌ಗಳಿಂದ ಆಂಟಿಫಂಗಲ್ (ಶಿಲೀಂದ್ರವಿರೋಧೀ) ಚಟುವಟಿಕೆಗಳನ್ನು ಕೆಲವು ಸಸ್ಯರೋಗಕಾರಕ ಫಂಗೈ(ಶಿಲೀಂದ್ರ)ಗಳಾದ ಎ.ನೈಗರ್(A. niger), ಫ್ಯುಸೇರಿಯಮ್ (Fusarium), ಆಲ್ಟರ್ನೇರಿಯಾ

(Alternaria) ರೈಝೋಕ್ಟೋನಿಯಾ (Rhizoctonia) ಹಾಗೂ ಬೊಟ್ರೈಟಿಸ್ (Botritis sp) ಮೇಲೆ ಅಗಾರ್ ಗುಳಿ ವಿಧಾನದ ನೆರವಿನಿಂದ ಪರೀಕ್ಷಿಸಲಾಯಿತು. ಫಲಿತಾಂಶವು ಆರಂಭಿಕ ವಸ್ತುಗಳಾಗಲೀ, ಅಥವಾ ಅವುಗಳ ಡಿರೈವೆಟಿವ್‌ಗಳಾಗಲೀ ಶಿಲೀಂದ್ರನಾಶಕ ಗುಣಗಳನ್ನು ಹೊಂದಿಲ್ಲವೆಂಬುದನ್ನು ತೋರಿಸಿದೆ.

**ದಾಸ್ತಾನಿಗೆ ಬರುವ ಉಪದ್ರವಕಾರೀ ಕೀಟಗಳ ಮೇಲೆ PH3 + N2 ಮಿಶ್ರಣದ ವಿಷ (ಟಾಕ್ಸಿಸಿಟಿ) (ಮಣಿವಣ್ಣನ್ ಎಸ್)**

ಎಸ್. ಒರೈಝೇ ಹಾಗೂ ಟಿ. ಕ್ಯಾಸ್ಟೇನಿಯಮ್‌ಗಳ ಪ್ರಬುದ್ಧ ಕೀಟಗಳ ಮೇಲೆ ಫಾಸ್ಫೈನ್ +ಸಾರಜನಕದ ಮಿಶ್ರಣದ ಪರಿಣಾಮಕಾರಿತ್ವವು ಬಹಿರಂಗಪಡಿಸಿದಂತೆ ಫಾಸ್ಫೈನ್ + 30ಶೇ. ಜಡ ಅನಿಲದ ಮಿಶ್ರಣವು ಮೇಲಿನ ಎರಡೂ ಕೀಟಗಳ ಪ್ರಬೇಧಗಳ ಕೀಟ ನಿಯಂತ್ರಣದಲ್ಲಿ ಪರಿಣಾಮಕಾರಿಯಾಗಿದೆ. 0.14 mgL-1 ಸಾಂದ್ರತೆಯಲ್ಲಿ, ಎಸ್. ಒರೈಝೇಯ ಪ್ರಬುದ್ಧ ಕೀಟಗಳಲ್ಲಿ ಫಾಸ್ಫೈನ್+ಶೇ.30 ಸಾರಜನಕರ ಮಿಶ್ರಣಕ್ಕೆ 56 ಗಂಟೆಗಳ ಒಡ್ಡುವಿಕೆಯಲ್ಲಿ (ಎಕ್ಸ್ಪೋಶರ್) ಶೇ. 100 ಸಾವು ಸಂಭವಿಸಿದೆ. ಎಸ್. ಒರೈಝೇಯ ಪ್ರಬುದ್ಧ ಕೀಟಗಳು ಮೂರು ಸಬ್–ಲೀಥಲ್ ಡೋಸುಗಳಾದ LC10, LC16 ಹಾಗೂ LC50ಗೆ ತೆರೆಯಲ್ಪಟ್ಟಾಗ ಚಿಕಿತ್ಸೆಗೊಳಗಾದ ಕೀಟಗಳಲ್ಲಿ ನಿಧಾನಗತಿಯ ಸಾವು ಸಂಭವಿಸಿರುವುದು ಕಂಡುಬಂತು. ಟಿ. ಕ್ಯಾಸ್ಟೇನಿಯಮ್ ನ ಪ್ರಬುದ್ಧ ಕೀಟಗಳನ್ನು ಫಾಸ್ಫೈನ್+ಶೇ.30 ಸಾರಜನಕ ಮಿಶ್ರಣಕ್ಕೆ 48 ಗಂ ಹಾಗೂ 72 ಗಂಟೆಗಳ ಕಾಲ ತೆರೆದಾಗ ಇದೇ ರೀತಿಯ ಹೆಚ್ಚಿದ ಮರಣದ ಫಲಿತಾಂಶಗಳು ಕಂಡುಬಂದವು. ಆದರೂ, ಎಸ್. ಒರೈಝೇಯಂತಲ್ಲದೆ, ಟಿ. ಕ್ಯಾಸ್ಟೇನಿಯಮ್ ನ ಪ್ರಬುದ್ಧ ಕೀಟಗಳು ಸಬ್–ಲೀಥಲ್ ಡೋಸುಗಳಿಗೆ ತೆರೆಯಲ್ಪಟ್ಟಾಗ ನಿಧಾನಗತಿಯ ಮರಣದ ಪ್ರಮಾಣವನ್ನು ವ್ಯಕ್ತಪಡಿಸಲಿಲ್ಲ. ಆರ್. ಡೊಮಿನಿಕದ ಮಿಶ್ರ ವಯಸ್ಸಿನ ಬೆಳೆಗಳು (ಕಲ್ಚರ್ಸ್) ವಿಭಿನ್ನ ಸಾಂದ್ರತೆಯ ಫಾಸ್ಫೈನ್/ $CO_2$ ಸಂಯೋಜನೆಗಳಿಗೆ ತೆರೆಯಲ್ಪಟ್ಟಾಗ, ಫಾಸ್ಫೈನ್ ಒಳಗೊಂಡ ನಿಯಂತ್ರಣಕ್ಕೆ ಹೋಲಿಸಿದಂತೆ, LC50 ಸಾಂದ್ರತೆಯಲ್ಲಿ ಗಣನೀಯ ಪ್ರಮಾಣದ ಕುಗ್ಗುವಿಕೆಯನ್ನು ಪ್ರದರ್ಶಿಸಿದವು. ಶೇ.30 ರ ಇಂಗಾಲದ ಡಯಾಕ್ಸೈಡ್ ಮಟ್ಟಗಳನ್ನು ನಿರ್ವಹಿಸಿದಲ್ಲಿ PH3 + $CO_2$ ಯ ಉತ್ತಮ ಸಂಯೋಜನಾತ್ಮಕ ಕ್ರಿಯೆಯನ್ನು ಪಡೆಯಲು ಸಾಧ್ಯ ಎಂಬುದನ್ನು ತೋರಿಸಿವೆ.

**ಕರುಳ ಕಿಣ್ವಗಳ ಮೇಲೆ ಕೀಟನಾಶಕಗಳ ಉಪ–ಮಾರಕ ಪರಿಣಾಮಗಳು (ರಜಿನಿ ಪಿಎಸ್)**

ಇಲಿಗಳ ಮೇಲೆ ಮೋನೋಕ್ರೋಟೋಫಾಸ್ (ಎಮ್‌ಸಿಪಿ) ಮತ್ತು ಕ್ಲೋರೊಪಿರಿಫಾಸ್ (ಸಿಪಿಎಫ್)ನ ಮೌಖಿಕ ಪ್ರಯೋಗದ ಪರಿಣಾಮ ಹಾಗೂ ಸಣ್ಣ ಕರುಳಿನ ಬ್ರಷ್ ಬಾರ್ಡರ್ ಕಿಣ್ವ ಮತ್ತು ರೆಡಾಕ್ಸ್ ಸ್ಟೇಟ್ ಮಾರ್ಕರ್ಸ್ ಮೇಲೆ ಅದರ ಪರಿಣಾಮವನ್ನು ಅಭ್ಯಸಿಸಲಾಯಿತು. ಸಣ್ಣ ಕರುಳಿನ ಜೆಜುನವ್‌ನಲ್ಲಿ ಬಯೋಕೆಮಿಕಲ್ ಅಧ್ಯಯನವನ್ನು ನಡೆಸಲಾಯಿತು. ಮೋನೋಕ್ರೋಟೋಫಾಸ್ ಚಿಕಿತ್ಸೆಯು ಅಸೆಟಿಲ್‌ಕೋಲಿನೆಸ್ಟರೇಸ್ (ಎಸಿಎಚ್‌ಇ) ಚಟುವಟಿಕೆಯು 40% ಕಡಿಮೆಯಾಯಿತು ಆದರೆ ಬ್ರಷ್ ಬಾರ್ಡರ್ ಡಿಸಕರೈಡ್ಸ್ ಚಟುವಟಿಕೆಗಳಾದ ಸುಕ್ರೋಸ್, ಮಾಲ್ಟೇಸ್, ಲಾಕ್ಟೇಸ್ ಹಾಗೂ ಟ್ರೆಹಲೇಸ್ ಹೆಚ್ಚಾಯಿತು, ಜೊತೆಗೆ ಅಲ್ಕಲೈನ್ ಫಾಸ್‌ಫೇಟೇಸ್ (ಎಎಲ್‌ಪಿ) ಚಟುವಟಿಕೆಯನ್ನು (50%) ಕೂಡಾ ಗಮನಿಸಲಾಯಿತು. ಕ್ಯಾಟಲೇಸ್ (ಸಿಎಟಿ) ಕಡಿಮೆ ಚಟುವಟಿಕೆಯನ್ನು ತೋರಿಸಿತು (36%) ಮತ್ತು ಸೂಪರ್‌ಆಕ್ಸಿಡೇಸ್ ಡೈಮುಟೇಸ್ (ಎಸ್‌ಓಡಿ) ಯಾವುದೇ ಬದಲಾವಣೆಯನ್ನೂ ತೋರಿಸಲಿಲ್ಲ. ಲಿಪಿಡ್ ಪೆರಾಕ್ಸಿಡೇಶನ್ (ಎಲ್‌ಪಿಓ) ಹೆಚ್ಚಾಯಿತು (29%) ಮತ್ತು ಕಡಿಮೆಯಾದ ಗ್ಲುಟಾಥೋಯಿನ್ (ಜಿಎಸ್‌ಎಚ್) ಮಟ್ಟ ಕೆಳಗಿಳಿಯಿತು (31%). ಅದರಂತೆಯೇ, ಕ್ಲೋರೊಪಿರಿಫಾಸ್ ಪ್ರಯೋಗವು ಸುಕ್ರೋಸ್ (25% ಮತ್ತು ಮಾಲ್ಟೇಸ್ (35%) ಹಾಗೂ ಎಲ್‌ಪಿಓ ಚಟುವಟಿಕೆಗಳಲ್ಲಿ (25%) ಹೆಚ್ಚಳ ತೋರಿಸಿತು ಮತ್ತು ಸಿಎಟಿ ಚಟುವಟಿಕೆಯು ಕೆಳಗಿಳಿಯಿತು (20%). ಅಧ್ಯಯನಕ್ಕೆ ಆಯ್ಕೆ ಮಾಡಿದ ಎರಡು ಕ್ರಿಮಿನಾಶಕಗಳಲ್ಲಿ, ಎಮ್‌ಸಿಪಿಯು ಕರುಳ ಕಿಣ್ವಗಳ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರಿರುವುದು ಕಂಡು ಬಂತು. ಈ ಫಲಿತಾಂಶಗಳು ಆರ್ಗನೋಫಾಸಫೆರಸ್ ಕ್ರಿಮಿನಾಶಕಗಳನ್ನು ಬ್ರಷ್ ಬಾರ್ಡರ್ ಮತ್ತು ಸಣ್ಣ ಕರುಳಿನ ಆಂಟಿಆಕ್ಸಿಡೆಂಟ್ ಕಿಣ್ವಗಳಲ್ಲಿ ಬದಲಾವಣೆಯ ಪ್ರೇರಣೆಗೆ ಸ್ಪಷ್ಟವಾಗಿ ಪ್ರೇರೇಪಣೆ ನೀಡುತ್ತದೆ.

**ನ್ಯೂರೋಬಿಹೇವಿಯರ್ ಮೇಲೆ ಮೋನೋಕ್ರೋಟೋಫಾಸ್ (ಶಾಹಿನ್ ಜಾಫ್ರಿನ್ ಅಲಿ)**

7 ಮತ್ತು 30 ಡಿಗಳು 0.3 ಮತ್ತು 0.6/ಎಮ್‌ಜಿ/ಕೆಜಿ. ಬಿಡಬ್ಲ್ಯೂ/ಡಿನಲ್ಲಿ (ಎಸ್ಟಾಬ್ಲಿಷ್ ಆದ ಎಲ್‌ಡಿ50:12 ಎಮ್‌ಜಿ/ಕೆಜಿ ಬಿ. ಡಬ್ಲ್ಯೂನಲ್ಲಿ 1/20 ಮತ್ತು 1/40) ಎಮ್‌ಸಿಪಿಯ ಸತತವಾದ ಡೋಸ್‌ಗಳೊಂದಿಗೆ ಯಾವುದೇ ನ್ಯೂರೋ ಬಿಹೇವಿಯರಲ್ ಕೊರತೆಗಳನ್ನು ಮತ್ತು ಸ್ವಿಸ್ ಅಲ್ಬಿನೋ ಮೈಸ್‌ನಲ್ಲಿ ಮಾರ್ಪಾಡುಗಳನ್ನು ತರಬಲ್ಲ ತನ್ನ ಸಾಮರ್ಥ್ಯಕ್ಕಾಗಿ ಮೋನೋಕ್ರೋಟೋಫಾಸ್ (ಎಮ್‌ಸಿಪಿ) ಪ್ರಾರಂಭದಲ್ಲಿ ಪ್ರದರ್ಶಿಸಲಾಯಿತು. ಇಲಿಯನ್ನು ಏಳು ದಿನಗಳ ಕಾಲ ಎಮ್‌ಪಿಟಿಪಿ (1–ಮೀಥೈಲ್–4–ಫಿನೈಲ್–1,2,3,6–ಇಟ್ರಾಹೈಡ್ರೋಪಿರಿಡೀನ್)ಯ ಚಿಕಿತ್ಸೆಗೆ ಒಳಪಡಿಸಲಾಯಿತು. ಕ್ಯಾಟಲೆಪ್ಟಿಕ್ ಸ್ಕೋರಿಂಗ್ ಮತ್ತು ಡೊಪಾಮೈನ್ ಕಂಟೆಂಟ್, ಹಿಸ್ಟಾಲಾಜಿಕಲ್ ಪರೀಕ್ಷೆಗಳು, ಟಿರೋಸಿನ್ ಹೈಡ್ರಾಕ್ಸಿಲೇಸ್ (ಟಿಎಚ್)ನ ಇಮ್ಯೂನೋಹಿಸ್ಟೋಕೆಮಿಕಲ್ ಲೋಕಲೈಜೇಷನ್ ಮತ್ತು ಲಿಪಿಡ್ ಪೀರಾಕ್ಸಿಡೇಶನ್‌ನ ಮಿತಿಯಂಥಾ ಆಕ್ಸಿಡೇಟಿವ್ ಒತ್ತಡದ ಮಾರ್ಕರ್‌ಗಳು ಹಾಗೂ ಪ್ರತಿಕ್ರಿಯಾತ್ಮಕ ಆಕ್ಸಿಜನ್ ಪ್ರಭೇದಗಳ ಉತ್ಪತ್ತಿ ಮತ್ತು ಆಕ್ಸಿಡೈಸ್ಡ್ ಗ್ಲುಟೇಥಿಯಾನ್ ಅನುಪಾತಗಳ ಮೂಲಕ ನ್ಯೂರೋಬಿಹೇವಿಯರಲ್ ಕೊರತೆಗಳನ್ನು ವಿಶ್ಲೇಷಿಸಲಾಯಿತು. ಕೇವಲ ಎಮ್‌ಸಿಪಿಯ ಚಿಕಿತ್ಸೆ ನಿರ್ವಹಿಸಿದ ಇಲಿಗಳು ಡೋಪಾಮೈನ್ ಕಂಟೆಂಟ್‌ನ ಗುರುತರ ಇಳಿತವನ್ನು (ಪಿ<0.05) ಮತ್ತು ನ್ಯೂರೋಬಿಹೇವಿಯರಲ್ ಕೊರತೆಗಳಲ್ಲಿ ಗುರುತರ ಇಳಿತವನ್ನು 7 ಮತ್ತು 30 ದಿನಗಳಲ್ಲಿ ಹೊರಗೆಡಹಿತು. ಆಸಕ್ತಿದಾಯಕವಾಗಿ, ಎಮ್‌ಪಿಟಿಪಿ ಚಿಕಿತ್ಸೆಗೊಳಗಾದ ಇಲಿಯ ಮೇಲೆ ಎಮ್‌ಸಿಪಿ ನಿರ್ವಹಣೆಯು 7 ದಿನಗಳಿದ್ದಾಗ, ಡೋಪಾಮೈನ್ ಕಂಟೆಂಟ್ ಮತ್ತು ನ್ಯೂರೋಬಿಹೇವಿಯರಲ್ ಕೊರತೆಗಳಲ್ಲಿ ಇನ್ನಷ್ಟು ಗುರುತರ ಇಳಿತವಾಗಿರುವುದು ಸ್ಪಷ್ಟವಾಗಿತ್ತು. ರಿಯಾಕ್ಟಿವ್ ಆಕ್ಸಿಜನ್ ಪ್ರಭೇದಗಳ ಮಿತಿ ಮತ್ತು ಲಿಪಿಡ್ ಪೆರಾಕ್ಸಿಡೇಶನ್, ಗಮನಾರ್ಹವಾಗಿ ಹೆಚ್ಚಾಯಿತು, ನಿಯಂತ್ರಣಕ್ಕೆ ಹೋಲಿಸಿದರೆ ಚಿಕಿತ್ಸೆಗೊಳಪಡಿಸಿದ ಇಲಿಗಳ ಕೆಳಗಿಳಿದಿದ್ದ ಆಕ್ಸಿಡೈಸ್ಡ್ ಗ್ಲುಟೇಥಿಯಾನ್ ಮಟ್ಟಗಳ ಅನುಪಾತವು ಗುರುತರವಾಗಿ ಇಳಿಯಿತು (ಪಿ<0.05). ಟಿಎಚ್+ ಕಣಗಳ ಸಂಖ್ಯೆ ಮತ್ತು ಹಿಸ್ಟೋಪೆಥಾಲೋಜಿಕಲ್ ಮಾರ್ಪಾಡುಗಳಲ್ಲಿ ಗುರುತಿಸಿದ ಇಳಿತವು ಎಮ್‌ಸಿಪಿಯ ಹೆಚ್ಚು ಡೋಸ್‌ಗಳೊಂದಿಗೆ ಚಿಕಿತ್ಸೆಗೊಳಪಡಿಸಿದ ಇಲಿಗಳ ಸ್ಟ್ರಿಯಾಟಮ್‌ನಲ್ಲಿ ಸ್ಪಷ್ಟವಾಗಿ ಇತ್ತು. ಈ ಬದಲಾವಣೆಗಳು ಎಮ್‌ಟಿಸಿಪಿಯ ಚಿಕಿತ್ಸೆಗೊಳಪಡಿಸಿದ ಹಾಗೂ ಎಮ್‌ಸಿಪಿಯ ಕಡಿಮೆ ಡೋಸ್‌ಗಳೊಂದಿಗೆ ನಿರ್ವಹಿಸಿದ ಇಲಿಗಳಲ್ಲಿ

ತುಲನಾತ್ಮಕವಾಗಿ ಕಾಣಿಸಿತು.

**ಆಹಾರ ಗುಣಮಟ್ಟ ಮತ್ತು ಸುರಕ್ಷೆಗಾಗಿ ಹೈ ಥ್ರೂಪುಟ್ ವಿಶ್ಲೇಷಣಾತ್ಮಕ ಕ್ರಮಗಳು (ಆಶಾ ಮಾರ್ಟಿನ್, ನಾಣಿಶಂಕರ್ ವಿಎಚ್, ಪ್ರಸನ್ನ ವಾಸು)**

ಐಯೋನಿಕ್ ದ್ರವ ಅಕ್ವೆಯುಸ್‌ಗಳನ್ನು ದ್ವಿ–ಹಂತ ವ್ಯವಸ್ಥೆಯನ್ನುಪಯೋಗಿಸಿಕೊಂಡು ಟೆಟ್ರಾಸೈಕ್ಲಿನ್‌ಗಳ ವಿಶ್ಲೇಷಣೆಗೆ ಎಲ್‌ಸಿ–ಎಮ್‌ಎಸ್/ಎಮ್‌ಎಸ್ ವಿಶ್ಲೇಷಣಾತ್ಮಕ ಕ್ರಮವನ್ನು ಡೆವಲಪ್ ಮಾಡಲಾಯಿತು. ಎಲ್‌ಸಿ–ಎಮ್‌ಎಸ್/ಎಮ್‌ಎಸ್‌ನ ಮಾದರಿ ತಯಾರಿ 1–ಬ್ಯೂಟೈಲ್–3– ಮೀಥೈಲ್–ಇಮಿಡೇಜ಼ಲಿಯಂ ಟೆಟ್ರಾಫ್ಲೋರೋಬೋರೇಟ್ (ಬಿಎಮ್‌ಐಎಮ್) ಬಿಎಫ್4) ಹೊಂದಿರುವ ಐಎಲ್–ಎಟಿಪಿಎಸ್‌ನನ್ನು ಉಪಯೋಗಿಸಿಕೊಂಡು ಅಮೋನಿಯಮ್ ಸಲ್ಫೇಟ್ ಮತ್ತು ಸೋಡಿಯಂ ಸಿಟ್ರೇಟ್‌ನೊಂದಿಗೆ ಆಪ್ಟಿಮೈಸ್ ಮಾಡಲಾಯಿತು. 42% ಅಥವಾ ಹೆಚ್ಚು ಅಮೋನಿಯಮ್ ಸಲ್ಫೇಟ್ ಸಾಂದ್ರದೊಂದಿಗೆ ಉತ್ತಮ ಫೇಸ್ ಸೆಪರೇಶನ್ ಸಾಧಿಸಲ್ಪಟ್ಟಿತು. ಪಿಎಚ್ 5.6ನಲ್ಲಿ ಪಿಎಚ್ 4.5 ಸೋಡಿಯಂ ಸಿಟ್ರೇಟ್‌ನ 36%ಗಿಂತಲೂ ಹೆಚ್ಚು ಸಾಂದ್ರತೆಯೊಂದಿಗೆ ಕೂಡಾ ಉತ್ತಮ ಫೇಸ್ ಸೆಪರೇಶನ್ ತೋರಿಸಿತು. ಎಲ್‌ಸಿ–ಎಮ್‌ಎಸ್/ಎಮ್‌ಎಸ್ ಕ್ರಮವು 10–80 ಪಿಪಿಬಿ (ಆರ್2<0.99) ರೇಂಜ್‌ನಲ್ಲಿ ಉತ್ತಮ ರೇಖಾರೂಪ ತೋರಿತು. ಏರಿಸಿದ ಜೇನು ಸಾಂಪಲ್‌ಗಳನ್ನು ಉಪಯೋಗಿಸಿಕೊಂಡು ಈ ಕ್ರಮದ ಮೌಲ್ಯಂಕನ ನಡೆಸಲಾಯಿತು, ಮತ್ತು ಇದು ಉತ್ತಮ ಚೇತರಿಕೆ ತೋರಿಸಿತು.

ಮೇಲ್ಲಾರ್ಡ್ ರಿಯಾಕ್ಷನ್ ಸಂಯುಕ್ತಗಳ ತಯಾರಿಕೆಗಾಗಿ ಒಂದು ಸಿಂಥೆಟಿಕ್ ಪ್ರೋಟೋಕಾಲ್ ಆಪ್ಟಿಮೈಸ್ ಮಾಡಲಾಯಿತು; ಅಮೆಡೊರಿ ಕೀಟೋಸೆಸ್ ಎನ್–(1–ಡಿಯೋಕ್ಸಿ–ಡಿ– ಫ್ರುಕ್ಟೋಸಿಲ್) ಅಮಿನೋ ಆಸಿಡ್ (ಅಮಿನೋ ಆಸಿಡ್ = ಎಲ್–ಆರ್ನಿಥೈನ್ ಮತ್ತು ಎಲ್–ಸಿಟ್ರುಲೈನ್). ಅಮೆಡೊರಿ ಕೀಟೋಸೆಸ್‌ನ ಸಂಶ್ಲೇಷಣೆಗಾಗಿ ಜಿಎನ್‌ಸಿಎಲ್ 2 ಮೀಡಿಯೇಟ್ ಆದ ಪ್ರಾಕ್ಟಿಕಲ್ ಪ್ರೋಟೋಕಾಲ್ ಡೆವಲಪ್ ಮಾಡಲಾಯಿತು, ಇದು ರಕ್ಷಣೆ ಮತ್ತು ರಕ್ಷಣರಹಿತ ಕ್ರಮಗಳನ್ನು ಹಾಗೂ ಕ್ರೋಮೆಟೋಗ್ರಾಫಿಕ್ ಸೆಪರೇಶನ್‌ಗಳನ್ನು ಬದಿಗೊತ್ತುತ್ತದೆ. ತುಪ್ಪದಿಂದ ಮಾಡಿದ ಸಿಹಿ ತಿಂಡಿಗಳಲ್ಲಿ ಕಲಬೆರಕೆಯನ್ನು (5%ನ ವರೆಗೆ) ಕಂಡುಹಿಡಿಯುವುದಕ್ಕಾಗಿ ಒಂದು ಸ್ಟಾಂಡರ್ಡ್ ಕ್ರಮದಲ್ಲಿ ಮಾರ್ಪಾಡು ಮಾಡುವುದನ್ನು ಟ್ರೈಯಾಸಿಲ್‌ಗ್ಲಿಸೆರಾಲ್ಸ್ ಮತ್ತು ಸ್ಟೆರಾಲ್ ಸಂಯೋಜನೆಯ ತುಲನೆ ಮೂಲಕ ಆಪ್ಟಿಮೈಸ್ ಮಾಡಲಾಯಿತು. ಈ ಕ್ರಮವನ್ನು ಉಪಯೋಗಿಸಿಕೊಂಡು, ತುಪ್ಪದಲ್ಲಿ ಮಾಡಿದ 7ರಿಂದ 8 ಭಾರತೀಯ ಸಿಹಿತಿಂಡಿಗಳಲ್ಲಿ ಹಾಲಿನದಲ್ಲದ ಕೊಬ್ಬಿನ ಕಲಬರಕೆಯಿರುವುದು ಕಂಡುಬಂತು.

ವಿವಿಧ ಕೃಷಿ–ಹವಾಮಾನ ಪರಿಸ್ಥಿತಿಗಳಲ್ಲಿ ಗೋಧಿ ಕಾಳುಗಳ ಗುಣಮಟ್ಟ ಮತ್ತು ಸುರಕ್ಷಾ ಲಕ್ಷಣಗಳನ್ನು ಅಧ್ಯಯನ ಮಾಡಲು, ದೇಶದ ಎಂಟು ಬೇರೆ ಬೇರೆ ವಲಯಗಳ ಗೋಧಿಗಳ ಮಾದರಿಯನ್ನು ತೆಗೆದುಕೊಂಡು ಅವುಗಳನ್ನು ಅಫ್ಲೆಟಾಕ್ಸಿನ್‌ಗಳಿಗಾಗಿ ವಿಶ್ಲೇಷಿಸಲಾಯಿತು. ಎಲ್ಲಾ 8 ಗೋಧಿ ಮಾದರಿಗಳಲ್ಲಿ ಅಫ್ಲೆಟಾಕ್ಸಿನ್‌ಗಳು (ಬಿ1, ಬಿ2, ಜಿ1 ಮತ್ತು ಜಿ2) ಪತ್ತೆ ಮಾಡಬಹುದಾದ ಮಿತಿಗಳಿಗಿಂತಲೂ ಕಂಡು ಬಂತು. ಇದಲ್ಲದೇ, ಟಿಎಲ್‌ಸಿಯಿಂದ ವಿಶ್ಲೇಷಿಸಲ್ಪಟ್ಟಂತೆ, ಪರೀಕ್ಷಿಸಲ್ಪಟ್ಟ ಮೇಲಿನ 8ರಲ್ಲಿ ಯಾವುದೇ ಮಾದರಿಯ ಗೋಧಿಗಳಲ್ಲಿಯೂ ಡಿಯಾಕ್ಸಿನೆವಲೆನಾಲ್ (ಡಿಓಎನ್) ಪತ್ತೆಯಾಗಲಿಲ್ಲ. ಯಾವುದೇ ಗೋಧಿ ಕಾಳುಗಳಲ್ಲೂ ಡಿಓಎನ್‌ನ್ನು ಉತ್ಪತ್ತಿ ಮಾಡುವ ಘುಸೇರಿಯಮ್ ಗ್ರಾಮಿನೇರಮ್ ಪತ್ತೆಯಾಗಲಿಲ್ಲ. ಐಸಿಪಿ–ಎಇಎಸ್ ತಂತ್ರಗಳಿಂದ ಮಾಡಿದ ವಿಶ್ಲೇಷಣೆಯಲ್ಲಿ, ಸೀಸ (ಪಿಬಿ), ಪಾದರಸ (ಎಚ್‌ಜಿ), ಕ್ಯಾಡ್‌ಮಿಯಮ್ (ಸಿಡಿ) ಮತ್ತು ಆರ್ಸೆನಿಕ್ (ಎಎಸ್) ಹೊಂದಿರುವ ಟಾಕ್ಸಿಕ್ ಮೆಟಲ್‌ಗಳ ಪ್ರಸ್ತುತಿಯು ಐದು ರಾಗಿ ಮತ್ತು ಐದು ಗೋಧಿ ಸಾಂಪಲ್‌ಗಳಲ್ಲಿ ಪತ್ತೆಯಾಗಲಿಲ್ಲ.

**ಕಾಫಿ ಎಸ್‌ಪಿ, ಯಲ್ಲಿ ಕೆಫೀನ್ ಬಯೋಸಿಂಥೆಸಿಸ್ (ಗಿರಿಧರ್ ಪಿ)**

ಪ್ರೈಮರ್‌ಗಳ ವಿನ್ಯಾಸವನ್ನು ಉಪಯೋಗಿಸಿಕೊಂಡು ಥಿಯೋಬ್ರೋಮೈನ್ ಸಿಂಥೇಸ್ ಜೀನ್ ಪ್ರೊಮೋಟರ್ ಡಿಲೆಶನ್ ಫ್ರಾಗ್ಮೆಂಟ್ಸ್‌ಗಳನ್ನು ಆಂಪ್ಲಿಫೈ ಮಾಡಲಾಯಿತು ಮತ್ತು ಚಿಕ್ಕ ಮಾರ್ಪಾಡು ಮಾಡಿದ ಹಸಿರು ಫ್ಲೋರೋಸೆಂಟ್ ಪ್ರೋಟಿನ್ ಜೀನ್ (ಎಸ್‌ಎಮ್‌ಜಿಎಫ್‌ಪಿ)ಯ ಹಿಂಡ್ III/ಸಾಕ್ಲ್‌ಸೈಟ್ಸ್‌ನ ಅಪ್‌ಸ್ಟ್ರೀಮ್‌ನಲ್ಲಿ ಪೋರ್–ಆರ್4 ಬೈನರೀ ರಿಪೋರ್ಟರ್ ವೆಕ್ಟರ್‌ಗಳಿಗೆ ಕ್ಲೋನ್ ಮಾಡಲಾಯಿತು. ಪ್ರೊಮೋಟರ್‌ನ ಇನ್ವರ್ಟ್ ರಿಪೀಟ್ ನಿರ್ಮಾಣಗಳ ನಿರ್ಮಾಣಕ್ಕೆ, ವಿವಿಧ ಪ್ರದೇಶಗಳ ಪ್ರೊಮೋಟರ್‌ಗಳನ್ನು ಸೆನ್ಸ್ ಮತ್ತು ಆಂಟಿಸೆನ್ಸ್ ಫ್ರಾಗ್ಮೆಂಟ್‌ಗಳಾಗಿ ಆಂಪ್ಲಿಫೈ ಮಾಡಲಾಯಿತು. ಸೆನ್ಸ್ ಫ್ರಾಗ್ಮೆಂಟ್‌ಗಳನ್ನು ಕೆಪಿಎನ್‌ಎಲ್/ಎಕ್ಸ್‌ಎಚ್‌ಓಎಲ್ ಸೈಟ್ ಪಿಎಚ್‌ಆನ್ನಿಬಾಲ್ಸಿಆರ್‌ಎನ್‌ಎ ವೆಕ್ಟರ್‌ನಲ್ಲಿ ಕ್ಲೋನ್ ಮಾಡಲಾಯಿತು ಮತ್ತು ಆಂಟಿಸೆನ್ಸ್ ಬಿಎಮ್‌ಎಚ್‌ಐ/ಸಿಎಲ್‌ಎಎಲ್‌ನ ರಿಸಲ್ಟಿಂಗ್ ಕ್ಲೋನ್‌ಗಳೊಂದಿಗೆ ಕ್ಲೋನ್ ಮಾಡಲಾಯಿತು. ಕಾಫೀ ಗಿಡಗಳ ನಿಯತ ನಿರ್ವಹಣೆಯಿಂದ ಮತ್ತು ಟಿಶ್ಯೂ ಕಲ್ಚರ್‌ನಲ್ಲಿ ಸೊಮಾಟಿಕ್ ಎಂಬ್ರಿಯೋಸ್ ಮತ್ತು ಗ್ರೀನ್ ಹೌಸ್‌ನಲ್ಲಿ ಅರೇಬಿಡೋಪ್ಸಿಸ್ ಥಲಿಯನವನ್ನು ಅನುಸರಿಸಲಾಯಿತು.

**ಆಯಿಲ್ ಕೇಕ್ ರಿಚ್ ಪ್ರಾಣಿ ಫೀಡ್‌ನ ಡಿ–ಫಿಟಿನೈಜೇಶನ್ (ಮುಕೇಶ್ ಕಪೂರ್)**

ಮೈಸೂರು ನಗರದ ಹತ್ತಿರದ ವಿವಿಧ ಕೃಷಿ ಭೂಮಿಗಳಿಂದ ಮಣ್ಣಿನ ಸಾಂಪಲ್‌ಗಳನ್ನು ಸಂಗ್ರಹಿಸಲಾಯಿತು ಮತ್ತು ವೈಲ್ಡ್ ಟೈಪ್ ಬ್ಯಾಕ್ಟೀರಿಯಲ್ ಐಸೊಲೇಟ್‌ಗಳನ್ನು ಸ್ಟಾಂಡರ್ಡ್ ಮೈಕ್ರೋಬಯೋಲಾಜಿಕಲ್ ತಂತ್ರಗಳಿಂದ ಬೇರ್ಪಡಿಸಲು ಉಪಯೋಗಿಸಲಾಯಿತು. ಒಟ್ಟು 106 ಬ್ಯಾಕ್ಟೀರಿಯಲ್ ಐಸೊಲೇಟ್‌ಗಳು ದೊರಕಿ, ಶುದ್ಧೀಕರಿಸಲಾಯಿತು ಮತ್ತು ತರುವಾಯ ಫೈಟೇಸ್ (ನ್ಯೂಟ್ರಲ್/ಆಲ್ಕಲೈನ್) ಗುಣಾತ್ಮಕವಾಗಿ ಹಾಗೂ ಪರಿಣಾಮಾತ್ಮಕವಾಗಿ ವಿಶ್ಲೇಷಣೆ ಮಾಡಲಾಯಿತು. ಪಡೆದ ಫಲಿತಾಂಶವು 23 ಬ್ಯಾಕ್ಟೀರಿಯಲ್ ಐಸೊಲೇಟ್‌ಗಳು ಘನ ಸ್ಥಿತಿಯ ಹುದುಗುವಿಕೆಯ ಪರಿಸ್ಥಿತಿಯಲ್ಲಿ ನ್ಯೂಟ್ರಲ್/ಆಲ್ಕಲೈನ್ ಫೈಟೇಸ್‌ನ್ನು ಗುಣಾತ್ಮಕವಾಗಿ ಮತ್ತು ಪರಿಣಾತ್ಮಕವಾಗಿ ಉತ್ಪಾದಿಸಲು ಸಾಧ್ಯವೆಂಬುದನ್ನು ತೋರಿಸಿದವು.

**ಬಯೋಸೆನಸ್ಸರ್‌ಗಳು (ಥಾಕುರ್ ಎಮ್‌ಎಸ್)**

ನ್ಯಾನೋಪಾರ್ಟಿಕಲ್‌ಗಳಿಗೆ ಸಂಯೋಜಿಸಿದ ಆಪ್ಟಾಮರ್ಸ್‌ಗಳನ್ನು ಆಕ್ರೋಟಾಕ್ಸಿನ್ ಮತ್ತು ಅಫ್ಲೆಟಾಕ್ಸಿನ್ (ಕೆಡಿ=ಎನ್‌ಎಮ್) ಎಂಬ ಆಹಾರ ಟಾಕ್ಸಿನ್‌ಗಳ ಪತ್ತೆ ಮಾಡಲು ಉಪಯೋಗಿಸಲಾಯಿತು. ಆಪ್ಟಮರ್

ಟಾರ್ಗೆಟ್ ಸಂವಹನದ ಫಲಿತಾಂಶವಾಗಿ, ಬಣ್ಣದ ಬದಲಾವಣೆಗೆಡೆಯಾಗುತ್ತಾ ನಿರ್ದಿಷ್ಟವಾಗಿ ಎಯುಎನ್‌ಪಿಎಸ್‌ನ ಮೇಲ್ಮೈಯಿಂದ ಡಿಎನ್‌ಎ ಆಪ್ಟಮರ್‌ನೊಂದಿಗೆ ಬೆರೆತ ಆಕ್ರೋಟಾಕ್ಸಿನ್ ಮತ್ತು ಅಫ್ಲಟಾಕ್ಸಿನ್‌ನ ಬೇರ್ಪಡಿಕೆಯೊಂದಿಗೆ, ನ್ಯಾನೋಪಾರ್ಟಿಕಲ್‌ನ (ಜಿಎನ್‌ಪಿ/ಎಯುಎನ್‌ಪಿ) ಮೊತ್ತದ ಮೇಲೆ ಈ ಪತ್ತೆದಾರಿಕೆ ಮಾಡಲಾಯಿತು. ಫ್ಲೂರೋಫೋರ್‌ನೊಂದಿಗೆ ಆಪ್ಟಮರ್ ಮತ್ತು ಕ್ವೆಂಚರ್‌ಅನ್ನು ಟಾಕ್ಸಿನ್‌ಗಳ ಪತ್ತೆಗೆ ಉಪಯೋಗಿಸಲಾಯಿತು. ಇದು ಆಪ್ಟಮರ್ ಅನಲೈಟ್‌ನ ಹೊಂದಿಕೆಯೊಂದಿಗೆ ಸಂಬಂಧಿಸಿದ ಫ್ಲೋರೋಸೆನ್ಸ್‌ನ ಬದಲಾವಣೆಯ ಮೇಲೆ ಆಧಾರಿತವಾಗಿದೆ.

**ಆಂಟಿಜೆನ್ ಡೆಲಿವರಿಗಾಗಿ ಪ್ರೋಬಯಾಟಿಕ್ಸ್ (ರಾಜಗೋಪಾಲ್ ಕೆ)**

ಆಂಟಿಜೆನ್ ಎಚ್‌ಟಿಎನ್‌ಎಫ್–$\alpha$ ಎಚ್‌ಟಿ–29 ಕ್ಯಾನ್ಸರ್ ಕೋಶಲೈನ್‌ನಲ್ಲಿ ಮತ್ತು ಇನ್ಫಂಟ್ ಚರಟ ಮೆಟೀರಿಯಲ್‌ನಿಂದ ನಾವೆಲ್ ಬ್ಯಾಕ್ಟೀರಿಯ ಎಂಟರೋಕೋಕಸ್, ಬೈಫಿಡೋಬ್ಯಾಕ್ಟೀರಿಯಂ ಮತ್ತು ಲ್ಯಾಕ್ಟೋಬೇಸಿಲಸ್ ಐಸೋಲೇಟ್‌ನಲ್ಲಿ ಯಶಸ್ವಿಯಾಗಿ ಎಕ್ಸ್‌ಪ್ರೆಸ್ ಮಾಡಲಾಯಿತು. ಕ್ಯಾನ್ಸರ್ ಕೋಶಲೈನ್ ಕ್ಲೋನಿಂಗ್‌ಗೆ, ಸಿಡಿಯ (ಸೈಟೋಸಿನ್ ಡೆಮಿನೇಸ್) ಎಕ್ಸ್‌ಪ್ರೆಷನ್, ಎನ್‌ಟಿಆರ್ (ನೈಟ್ರೋ ರಿಡಕ್ಟೇಸ್) ಮತ್ತು ಇ.ಕೊಲಿ ಮತ್ತು ಲ್ಯಾಕ್ಟೋಬೇಸಿಲಸ್‌ನಲ್ಲಿ ಎಚ್‌ಟಿಎನ್‌ಎಫ್ (ಹ್ಯೂಮನ್ ಟ್ಯೂಮರ್ ನೆಕ್ರೋಸಿಸ್ ಫ್ಯಾಕ್ಟರ್–ಆಲ್ಫಾ)ಗಾಗಿ ವಿವಿಧ ಪ್ರೋಬಯಾಟಿಕ್ ಮೈಕ್ರೋಬ್ಸ್‌ಗಳ ಆಕರ್ಷಣೆಯನ್ನು ತಿಳಿಯಲು ಪ್ರಸ್ತಾಪಿಸಲ್ಪಟ್ಟಿತು.

**ಕೆಫೀನ್‌ನ ಜೀವರೂಪಾಂತರ (ಠಾಕುರ್ ಎಮ್‌ಎಸ್)**

ಕಾಫಿ ತಿರುಳಿನಲ್ಲಿ ಮತ್ತು ಟೀ ಎಲೆಗಳಲ್ಲಿ ನೈಸರ್ಗಿಕವಾಗಿ ದೊರಕುವಂಥ ಕೆಫೀನ್ ಥಿಯೋಫಿಲ್ಲೈನ್ ಎಂಬ ಬೆಲೆಬಾಳುವ ವಸ್ತುವನ್ನು ಪಡೆಯಲು ಜೀವ ರೂಪಾಂತರೀಕರಿಸಲ್ಪಟ್ಟವು. ಇದಕ್ಕಾಗಿ ಕಾಫೀ ಪ್ಲಾಂಟೇಶನ್ ಪ್ರದೇಶದಿಂದ ಫಂಗಲ್ ತಳಿಗಳನ್ನು ಬೇರ್ಪಡಿಸಲಾಯಿತು. ಗುರುತಿಸಲ್ಪಟ್ಟ ತಳಿಗಳಲ್ಲಿ, ಫುಸೇರಿಯಂ ಸೊಲನಿಯು ಸುಮಾರು 34.92 ಎಮ್‌ಜಿ/ಎಲ್‌ನಷ್ಟು ಗರಿಷ್ಠ ಜೀವ ರೂಪಾಂತರವನ್ನು ಕೆಫೀನ್ ಸುಕ್ರೋಸ್ ದ್ರವ ಮೀಡಿಯಂನಲ್ಲಿ ತೋರಿಸಿತು. ಪಿಎಚ್, ಉಷ್ಣತೆ, ಇನಾಕ್ಯುಲಂ ಗಾತ್ರ ಮತ್ತು ಅಲ್ಲೋಪುರಿನೋಲ್ ಸಾಂದ್ರದಂಥ ಭೌತಿಕ ಪ್ಯಾರಾಮೀಟರ್‌ಗಳ ಆಪ್ಟಿಮೈಜೇಷನ್‌ನ ನಂತರ ಪ್ರಾಡಕ್ಟ್ ಇಳುವರಿಯಲ್ಲಿ 2.5 ಪಟ್ಟು ಹೆಚ್ಚಾಯಿತು, ಅಂದರೆ 90 ಎಮ್‌ಜಿ/ಎಲ್. ಜೀವ ರೂಪಾಂತರೀಕರಿಸಿದ ಥಿಯೋಫಿಲ್ಲೈನ್ ಬಿ16ಎಫ್10 ಮೆಲನೋಮಾ ಕೋಶಗಳಲ್ಲಿ ಅದರ ಆಂಟಿ–ಅಂಗವಿಭಜನಾ ಚಟುವಟಿಕೆಗಾಗಿ ಪರೀಕ್ಷಿಸಲ್ಪಟ್ಟಿತು ಮತ್ತು ಇದು ಕಾನ್ಸನ್ಟ್ರೇಶನ್ ಅವಲಂಬಿತವೆಂದು ತಿಳಿದು ಬಂತು. ಅಪೋಪ್ಟೋಸಿಸ್‌ನ ಐಸಿ50 ಮೌಲ್ಯ 7.2 ಎಮ್‌ಎಮ್ ಎಂದು ಕಂಡು ಬಂತು.

**ಕಾಫಿ ಪಲ್ಪ್‌ನ ತ್ಯಾಜ್ಯದ ನಿರ್ವಹಣೆ (ಅನು ಅಪ್ಪಯ್ಯ ಕೆ)**

ಕಾಫಿ ಪಲ್ಪ್‌ನ ತ್ಯಾಜ್ಯಜಲವು 60 ದಿನಗಳ ಅವಧಿಯಲ್ಲಿ ನಾಲ್ಕು ಪ್ರತ್ಯೇಕಿತ ವಸ್ತುಗಳ (ಪಿಕಿಯ ಕುಡ್ರಿಯವ್ಜೆವಿ (3 ನಂ.ಗಳು) ಮತ್ತು ಕ್ಯಾಂಡಿಡ ಟ್ರೋಪಿಕಲಿಸ್) ಒಕ್ಕೂಟದಂತೆ ಟ್ರೀಟ್ ಮಾಡಲ್ಪಟ್ಟವು. ಪರಿಷ್ಕರಣೆಯ ನಂತರ ವಾಸನೆಯ ಉತ್ಪಾದನೆ ಹೆಚ್ಚೂ–ಕಮ್ಮಿ ಇರಲೇ ಇಲ್ಲ ಮತ್ತು ತ್ಯಾಜ್ಯಜಲದ ಸ್ಪಷ್ಟತೆ ಪ್ರಗತಿಗೊಂಡಿತ್ತು. ಸಿಓಡಿಯ ಪ್ರಾರಂಭದ ರೇಂಜ್ ಗರಿಷ್ಠ 16003 ಎಮ್‌ಜಿ/ಎಲ್ ರಿಂದ 11233 ಎಮ್‌ಜಿ/ಎಲ್ ರಷ್ಟು ಇತ್ತು, 18919 ಎಮ್‌ಜಿ/ಎಲ್‌ನ ಅನಿಯಂತ್ರಿತ ಲಗೂನ್ಸ್‌ಗೆ ಹೋಲಿಸಿದರೆ ಅದು 2123.5 ಎಮ್‌ಜಿ/ಎಲ್ ರ ಕನಿಷ್ಠಕ್ಕೆ ಇಳಿಯಿತು.

**ಕೆರೋಟಿನಾಯ್ಡ್ಸ್‌ನ ಬಯೋ ಫಂಕ್ಷನಲ್ ಅಪ್ಲಿಕೇಶನ್ಸ್ (ಭಾಸ್ಕರನ್ ವಿ)**

ಬಿ–ಕೆರೋಟಿನ್, ಅಸ್ಟಾಕ್ಸಾನ್‌ಥಿನ್, ಫುಕೋಕ್ಸಾನಥಿನ್ ತಿನ್ನಿಸಲ್ಪಟ್ಟ ಲ್ಯೂಟೇನ್ ಕೊರತೆಯುಳ್ಳ ಇಲಿಗಳ ವಿರುದ್ಧ ಅಸ್ಟಾಕ್ಸಾನ್‌ಥಿನ್ ಮತ್ತು ಫುಕೋಕ್ಸಾನಥಿನ್‌ನ ರಕ್ಷಣಾತ್ಮಕ ಪರಿಣಾಮದ ತುಲನಾತ್ಮಕ ಅಧ್ಯಯನದಲ್ಲಿ ಲ್ಯೂಟೇನ್ ಇಲಿಗಳು ಸಪ್ರೆಸ್ ಮಾಡಿದ ಲಿಪಿಡ್ ಪೆರಾಕ್ಸಿಡೇಶನ್ ಮತ್ತು ಪ್ಲಾಸ್ಮಾ ಮತ್ತು ಲಿವರ್‌ನಲ್ಲಿ ಇಳಿತಗೊಂಡ ಎಸ್‌ಓಡಿ ಚಟುವಟಿಕೆ ಹಾಗೂ ಕ್ಯಾಟಲೇಸ್, ಗ್ಲುಟೇಥಾಯಿನ್ ಕಡಿಮೆಯಾಯಿತು ಮತ್ತು ಪ್ಲಾಸ್ಮಾ ಹಾಗೂ ಲಿವರ್‌ನಲ್ಲಿ ಗ್ಲುಟೇಥಾಯಿನ್ ಹೆಚ್ಚಾಯಿತೆಂಬುದನ್ನು ಹೊರಗೆಡಹಿದವು. ಫ್ಯಾಟೀ ಆಸಿಡ್ ಪ್ರೊಫೈಲ್ ಸ್ಯಾಚುರೇಟೆಡ್ ಫ್ಯಾಟೀ ಆಸಿಡ್‌ನಲ್ಲಿ ಗುರುತರ ಇಳಿಕೆ ತೋರಿಸಿತು ಮತ್ತು ನಿಯಂತ್ರಿತ ಗುಂಪಿಗೆ ಹೋಲಿಸಿದರೆ ಅನ್‌ಸ್ಯಾಚುರೇಟೆಡ್ ಫ್ಯಾಟೀ ಆಸಿಡ್‌ನ ಏರಿಕೆಯನ್ನು ತೋರಿಸಿತು. ಈ ಫಲಿತಾಂಶಗಳು ಅಸ್ಟಾಕ್ಸಾನ್‌ಥಿನ್, ಫುಕೋಕ್ಸಾನಥಿನ್‌ಗಳು ಲ್ಯೂಟೇನ್‌ನಂತೆಯೇ ಇರುವ ಪೊಟೆಂಟ್ ಅಂಟಿಆಕ್ಸಿಡೆಂಟ್ಸ್ ಎಂದು ತೋರಿಸುತ್ತವೆ.

**ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾದ ಜೆನೆಟಿಕ್ ಡೈವರ್ಸಿಟಿ (ಪ್ರಕಾಶ್ ಎಮ್ ಹಲಾಮಿ)**

ಲ್ಯಾಕ್ಟೋಬೇಸಿಲಸ್ ಪ್ಲಾಂಟೇರಮ್, ಎಲ್‌ಬಿ. ಫರ್ಮೆಂಟಮ್, ಎಲ್‌ಬಿ. ಸಾಲಿವೇರಿಯಸ್, ಎಲ್‌ಬಿ. ವಿರಿಡೆಸೀನ್ಸ್, ಎಲ್‌ಬಿ. ಡೆಲ್ಬುರ್ಕಿ/ಎಲ್‌ಬಿ. ಲೀಚ್‌ಮನ್ನಿಗಳು 8 ಸಿಂಕಿ ಸಾಂಪಲ್‌ಗಳು ಮತ್ತು ಎಲ್‌ಬಿ. ಪ್ಲಾಂಟೇರಮ್, ಎಲ್‌ಬಿ. ಫರ್ಮೆಂಟಮ್ ಹಾಗೂ ಈಶಾನ್ಯದ ಖಲ್ಪಿಯಿಂದ ಹುದುಗಿಸಿದ ವಸ್ತುಗಳ ಎಲ್.ಕ್ಸೈಲೋಸಸ್ ಎಂಬ ಒಂದು ಹೊಸ ಪ್ರಭೇದಗಳಿಂದ ಬೇರ್ಪಡಿಸಲ್ಪಟ್ಟಂಥವು. ಮತ್ತು ಮಾರ್ಫೋಲಾಜಿಕಲ್, ಫಿಸಿಯೋಲಾಜಿಕಲ್ ಮತ್ತು ಬಯೋಕೆಮಿಕಲ್ ಪರೀಕ್ಷೆಗಳ ಆಧಾರದ ಮೇಲೆ ಗುರುತಿಸಲ್ಪಟ್ಟವು. ರೆಪ್ರೆಸೆಂಟೇಟಿವ್ ಲ್ಯಾಬ್‌ನ ಇಂಟರ್‌ನಲ್ ಟ್ರಾನ್ಸ್‌ಕ್ರೈಬ್ಡ್ ಸ್ಪೇಸರ್ (ಐಟಿಎಸ್) ಪ್ರಾಂತ್ಯವನ್ನು ತೆರವುಗೊಳಿಸಲಾಯಿತು ಮತ್ತು 16ಎಸ್, 23ಎಸ್ ಆರ್‌ಆರ್‌ಎನ್‌ಎ (ಐಟಿಎಸ್) ಪ್ರಾಂತ್ಯವನ್ನು ಉಪಯೋಗಿಸಿಕೊಂಡು ಪ್ರಭೇದ ನಿರ್ದಿಷ್ಟ ಪ್ರೈಮರ್ಸ್‌ಅನ್ನು ವಿನ್ಯಾಸಗೊಳಿಸಲಾಯಿತು. ಇಂತಹಾ ಪ್ರಭೇದಗಳ ಐಟಿಎಸ್ ಸೀಕ್ವೆನ್ಸ್‌ಅನ್ನು ಎನ್‌ಸಿಬಿಐ ಉಪಯೋಗಿಸಿಕೊಂಡು ಸಂಪೂರ್ಣ ಜಿನೋಮ್ ಸೀಕ್ವೆನ್ಸ್‌ಗಳಿಂದ ರಿಬೋಸೊಮಲ್ ಲೋಕಸ್‌ಅನ್ನು ವಿಶ್ಲೇಷಿಸಿ ಪಡೆದಂಥವು. 16ಎಸ್–23ಎಸ್ ಆರ್‌ಆರ್‌ಡಿಎನ್‌ಎ ಐಟಿಎಸ್ ರೀಜನ್ ಆಂಪ್ಲಿಫಿಕೇಶನ್ ಗಾತ್ರವು ಬೇರೆ ಬೇರೆ ಲ್ಯಾಬ್ ಎಲ್‌ಬಿ. ಪ್ಲಾಂಟೇರಮ್ (647 ಬಿಪಿಎಸ್), ಎಲ್‌ಬಿ ಅಸಿಡೋಫಿಲಸ್ (663 ಬಿಪಿಎಸ್), ಎಲ್‌ಬಿ. ಬ್ರೇವಿಸ್ ಮತ್ತು ಪಿಡಿಯೋಕೋಕಸ್ ಪೆಂಟೋಸಾಸಸ್ (630 ಬಿಪಿಎಸ್) ಎಲ್‌ಬಿ. ಡೆಲಬ್ರುಎಕಿ ಸಬ್‌ಎಸ್‌ಪಿ. ಬುಲಗೇರಿಕಸ್ (670 ಬಿಪಿಎಸ್), ಎಲ್‌ಬಿ. ಫರ್ಮೆಂಟಮ್ (605 ಬಿಪಿಎಸ್), ಎಲ್‌ಬಿ. ಸಲಿವೇರಿಯಸ್ (634 ಬಿಪಿಎಸ್), ಎಲ್‌ಸಿ ಲ್ಯಾಕ್ಟಿಸ್ ಸಬ್‌ಎಸ್‌ಪಿ. ಲ್ಯಾಕ್ಟಿಸ್ (516 ಬಿಪಿಎಸ್), ಎಲ್‌ಬಿ. ಕೇಸೀ 434 ಬಿಪಿಎಸ್), ಲಿಯು. ಮೆಸೆಂಟೆರಾಯಿಡ್ಸ್ (588 ಬಿಪಿಎಸ್) ಮತ್ತು ಲಿಯು. ಸಿಟ್ರಿಯಮ್ (591 ಬಿಪಿಎಸ್). ಮುಂದುವರಿದು, ಲಿಯುಕೋನೋಸ್ಟೋಕ್ ಫಲ್ಲಾಕ್ಸ್ ಪ್ರಭೇದಗಳು

ನಿರ್ದಿಷ್ಟ ಪ್ರೈಮರ್ ಆಂಪ್ಲಿಕೇಶನ್ ಗಾತ್ರ 16S ಆರ್‌ಆರ್‌ಎನ್‌ಎ ಜೀನ್‌ಗೆ 1386 ಬಿಪಿಎಸ್ ಮತ್ತು ರೆಕ್‌ಎನ್ ಪ್ರೋಟಿನ್ ಜೀನ್‌ಗೆ 669 ಬಿಪಿಎಸ್‌ನೊಂದಿಗೆ ವಿನ್ಯಾಸಗೊಳಿಸಲ್ಪಟ್ಟಿತು. ಈ ಪ್ರೈಮರ್‌ಗಳು ಐಸೋಲೇಟ್ಸ್‌ನ ಕ್ಯಾರೆಕ್ಟರೈಸೇಷನ್‌ಗಾಗಿ ಉಪಯೋಗಿಸಲ್ಪಡುತ್ತವೆ ಹಾಗೂ ಆರ್‌ಇಎಲ್‌ಪಿ ಮಾದರಿ ವಿಶ್ಲೇಷಣೆಯಿಂದ ವರ್ಗೀಕೃತಗೊಳಿಸಲ್ಪಟ್ಟಿವೆ.

**ಬೆಂಚ್–ಸ್ಕೇಲ್ ಪ್ರೋಟೋಟೈಪ್ ರಿಯಾಕ್ಟರ್ ಎಕ್ಸ್‌ಟ್ರಾಕ್ಷನ್ ವ್ಯವಸ್ಥೆ (ಶಾರದ ಆರ್)**

17 ಮೈಕ್ರೋಆಲ್ಗಲ್ ತಳಿಗಳು 20% ವಿ/ವಿ ಸಿಓ2 ಮತ್ತು ಕ್ಲೋರೋಕೋಕಮ್ ಎಸ್.ಪಿ., ಸೀನ್ಡೆಸ್‌ಮಸ್ ಡಿಮಾರ್ಫಸ್, ಕ್ಲೋರೆಲ್ಲ ಎಸ್‌ಪಿ. ಡೆಸ್ಮೋಡೆಸ್ಮಸ್ ಒಪೊಲಿಎನ್‌ಸಿಸ್ ಹಾಗೂ ಕೋಎಲೇಸ್ಟ್ರಮ್ ಆಸ್ಟ್ರೋಯ್ಡಿಯಂ ಎಕ್ಸಿಬಿಟೆಡ್ ಹೈಯರ್ ಸಿಓ2 0.210 ಜಿ ಸಿಓ2/ ಜಿ ಬಯೋಮಾಸ್/ದಿನದಷ್ಟು ಫಿಕ್ಸೇಷನ್ ರೇಟ್ಸ್‌ನೊಂದಿಗೆ ಇವಾಲ್ಯುವೇಟ್ ಮಾಡಲ್ಪಟ್ಟವು. ಒಟ್ಟು ಕ್ಲೋರೋಫಿಲ್ ಮತ್ತು ಕೆರೋಟಿನಾಯ್ಡ್ ಕಂಟೆಂಟ್‌ಗಳು ಸಿಓ2 ಸಪ್ಲಿಮೆಂಟೇಶನ್‌ನೊಂದಿಗೆ ಹೆಚ್ಚಿದವು, ಹೇಗಾದರೂ, ಪ್ರತಿಕ್ರಿಯೆಯು ಪ್ರಭೇದ ನಿರ್ದಿಷ್ಟವಾಗಿತ್ತು. ನಾಲ್ಕು ತಳಿಗಳು ಕ್ಲೋರೋಕೋಕವ್ ಎಸ್.ಪಿ., ಸೀನ್ಡೆಸ್‌ಮಸ್ ಡಿವಾರ್ಫಸ್, ಕಿರಶನೆರೀಎಲ್ಲ ಕಾಂಟೋರ್ಟ್ರ ಮತ್ತು ಎಸ್‌ಪಿ. ಡೆಸ್ಮೋಡೆಸ್ಮಸ್ ಒಪೊಲಿಎನ್‌ಸಿಸ್‌ನ ಬೆಳವಣಿಗೆಯ ಮೇಲೆ ಬೈಕಾರ್ಬೋನೇಟ್ ಸಪ್ಲಿಮೆಂಟೇಶನ್‌ನ ಪರಿಣಾಮವನ್ನು ಅಧ್ಯಯನ ಮಾಡಲ್ಪಟ್ಟಿತು ಮತ್ತು 40ಎಮ್‌ಎಮ್‌ಗಿಂತ ಹೆಚ್ಚಿನ ಬೈಕಾರ್ಬೊನೇಟ್ ಮಟ್ಟಗಳು ಬೆಳವಣಿಗೆ ಪ್ರತಿಬಂಧಕಗಳೆಂದು ತಿಳಿದು ಬಂತು. 50 ಎಲ್ ವಾಲ್ಯೂಮ್‌ನ ಸಿಓ2 ಸ್ಪಾರ್ಜ್ಡ್ ರೇಸ್‌ವೇ ಪಾಂಡ್ ಆಯ್ಕೆಗೊಂಡ ಸೀನ್ಡೆಸ್‌ಮಸ್ ಕಲ್ಚರ್‌ನ ಇವ್ಯಾಲ್ಯುವೇಶನ್ ಬಯೋಮಾಸ್‌ನಲ್ಲಿ 15%ನಷ್ಟು ಹೆದಚ್ಚಳವನ್ನು ಸೂಚಿಸಿತು. ಸೀನ್ಡೆಸ್‌ಮಸ್ ಎಸ್‌ಪಿ. ಹೊಂದಿಸಲ್ಪಟ್ಟಿತು ಮತ್ತು ಹೊರಂಗಣದ ಓಪನ್ ರೇಸ್‌ವೇ ಪಾಂಡ್ಸ್‌ನಲ್ಲಿ 1000ಲೀಟರ್‌ನಲ್ಲಿ ಅಳೆಯಲ್ಪಟ್ಟಿತು. ವಿವಿಧ ಸಂಯೋಜನೆಗಳನ್ನು ಉಪಯೋಗಿಸಿಕೊಂಡು ಬಯೋಮಾಸ್ ಕೊಯ್ಲು ಅಧ್ಯಯನ ಮಾಡಲ್ಪಟ್ಟಿತು ಮತ್ತು ಆಲ್ಗಲ್ ಬಯೋಮಾಸನ್ನು ಕೊಯ್ಲು ಮಾಡಲು ಚಿಟೋಸಾನ್ ಪರಿಣಾಮಕಾರಿ ಎಂದು ಕಂಡುಬಂತು.

**ಇನ್ ವಿಟ್ರೋ ಪ್ರೋಪಗೇಶನ್ ಪ್ರೋಟೋಕಾಲ್ಸ್ (ಗಿರಿಧರ್ ಪಿ)**

ಆಸ್ಕಾರ್ಬಿಕ್ ಆಸಿಡ್‌ನ ಉತ್ಪಾದನೆಗಾಗಿ ಟಿಶ್ಯೂ ಕಲ್ಚರ್ ಕ್ರಮವು ಹೈಬಿಸ್ಕಸ್ ಕಾನ್ನಬೈನಸ್‌ನ ಬೇರಿನಲ್ಲಿ, ಇನ್ ವಿಟ್ರೋದ ವಿವಿಧ ಮೀಡಿಯ + ಬೆಳವಣಿಗೆ ನಿಯಂತ್ರಕ ಸಂಯೋಗಗಳೊಂದಿಗೆ ಪ್ರಮಾಣೀಕೃತಗೊಳಿಸಲ್ಪಟ್ಟಿತು. ಬೆಟಲೇಯಿನ್ಸ್‌ನ ಸಮೃದ್ಧ ಮೂಲವಾಗಿರುವ ಬಸೆಲ್ಲ ರುಬ್ರ ಹಣ್ಣನ್ನು ಉಪಯೋಗಿಸಿಕೊಂಡು ಪಿಗ್ಮೆಂಟ್ ಸಮೃದ್ಧ ಬೇರ್ಪಡಿಕೆಯಲ್ಲಿ ಒಂದು ಆಹಾರ ಫಾರ್ಮ್ಯುಲೇಶನ್‌ನನ್ನು ಅಭಿವೃದ್ಧಿ ಪಡಿಸಲಾಯಿತು. ಇದರಲ್ಲಿ ವಸ್ತುವಿನಲ್ಲಿ ಪಿಗ್ಮೆಂಟ್ ಸ್ಥಿರತೆಯನ್ನು ಸಾಧಿಸುವುದು ಒಂದು ದೊಡ್ಡ ಸವಾಲಾಗಿತ್ತು.

**ಕೇಸರಿಯ ನ್ಯೂರೋಪ್ರೊಟೆಕ್ಟಿವ್ ಪರಿಣಾಮಗಳು (ಮುರಲೀಧರ)**

ರೊಟೆನೋನ್ ಅಟೆನ್ಯುಯೇಟ್‌ಗೆ ಕೇಸರಿ ಬಯೋಆಕ್ಟಿವ್ ಕ್ರೋಸಿನ್‌ನ ಫಲದಾಯಕತೆಯು ಡ್ರೋಸೊಫಿಲಿಯ ಮಾದರಿಯಲ್ಲಿ ಪ್ರೇರೇಪಿತ ನ್ಯೂರೋಟಾಕ್ಸಿಸಿಟಿಯು 5 ದಿನಗಳ ಸಹ–ಮಾನ್ಯತಾ ಮಾದರಿಯಲ್ಲಿ ಅಧ್ಯಯನ ಮಾಡಲ್ಪಟ್ಟಿತು. ಕ್ರೋಸಿನ್‌ನ ಪರೀಕ್ಷಿಸಿಲ್ಪಟ್ಟ ಎಲ್ಲಾ ಸಾಂದ್ರಗಳು ಅಂದರೆ, 10, 25 ಮತ್ತು 50 μಎಮ್ ರೋಟೆನೋನ್ ಪ್ರೇರೇಪಿತ ಮರ್ತ್ಯತೆಯ (64–83%), ಲೊಕೊಮೋಟರ್ ಫೆನೋಟೈಪ್ (28–38%) ಮತ್ತು ಆಕ್ಸಿಡೇಟಿವ್ ಒತ್ತಡದ ವಿರುದ್ಧ ಗುರುತರವಾಗಿ ರಕ್ಷಿತವಾಗಿದೆ. ಆಕ್ಸಿಡೇಟಿವ್ ಒತ್ತಡ ಮಾರ್ಕರ್‌ಗಳು (ಆರ್‌ಓಎಸ್, ಎನ್‌ಓ, ಎಚ್‌ಪಿ) ರೋಟೆನೋನ್ ಟ್ರೀಟ್‌ಮೆಂಟ್‌ನಿಂದ ಗುರುತರವಾಗಿ ಹೆಚ್ಚಿದ್ದುದು, ಕ್ರೋಸಿನ ಸಪ್ಲಿಮೆಂಟೇಶನ್‌ನಿಂದಾಗಿ ಗುರುತರವಾಗಿ ಇಳಿಕೆಯಾಯಿತು. ರೋಟೆನೋನ್ ಮತ್ತು ಕ್ರೋಸಿನ್‌ನೊಂದಿಗೆ ಸಹ–ಮಾನ್ಯತಾ ಫ್ಲೈಸ್‌ನಲ್ಲಿ ರಕ್ಷಣಾ ತಂತ್ರಗಳಾದ ಇಳಿಕೆಯಾದ ಗ್ಲುಟಥಾಯಿನ್ ಮತ್ತು ಒಟ್ಟು ಥಿಯೋಲ್‌ಗಳ ಮಟ್ಟಗಳು ಗುರುತರವಾಗಿ ಎತ್ತರಿಸಲ್ಪಟ್ಟವು. ಆಕ್ಸಿಡೇಟಿವ್ ಒತ್ತಡ ಮಾರ್ಕರ್‌ಗಳ ಅಂತವರ್ಧಕ ಮಟ್ಟಗಳು ಕೂಡಾ ಕುಸಿದವು, ಮತ್ತು ಆಂಟಿಆಕ್ಸಿಡೆಂಟ್ ಕಿಣ್ವಗಳು (ಸಿಎಟಿ ಮತ್ತು ಎಸ್‌ಓಡಿ) ಕ್ರೋಸಿನ ಪೆರ ಸೆ ಪರಿಣಾಮದ ಅಧ್ಯಯನಗಳಲ್ಲಿ ಹೆಚ್ಚಾದವು.

**ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾಗಳಲ್ಲಿ ಆಂಟಿಬಯಾಟಿಕ್ ನಿರೋಧಕತೆ (ಪ್ರಕಾಶ್ ಎಮ್ ಹಲಾಮಿ)**

ಮಾಂಸ ಮತ್ತು ಕೋಳಿಸಾಕಣಾ ಪ್ರಾಡಕ್ಟ್‌ಗಳಿಂದ ಬೇರ್ಪಡಿಸಲ್ಪಟ್ಟ ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾಗಳು ವಾನಕೋಮೈಸಿನ್ ನಿರೋಧಕದ ಪ್ರಭುತ್ವಕ್ಕಾಗಿ ವಿಶ್ಲೇಷಿಸಲ್ಪಟ್ಟವು. ಟ್ರಾನ್ಸ್‌ಪೋಸೊನ್–ಟಿಎನ್916ನ ಮೇಲೆ ಟೆಟ್ರಾಸೈಕ್ಲಿನ್ ಮತ್ತು ಎರಿಥ್ರೋಮೈಸಿನ್ ನಿರೋಧಕ ಜೀನ್‌ನ ಪ್ರಸ್ತುತಿಯು ಪಿಸಿಆರ್ ಕ್ರಮದಲ್ಲಿ ಪತ್ತೆಯಾಯಿತು. ಅಮಿನೋಗ್ಲೈಕೋಸೈಡ್ ನಿರೋಧಕ ಬೈಫಂಕ್ಷನಲ್ ಜೀನ್ ಪ್ರಭುತ್ವ ಎಎಸಿ (6)[1] ಲೆ–ಎಪಿಎಚ್ (2") ಲ ಎನಕೋಡಿಂಗ್ ಎಎಸಿ(6')–ಎಪಿಎಚ್(2"), 6'–ಎನ್–ಅಸಿಟಿಲಟ್ರಾನ್ಸ್‌ಫರೇಸ್ ಮತ್ತು 2" ಓ ಫಾಸ್ಫೋಟ್ರಾನ್ಸ್‌ಫರೇಸ್, ಅಮಿನೋಗ್ಲೈಕೋಸೈಡ್ಸ್‌ನ ಕಿಣ್ವಾತ್ಮಕ ಮಾರ್ಪಾಡಿಗೆ ಜವಾಬ್ದಾರಿತ, ಕೋಳಿಸಾಕಣೆ ಮತ್ತು ಮಾಂಸ ಮೂಲದಿಂದ ಲಾಬ್ ಐಸೊಲೇಟೆಡ್ ಆಗಿ ಮೌಲ್ಯೀಕರಣಗೊಳಿಸಲ್ಪಟ್ಟಿತು. ಕೋಳಿಸಾಕಣೆ ಮತ್ತು ಮಾಂಸ ಪ್ರಾಡಕ್ಟ್‌ಗಳು ಲಾಬ್‌ಗಳಲ್ಲಿ ಅಮಿನೋಗ್ಲೈಕೋಸೈಡ್ ನಿರೋಧಕ ಬೈಫಂಕ್ಷನಲ್ ಜೀನ್ ಪ್ರಭುತ್ವ ಎಎಸಿ (6") ಲೆ–ಎಪಿಎಚ್ (21/2) ಲ ಪ್ರತಿಶೋಧಿಸಲ್ಪಟ್ಟಿತು. ಟೋಜೆಂಟಮೈಸಿನ್ ಮತ್ತು ಕನಮೈಸಿನ್‌ನ ಕೆಳ ಮಟ್ಟದ ನಿರೋಧಕ ಐಸೊಲೇಟ್‌ಗಳ 38%ನೊಂದಿಗೆ ಎಮ್‌ಐಸಿ ಮೌಲ್ಯ <=64>ಜಿ ಎಮ್‌ಎಲ್–1 ಮತ್ತು ಮಾಡರೇಟ್ ಎಮ್‌ಐಸಿ ಮೌಲ್ಯಗಳು ಹೆಚ್ಚಿನ ಕಲ್ಚರ್‌ಗಳಿಗಾಗಿ ಗಮನಿಸಲ್ಪಟ್ಟಿತು. ಪರೀಕ್ಷಿಸಲ್ಪಟ್ಟ ಕಲ್ಚರ್‌ಗಳಲ್ಲಿ, 22 ಲಾಬ್ ಐಸೊಲೇಟ್‌ಗಳು ಅತಿಹೆಚ್ಚು ಮಟ್ಟ ಟೋಜೆಂಟಮೈಸಿನ್ ನಿರೋಧಕ ಮತ್ತು ಎಎಸಿ (6') ಲೆ–ಎಪಿಎಚ್ (21/2) ಲ ಜೀನ್‌ನ ಪ್ರಸ್ತುತಿಯನ್ನು ತೋರಿಸಿದವು. ಎಂಟರೋಕೋಕಸ್ ಸೆಕೋರುಮ 140ಎ, ಎಂಟರೋಕೋಕಸ್ ಅವಿಯಮ್‌ಸಿಎಸ್ 31+ ಮತ್ತು ಲ್ಯಾಕ್ಟೋಬೆಸಿಲ್ಲಸ್ ಪ್ಲಾಂಟರಮ್ ಎಸ್9ಗಳ ನೇಟಿವ್ ಐಸೊಲೇಟ್‌ಗಳು ಬೈಫಂಕ್ಷನಲ್ ಜೀನ್‌ನನ್ನು ಹೊಂದಿವೆಯೆಂದು ಫಲಿತಾಂಶವು ಸೂಚಿಸಿತು.

**ಪ್ರೋಬಯೋಟಿಕ್ ಬ್ಯಾಕ್ಟೀರಿಯಾದ ತ್ವರಿತ ಪತ್ತೆ (ಪ್ರಕಾಶ ಎಮ್ ಹಲಾಮಿ)**

ಮಾನವ ಹಾಗೂ ಪಶುಸಂಗೋಪನಾ ಮೂಲಗಳಿಂದ ಪ್ರತ್ಯೇಕಿಸಲ್ಪಟ್ಟ (ಐಸೊಲೇಟೆಡ್) ಲ್ಯಾಕ್ಟೋಬ್ಯಾಸಿಲೈಯನ್ನು ಅವುಗಳ ಸಂಭವನೀಯ

ಪ್ರೊಬಯೊಟಿಕ್ ಲಕ್ಷಣಗಳಿಗಾಗಿ ಗುಣಲಕ್ಷಣ ಪತ್ತೆಗೆ ಒಳಪಡಿಸಲಾಯಿತು. ಇವುಗಳಲ್ಲಿ ಆಮ್ಲ ಹಾಗೂ ಪಿತ್ತ ಸಹಿಷ್ಣುತೆ, GIT ಉಳಿಕೆ, ಅಥೇಶನ್ ಹಾಗೂ ಕಾರ್ಯ ಲಕ್ಷಣಗಳಾದ ಆಂಟಿ ಮೈಕ್ರೋಬಿಯಲ್ ಚಟುವಟಿಕೆಗಳು ಹಾಗೂ ಬೈಲ್ ಸಾಲ್ಟ್ ಹೈಡ್ರೊಲೇಸ್ ಚಟುವಟಿಕೆಯು ಸೇರಿತ್ತು. ಇನ್ನಷ್ಟು ಹೆಚ್ಚಾಗಿ ಪ್ರೊಬಯೋಟಿಕ್ ಕಾರ್ಯಕ್ಷಮತೆಯನ್ನು ಪ್ರೊಬಯೋಟಿಕ್ ಮಾರ್ಕರ್ ಜೀನ್ ಬಳಸಿ ಮೌಲ್ಯಮಾಪನ ಮಾಡಲಾಯಿತು. ಅಥೆಶನ್ ಜೀನುಗಳಲ್ಲಿ, ವಿಶೇಷವಾಗಿ ಮ್ಯುಸಿನ್ ಬೈಂಡಿಂಗ್ ಜೀನ್ಸ್ ಹಾಗೂ ಫೈಬ್ರೋನೆಕ್ಟಿನ್ ಬೈಂಡಿಂಗ್ ಪ್ರೋಟೀನುಗಳಲ್ಲಿ ಅಲೀಲಿಕ್ ವ್ಯತ್ಯಾಸಗಳನ್ನು ಅಧ್ಯಯನ ಮಾಡಲು ಬಯೋಇನ್ಫಾರ್ಮಟಿಕ್ಸ್ ಟೂಲ್ಸ್ ಬಳಕೆ ಮಾಡಲಾಯಿತು. ಪ್ರೊಬಯೋಟಿಕ್ ಮಾರ್ಕರುಗಳನ್ನು ಬಳಸಿ ಪ್ರೊಬಯೋಟಿಕ್ಸ್ ಫಂಕ್ಷನಾಲಿಟಿ ಮೌಲ್ಯಮಾಪನೆಗಾಗಿ ಒಂದು ಅಸೇಯನ್ನು ವೃದ್ಧಿಪಡಿಸಲಾಯಿತು. ಮಾನವ ಹಾಗೂ ಕ್ಷೀರೋತ್ಪಾದನೆಗಳ ಮೂಲ (ಹೈನುಗಾರಿಕೆ)ಗಳಿಂದ ಐಸೋಲೇಟ್ ಮಾಡಿದಂತಹ ಸಂಭವನೀಯ ಕಲ್ಚರುಗಳನ್ನು ತ್ವರಿತವಾಗಿ ಗುಣಲಕ್ಷಣ/ಗುರುತುಪತ್ತೆಗೆ ಒಳಪಡಿಸಲಾಯಿತು. ಹಾಗೂ RFLP, ITS, 8 RAPD, (GTG)5 ನಿಂದ ಡಿಫ್ಫರೆನ್ಷಿಯೇಟ್ ಮಾಡಲಾಯಿತು. ಜೊತೆಗೆ, 16S rDNA ಸೀಕ್ವೆನ್ಸ್ ಹೊಮೊಲೊಜಿಯನ್ನು ಇದಕ್ಕಾಗಿ ಬಳಸಲಾಯಿತು. ಅಲೀಲಿಕ್ ವ್ಯತ್ಯಾಸಗಳನ್ನು ಮ್ಯೂಸಿನ್ ಬೈಂಡಿಂಗ್ ಪ್ರೋಟೀನ(mub) ನ ನ್ಯೂಕ್ಲಿಯೋಟೈಡ್ ಸೀಕ್ವೆನ್ಸ್ ಡೇಟಾ ಹಾಗೂ ಫೈಬ್ರೋನೆಕ್ಟಿನ್ ಬೈಂಡಿಂಗ್ ಪ್ರೋಟೀನ್ (fbp)ಗಳನ್ನು ಬಳಸಿ ಬಯೋಇನ್ಫರ್ಮಟಿಕ್ ಟೂಲ್ ನೆರವಿನೊಂದಿಗೆ ಮೌಲ್ಯಮಾಪನೆಗೊಳಪಡಿಸಲಾಯಿತು. ಕರುಳಿನ ಎಪಿಥೀಲಿಯಲ್ ಪದರಕ್ಕೆ ಪ್ರೊಬಯೋಟಿಕ್ ಬ್ಯಾಕ್ಟೀರಿಯಾಗಳು ಅಂಟಿಕೊಳ್ಳಲು (ಅಥೇಶನ್) ಕಾರಣವಾದ ಪ್ರೊಬಯೋಟಿಕ್ ಬೈಂಡಿಂಗ್ ಡೊಮೇನ್ ಅನ್ನು ಗುರುತುಹಿಡಿಯಲಾಯಿತು.

**ಮ್ಯಾಕ್ರೋಫೇಜುಗಳಲ್ಲಿ ಗ್ಲೈಕೋಸಮಿನೋಗ್ಲೈಕಾನ್ಸ್ (ನಂದಿನಿ ಪಿಡಿ)**

ಹೈಪರ್ ಕೊಲೆಸ್ಟಿರೋಲೆಮಿಕ್ ಹಾಗೂ ಹೈಪರ್ ಕೊಲೆಸ್ಟಿರೋಲೆಮಿಕ್/ಡಯಾಬಿಟಿಕ್ (ಮಧುಮೇಹಿ) ಇಲಿಗಳಲ್ಲಿನ ಪೆರಿಟೋನಿಯಮ್ ಮ್ಯಾಕ್ರೋಫೇಜ್‌ಗಳಿಂದ ಐಸೋಲೇಟ್ ಮಾಡಿರುವಂತಹ ಗ್ಲೈಕೋಸಮಿನೋಗ್ಲೈಕಾನ್ಸ್ ಅನುರೂಪವಾದ ಕಡಿಮೆ ಅಣುತೂಕದ ಹೆಪಾರನ್ ಸಲ್ಫೇಟ್ ಉಪಸ್ಥಿತಿಯನ್ನು ಹೊರಗೆಡಹಿದವು.



ಮ್ಯಾಕ್ರೋಫೇಜುಗಳ CD11b ಸ್ಟೇನಿಂಗ್



ಮ್ಯಾಕ್ರೋಫೇಜು ಆಂಟಿ–ಹಿಪ್ಪಾರಿನ್ ಸಲ್ಫೇಟ್ ಸ್ಟೈನಿಂಗ್

ಎಲ್‌ಪಿಎಸ್ –ಕ್ರಿಯಾಶೀಲಗೊಳಿಸಲ್ಪಟ್ಟ ಮ್ಯಾಕ್ರೋಫೇಜುಗಳು ಹೈಪರ್ ಕೊಲೆಸ್ಟಿರೋಲೆಮಿಕ್ ಇಲಿಗಳು ತಮ್ಮ ಕೋಶದ ಹೊರಗಿರುವ ಎಕ್ಸ್ಟ್ರಾ ಸೆಲ್ಯುಲರ್ ಮೇಟ್ರಿಕ್ಸ್ ಕಾಂಪೊನೆಂಟಿಗೆ, ಉದಾಹರಣೆಗೆ ಲ್ಯಾಮಿನಿನ್, ಫೈಬ್ರೋನೆಕ್ಟಿನ್, ಹಾಗೂ ಟೈಪ್ IV ಕೊಲಾಜೆನ್ ಇವುಗಳಿಗೆ ಹೆಚ್ಚಿದ ಅಥೆಶನ್ ತೋರಿಸುವುದಕ್ಕೆ ಶಕ್ಯವಾದವು. ಇವುಗಳು ಹೆಪಾರನ್ ಸಲ್ಫೇಟ್ ಜೀರ್ಣಮಾಡುವ ಹೆಪ್ಯಾರಿನೇಸ್ ಕಿಣ್ವದಿಂದ ಚಿಕಿತ್ಸೆಗೊಳಪಟ್ಟ ತಕ್ಷಣವೇ ದುರ್ಬಲಗೊಳಿಸಲ್ಪಟ್ಟವು. ಈ ಫಲಿತಾಂಶಗಳು ತೋರಿಸುವುದೇನೆಂದರೆ, ಹೆಪಾರನ್ ಸಲ್ಫೇಟ್ ವರ್ಗದ ಅಣುಗಳು ವಿವಿಧ ಅಂಗಗಳಿಗೆ ಮ್ಯಾಕ್ರೋಫೇಜುಗಳ ಅಥೆಶನ್‌ಗೆ ಹೊಣೆಯಾಗಿರಬಹುದು.

**ಏವಿಯನ್ ಸಿಂಗಲ್ ಚೇನ್ ಆಂಟಿಬಾಡಿ ತಂತ್ರ (ಮನೋನ್ಮಣಿ ಹೆಚ್ ಕೆ)**

ಆರ್ಗನೋಕ್ಲೋರಿನ್ ಕೀಟನಾಶಕಗಳಾದ ಎಂಡೋಸಲ್ಫಾನ್ ವಿರುದ್ಧ ಆಂಟಿಬಾಡಿಗಳನ್ನು ಸೃಷ್ಟಿಮಾಡಲಾಯಿತು ಹಾಗೂ ಸ್ಪರ್ಧಾತ್ಮಕ ಇಮ್ಯುನೋಆಸೇ ವೃದ್ಧಿಪಡಿಸಲಾಯಿತು. ಎಂಡೋಸಲ್ಫಾನ್ ಸಾಂದ್ರತೆಯು 1000 ng ಯಿಂದ 1 ng ವರೆಗೆ ಪರೀಕ್ಷೆ ಮಾಡಲಾಯಿತು. ಇದರಿಂದ ಕನಿಷ್ಠ ಹಾಗೂ ಗರಿಷ್ಠ ಪತ್ತೆಯಾಗುವ ಸಾಂದ್ರತೆಯನ್ನು ಪಡೆಯಲಾಯಿತು. ಸ್ಪರ್ಧಾತ್ಮಕ ಎಲೈಸಾ (ELISA) ನಡೆಸಲಾಯಿತು ಹಾಗೂ ವರ್ಣವೃದ್ಧಿಯನ್ನು p-NPP ವಿಧಾನದಿಂದ ಅಧ್ಯಯನ ಮಾಡಲಾಯಿತು. ವೃದ್ಧಿಯಾದ ಸಂಕೇತವು ಅನಲೈಟ್ ನ ಪ್ರಮಾಣಕ್ಕೆ ವಿಲೋಮಾನುಪಾತದಲ್ಲಿತ್ತು. 1 ng ವರೆಗಿನ ಎಂಡೋಸಲ್ಫಾನ್ ಮಟ್ಟವನ್ನು ಈ ವಿಧಾನದಿಂದ ಪತ್ತೆ ಮಾಡಬಹುದಾಗಿತ್ತು. ಕೀಟನಾಶಕದ ಪತ್ತೆಯ ಮೇಲೆ ಮೇಟ್ರಿಕ್ಸ್ ಪರಿಣಾಮವನ್ನು ನೋಡಲಾಯಿತು. ಪರೀಕ್ಷೆಗೊಳಪಟ್ಟಂತಹ ಅಡುಗೆಮಾಡಿದಂತಹ ಮಾದರಿಗಳಲ್ಲಿ ಅನುಕ್ರಮವಾಗಿ ಶೇ. 89 ಹಾಗೂ ಶೇ.81 ರಷ್ಟು ಆಲ್ಫಾ ಮತ್ತು ಬೀಟಾಎಂಡೊಸಲ್ಫಾನ್ ಪಡೆಯಲು ಸಾಧ್ಯವಿತ್ತು. ಕೊತ್ತಂಬರಿ ಹಾಗೂ ಟೊಮ್ಯಾಟೋ ದಂತಹ ತರಕಾರಿಗಳು ಗರಿಷ್ಠ ಮೇಟ್ರಿಕ್ಸ್ ಪರಿಣಾಮವನ್ನು ತೋರಿಸಿದವು. ಇಲ್ಲಿ ಮರುಪಡೆಯುವಿಕೆಯು ಶೇ. 56 ಆಲ್ಫಾ ಎಂಡೋಸಲ್ಫಾನ್ ಆಗಿರುತ್ತದೆ.

**ಒಬೆಸ್ಟಟಿನ್ ಹಾಗೂ ಅದರ ಚೂರು ಅನಲಾಗ್ Nt8Uನ ಮೌಲ್ಯಮಾಪನ (ಉಮಾ ವಿ ಮಂಜಪ್ಪರ)**

ನಾಲ್ಕು ವಾರ ವಯಸ್ಸಿನ C57BL/6J ಗಂಡು ಇಲಿ (80 ಸಂ.)ಗಳಿಗೆ ಒಬೇಸಿಟಿ ಅಥವಾ ಬೊಜ್ಜು ಪ್ರೇರೇಪಿಸಲು 19 ವಾರಗಳ ವರೆಗೆ ಅಧಿಕ ಬೊಜ್ಜಿನ (ಫ್ಯಾಟ್) ಆಹಾರಕ್ರಮವನ್ನು ನೀಡಲಾಯಿತು. ಈ ಪ್ರೇರೇಪಣಾ ಅವಧಿಯ ನಂತರ ಒಬೆಸ್ಟಟಿನ್ ಹಾಗೂ Nt8U ಅನ್ನು 8 ದಿನಗಳ ಅವಧಿಯ ವರೆಗೆ ಇಂಟ್ರಾಪೆರಿಟೋನಿಯಲ್ ಆಗಿ ಇಂಜೆಕ್ಟ್ ಮಾಡಲಾಯಿತು ಹಾಗೂ ಆಹಾರ ಸೇವನೆ ಮತ್ತು ತೂಕದಲ್ಲಿ ಆದ ಹೆಚ್ಚಳವನ್ನು ಗಮನಿಸಲಾಯಿತು. ಆಹಾರ ಸೇವನೆಯಲ್ಲಿ ಗಣನೀಯ ಪ್ರಮಾಣದ ವ್ಯತ್ಯಾಸಗಳಾಗಿರದಿದ್ದಾಗ್ಯೂ ದೇಹದ ತೂಕದ ಹೆಚ್ಚಳ ನಿಲ್ಲಿಸಲಾಯಿತು.

**ಲ್ಯಾಕ್ಟಿಕ್ ಆಮ್ಲ ಬ್ಯಾಕ್ಟೀರಿಯಾ ಸ್ಟ್ರೇನುಗಳ ಗುಣಲಕ್ಷಣಗಳ ವರ್ಣನೆ (ಭಾಸ್ಕರ್ ಎನ್)**

ಫರ್ಮೆಂಟ್ ಆದ ಸಿಹಿನೀರಿನ ಮೀನಿನಿಂದ ಐಸೋಲೇಟ್ ಮಾಡಿದ ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾ (LAB) ಸ್ಟ್ರೇನುಗಳನ್ನು ಅವುಗಳ ಆಂಟಿ ಮೈಕ್ರೋಬಿಯಲ್ ಚಟುವಟಿಕೆಗಳಿಗಾಗಿ ಹಾಗೂ ಬದಲಾದ ಪಿಹೆಚ್ (pH), ತಾಪಮಾನ ಹಾಗೂ ಲವಣದ ಸಾಂದ್ರತೆಯಲ್ಲಿ ಅವುಗಳ ಸಸೆಪ್ಟಿಬಿಲಿಟಿಯನ್ನು ಸ್ಕ್ರೀನ್ ಮಾಡಲಾಯಿತು. ಎಲ್ಲಾ ಐಸೋಲೇಟ್‌ಗಳಲ್ಲಿ, ಫರ್ಮೆಂಟ್ ಆಗಿರುವ ಟಿಲಾಪಿಯಾದಲ್ಲಿ ಸ್ಟ್ರೇನ್ HAT6 (ಹ್ಯಾಲೋ

ಆಲ್ಕಾಲಿ ಟಾಲರೆಂಟ್) ಅನ್ನು ಎಕ್ಸ್ಟ್ರಾ–ಸೆಲ್ಯುಲರ್ ಲೈಪೇಸ್ ಸಿಕ್ರೀಟಿಂಗ್ ಹ್ಯಾಲೋ ಆಲ್ಕಾಲಿ ಟಾಲರೆಂಟ್ ಸ್ಪೀಶೀಸ್ ಆಗಿ ಹಾಗೂ ಜೀವರಾಸಾಯನಿಕ ಪರೀಕ್ಷೆಗಳು ತೋರಿಸುವಂತೆ HAT6 ಯನ್ನು ನಾನ್–ವಿರುಲೆಂಟ್ (ರೋಗಕಾರಕವಲ್ಲದ) ಸ್ಟಫೈಲೋಕಾಕಸ್ ಸ್ಟ್ರೇನ್ ಎಂದು ಗುರುತಿಸಲಾಯಿತು. ವಿಭಿನ್ನ ಭೌತ–ರಾಸಾಯನಿಕ ಸ್ಥಿತಿಗಳಲ್ಲಿ ಹ್ಯಾಲೋ ಟಾಲರೆಂಟ್ ಲೈಪೇಸ್‌ನ ಸ್ಥಿರತೆಯು HAT6 ನಿಂದ ಸ್ರವಿಸಲ್ಪಟ್ಟ ಲೈಪೇಸ್ 2M ಸೋಡಿಯಂ ಕ್ಲೋರೈಡ್‌ನಲ್ಲಿ ಸ್ಥಿರವಾಗಿತ್ತು, 6 ರಿಂದ 10 pH ಶ್ರೇಣಿಯಲ್ಲಿ ಕ್ರಿಯಾಶೀಲವಾಗಿತ್ತು ಹಾಗೂ $30^0$ ಯಿಂದ $40^0$ ಸೆ. ನ ನಡುವೆ ಸ್ಥಿರವಾಗಿಯೇ ಇತ್ತು.

# XII ನೇ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಪ್ರಗತಿ

**ಜೀವವೈಜ್ಞಾನಿಕ ವಿಭಾಗ**

**ಡಿ. ಕಟಾವು–ಪೂರ್ವ ಮತ್ತು ಕಟಾವು–ನಂತರದ ಉತ್ಪನ್ನಗಳನ್ನು ಗರಿಷ್ಠಗೊಳಿಸುವ ಮೂಲಕ ಕೃಷಿ ಉತ್ಪಾದಕತೆಯನ್ನು ವೃದ್ಧಿಸುವುದಕ್ಕೆ ನವ ಉಪಕ್ರಮಗಳು (ಅಗ್ರೋಪಥಿ, ಕೃಷಿವಿಜ್ಞಾನ) (ಸತ್ಯೇಂದ್ರ ರಾವ್ ಬಿವಿ)**

**ಕಟಾವು–ನಂತರದ ಮತ್ತು ಆಹಾರ ತಂತ್ರಜ್ಞಾನ ಪ್ರಕ್ರಿಯೆಗಳು**

ಅಕ್ಕಿಯ ಒಡೆಯುವಿಕೆ ಮತ್ತು ಅಡಿಗೆಯ ಗುಣಮಟ್ಟಗಳು ಭತ್ತದ ಮಿಲ್ಲಿಂಗ್ ಉದ್ದಿಮೆಗಳ ಪ್ರಮುಖ ಸಂಗತಿಗಳಾಗಿವೆ. ತಾಜಾ ಕಟಾವು ಮಾಡಲ್ಪಟ್ಟ ಮೂರು ಭತ್ತದ ಬೆಳೆಗಳನ್ನು (ಐಆರ್–64, ಜ್ಯೋತಿ ಮತ್ತು ಸೋನಾ ಮಸೂರಿ) ಭತ್ತದ ಸಿಪ್ಪೆತೆಗೆಯುವುದಕ್ಕೆ ಮತ್ತು ಅವುಗಳ ಅಡಿಗೆಯ ಗುಣಲಕ್ಷಣಗಳನ್ನು ಗುರುತಿಸುವುದಕ್ಕೆ ಪರೀಕ್ಷೆಗೆ ಒಳಪಡಿಸಲಾಯಿತು. ಸಿಪ್ಪೆ ತೆಗೆಯುವಿಕೆ ಮತ್ತು ಪಾಲಿಷ್ ಮಾಡುವಿಕೆ ಈ ಎರಡೂ ಸಂದರ್ಭಗಳಲ್ಲಿಯೂ ಅಕ್ಕಿಯ ಒಡೆಯುವಿಕೆಯು ತುಂಬಾ ಹೆಚ್ಚಿನ ಪ್ರಮಾಣದಲ್ಲಿತ್ತು. ಧಾನ್ಯದ ತೇವಾಂಶ ಮತ್ತು ನಿಯಂತ್ರಿತ ಸನ್ನಿವೇಶಗಳಲ್ಲಿ ಒಣಗಿಸುವ ಪ್ರಕ್ರಿಯೆಗಳನ್ನು ವರ್ಧಿಸುವ ಮೂಲಕ, ಇಡಿ ಅಕ್ಕಿಯ ಉತ್ಪಾದನೆಯಲ್ಲಿ (70 ರಿಂದ 85%) ಗಮನಾರ್ಹವಾದ ಹೆಚ್ಚಳವನ್ನು ಉಂಟುಮಾಡುವ ಮೂಲಕ ಒಡೆಯುವಿಕೆಯನ್ನು ಕಡಿಮೆಗೊಳಿಸಬಹುದಾಗಿದೆ. ಬೇಯಿಸಲ್ಪಟ್ಟ ಅಕ್ಕಿಯ ಅಂಟಿಕೊಳ್ಳುವ ಗುಣವನ್ನು ಕಡಿಮೆಗೊಳಿಸುವ ಮತ್ತು ಅದರ ಗಟ್ಟಿತನವನ್ನು ವೃದ್ಧಿಸುವ ಮೂಲಕ ತಾಜಾ ಅಕ್ಕಿಯ ಸುಧಾರಿತ ಅಡಿಗೆಗೆ ಸಂಬಂಧಿಸಿದ ಗುಣಲಕ್ಷಣಗಳನ್ನು ಸೂಚಿಸಲಾಗುತ್ತದೆ. ಅಸಂಸ್ಕರಿತ ಮತ್ತು ಸಂಸ್ಕರಿತ ಭತ್ತದ ಜೆಲ್ ಸ್ವರೂಪಗಳೂ ಕೂಡ ಬೇಯಿಸಲ್ಪಟ್ಟ ಅಕ್ಕಿಯ ಸ್ವರೂಪದಂತೆಯೇ ಬದಲಾಗಲ್ಪಟ್ಟವು. ಕೋಣೆಯ ಉಷ್ಣಾಂಶದಲ್ಲಿ ದಾಸ್ತಾನು ಮಾಡಲ್ಪಟ್ಟ ಸಂದರ್ಭದಲ್ಲಿ, ತಾಜಾ ಕಟಾವು ಮಾಡಲ್ಪಟ್ಟ ಭತ್ತದ ವಿಧಗಳಲ್ಲಿ ಎ–ಅಮೈಲೇಸ್ ಚಟುವಟಿಕೆಯು 0.014 ಮತ್ತು 0.024 ಮಾಲ್ಟೋಸ್ ಯುನಿಟ್ಸ್/ಎಮ್‌ಜಿ ಫ್ಲೋರ್ ವ್ಯಾಪ್ತಿಯಲ್ಲಿದ್ದವು ಮತ್ತು ಇದು ಎರಡನೆಯ ತಿಂಗಳ ಅವಧಿಯಲ್ಲಿ ಹೆಚ್ಚಾಗಲ್ಪಟ್ಟಿತು ಮತ್ತು 0.054 ಮತ್ತು 0.074 ಎಮ್ ಯುನಿಟ್ಸ್/ಎಮ್‌ಜಿ ಫ್ಲೋರ್ ವ್ಯಾಪ್ತಿಯಲ್ಲಿತ್ತು, ಈ ಮೂರು ಭತ್ತದ ಬೆಳೆಗಳಲ್ಲಿ ಮೂರನೆಯ ತಿಂಗಳಿನಲ್ಲಿ ಚಟುವಟಿಕೆಯು ಸಮಾನವಾಗಿತ್ತು (0.045 ದಿಂದ 0.048 ಎಮ್/ಎಮ್‌ಜಿ ಫ್ಲೋರ್).

ಬ್ರೌನ್ ರೈಸ್ ಫ್ಲೋರ್ (ಕಂದು ಅಕ್ಕಿ ಹಿಟ್ಟು) ಸಂಸ್ಕರಣಗಳಲ್ಲಿ ಜೀವನಶೈಲಿಯ ಅಸ್ವಸ್ಥತೆಗಳನ್ನು ತಡೆಗಟ್ಟುವಂತಹ ಯಥೇಚ್ಛವಾದ ನ್ಯೂಟ್ರಾಸ್ಯುಟಿಕಲ್ ಅಂಶಗಳು ಕಂಡುಬರುತ್ತವೆ. ವಿಭಿನ್ನ ಮಿಲ್ಲಿಂಗ್ ವಿಧಾನಗಳ ಮೂಲಕ ಪಡೆದುಕೊಂಡ ಇಡಿಯಾದ ಮತ್ತು ತುಂಡಾಗಲ್ಪಟ್ಟ ಕಂದು ಅಕ್ಕಿಯ ಭೌತಿಕ, ಕಾರ್ಯಾತ್ಮಕ ಮತ್ತು ಉತ್ಪನ್ನದ ಗುಣಮಟ್ಟಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ಇಡಿ ಕಂದು ಅಕ್ಕಿ ಮತ್ತು ವಾಣಿಜ್ಯ ಸಾಂಪ್ರದಾಯಿಕ ಅಕ್ಕಿಯಿಂದ ಪಡೆದುಕೊಳ್ಳಲ್ಪಟ್ಟ ಹಿಟ್ಟಿನ ಭೌತಿಕ, ಕಾರ್ಯಾತ್ಮಕ ಮತ್ತು ಉತ್ಪನ್ನದ ಗುಣಮಟ್ಟಗಳಲ್ಲಿ ಭಿನ್ನತೆಗಳನ್ನು ಗುರುತಿಸಲಾಯಿತು. ಇನ್‌ಸ್ಟಾಂಟ್ ಇಡಿಯಪ್ಪಮ್ ಮಿಶ್ರಣಕ್ಕೆ ಒಂದು ಸಿದ್ಧ ಮಿಶ್ರಣವನ್ನು ಅಭಿವೃದ್ಧಿಪಡಿಸಲಾಯಿತು. ತುಂಡಾಗಲ್ಪಟ್ಟ ಅಕ್ಕಿಯನ್ನು ಬಳಸಿಕೊಂಡು ಸ್ಟ್ರಕ್ಚರ್ಡ್ ರೈಸ್ ಅನ್ನು ತಯಾರಿಸುವುದಕ್ಕೆ ಪ್ರಯತ್ನವನ್ನು ನಡೆಸಲಾಯಿತು. ಈ ರೀತಿ ತಯಾರಿಸಲ್ಪಟ್ಟ ಅಕ್ಕಿಯನ್ನು ಬೇಯಿಸಿದಾಗ ಅದು ಸ್ವೀಕಾರಾರ್ಹ ಸಂವೇದನಶೀಲ ಗುಣಗಳ ಜೊತೆಗೆ 86% ಸ್ಟಾರ್ಚ್ ಜೀರ್ಣಕಾರಿತ್ವ, ಸುಮಾರು 5 ನಿಮಿಷದ ಬೇಯುವಿಕೆಯ ಅವಧಿಯನ್ನು ಹೊಂದಿರುವುದು ಕಂಡುಬಂದಿತು.

ಇಡಿ ಗೋಧಿಯ ಹಿಟ್ಟಿನ ಸಂಗ್ರಹವನ್ನು ಉತ್ತಮಗೊಳಿಸುವುದಕ್ಕೆ ಕಡಿಮೆ ಲೈಪೇಸ್ ಫ್ರ್ಯಾಕ್ಷನ್ (ಎಂಡೋಸ್ಪರ್ಮ್) ಜೊತೆಗೆ ಇದನ್ನು ಪುನಃಸಂಯೋಜನೆ ಮಾಡುವುದಕ್ಕೂ ಮೊದಲು ಹೈ ಲೈಪೇಸ್ ಫ್ರ್ಯಾಕ್ಷನ್ (ಬ್ರ್ಯಾನ್ ಮತ್ತು ಜರ್ಮ್ ಸಮೃದ್ಧವಾಗಿರುವ) ನ ಸ್ಥಿರೀಕರಣದ ಮೇಲೆ ಸಂಸ್ಕರಣ ಸನ್ನಿವೇಶಗಳನ್ನು ಗರಿಷ್ಠಗೊಳಿಸಲಾಗುತ್ತದೆ. ಆ್ಯಂಟಿ–ಮೌಲ್ಡ್ ಮತ್ತು ಆ್ಯಂಟಿಆಕ್ಸಿಡೆಂಟ್ ಆಗಿ ನಿಂಬೆಯ ಹುಲ್ಲುಗಳು (ಎಲ್‌ಜಿ) ಮತ್ತು ಮಸಾಲೆ ಪದಾರ್ಥ (ಲವಂಗ ಮತ್ತು ದಾಲ್ಚಿನ್ನಿ–ಸಿಸಿ) ಗಳ ಬಳಕೆಯು ಸಂವೇದನಾತ್ಮಕವಾಗಿ ಸ್ವೀಕಾರಾರ್ಹ ಮಫಿನ್‌ಗಳ ತಯಾರಿಕೆಗೆ ಕಾರಣವಾಯಿತು. ನೈಸರ್ಗಿಕ ಪ್ರಿಸರ್ವೇಟೀವ್ (ಸಂರಕ್ಷಕ) ನ ಸಂಯೋಜನದ ಮೂಲಕ ಉತ್ಪನ್ನದ ಒಟ್ಟಾರೆ ಗುಣಮಟ್ಟಕ್ಕೆ ಯಾವುದೇ ರೀತಿಯ ಹಾನಿಯುಂಟುಮಾಡದೇ ಪರೋಟದ ಷೆಲ್ಫ್ ಲೈಫ್ ಅನ್ನು 2–3 ದಿನಗಳಿಂದ 7 ದಿನಗಳವರೆಗೆ ಹೆಚ್ಚಿಸಲಾಯಿತು.

ಒಚಿದು ಮ್ಯಾಂಗೋ ಕ್ಯಾನಿಂಗ್ ಘಟಕದಿಂದ ಉತ್ಪಾದನೆಯಾಗಲ್ಪಡುವ ಘನ ತ್ಯಾಜ್ಯವಾದ ಮ್ಯಾಂಗೋ ಪೀಲ್ ಅನ್ನು ಸಮರ್ಪಕವಾದ ಪೂರ್ವ–ಸಂಸ್ಕರಣೆಯ ನಂತರ ಒಣಗಿಸಲಾಯಿತು. ಒಣಗಿಸಲ್ಪಟ್ಟ ಮಾವಿನ ಚಿಳಕವು (ಮ್ಯಾಂಗೋ ಪೀಲ್) ಉತ್ತಮವಾದ ಪೆಕ್ಟಿನ್ ಗುಣಮಟ್ಟವನ್ನು ಒದಗಿಸಿತು ಮತ್ತು ಒಟ್ಟಾರೆ ಉಚಿತ ಸಮಗ್ರ ಶುಭ್ರತಾ ಚಟುವಟಿಕೆಯನ್ನು ವರ್ಧಿಸಿತು. ವಿಭಿನ್ನ ಸ್ಥಿತಿಗಳಿಗೆ ಸಂಬಂಧಿಸಿದಂತೆ ಆಮ್ಲ ಮತ್ತು ಲವಣವನ್ನು ಬಳಸಿಕೊಂಡು ಮ್ಯಾಂಗೋ ಪೀಲ್‌ನ ಪೆಕ್ಟಿನ್ ಉದ್ಧರಣಗಳ ಅಧ್ಯಯನಗಳನ್ನು ನಡೆಸಲಾಯಿತು. ಒಂದು ಜೆಲ್ಲಿಂಗ್ ಘಟಕವಾಗಿ ಮ್ಯಾಂಗೋ ಪೀಲ್‌ನ ಅಭಿವೃದ್ಧಿಗೊಳಿಸುವಿಕೆ ಮತ್ತು ವಿಭಿನ್ನ ಉದ್ಧರಣ ಸನ್ನಿವೇಶಗಳ ಮೂಲಕ ಮ್ಯಾಂಗೋ ಪೀಲ್‌ನಿಂದ ಪಡೆದುಕೊಂಡ ಪೀಲ್ ಕಾರ್ಬೋಹೈಡ್ರೇಟ್ ಮತ್ತು ಪೆಕ್ಟಿನ್‌ನ ಸ್ವರೂಪವರ್ಗೀಕರಣದ ಅಧ್ಯಯನಗಳು ಪ್ರಗತಿಯಲ್ಲಿವೆ.

ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿರುವಂತಹ ಮೌಲ್ಯವರ್ಧಿತ ಸಂಯುಕ್ತವಾದ ಜೆರುಂಬೋನ್ (sesquiterpene) ನ ತಯಾರಿಕೆಗೆ ಒಂದು ಪ್ರಕ್ರಿಯೆಯನ್ನು ಅಭಿವೃದ್ಧಿಗೊಳಿಸಲಾಯಿತು. ಈ ಉದ್ಧರಣ ಪ್ರಕ್ರಿಯೆಯು ಜೆರುಂಬೆಟ್ ಜಿಂಜರ್ ರೈಜೋಮ್ಸ್‌ನ (ಭಾರತದ ನಾರ್ತ್ ಈಸ್ಟ್ ಮತ್ತು ದಕ್ಷಿಣ ಭಾಗಗಳಲ್ಲಿ ಬೆಳೆಯಲಾಗುತ್ತದೆ) ಗಾತ್ರವನ್ನು ಕುಗ್ಗಿಸುವಿಕೆ, ಕ್ರಷಿಂಗ್, ಡಿ–ಸ್ಟಾರ್ಚಿಂಗ್, ಮತ್ತು ಆವಿಯಾಗಲ್ಪಡುವ ಎಣ್ಣೆ ಮತ್ತು ಹರಳೀಕರಣ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ. ಸ್ವರೂಪಾತ್ಮಕ ಸ್ಪುಟೀಕರಣ ಮತ್ತು ಶುದ್ಧತೆಯ ಮೂಲಕ ಮಿಶ್ರಣದ ಯಥಾರ್ಥತೆಯನ್ನು ಗುರುತಿಸಲಾಗುತ್ತದೆ.

ಅಫ್ಲಾಟಾಕ್ಸಿನ್ ಮಲಿನಕಾರಕವು ಕೆಂಪು ಮೆಣಸಿನಕಾಯಿಯ ರಫ್ತಿನಲ್ಲಿ

ಕಂಡುಬರುವ ಒಂದು ಪ್ರಮುಖ ಸಮಸ್ಯೆಯಾಗಿದೆ. ಆದ್ದರಿಂದ ಮೆಣಸಿನಕಾಯಿಯನ್ನು (ಬ್ಯಾಡಗಿ ತಾಜಾ ಕೆಂಪು ಮೆಣಸಿನಕಾಯಿ) ನಿರ್ಜಲೀಕರಣಗೊಳಿಸುವುದಕ್ಕೆ ಒಂದು ನೈರ್ಮಲ್ಯಯುತವಾದ ಪ್ರಕ್ರಿಯೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ಮೇಲ್ಮೈಯ ತೇವಾಂಶವನ್ನು ಹೋಗಲಾಡಿಸುವುದಕ್ಕೆ ಗಾಳಿಯಿಂದ ಒಣಗಿಸುವ ಸಲುವಾಗಿ ತೊಳೆಯಲ್ಪಟ್ಟ ಹಣ್ಣುಗಳನ್ನು ಪುನಃ 800~1500 ವ್ಯಾಟ್ ವಿದ್ಯುತ್‌ನಲ್ಲಿ 2–5 ನಿಮಿಷಗಳವರೆಗೆ ಒಣಗಿಸಲಾಗುತ್ತದೆ, ನಂತರದಲ್ಲಿ ತೇವಾಂಶವನ್ನು 80% ದಿಂದ 8–10% ದವರೆಗೆ ತಗ್ಗಿಸುವುದಕ್ಕೆ 6–10 ನಿಮಿಷಗಳ ಕೂಲಿಂಗ್ ಅನ್ನು ಮಾಡಲಾಗುತ್ತದೆ. ಒಣಗಿಸಿದ ಮೆಣಸಿನಕಾಯಿಯನ್ನು ಸೆಣಬಿನ (ಗೋಣಿಚೀಲ) ಚೀಲದಲ್ಲಿ ಪ್ಯಾಕ್ ಮಾಡಲಾಗುತ್ತದೆ ಅಥವಾ ಗಾತ್ರದ ತಗ್ಗಿಸುವಿಕೆಗೆ / ಪೌಡರ್ ಮಾಡುವುದಕ್ಕೆ ಹ್ಯಾಮರ್ ಮಿಲ್‌ಗೆ ಕಳಿಸಲಾಗುತ್ತದೆ ಮತ್ತು ಅದನ್ನು ನುಣ್ಣನೆಯ ಪುಡಿ ಮಾಡುವುದಕ್ಕೆ 25–40 ಜಾಲರಿಗಳ ಮೂಲಕ ವರ್ಗಾಯಿಸಲಾಗುತ್ತದೆ. ಉತ್ತಮ ಪರಿಮಳ ಮತ್ತು ನೈಸರ್ಗಿಕ ಕೆಂಪು ಬಣ್ಣವನ್ನು ಹೊಂದಿರುವ ಒಣಗಿಸಲ್ಪಟ್ಟ ಕೆಂಪು ಮೆಣಸಿನಲ್ಲಿ 0.5–1.0% ತೀಕ್ಷ್ಣತೆಯ ಜೊತೆಗೆ 225~250 ASTA ಕಲರ್ ಯುನಿಟ್‌ಗಳು ಇರುತ್ತವೆ. ಒಣಗಿಸಲ್ಪಟ್ಟ ಕೆಂಪು ಕ್ಯಾಪ್ಸಿಕಮ್ (ಡೊಳ್ಳುಮೆಣಸು) ಮೆಟಲ್‌ನಿಂದ ಆವೃತವಾದ ಪಾಲಿಯೆಸ್ಟರ್ ಪೌಚ್‌ಗಳಲ್ಲಿ 37±2 ನಲ್ಲಿ 3 ತಿಂಗಳಿಗಿಂತ ಹೆಚ್ಚಿನ ಷೆಲ್ಫ್‌ಲೈಫ್ ಅನ್ನು ಹೊಂದಿರುತ್ತದೆ. ಒಣಗಿಸಲ್ಪಟ್ಟ ಕೆಂಪು ಮೆಣಸು/ಪುಡಿ ಇದು ಯೀಸ್ಟ್‌ಗಳು, ಮೌಲ್ಡ್‌ಗಳು, ಏರೋಬಿಕ್ ಮೆಸೋಫಿಲಿಕ್ ಸ್ಪೋರ್ ಅನ್ನು ನಿರ್ಮಿಸುವ ಬ್ಯಾಕ್ಟೀರಿಯಾ, ಸ್ಪೋರ್–ಅನ್ನು ನಿರ್ಮಿಸದ ಮೆಸೋಫಿಲಿಕ್ ಏರೋಬಿಕ್ ಬ್ಯಾಕ್ಟೀರಿಯಾ ಮತ್ತು ಕ್ಯಾಲಿಫೋರ್ಮ್‌ಗಳಿಂದ ಮುಕ್ತವಾಗಿರುವುದು ಕಂಡುಬಂದಿತು.

ಹಾಗಲಕಾಯಿಗೆ (Momordica charantia L) ಸಂಬಂಧಿಸಿದಂತೆ ಕಿಣ್ವಗಳ ನಿಷ್ಕ್ರಿಯೀಕರಣಕ್ಕೆ ಮತ್ತು ಒಣಗಿಸುವುದಕ್ಕಾಗಿ ಇನ್‌ಫ್ರಾರೆಡ್ (ಐಆರ್) ವಿಕಿರಣಗಳ ಹೊಂದಾಣಿಕೆಗೆ ಸಂಬಂಧಿಸಿದ ಒಂದು ಅಧ್ಯಯನವನ್ನು ನಡೆಸಲಾಯಿತು. ಐಆರ್ ಜೊತೆಗೆ ಕಿಣ್ವಗಳ ನಿಷ್ಕ್ರಿಯೀಕರಣಕ್ಕೆ 8 ನಿಮಿಷಗಳ ಅವಧಿಯು ಹಿಡಿಯಿತು, ಮತ್ತು ಈ ಅವಧಿಯು ನೀರು ಮತ್ತು ಹಬೆಯ ಬ್ಲ್ಯಾಂಚಿಂಗ್‌ಗೆ ಅನುಕ್ರಮವಾಗಿ 2/3 ನಿಮಿಷಗಳನ್ನು ತೆಗೆದುಕೊಂಡಿತ್ತು. ಐಆರ್ ಕಿಣ್ವ ನಿಷ್ಕ್ರಿಯೀಕರಣವು ಹೆಚ್ಚಿನ ಆಸ್ಕೋರ್ಬಿಕ್ ಆಮ್ಲ (93.9%) ಮತ್ತು ಕ್ಲೋರೋಫೈಲ್ (72.4%) ಅಂಶಗಳು ಕಂಡುಬರುವುದಕ್ಕೆ ಕಾರಣವಾಯಿತು. ವಾಟರ್ ಬ್ಲ್ಯಾಂಚ್ಡ್ ಮತ್ತು ಐಆರ್–ಬಿಸಿ ಗಾಳಿ ಮೂಲಕ ಒಣಗಿಸಲ್ಪಟ್ಟ ಹಾಗಲಕಾಯಿಯು ಸುಮಾರು 64% ಕ್ಯಾರಂಟೀನ್ ಅನ್ನು ಉಳಿಸಿಕೊಂಡಿತ್ತು. ಉತ್ಪನ್ನದ ವಿವರ್ಣನದ ಸೂಚ್ಯಂಕವಾದ ಬ್ರೌನಿಂಗ್ ಇಂಡೆಕ್ಸ್ ಇದು ನೀರಿನಿಂದ ವಿಭಾಗಿಸಲ್ಪಟ್ಟ ಘಟಕಗಳಲ್ಲಿ ಹೆಚ್ಚಾಗಿತ್ತು. ಕಡಿಮೆ ತೇವಾಂಶವಿರುವ ಗಾಳಿ ಅಥವಾ ಐಆರ್ ಅನ್ನು ಒಳಗೊಂಡಿರುವ ಹೈಬ್ರೀಡ್ ಒಣಗಿಸುವಿಕೆಯನ್ನು ಅನುಸರಿಸಲ್ಪಟ್ಟ ಐಆರ್ ಬ್ಲ್ಯಾಂಚಿಂಗ್ ಅನ್ನು ಸಾಂಪ್ರದಾಯಿಕವಾಗಿ ನೀರಿನ ಮೂಲಕ ಬಿಳುಪಾಗಿಸುವುದಕ್ಕೆ ಒಂದು ಪರ್ಯಾಯ ವ್ಯವಸ್ಥೆಯನ್ನಾಗಿ ಸಂಶೋಧಿಸಬಹುದು ಮತ್ತು ಒಣಗಿಸುವಿಕೆಯ ಅವಧಿಯನ್ನು ಕಡಿಮೆಗೊಳಿಸುವುದಕ್ಕೆ ಮತ್ತು ಉತ್ಪನ್ನದ ಗುಣಮಟ್ಟವನ್ನು ಸುಧಾರಿಸುವುದಕ್ಕೆ ಬಳಸಿಕೊಳ್ಳಬಹುದು ಎಂಬುದಾಗಿ ಅಧ್ಯಯನವು ಸೂಚಿಸಿತು.

ಗುಣಮಟ್ಟದ ಘಟಕಾಂಶಗಳು ಮತ್ತು ತಯಾರಿಕಾ ವಿಧಾನಗಳ ಮೂಲಕ ತಯಾರಿಸಲ್ಪಟ್ಟ ಪಿಇಟಿ/ಪಿಪಿ ಪೌಚ್‌ಗಳಲ್ಲಿ ವಾಯುಭದ್ರವಾಗಿ ಸೀಲ್ ಮಾಡಲ್ಪಟ್ಟ ಒಂದು ಪ್ಯಾಕ್‌ನಲ್ಲಿ ನಾಲ್ಕು ಸಂಖ್ಯೆಗಳಲ್ಲಿರುವ ಚಪಾತಿಗಳು ಒಂದು ಸ್ಟೀಮ್–ಏರ್ ರಿಟೋರ್ಟ್‌ನಲ್ಲಿ ಪಾಶ್ಚರೀಕರಣಕ್ಕೆ ಒಳಗಾಗಲ್ಪಡುತ್ತದೆ ಮತ್ತು ನಂತರದಲ್ಲಿ ಅದನ್ನು ತಣಿಸಲಾಗುತ್ತದೆ. 10 ನಿಮಿಷದ ಪಿ90 ಅನ್ನು 95°C ನಲ್ಲಿ 15 ನಿಮಿಷಗಳ ಸಂಸ್ಕರಣಾ ಅವಧಿಯ ಮೂಲಕ ಬಿಡುಗಡೆ ಮಾಡಲಾಗುತ್ತದೆ ಎಂಬ ಅಂಶವನ್ನು ಶಾಖ ಭೇದ್ಯ ಅಧ್ಯಯನಗಳು ತೋರಿಸಿಕೊಟ್ಟಿವೆ. ಯೀಸ್ಟ್ ಮತ್ತು ಮೋಲ್ಡ್‌ಗಳು 3 ಮತ್ತು 8°C ಉಷ್ಣಾಂಶದಲ್ಲಿ ದಾಸ್ತಾನು ಮಾಡಲ್ಪಟ್ಟ ಪಾಶ್ಚರೀಕೃತ ಮಾದರಿಗಳಲ್ಲಿ ಟಿಪಿಸಿ ಗಳು ಉತ್ತಮ ಪ್ರಮಾಣದಲ್ಲಿವೆ. ಗಾಳಿಯಿಂದ ಸುತ್ತುವರೆದ ಸ್ಥಿತಿಗಳಲ್ಲಿ ಸಂಗ್ರಹ ಮಾಡಲ್ಪಟ್ಟ ಚಪಾತಿಗಳು ಒಂದು ತಿಂಗಳ ದಾಸ್ತಾನಿನ ನಂತರದಲ್ಲಿ ಯೀಸ್ಟ್ ಮತ್ತು ಮೋಲ್ಡ್‌ಗಳಿಂದ ಹಾನಿಗೊಳಗಾಗಲ್ಪಟ್ಟಿವೆ. 3 ಮತ್ತು 8°C ಉಷ್ಣಾಂಶಗಳಲ್ಲಿ ದಾಸ್ತಾನು ಮಾಡಲ್ಪಟ್ಟ ಪಾಶ್ಚರೀಕೃತ ಚಪಾತಿಗಳು 10ನೆಯ ವಾರದ ಕೊನೆಯವರೆಗೂ ಉತ್ತಮವಾದ ಒಟ್ಟಾರೆ ಮಾನ್ಯತೆಯನ್ನು ಪಡೆದುಕೊಂಡಿವೆ ಎಂಬುದಾಗಿ ಸಂವೇದಕ ಅಧ್ಯಯನಗಳು ಬಹಿರಂಗಗೊಳಿಸುತ್ತವೆ. ಆ್ಯಂಬಿಯೆಂಟ್ ಸ್ಯಾಂಪಲ್‌ಗಳು 3ನೆಯ ವಾರದ ನಂತರದಿಂದಲೇ ಸಂವೇದಕವಾಗಿ ಮಾನ್ಯತೆಯನ್ನು ಹೊಂದಿರುವುದಿಲ್ಲ. ಈ ಅಧ್ಯಯನದಿಂದ, ಪ್ಯಾಕಿಂಗ್ ಮತ್ತು ಶೈತ್ಯೀಕರಣದ ಜೊತೆಯಲ್ಲಿ ಪಾಶ್ಚರೀಕರಣವು ಚಪಾತಿಗಳ ಷೆಲ್ಫ್ ಲೈಫ್ ಅನ್ನು 10 ವಾರಗಳವರೆಗೆ ವೃದ್ಧಿಸುತ್ತದೆ ಎಂಬುದಾಗಿ ತೀರ್ಮಾನಿಸಬಹುದು.

**ಮಾಗುವಿಕೆಯನ್ನು / ಬಾಡುವಿಕೆಯನ್ನು ನಿಯಂತ್ರಿಸುವುದು**

ಒಂದು ವಿಶಿಷ್ಟ ಸಂಧಿಕಾಲದ ಹಣ್ಣುಗಳಲ್ಲಿ ಒಂದಾದ ಬಾಳೆಹಣ್ಣಿನ ಕಟಾವಿನ–ನಂತರದ ಸಂಸ್ಕರಣೆಯಲ್ಲಿ, ಹಣ್ಣನ್ನು ಮಾಗಿಸುವುದಕ್ಕೆ ಜೀನ್‌ಗಳ ಅಪ್/ಡೌನ್–ನಿರ್ವಹಣೆಯ ಮೂಲಕ ಜೆನೆಟಿಕ್ ನಿಯಂತ್ರಣಕ್ಕೆ ರಾಸಾಯನಿಕ ಸಂಸ್ಕರಣೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತದೆ. ವಿವಿಧ ಅಭಿವೃದ್ಧಿ ನಿಯಂತ್ರಕಗಳು (ಗಿಬರೆಲಿಕ್ ಆ್ಯಸಿಡ್, ಆಕ್ಸಿನ್, ಕೈಟೋಕಿನಿನ್, ಆಬ್ಸಿಸಿಕ್ ಆ್ಯಸಿಡ್) ಮತ್ತು ಸಂಕೇತವನ್ನು ನೀಡುವ ಮಿಶ್ರಣಗಳು (ಸ್ಯಾಲಿಸಿಲಿಕ್ ಆ್ಯಸಿಡ್, ಮೀಥೈಲ್ ಜಾಸ್ಮೋನೇಟ್ ಮತ್ತು ನೈಟ್ರಿಕ್ ಆಕ್ಸೈಡ್) ಇವುಗಳನ್ನು ಒಟ್ಟಾರೆ ಮಾಗುವಿಕೆಯನ್ನು ಮುಂದೂಡುವ ಅಂಶಕ್ಕೆ ಸಂಬಂಧಿಸಿದಂತೆ ಅವುಗಳ ಎಥೈಲೀನ್ ಅಂತರ್ಗತ ಪರಿಣಾಮಗಳಿಗಾಗಿ ಪರೀಕ್ಷೆಯನ್ನು ನಡೆಸಲಾಯಿತು. ಸೆಲ್ ವಾಲ್ ಹೈಡ್ರೋಲಿಸಿಸ್ (ಪಾಲಿಗ್ಯಾಲಕ್ಟರೋನೇಸ್, ಪೆಕ್ಟೇಟ್ ಲೈಯೇಸ್, ಪೆಕ್ಟಿನ್ ಮೀಥೈಲ್ ಈಸ್ಟರೇಸ್, ಬಿ–ಗ್ಯಾಲಕ್ಟುರೋನೇಸ್, ಎಕ್ಸ್‌ಪಾನ್ಸಿನ್ಸ್ ಮತ್ತು ಚಿಟಿನೇಸ್), ಕಾರ್ಬೋಹೈಡ್ರೇಟ್ ಚಯಾಪಚಯ ಕ್ರಿಯೆ (ಸುಕ್ರೋಸ್ ಸಿಂಥೇಸ್, ಸುಕ್ರೋಸ್ ಫಾಸ್ಪೇಟ್ ಸಿಂಥೇಸ್, ಎ–ಅಮೈಲೇಸ್, ಬಿ–ಅಮೈಲೇಸ್, ಈಥೈಲೀನ್‌ಪಾಥ್‌ವೇ (1–ಅಮಿನೋಸೈಕ್ಲೋಪ್ರೊಪೇನ್–1–ಕಾರ್ಬೋಕ್ಸೈಲಿಕ್ ಆ್ಯಸಿಡ್ ಸಿಂಥೇಸ್, 1–ಅಮಿನೋಸೈಕ್ಲೋಪ್ರೊಪೇನ್–1–ಕಾರ್ಬೋಕ್ಸೈಲಿಕ್ ಆ್ಯಸಿಡ್ ಆಕ್ಸಿಡೇಸ್), ಈಥೈಲೀನ್ ಸಂಕೇತ ಗ್ರಹಣ ಮತ್ತು ಟ್ರಾನ್ಸ್‌ಡಕ್ಷನ್ (CTR1, ERS-1, ERS-2, EIL-1, EIL-2, EIL-3, EIL-4, MADS-1, MADS-2, MADS-4 and MADS-6), ಸಿನೆಸನ್ಸ್ (ಕ್ಯಾಟಲೇಸ್, ಪೆರಾಕ್ಸಿಡೇಸ್, ಎಸ್‌ಒಡಿ, ಪಿಎಎಲ್) ನಂತಹ ಬಯೋಕೆಮಿಕಲ್ ಮತ್ತು ಬಯೋಫಿಸಿಕಲ್ ಕ್ರಿಯೆಗಳ ವ್ಯತಿರಿಕ್ತವಾದ ವರ್ಗವು ಸಂಯೋಜಿತವಾಗಿರುವಂತಹ ಜೀನುಗಳ ಅಭಿವ್ಯಕ್ತಿ ಮಾದರಿಯನ್ನು ಅಧ್ಯಯನ ಮಾಡಲಾಯಿತು. ಜೀನುಗಳ ವೈಯಕ್ತಿಕ ವರ್ಗದ ಅಭಿವ್ಯಕ್ತಿ ಮಾದರಿಯ ಮೇಲೆ ವೈಯುಕ್ತಿಕ ಅಭಿವೃದ್ಧಿ ನಿಯಂತ್ರಣ / ಸಂಕೇತ ನೀಡುವಿಕೆಯ ಸಂಯುಕ್ತದ ಪರಿಣಾಮವನ್ನು ವಿಮರ್ಶಿಸಲಾಯಿತು. ಮಾಹಿತಿಗಳ ಜೆನೆಟಿಕ್ ಅಭಿವ್ಯಕ್ತಿಯನ್ನು ಆಧರಿಸಿ, ಹಣ್ಣಿನ ಮಾಗುವಿಕೆಗೆ ಸಂಬಂಧಿಸಿದಂತೆ ಕೈಟೋಸನ್ ಸಹಿತ ಮತ್ತು ಕೈಟೋಸನ್ ರಹಿತ ಫೈಟೋಹಾರ್ಮೋನ್ಸ್ ಮತ್ತು ಸಿಗ್ನಲಿಂಗ್ ಸಂಯುಕ್ತಗಳ ವಿವಿಧ ಫಾರ್ಮುಲೇಷನ್‌ಗಳ ಕಾರ್ಯದಕ್ಷತೆಯನ್ನು ವಿಶ್ಲೇಷಿಸಲಾಯಿತು.

ಮ್ಯಾಚೂರ್ ಅನ್‌ರೈಪ್ ಮತ್ತು ಬ್ರೇಕರ್ ಹಂತಗಳಲ್ಲಿ ಕಟಾವು ಮಾಡಲ್ಪಟ್ಟ ಪಪ್ಪಾಯಾ ಹಣ್ಣುಗಳಿಗೆ ಮ್ಯೂಸಿಲಿಜ್ ಎಮಲ್ಷನ್‌ನಲ್ಲಿ ಡಿಪ್ ಟ್ರೀಟ್‌ಮೆಂಟ್ (30 s) ಅನ್ನು ನೀಡಲಾಯಿತು, ಇದನ್ನು *Opuntia dillenii* ಯ ಕ್ಲ್ಯಾಡೋಡ್ (ರೂಪಾಂತರಿತ ಸ್ಟೆಮ್) ದಿಂದ ಪಡೆದುಕೊಳ್ಳಲಾಯಿತು ಮತ್ತು ಆರ್‌ಟಿ ಅಲ್ಲಿ ಸಂಗ್ರಹಿಸಲಾಯಿತು. ಸ್ವರೂಪ ಮತ್ತು ಬಣ್ಣದಲ್ಲಿನ ಬದಲಾವಣೆಗಳು ಈ ಎರಡೂ ಹಂತಗಳಲ್ಲಿ ಮಾಗುವಿಕೆಯಲ್ಲಿನ ವಿಳಂಬವನ್ನು ಸೂಚಿಸಿತು.

ಬ್ರೇಕರ್ ಹಂತದಲ್ಲಿ ಕಟಾವು ಮಾಡಲ್ಪಟ್ಟ ಚೆನ್ನಾಗಿ ಬೆಳೆದ ಟೊಮ್ಯಾಟೋಗಳನ್ನು ಯುಜೆನಾಲ್‌ನ (400 ಪಿಪಿಎಮ್) ಎಮಲ್ಷನ್‌ಗಳಲ್ಲಿ ಮುಳುಗಿಸಿ ಇಡಲಾಯಿತು. ಮಾಗುವಿಕೆಯಲ್ಲಿ ಪ್ರಾಥಮಿಕ ವಿಳಂಬವು 3 ದಿನಗಳವರೆಗೆ ಇರುವುದು ಕಂಡುಬಂದಿತು. ಬಹುಶಃ ಹೊಸ ಈಥೈಲಿನ್ ರಿಸಿಪ್ಟರ್‌ಗಳ ಪುನರುತ್ಪತ್ತಿಯು ಕಾರಣದಿಂದಾಗಿ ಮಾಗುವಿಕೆಯಲ್ಲಿ ಬದಲಾವಣೆಯು 3 ದಿನಗಳ ನಂತರ ನಡೆಯುತ್ತಿರುವುದು ಕಂಡುಬಂದಿತು. 4ನೆಯ ಮತ್ತು 6ನೆಯ ದಿನದಲ್ಲಿ ಯುಜೆನಾಲ್‌ನ ಪುನರಾವರ್ತಿತ ಅನ್ವಯಿಕೆಯು ಮಾಗುವಿಕೆಯಲ್ಲಿ ವಿಳಂಬತ್ವವನ್ನು ಅನುಕ್ರಮವಾಗಿ 28% ಮತ್ತು 24% ದವರೆಗೆ ಹೆಚ್ಚಿಸಿತು. ಇಥರೆಲ್ ಅನ್ನು ಬಳಸಿ ಸಂಸ್ಕರಿಸಲ್ಪಟ್ಟ ಹಣ್ಣುಗಳನ್ನು ಸಕಾರಾತ್ಮಕ ನಿಯಂತ್ರಣಗಳಿಗಾಗಿ ಬಳಸಿಕೊಳ್ಳಲಾಗುತ್ತದೆ.

**ಆಹಾರ ಸಂರಕ್ಷಣೆಗೆ ಬಯೋಪಾಲಿಮರ್‌ಗಳು**

ಕೀಟನಾಶಕ ಚಟುವಟಿಕೆಗಳಿಗಾಗಿ ಸುಮಾರು 20 ಪ್ರಮುಖ ಎಣ್ಣೆಗಳನ್ನು ಸಂಸ್ಕರಿಸಲಾಯಿತು ಮತ್ತು ರೈಸ್ ವೀವಿಲ್, ಸೈಟೋಫಿಲಸ್ ಒರೈಜಿಗಳ ಮೇಲೆ ಅವುಗಳನ್ನು ಪರೀಕ್ಷಿಸಲಾಯಿತು ಮತ್ತು ಈ ಕ್ರಿಯೆಯು ಪ್ರಮಾಣವನ್ನು ಅವಲಂಬಿಸಿರುವುದು ಕಂಡುಬಂದಿತು. ಆದಾಗ್ಯೂ, 50 ಮತ್ತು 100 μL ಸಾಂದ್ರತೆಗಳಲ್ಲಿ ಹೆಚ್ಚಿನ ಕೀಟನಾಶಕ ಚಟುವಟಿಕೆಯು ಕಂಡುಬಂದಿತು. ಅತ್ಯಂತ ಹೆಚ್ಚು ಚಟುವಟಿಕೆಯು ಲ್ಯಾವೆಂಡರ್, ಜೀರಿಗೆ, ಅಜ್‌ವಾನ್, ಲವಂಗ, ಪಚೋಲಿ, ಒರೆಗೆನೋ, ರೋಸ್‌ಮೆರಿ, ಪೆಪ್ಪರ್ ಮಿಂಟ್ ಮತ್ತು ಕ್ಯಾರವೇ (ಸೀಮೆಸೋಂಪು) ಎಣ್ಣೆಗಳಲ್ಲಿ ಕಂಡುಬಂಡಿತು. 24 ಗಂಟೆಗಳ ಎಕ್ಸ್‌ಪೋಷರ್ ಜೊತೆಗೆ ಈ ಎಣ್ಣೆಗಳಲ್ಲಿ ಈ ಪ್ರಕ್ರಿಯೆಯು 100% ಇರುವುದು ಬೆಳಕಿಗೆ ಬಂದಿತು.

ಮಣ್ಣಿನಿಂದ ಪ್ರತ್ಯೇಕಿಸಲ್ಪಟ್ಟ ಆಕ್ಟಿನೋಮೈಸೆಟ್‌ಗಳ ಹತ್ತು ವಿಧಗಳ ವಿಭಿನ್ನ ದ್ರಾವಕಗಳ ಜೊತೆಗಿನ ಉದ್ಧರಣಗಳನ್ನು ಎಸ್. ಒರೈಜ್ ಗೆ ಪ್ರತಿಯಾಗಿ ಅವುಗಳ ಸಂಭಾವ್ಯ ಕೀಟನಾಶಕ ಗುಣಗಳನ್ನು ನಿರ್ಧರಿಸುವುದಕ್ಕೆ 1000 ಪಿಪಿಎಮ್ ನಲ್ಲಿ ಪರಿಶೀಲಿಸಲಾಯಿತು. ಡಿಟಿಎಸ್–6 ನ ಈಥೈಲ್ ಆ್ಯಸಿಟೇಟ್ ಉದ್ಧರಣವು ಎಸ್. ಒರೈಜ್‌ನ 90% ನಷ್ಟ ಪ್ರಮಾಣವನ್ನು ಪ್ರದರ್ಶಿಸುವ ಮೂಲಕ ಭರವಸಾದಾಯಕ ಕೀಟನಾಶಕ ಚಟುವಟಿಕೆಯನ್ನು ಬಹಿರಂಗಗೊಳಿಸಿತು. ಡಿಟಿಎಸ್–6 ಇದನ್ನು 10ಎಲ್ ಫರ್ಮಂಟರ್‌ಗಳಲ್ಲಿ ಬೆಳೆಯಲಾಗುತ್ತದೆ. ಡಿಎಮ್‌ಎಸ್‌ಒ ನಲ್ಲಿ ಮೈಸಿಲಿಯಾವನ್ನು ಆವಿಗೊಳಿಸಿದ ಮತ್ತು ರೀಸಸ್ಪೆಂಡ್ ಮಾಡಲ್ಪಟ್ಟ ಈಥೈಲ್ ಆ್ಯಸಿಟೇಟ್ ಉದ್ಧರಣವನ್ನು ಸಿ18 ಕಾಲಮ್ ಮತ್ತು ಆ್ಯಸಿಟೋನೈಟ್ರಿಲ್:ನೀರು (1:1) ಪ್ರಮಾಣವನ್ನು ಬಳಸಿಕೊಂಡು ಪ್ರಿಪರೇಟೀವ್ ಎಚ್‌ಪಿಸಿಎಲ್ ಅಡಿಯಲ್ಲಿ ವಿಂಗಡನೆ ಮಾಡಲಾಗುತ್ತದೆ. ಪಡೆದುಕೊಂಡ ಎರಡು ಭಾಗಗಳಲ್ಲಿ, ಪಿ2 ಇದು ಪಿ1 ಗಿಂತ ಹೆಚ್ಚು ಪರಿಣಾಮಕಾರಿಯಾಗಿರುವುದು ಕಂಡುಬಂದಿತು. 7 ದಿನಗಳ ಅವಧಿಯಲ್ಲಿ ಎಲ್ಲಾ ಕಿಟಗಳು ಸಂಪೂರ್ಣ ನಾಶವಾಗುತ್ತಿರುವುದು ಕಂಡುಬಂದಿತು. 2.0 μl/ cm2 ನಲ್ಲಿ 24ಎಚ್ ಮೂಲಕ 0.5, 1.0, 1.5, 2.0 ಮತ್ತು 2.5 μl/ cm2 ಸಾಂದ್ರತೆಗಳಲ್ಲಿ ಎರಡು ಉದ್ಧರಣಗಳ ಜೊತೆಗೆ ನಡೆಸಲ್ಪಟ್ಟ ಕಾಂಟ್ಯಾಕ್ಟ್ ಅಧ್ಯಯನಗಳು 100% ಕೀಟಗಳ ನಾಶವನ್ನು ಬಹಿರಂಗಗೊಳಿಸಿದವು.

ಪ್ರಮುಖವಾಗಿ ಬೀಜಕಗಳ ಅಂಕುರಣ, ಬೆಳವಣಿಗೆಯ ಪ್ರತಿರೋಧಕತೆ, ಎಮ್‌ಐಸಿ, ಎಮ್‌ಎಫ್‌ಸಿ ಗಳಲ್ಲಿ ಇನ್ ವಿಟ್ರೋ ವಿಧಾನಗಳ ಮೂಲಕ ಮೈಕೋಟಾಕ್ಸಿಜೆನಿಕ್ ಶಿಲೀಂಧ್ರದ ಬೆಳವಣಿಗೆಯ ಪ್ರತಿಬಂಧಕತೆಯ ಬಗ್ಗೆ ಕಾರ್ವಾಕ್ರೋಲ್ ಮತ್ತು ಥೈಮೋಲ್‌ಗಳ ಪರಿಣಾಮದ ಅಧ್ಯಯನಗಳನ್ನು ನಡೆಸಲಾಯಿತು. ಕಾರ್ವಾಕ್ರೋಲ್ ಮತ್ತು ಥೈಮೋಲ್‌ಗಳು ಅನುಕ್ರಮವಾಗಿ 50 μM, 60 μM ಮತ್ತು 50 μM, 75 μM ಗಳಲ್ಲಿ *A. flavus* ಮತ್ತು *A. ochraceus* ಗಳ ಮೇಲೆ ಪರಿಣಾಮಕಾರಿಯಾಗಿವೆ ಎಂಬ ಅಂಶವು ಕಂಡುಬಂದಿತು. ಒಣಗಿದ ಮೆಣಸಿನಕಾಯಿಗಳ ಮೇಲೆ ಪ್ರತಿರೋಧಕ ಅಧ್ಯಯನಗಳನ್ನೂ ಕೂಡ ನಡೆಸಲಾಯಿತು. ಇವುಗಳು ಮೆಣಸಿನಕಾಯಿ ಸಬ್‌ಸ್ಟ್ರೇಟ್‌ನಲ್ಲಿ 100 μM ನಲ್ಲಿ ಮೈಕ್ರೋಟಾಕ್ಸಿಜೆನಿಕ್ ಶಿಲೀಂಧ್ರಗಳ ಮೇಲೆಯೂ ಕೂಡ ಪರಿಣಾಮಕಾರಿಯಾಗಿರುವುದು ಕಂಡುಬಂದಿತು.

ಗುರುತಿಸಲ್ಪಟ್ಟ 10 ಸುವಾಸನಾಯುಕ್ತ ಸಂಯುಕ್ತಗಳು ಹಾಗೆಯೇ ಹತ್ತು ಮುಖ್ಯ ಎಣ್ಣೆಗಳನ್ನು ಕೊಲೆಕ್ಟೋಟ್ರೈಕಮ್‌ನ ಎರಡು ಎಸ್‌ಪಿಪಿ. ಗೆ ಪ್ರತಿಯಾಗಿ ಅವುಗಳ ಶಿಲೀಂಧ್ರ ಅಥವಾ ಫಂಗಲ್ ವಿರೋಧಿ ಚಟುವಟಿಕೆಯನ್ನು ಗುರುತಿಸುವುದಕ್ಕೆ ಪರೀಕ್ಷಿಸಲಾಯಿತು, ಆಂಥ್ರಾಕ್ನೋಸ್ ರೋಗಕ್ಕೆ ಕಾರಣ ಎಂದು ಗುರುತಿಸಲ್ಪಟ್ಟ ಕೊಲೆಕ್ಟೋಟ್ರೈಕಮ್ ಇದು ಮಾವಿನ ಬೆಳೆಗಳಲ್ಲಿ ಕಂಡುಬರುವ ಕಟಾವಿನ ನಂತರದ ಒಂದು ಗಂಭೀರ ರೋಗವಾಗಿದೆ. ಸಿಟ್ರಲ್, ನ್ಯಾನೋಲಲ್ ಮತ್ತು ಫಿನೈಲ್ ಆ್ಯಸಿಟಲ್‌ಡೀಹೈಡ್ ಇದು ಪ್ಯಾಥೋಜೆನ್‌ನ ಸಂಪೂರ್ಣ ಪ್ರತಿಬಂಧಕತೆಯನ್ನು ತೋರಿಸುತ್ತದೆ.

ಯೀಸ್ಟ್ ಮತ್ತು ಲ್ಯಾಕ್ಟಿಕ್ ಆಮ್ಲದ ಬ್ಯಾಕ್ಟೀರಿಯಾಗಳ ಸಂಯೋಜನೆಯ ಮೂಲಕ ಅಫ್ಲಾಟಾಕ್ಸಿನ್‌ಗಳು ಕಲುಷಿತವಾಗುತ್ತವೆ ಎಂಬುದು ತಿಳಿದುಬಂದಿದೆ. ಯೀಸ್ಟ್ ಕೋಶದ ಅಫ್ಲಾಟಾಕ್ಸಿನ್ ಬಂಧಿಸುವಿಕೆ (*Saccharomyces cerevisiae* 101) ಮತ್ತು ಶುದ್ಧ ಬಾರ್ಲಿ ಗ್ಲ್ಯೂಕನ್‌ಗಳ ನಡುವೆ ತುಲನೆಯನ್ನು ಮಾಡಿ ನೋಡಲಾಯಿತು. ಎಎವಿ2 ಅನ್ನು ಹೊರತುಪಡಿಸಿ ಇತರ ಯೀಸ್ಟ್ ಕೋಶಗಳು ಅಫ್ಲಾಟಾಕ್ಸಿನ್‌ಗೆ ಹೆಚ್ಚಿನ ಪ್ರತಿಬಂಧಕ ಸಂಭಾವ್ಯತೆಯನ್ನು ಹೊಂದಿವೆ ಎಂಬ ಅಂಶವು ತಿಳಿದುಬಂದಿತು. ಸ್ಯಾಕರೋಮೈಸಸ್ ಸ್ಟ್ರೇನ್‌ಗಳು (AAV2 and 101) ಮತ್ತು ಸ್ಯಾಕರೋಮೈಸಸ್ ಅಲ್ಲದ ಸ್ಟ್ರೇನ್‌ಗಳು (*Candida* ಮತ್ತು *Hanseniospora*) ಇವೆರಡೂ ಪ್ರತಿಬಂಧಕ ಮಾದರಿಗಳನ್ನು ನಿರ್ಧಾರ ಮಾಡುವ ಸಲುವಾಗಿ ಫ್ಲ್ಯೂರೋಸೆನ್ಸ್ ಮೈಕ್ರೋಸ್ಕೋಪಿಗೆ ಒಳಪಡುತ್ತವೆ.

ಮೀನಿನ ಚರ್ಮ ಮತ್ತು ಮೂಳೆಯ ಮೌಲ್ಯವರ್ಧನೆಯ ಸಲುವಾಗಿ ಮೀನಿನ ಚರ್ಮದಿಂದ ಗೆಲಟಿನ್ ಅನ್ನು ಪಡೆದುಕೊಳ್ಳುವ ಬಗೆಗಿನ ಅಧ್ಯಯನಗಳನ್ನು ಕೈಗೆತ್ತಿಕೊಳ್ಳಲಾಯಿತು. ಖನಿಜ ಆಮ್ಲಗಳಿಗೆ ತುಲನೆ ಮಾಡಿ ನೋಡಿದಾಗ ಜೈವಿಕ ಆಮ್ಲಗಳ ಸಂಯೋಜನದ ಮೂಲಕ ಚರ್ಮದ ಸಂಸ್ಕರಣೆಯು ಕಡಿಮೆ ಪ್ರಮಾಣದ ಗೆಲಟಿನ್ ಅನ್ನು ಒದಗಿಸಿತು. ಗೆಲಟಿನ್ ಪ್ರಮಾಣವು ಒದ್ದೆ ಚರ್ಮಕ್ಕಿಂತ ಒಣ ಚರ್ಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿತ್ತು. ಆಮ್ಲದ ಸಾಮಾನ್ಯ ಗುಣ, ಆಮ್ಲ ಪೂರ್ವ–ಸಂಸ್ಕರಣ ಅವಧಿ, ಪಡೆದುಕೊಳ್ಳುವ ತಾಪಮಾನ ಮತ್ತು ಪಡೆದುಕೊಳ್ಳುವ ಅವಧಿಗಳನ್ನು ಪರಿಗಣಿಸುವುದರ ಜೊತೆಗೆ ಮೀನಿನ (tilapia) ಚರ್ಮದಿಂದ ಗೆಲಟಿನ್ ಅನ್ನು ಪಡೆದುಕೊಳ್ಳುವುದಕ್ಕೆ ಫ್ರಾಕ್ಷನಲ್ ಫ್ಯಾಕ್ಟೋರಿಯಲ್ ಡಿಸೈನ್ ಮೂಲಕ ಪ್ರಕ್ರಿಯೆಯ ಸಂದರ್ಭಗಳನ್ನು ಗರಿಷ್ಠಗೊಳಿಸಲಾಯಿತು.

**II. ವೆಲ್‌ನೆಸ್ ಥ್ರೂ ಫುಡ್ಸ್ ಎಂಡ್ ನ್ಯೂಟ್ರಾಸ್ಯುಟಿಕಲ್ಸ್ (ಆಹಾರಗಳು ಮತ್ತು ನ್ಯೂಟ್ರಾಸ್ಯುಟಿಕಲ್‌ಗಳ ಮೂಲಕ ಆರೋಗ್ಯ) (WELFO)** (ಶ್ರೀದೇವಿ ಎ. ಸಿಂಗ್)

ಮಾನಸಿಕ ಅಸ್ವಸ್ಥತೆ ಮತ್ತು ಜನನಕ್ಕೆ ಸಂಬಂಧಿಸಿದ ತೊಂದರೆಗಳನ್ನುಂಟುಮಾಡುವಂತಹ ಸ್ಥೂಲಕಾಯತ್ವಕ್ಕೆ ಸಂಬಂಧಿಸಿದ ಪ್ಯಾಥೋಲಜಿಗಳ ಜೊತೆಗೆ ಅನೀಮಿಯಾ, ಸತು, ವಿಟಾಮಿನ್ ಎ ಮತ್ತು ಅಯೋಡಿನ್ ಕೊರತೆಗಳು ಭಾರತದಲ್ಲಿ ಕಂಡುಬರುವ ಪ್ರಮುಖ ಪೋಷಕಾಂಶದ ಕೊರತೆ / ಮಿತಿಮೀರಿದ ಪೋಷಕಾಂಶದ ಅಸ್ವಸ್ಥತೆಗಳಾಗಿವೆ. ಜನನ ತೊಂದರೆಗಳು ಮಾನಸಿಕ, ಮೂಳೆ, ಸ್ವಾಸ್ಥ್ಯ, ಕರುಳಿನ ಆರೋಗ್ಯ ಹಾಗೆಯೇ ಚಯಾಪಚಯ ಕ್ರಿಯೆಗಳ ಸ್ವರೂಪ ಮತ್ತು ಕಾರ್ಯನಿರ್ವಹಣೆಯಲ್ಲಿ ಬದಲಾವಣೆಯನ್ನುಂಟು ಮಾಡುವಂತಹ ಅಂಶಗಳನ್ನು ಒಳಗೊಳ್ಳುತ್ತವೆ. ತಂತ್ರಜ್ಞಾನದ ಕಾರಣದಿಂದಾಗಿ ಉಂಟಾದ ಬದಲಾವಣೆಗಳು, ಆಧುನಿಕ ಜೀವನಶೈಲಿಗಳು ಮತ್ತು ಆಹಾರ ಕ್ಷೇತ್ರದಲ್ಲಿನ ಹೊಸ ಸಂಶೊಧನೆಗಳು ಪ್ರಸ್ತುತದ ಮೈಕ್ರೋನ್ಯೂಟ್ರಿಯೆಂಟ್ ಕೊರತೆಯ ಸಮಸ್ಯೆಯ ಜೊತೆಗೆ ಇತರ ಸಮಸ್ಯೆಗಳಾದ – ಹೆಚ್ಚಿನತೂಕ / ಸ್ಥೂಲಕಾಯತೆ ಮತ್ತು ಅದಕ್ಕೆ ಸಂಬಂಧಿಸಿದ ರೋಗಗಳು ಗೊಂದಲವನ್ನುಂಟುಮಾಡಿವೆ. ಪೋಷಕಾಂಶದ ಕೊರತೆ ಮತ್ತು ಸ್ಥೂಲಕಾಯತೆಯ ಸಮಸ್ಯೆ ಇವೆರಡೂ ಕೂಡ ಜಿಡಿಪಿ ಯ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತವೆ ಮತ್ತು ಆರೋಗ್ಯ ರಕ್ಷಣೆಯ ಮೇಲೆ ಸಾಕಷ್ಟು ಹಣವನ್ನು ವ್ಯಯಿಸಲಾಗುತ್ತಿದೆ. ಭಾರತದ ಅತ್ಯುತ್ತಮವಾದ ಜೈವಿಕವೈವಿಧ್ಯತೆಯು ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ಲಭ್ಯವಿರುವ ಅವಕಾಶಗಳನ್ನು ಗುರುತಿಸುವುದಕ್ಕೆ ಮತ್ತು ಬಯೋಮಾಲಿಕ್ಯೂಲ್‌ಗಳನ್ನು ಆಯ್ಕೆಮಾಡಿಕೊಳ್ಳುವುದಕ್ಕೆ ಮತ್ತು ಅವುಗಳನ್ನು ನಿರಂತರವಾಗಿ ಉತ್ಪತ್ತಿ ಮಾಡುವುದಕ್ಕೆ ಸಹಾಯ ಮಾಡುತ್ತದೆ. ಸಂಶೋಧನಾ ವಿಧಾನವು ಶರೀರವೈಜ್ಞಾನಿಕ ಚಟುವಟಿಕೆಗಳ ನಿರ್ವಹಣೆಯಲ್ಲಿನ ಆಹಾರಕ್ರಮದ ಕ್ರಿಯೆಗಳನ್ನು ಒಳಗೊಳ್ಳುತ್ತದೆ ಮತ್ತು ಮಸಾಲೆ ಪದಾರ್ಥಗಳು, ಹಣ್ಣುಗಳು, ತರಕಾರಿಗಳು ಮತ್ತು ಇತರ ಪ್ರಮುಖ ಆಹಾರ ವಸ್ತುಗಳನ್ನು ಮತ್ತು ವ್ಯಾಪಕವಾದ ಆಹಾರ ಮೂಲಗಳನ್ನು ಒಳಗೊಳ್ಳುತ್ತದೆ. ವೈಜ್ಞಾನಿಕವಾಗಿ ಸಿಂಧುವಾದ ಆಹಾರ ವಸ್ತುಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಅಣುಗಳ ಮತ್ತು ಜೆನೆಟಿಕ್ ಮಟ್ಟದಲ್ಲಿ ಆರೋಗ್ಯ ಮತ್ತು ರೋಗರುಜಿನಗಳ ಮೇಲೆ ಪೌಷ್ಟಿಕಾಂಶದ ಪರಿಣಾಮದ ಬಗ್ಗೆ ತಿಳಿದಿರುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಹೃದಯುದ ಚಯಾಪಚಯ ರೋಗಗಳಿಗೆ ಮತ್ತು ಸಾಮಾನ್ಯ ಆರೋಗ್ಯಕ್ಕಾಗಿ ಸಾಂಪ್ರದಾಯಿಕ ಆರೋಗ್ಯ ಕ್ರಮಗಳ ಪ್ರಸ್ತುತತೆಯನ್ನು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಪ್ರಚಲಿತಕ್ಕೆ ತರುವುದು ಮತ್ತು ಕಾರ್ಯಾತ್ಮಕ ಆಹಾರಗಳನ್ನು ಉತ್ಪಾದಿಸುವುದಕ್ಕೆ ಈ ಜ್ಞಾನವನ್ನು ಬಳಸಿಕೊಳ್ಳುವುದು ಇದರ ಮುಖ್ಯ ಉದ್ದೇಶ ಮತ್ತು ಗುರಿಯಾಗಿದೆ. ಈ ಯೋಜನೆಯು ಇನ್ ವಿಟ್ರೋ ಕೋಶ ಸ್ವರೂಪ ಮತ್ತು ಇನ್ ವಿವೋ ಮಾದರಿಗಳಲ್ಲಿ ಕೌಶಲಯುಕ್ತವಾಗಿ ಅಭಿವೃದ್ಧಿಗೊಳಿಸಲ್ಪಟ್ಟ ಬಯೋ–ಮಾರ್ಕರ್‌ಗಳನ್ನು ಆಧರಿಸಿರುವ ಕ್ರಿಯೆಗಳನ್ನು ಕಾರ್ಯರೂಪಕ್ಕೆ ತರುವಿಕೆಯ ವಿಧಾನವನ್ನು ಅಧ್ಯಯನ ಮಾಡಿದ ನಂತರದಲ್ಲಿ ಮೈಕ್ರೋನ್ಯೂಟ್ರಿಯೆಂಟ್ ಫೋರ್ಟಿಫೈಡ್ ಆಹಾರಗಳು, ವಿಶಿಷ್ಟ ಆಹಾರಗಳಾದ ಕಡಿಮೆ ಜಿಐ ಆಹಾರಗಳು ಮತ್ತು ಸಕಾರಾತ್ಮಕ ಕಾರ್ಡಿಯೋಮೆಟಾಬೊಲಿಕ್ ಪರಿಣಾಮಗಳನ್ನು ಹೊಂದಿರುವ ಕಾರ್ಯಾತ್ಮಕ ಆಹಾರಗಳ ಅಭಿವೃದ್ಧಿಗೊಳಿಸುವಿಕೆಯಲ್ಲಿ ಮೇಲ್ಮುಖವಾಗಿ ಬೆಳೆಯುತ್ತಿದೆ. ಈ ಯೋಜನೆಯಡಿಯಲ್ಲಿ ನಿರ್ವಹಿಸಲ್ಪಟ್ಟ ಉದ್ದೇಶಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

**ಕಾರ್ಯಾತ್ಮಕ ಅಂಶಗಳನ್ನು ಹೊಂದಿರುವ ಆಹಾರ ವ್ಯವಸ್ಥೆಗಳು / ಉತ್ಪನ್ನಗಳನ್ನು ಜೀವನಶೈಲಿಯ ಅಸ್ವಸ್ಥತೆಗಳನ್ನು ಹೋಗಲಾಡಿಸುವ ಉದ್ದೇಶವನ್ನು ಹೊಂದಿವೆ**

ಸ್ಥೂಲಕಾಯತೆಯು ಮೆಟಾಬೊಲಿಕ್ ಸಿಂಡ್ರೋಮ್ ಮತ್ತು ಜೀವನಶೈಲಿಯ ಅಸ್ವಸ್ಥತೆಗಳಾದ ಡಯಾಬಿಟೀಸ್ ಮತ್ತು ಕಾರ್ಡಿಯೋವ್ಯಾಸ್ಕ್ಯುಲರ್ ಅಸ್ವಸ್ಥತೆಗಳಿಗೆ ಕಾರಣವಾಗುವ ಒಂದು ಅಂಶವಾಗಿದೆ. ಹಲವಾರು ಕಡಿಮೆ ಕ್ಯಾಲರಿಗಳುಳ್ಳ ಉತ್ಪನ್ನಗಳು ಮತ್ತು ಜೈವಿಕಕ್ರಿಯಾಶೀಲ ಅಂಶಗಳು ಸ್ಥೂಲಕಾಯತೆ–ವಿರೋಧಿ ಆಹಾರಗಳು, ಕಡಿಮೆ ಕ್ಯಾಲರಿಗಳುಳ್ಳ ಆಹಾರಗಳು ಮತ್ತು ಕಡಿಮೆ ಗ್ಲೈಸೆಮಿಕ್ ಇಂಡೆಕ್ಸ್ ಆಹಾರಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಹಾಯ ಮಾಡುತ್ತವೆ ಎಂಬುದಾಗಿ ಗುರುತಿಸಲಾಗಿದೆ.

ಗ್ರೇಪ್‌ಫ್ರುಟ್ ಮತ್ತು ದಾಸವಾಳಗಳು ಸ್ಥೂಲಕಾಯತೆ–ವಿರೋಧಿ ಅಂಶಗಳಿಗಾಗಿ ಪ್ರಾಮುಖ್ಯತೆಯನ್ನು ಹೊಂದಿವೆ. ಹಲವಾರು ಎಬಯೋಟಿಕ್ ಪ್ರಚೋದನಕಾರಿಗಳಾದ ಸ್ಯಾಲಿಸೈಕ್ಲಿಕ್ ಆಮ್ಲ ಮತ್ತು ಪ್ರಮುಖ ಫೈಟೋಕೆಮಿಕಲ್‌ಗಳಾದ ಫಿನೋಲಿಕ್ ಆಮ್ಲಗಳು ಮತ್ತು ಆ್ಯಂಥೋಸಿಯಾನಿನ್‌ಗಳ ಹೆಚ್ಚುತ್ತಿರುವ ಅಂಶಗಳ ಮೇಲಿನ ಉಷ್ಣಾಂಶಗಳು ಪ್ರಯೋಗಗಳಲ್ಲಿ ಯಶಸ್ವಿಯಾಗಿವೆ. ಆ್ಯಂಥೋಸಿಯಾನಿನ್‌ಗಳ ಗುರುತಿಸುವಿಕೆ ಮತ್ತು ಅಂತರ್ಗತ ಪ್ಯಾಂಕ್ರಿಯಾಟಿಕ್ (ಮೇದೋಜೀರಕ) ಲೈಪೇಸ್ ಚಟುವಟಿಕೆಗೆ ಸಂಬಂಧಿಸಿದಂತೆ ಅವುಗಳ ಸಾಮರ್ಥ್ಯಗಳ ಗುರುತಿಸುವಿಕೆಯ ಕ್ರಿಯೆಗಳನ್ನು ನಿರ್ವಹಿಸಲಾಗಿದೆ.

0–10% ಹಂತಗಳವರೆಗೆ ತುಪ್ಪ ಮತ್ತು ವನಸ್ಪತಿಯನ್ನು ತಿನ್ನಿಸಲ್ಪಟ್ಟ ವೀನ್‌ಡ್ ಇಲಿಗಳಿಂದ ಪಡೆದುಕೊಂಡ ರಕ್ತ ಮತ್ತು ಸೀರಮ್‌ಗಳ ಮೇಲೆ ಕೊಲೆಸ್ಟರಾಲ್, ಕೊಬ್ಬಿನ ಆಮ್ಲಗಳು ಮತ್ತು ಲಿಪಿಡ್ ಪ್ರೀಆಕ್ಸಿಡೇಷನ್‌ಗಾಗಿ ವಿಶ್ಲೇಷಣೆಯನ್ನು ನಡೆಸಲಾಯಿತು. ಜೀವರಾಸಾಯನಿಕ ಮತ್ತು ಜೀನ್ ಅಭಿವ್ಯಕ್ತಿಗಳ ಅಧ್ಯಯನಗಳಿಗಾಗಿ ಮೂತ್ರಪಿಂಡ, ಹೃದಯ ಮತ್ತು ಎಡಿಪೋಸ್ ಅಂಗಾಂಶಗಳನ್ನು ವಿಶ್ಲೇಷಿಸಲಾಯಿತು. ತುಪ್ಪವನ್ನು ತಿನ್ನಿಸಲ್ಪಟ್ಟ ಪ್ರಾಣಿಗಳಲ್ಲಿ ಒಟ್ಟೂ ಕೊಲೆಸ್ಟರಾಲ್ ಮತ್ತು ಎಲ್‌ಡಿಎಲ್ ಕೊಲೆಸ್ಟರಾಲ್ ಪ್ರಮಾಣ ಕಡಿಮೆಯಾಗಲ್ಪಟ್ಟಿತು, ಹಾಗೆಯೇ ಎಚ್‌ಡಿಎಲ್ ಕೊಲೆಸ್ಟರಾಲ್ 40% ಗಳವರೆಗೆ ಹೆಚ್ಚಾಗಲ್ಪಟ್ಟಿತು ಎಂಬ ಅಂಶವನ್ನು ಪ್ರಾಥಮಿಕ ಫಲಿತಾಂಶಗಳು ಸೂಚಿಸುತ್ತವೆ. ವನಸ್ಪತಿಯನ್ನು ತಿನ್ನಿಸಲ್ಪಟ್ಟ ಪ್ರಾಣಿಗಳಲ್ಲಿ ಈ ಫಲಿತಾಂಶವು ವ್ಯತಿರಿಕ್ತವಾಗಿದೆ, ಈ ಸನ್ನಿವೇಶದಲ್ಲಿ ಒಟ್ಟೂ ಕೊಲೆಸ್ಟರಾಲ್ ಮತ್ತು ಎಲ್‌ಡಿಎಲ್ ಕೊಲೆಸ್ಟರಾಲ್ ಪ್ರಮಾಣಗಳು ಅನುಕ್ರಮವಾಗಿ 15% ಮತ್ತು 31% ಏರಿಕೆಯಾಗಲ್ಪಟ್ಟವು. ತುಪ್ಪವನ್ನು ತಿನ್ನಿಸಲ್ಪಟ್ಟ ಪ್ರಾಣಿಗಳಲ್ಲಿ ಎಲ್‌ಡಿಎಲ್ / ಎಚ್‌ಡಿಎಲ್ ಅನುಪಾತಗಳು 33% ದವರೆಗೆ ಇಳಿಕೆಯಾಗಲ್ಪಟ್ಟವು, ಅದೇ ರೀತಿಯಲ್ಲಿ ವನಸ್ಪತಿಯನ್ನು ತಿನ್ನಿಸಲ್ಪಟ್ಟ ಪ್ರಾಣಿಗಳಲ್ಲಿ 16% ಏರಿಕೆಯಾಗಿರುವುದು ಕಂಡುಬಂದಿತು.

ಒಬೆಸ್ಟ್ಯಾಟಿನ್ ಅನ್ನು ಒಳಗೊಂಡಿರುವ ಒಂದು ಸಿಂಥೆಟಿಕ್ ಪೆಪ್ಟೈಡ್ ಆಗಿರುವ Nt8U ಇದು ಇಲಿಗಳ ಮಾದರಿಗಳಲ್ಲಿ ಸ್ಥೂಲಕಾಯತೆ–ವಿರೋಧಿ ಚಟುವಟಿಕೆಯನ್ನು ಉಂಟುಮಾಡುತ್ತದೆ. ಕ್ಯಾಪ್ಸೈಸಿನ್, ಟೀ ಸ್ಯಾಪೋನಿನ್ ಮತ್ತು ಸೋಯಾ ಐಸೋಫ್ಲೇವೋನ್ಸ್‌ಗಳ ಜೊತೆಗೆ Nt8U ನ ಯಾವುದೇ ಸಂಭಾವ್ಯ ಸಿನರ್ಜಿಸ್ಟಿಕ್ ಪರಿಣಾಮದ ಅಸ್ತಿತ್ವವನ್ನು ತಿಳಿಯುವುದಕ್ಕೆ, ಈ ಸಂಯುಕ್ತಗಳ ನಡುವಣ ಪರಸ್ಪರ ಕ್ರಿಯೆಯನ್ನು ಅರ್ಥೈಸಿಕೊಳ್ಳುವುದಕ್ಕೆ ಎನ್‌ಎಮ್‌ಆರ್ ಅಧ್ಯಯನಗಳನ್ನು ನಡೆಸಲಾಯಿತು. ಈ ಸಂಯುಕ್ತಗಳು ಸಿಂಥೆಟಿಕ್ (ವಿಶ್ಲೇಷಿತ) ಪೆಪ್ಟೈಡ್‌ಗಳ ಜೊತೆಗೆ ಪರಸ್ಪರ ಕ್ರಿಯೆಯನ್ನು ನಡೆಸುವುದಿಲ್ಲ.

ಡಯಾಬಿಟಿಕ್ ನೆಫ್ರೋಪಥಿ (ಡಿಎನ್) ಯನ್ನು ಪ್ರಾರಂಭಿಸುವಿಕೆ ಮತ್ತು ಅದರ ಪ್ರಗತಿಯು ಕಾರ್ಬೋಹೈಡ್ರೇಟ್, ಪ್ರೋಟಿನ್ ಮತ್ತು ಕೊಬ್ಬಿನ ಚಯಾಪಚಯ ಕ್ರಿಯೆಗಳಲ್ಲಿನ ನ್ಯೂನತೆಗಳನ್ನು ಒಳಗೊಳ್ಳುತ್ತದೆ. ಆ್ಯಕ್ಟಿವೇಟೆಡ್ ಪ್ರೋಟೀನ್ ಕೈನೇಸ್ ಮಾಡ್ಯುಲೇಟರ್ (ಎಎಮ್‌ಪಿಕೆ) ಇದು ಒಂದು ಎವೊಲ್ಯೂಷನರಿ ಕನ್‌ಸರ್ವ್‌ಡ್ ಸಿರಿನ್ ಥ್ರೆಯೋನಿನ್ ಕೈನೇಸ್ ಆಗಿದೆ, ಇದು ಶಕ್ತಿಯ ಹೋಮಿಯೋಸ್ಟ್ಯಾಟಿಸ್‌ನಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಡಿಎನ್‌ನಲ್ಲಿ ಎಎಮ್‌ಪಿಕೆ ಯ ಪಾತ್ರವನ್ನು ಇದನ್ನು ಬಂಧಿಸುವಂತಹ ನೈಸರ್ಗಿಕ ಸಂಯುಕ್ತಗಳ ಮೂಲಕ ಪರಿಶೀಲನೆ ನಡೆಸಲಾಯಿತು. ಹೆಸ್ಪೆರಿಡಿನ್ ಮತು ಕೊಮೆಸ್ಟರಾಲ್‌ಗಳು ಎಎಮ್‌ಪಿಕೆ ಯ ಆಲ್ಫಾ ಉಪಘಟಕದ 3 ಪ್ರತಿಬಂಧಕ ಘಟಕಗಳಲ್ಲಿ, ಎಎಮ್‌ಪಿಕೆ ಗಾಮದ ಎರಡು ಪ್ರತಿಬಂಧಕ ಘಟಕಗಳಲ್ಲಿ ಮತ್ತು ಆಲ್ಫಾ–ಬೀಟಾ ಉಪಘಟಕದಲ್ಲಿನ ಒಂದು ಪ್ರತಿಬಂಧಕ ಘಟಕದಲ್ಲಿ ಅತ್ಯಂತ ಹೆಚ್ಚಿನ ಪ್ರತಿಬಂಧಕ ಶಕ್ತಿಯನ್ನು ಪ್ರದರ್ಶಿಸಿತು. ಎಎಮ್‌ಪಿಕೆ ಚಟುವಟಿಕೆಯ ಮೇಲಿನ ಇನ್ ವಿಟ್ರೋ ಮತ್ತು ಇನ್ ವಿವೋ ಗಳಲ್ಲಿನ ಈ ಪಾಲಿಫಿನಾಲ್‌ಗಳ ಪರಿಣಾಮದ ಅಧ್ಯಯನವು ಪ್ರಗತಿಯಲ್ಲಿದೆ.

ತ್ವರಿತವಾಗಿ ಜೀರ್ಣವಾಗುವ ಸ್ಟಾರ್ಚ್, ನಿಧಾನವಾಗಿ ಜೀರ್ಣವಾಗುವ ಸ್ಟಾರ್ಚ್, ಸಂಪೂರ್ಣ ಸ್ಟಾರ್ಚ್ ಮತ್ತು ಪ್ರತಿರೋಧಕ ಸ್ಟಾರ್ಚ್‌ಗಳ ಬಗ್ಗೆ ಮಾಹಿತಿಯನ್ನು ಪಡೆಯುವುದಕ್ಕೆ ಭಾರತೀಯ ಆಹಾರಗಳ ಕಾರ್ಬೋಹೈಡ್ರೇಟ್ ಡೈಜೆಸ್ಟೀವ್ ಪ್ರೊಫೈಲ್ ಬಗೆಗಿನ ಒಂದು ಮಾಹಿತಿಯನ್ನು ತಯಾರಿಸಲಾಗಿದೆ ಮತ್ತು ವಿವಿಧ ಪ್ರದೇಶಗಳ ವಿಶಿಷ್ಟ ಭಾರತೀಯ ಆಹಾರಗಳ ಒಂದು ಆಯ್ದ ಗುಂಪಿನ ಬಗ್ಗೆ ಅಧ್ಯಯನಗಳನ್ನು ನಡೆಸಲಾಗಿದೆ. ದ್ವಿದಳ ಧಾನ್ಯಗಳು ಮತ್ತು ಮಸಾಲೆ ಪದಾರ್ಥಗಳ ಜೊತೆಗಿನ ಸಂಯೋಜನದಲ್ಲಿ ವಿಭಿನ್ನ ಧಾನ್ಯಗಳ ಮೂಲಮಾದರಿಗಳು ಕಾರ್ಬೋಹೈಡ್ರೇಟ್ ಜೀರ್ಣಕಾರಿ ಅಂಶದ ಮೇಲೆ ಪ್ರಭಾವವನ್ನು ಬೀರುತ್ತವೆ.

**ಕಾರ್ಯಾತ್ಮಕ ಆಹಾರ ಘಟಕಗಳು**

ಹಲವಾರು ಮೈಕ್ರೋನ್ಯೂಟ್ರಿಯೆಂಟ್‌ಗಳು, ನ್ಯೂಟ್ರಾಸ್ಯುಟಿಕಲ್‌ಗಳು ಮತ್ತು ಬಯೋಆ್ಯಕ್ಟೀವ್‌ಗಳು ಸಾಮಾನ್ಯವಾಗಿ ಅಸ್ಥಿರ, ಜೈವಿಕ ಲಭ್ಯವಲ್ಲದ ಅಥವಾ ಆಹಾರದ ಸಂವೇದನಶೀಲ ಗುಣಮಟ್ಟದ ಮೇಲೆ ನಕರಾತ್ಮಕ ಪರಿಣಾಮವನ್ನು ಬೀರುವಂತವಾಗಿರುತ್ತವೆ. ವಿಶಿಷ್ಟವಾದ ಆಹಾರಗಳ ತಯಾರಿಕೆಯಲ್ಲಿ ಪೌಷ್ಟಿಕಾಂಶದ ಅನ್ವಯಿಕೆಗಾಗಿ ಹೆಚ್ಚಿನ ಪ್ರೋಟೀನ್ ಘಟಕಗಳು ಅಥವಾ ಮೆಟಲ್ ಕಿಲೆಟಿಂಗ್ ಘಟಕಗಳನ್ನು ಗುರುತಿಸಲಾಗುತ್ತದೆ. ಕೆಲವು ಜೈವಿಕಕ್ರಿಯಾಶೀಲ ಜನ್ಯ ಉತ್ಪನ್ನಗಳು ಮೂಲ ಸಂಯುಕ್ತಕ್ಕಿಂತ ಹೆಚ್ಚು ಪ್ರಬಲವಾಗಿರಬಹುದು. ಆಯ್ದ ನ್ಯೂಟ್ರಾಸ್ಯುಟಿಕಲ್‌ಗಳನ್ನು ಕಾರ್ಯಾತ್ಮಕ ಆಹಾರಗಳನ್ನಾಗಿ ರೂಪಾಂತರಗೊಳಿಸುವುದು ಬಹಳ ಮುಖ್ಯವಾಗಿರುತ್ತದೆ ಆ ಮೂಲಕ ಅವು ಗ್ರಾಹಕನ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುತ್ತವೆ.

ಸೀಡ್ ಕೋಟ್ ಅಥವಾ ವಿಭಿನ್ನ ಧಾನ್ಯಗಳ ಬ್ರ್ಯಾನ್‌ಗಳು ಅವುಗಳಲ್ಲಿರುವ ಹೆಚ್ಚಿನ ಪ್ರಮಾಣದ ಕರಗಲಾರದ ಫೈಬರ್ ಅಂಶಗಳ ಕಾರಣದಿಂದಾಗಿ ವರ್ಜಿಸಲ್ಪಡುತ್ತವೆ. ರಾಗಿ ಮತ್ತು ರೈಸ್‌ಬ್ರ್ಯಾನ್‌ನ ಸೀಡ್ ಕೋಟ್‌ಗಳಿಂದ ಜೈವಿಕಕ್ರಿಯಾಶೀಲ ಫ್ರ್ಯಾಕ್ಷನ್‌ಗಳು ಮತ್ತು ಘಟಕಗಳನ್ನು ಪುನಃಪಡೆದುಕೊಳ್ಳುವುದಕ್ಕೆ ಪ್ರಯತ್ನಗಳನ್ನು ನಡೆಸಲಾಯಿತು. ಫ್ರ್ಯಾಕ್ಷನ್‌ಗಳಿಂದ ಸೀಡ್ ಕೋಟ್ ಮತ್ತು ಎಂಡೋಸ್ಪರ್ಮ್ ಫ್ರ್ಯಾಕ್ಷನ್ಸ್ ಮತ್ತು ನೀರಿನಲ್ಲಿ ಕರಗಬಲ್ಲ ಅರಾಬಿನೋಕ್ಸೈಲಾನ್‌ಗಳನ್ನು ಪಡೆದುಕೊಳ್ಳುವುದಕ್ಕೆ ನೇಟೀವ್ ಮತ್ತು ಮಾಲ್ಟೆಡ್ ಫಿಂಗರ್ (ರಾಗಿ) ಮಿಲ್ಲೆಟ್ ಗ್ರೇನ್‌ಗಳನ್ನು ವಿಭಾಗೀಕರಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಚಹ ಮತ್ತು ಶುಂಠಿಯಿಂದ ಜೈವಿಕ ಕ್ರಿಯಾಶೀಲಗಳನ್ನು ಸಾಂಪ್ರದಾಯಿಕ ಉದ್ಧರಣ ಮತ್ತು ಮೈಕ್ರೋವೇವ್ ಉದ್ಧರಣ ಈ ಎರಡೂ ವಿಧಾನಗಳ ಮೂಲಕ ಪಡೆದುಕೊಳ್ಳಲಾಗಿದೆ, ಅವುಗಳನ್ನು ವಿಶ್ಲೇಷಿಸಲಾಗಿದೆ ಮತ್ತು ಅವುಗಳ ಜನ್ಯಗಳನ್ನು ತಯಾರಿಸಲಾಗಿದೆ. ಗ್ರೀನ್ ಟೀ ಕ್ಯಾಟೆಚಿನ್‌ಗಳನ್ನು (20-30%, w/w basis) ಟೀ ಬ್ರೂ ದಿಂದ ಬಿಸಿ ನೀರಿನ ಉದ್ಧರಣದ ಮೂಲಕ ಪ್ರತ್ಯೇಕಗೊಳಿಸಲಾಗಿದೆ ಮತ್ತು ಕ್ಯಾಟೆಚಿನ್‌ಗಳನ್ನು ಹಲವಾರು ದ್ರಾವಕಗಳ ಜೊತೆಗಿನ ಉದ್ಧರಣದ ಮೂಲಕ ಪ್ರತ್ಯೇಕಗೊಳಿಸಲಾಗಿದೆ. Zingiber aromaticum ಅಥವಾ zerumbet ನಿಂದ ಪಡೆದುಕೊಳ್ಳಲ್ಪಟ್ಟ ರಾಸಾಯನಿಕವಾಗಿ ಸೆಸ್ಕ್ವಿಟರ್‌ಪೇನ್ ಆಗಿರುವ "ಜೆರುಂಬೋನ್" ಇದು ಕ್ಯಾನ್ಸರ್ ಮತ್ತು ಹ್ಯೂಮನ್ ಇಮ್ಯುನೋಡೆಫಿಷಿಯನ್ಸಿ ಸಿಂಡ್ರೋಮ್ (ಎಚ್‌ಐವಿ) ವಿರುದ್ಧ ರಕ್ಷಣೆಯನ್ನು ಒದಗಿಸುತ್ತದೆ ಎಂಬುದಾಗಿ ವರದಿ ಮಾಡಲಾಗಿದೆ. ಜೆರೊಂಬೋನ್ ಆಕ್ಸಿಮ್ ಇದನ್ನು ಮಿಥೆನಾಲ್‌ನಲ್ಲಿ ಹೈಡ್ರೊಕ್ಸೈಲ್ ಅಮೈನ್ ಜೊತೆಗೆ ಕ್ರಿಯಾನ್ವಿತಗೊಳಿಸುವ ಮೂಲಕ ತಯಾರಿಸಲಾಗುತ್ತದೆ. ಒಂದು ನಿರ್ಜಲೀಕರಣ ಅಂಶವನ್ನು ಬಳಸಿಕೊಳ್ಳುವ ಮೂಲಕ ಕೊಬ್ಬಿನ ಆಮ್ಲಗಳ (ಸ್ಯಾಚುರೇಟೆಡ್ ಮತ್ತು ಅನ್–ಸ್ಯಾಚುರೇಟೆಡ್) ಸೆಟ್‌ಗಳ ಜೊತೆಗೆ ಈಸ್ಟರಿಫಿಕೇಷನ್ ಮಾಡಲ್ಪಡುತ್ತದೆ. ಆಕ್ಸಿಮ್ ಈಸ್ಟರಿಫಿಕೇಷನ್‌ನ ಪ್ರೋಟೋಕೋಲ್ ಅನ್ನು ಸರಳೀಕೃತಗೊಳಿಸಲಾಗಿದೆ ಮತ್ತು ಅದನ್ನು ಸಾಮಾನ್ಯ ಪ್ರಾಯೋಗಿಕ ಪ್ರೋಟೋಕೋಲ್ ಆಗಿ ಅಭಿವೃದ್ಧಿಗೊಳಿಸಲಾಗಿದೆ. ಇದರಲ್ಲಿ ಬಳಸಲ್ಪಟ್ಟ ಕಾರ್ಬೋಕ್ಸೈಲಿಕ್ ಆಮ್ಲಗಳ ಗುಂಪುಗಳು ದೀರ್ಘ ಸರಪಳಿಯ ಕೊಬ್ಬಿನ ಆಮ್ಲಗಳಾಗಿವೆ ಉದಾಹರಣೆಗೆ ಬ್ಯುಟಿರಿಕ್, ಹೆಕ್ಸಾನೊಯಿಕ್, ಒಕ್ಟ್ಯಾನೊಯಿಕ್, ಡೆಕಾನೊಯಿಕ್, ಡೋಡೆಕಾನೊಯಿಕ್ ಮತ್ತು ಪಾಲ್ಮಿಟಿಕ್ ಆಮ್ಲಗಳಾಗಿವೆ, ಮತ್ತು ಅನ್‌ಸ್ಯಾಚುರೇಟೆಡ್ ಕೊಬ್ಬಿನ ಆಮ್ಲಗಳಾದ ಲಿನೊಲಿಕ್ ಮತ್ತು ಓಲಿಕ್ ಆಮ್ಲಗಳಾಗಿವೆ. ಇದರಿಂದ ಪಡೆದುಕೊಂಡ ಉತ್ಪನ್ನಗಳು 78–91% ವ್ಯಾಪ್ತಿಯಲ್ಲಿದ್ದವು.

ಶುಂಠಿಯ (Zingiber officinale Roscoe) ಫಿನೋಲಿಕ್ ಅಂಶಗಳಾದ [6]–ಜಿಂಜೆರಾಲ್, [6]–ಶೊಗಾಲ್ ಮತ್ತು ಜಿಂಜರೋನ್ ಇವುಗಳು ಕ್ರೋಮೋಬ್ಯಾಕ್ಟೀರಿಯಮ್ ವೈಲಾಸಿಯಮ್ ಮತ್ತು ಸ್ಯುಡೋಮೊನಾಸ್ ಆರುಜಿನೊಸಾ ಗಳಿಗೆ ಪ್ರತಿಯಾಗಿ ಕೋರಮ್ ಸಂವೇದಕ ಪ್ರತಿರೋಧಕ ಚಟುವಟಿಕೆ (ಕ್ಯೂಎಸ್‌ಐ) ಅನ್ನು ಪ್ರದರ್ಶಿಸುತ್ತವೆ. [6]– ಶೋಗಾಲ್‌ನ ಒಂದು ಉಪಉತ್ಪನ್ನವಾದ [6]–ಅಜಾಶೋಗಾಲ್ ಇದನ್ನು ಅದರ ಆಕ್ಸಿಮ್‌ನ ಬೆಕ್‌ಮ್ಯಾನ್ ಪುನರ್‌ಸಂಯೋಜನೆಯ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಈ ಸಂಯುಕ್ತವು ಪಿ. ಆರುಜಿನೊಸಾ ಕ್ಕೆ ಪ್ರತಿಯಾಗಿ ಉತ್ತಮವಾದ ಕ್ಯೂಎಸ್‌ಐ ಚಟುವಟಿಕೆಯನ್ನು ಪ್ರದರ್ಶಿಸುತ್ತದೆ. ಜೋನ್‌ಇನ್‌ಹಿಬಿಷನ್, pyocyanin assay ಮತ್ತು ಕ್ರೋಮೋಬ್ಯಾಕ್ಟೀರಿಯಮ್ ವೈಲಾಸಿಯಮ್ ಮೂಲಕ ಪಡೆದುಕೊಂಡ ವೈಲಾಸಿಯೆನ್ ಉದ್ಧರಣಗಳ ಮೂಲಕ ಎಲ್ಲಾ ಸಂಯುಕ್ತಗಳ ಪ್ರತಿರೋಧಕ ಚಟುವಟಿಕೆಗಳನ್ನು ಅಧ್ಯಯನ ಮಾಡಲಾಗಿದೆ. ಎಲ್ಲಾ ಸಂಯುಕ್ತಗಳು 500 ಪಿಪಿಎಮ್ ನಲ್ಲಿ ಉತ್ತಮವಾದ ಪ್ರತಿರೋಧಕತೆಯನ್ನು ಪ್ರದರ್ಶಿಸಿದವು.

**ನ್ಯೂಟ್ರಾಸ್ಯುಟಿಕಲ್‌ಗಳು ಮತ್ತು ಜೈವಿಕಕ್ರಿಯಾಶೀಲ ಸಂಯುಕ್ತಗಳ ಉದ್ಧರಣ**

ಗಾರ್ಡನ್ ಕ್ರೆಸ್ ಬೀಜಗಳಲ್ಲಿ ಪಾಲಿಫಿನಾಲ್‌ಗಳು ಸಮೃದ್ಧವಾಗಿರುತ್ತವೆ. ಪಾಲಿಫಿನಾಲ್‌ಗಳನ್ನು ಸಾಲ್ವೆಂಟ್, ಸಮಯ, ತಾಪಮಾನದ ಸಮರ್ಪಕವಾದ ಸನ್ನಿವೇಶಗಳಡಿಯಲ್ಲಿ ಪಡೆದುಕೊಳ್ಳಲಾಗುತ್ತದೆ. ಫಿನಾಲಿಕ್ ಉದ್ಧರಣವು ಟ್ರೈಪ್ಸಿನ್, ಆಲ್ಫಾ ಅಮೈಲೇಸ್ ಮತ್ತು ಆಲ್ಫಾ

ಗ್ಲ್ಯೂಕೋಸೈಡೇಸ್ ಚಟುವಟಿಕೆಗಳಿಗೆ ಪ್ರತಿಯಾಗಿ ಅನುಕ್ರಮವಾಗಿ 9.2, 2.3 ಮತ್ತು 12 μg/ mL ನ ಐಸಿ50 ಮೌಲ್ಯಗಳ ಜೊತೆಗೆ ಪ್ರತಿರೋಧಕ ಚಟುವಟಿಕೆಯನ್ನು ಪ್ರದರ್ಶಿಸಿದವು.

ಪಾಲಿಫಿನಾಲ್‌ಗಳ ವಿತರಣೆಗಾಗಿ ವಿಭಿನ್ನವಾಗಿ ಬಣ್ಣಲೇಪನ ಮಾಡಲ್ಪಟ್ಟ ಅಕ್ಕಿಯನ್ನು ಅಧ್ಯಯನ ಮಾಡಲಾಯಿತು. ಕಪ್ಪು ಅಕ್ಕಿಯು ಹೆಚ್ಚಿನ ಪ್ರಮಾಣದ ಆ್ಯಂಥೋಸೈನಿನ್ ಅಂಶವನ್ನು ಮತ್ತು ಕಡಿಮೆ ಪ್ರಮಾಣದ ಪ್ರೊಆ್ಯಂಥೋಸೈಯಾನಿಡಿನ್ ಅಂಶಗಳನ್ನು ಹೊಂದಿತ್ತು. ಬಣ್ಣಲೇಪನ ಮಾಡಲ್ಪಟ್ಟ ವಿಭಿನ್ನವಾದ ವಿಧಗಳ ಪೂರ್ಣ ಅಕ್ಕಿಗಳು ಬಿಳಿ ಅಕ್ಕಿಗೆ ಹೋಲಿಸಿ ನೋಡಿದಾಗ ಹೆಚ್ಚಿನ ಮಟ್ಟದ ಕಬ್ಬಿಣದ ಅಂಶವನ್ನು ಕಡಿಮೆಗೊಳಿಸುವ ಚಟುವಟಿಕೆ ಕಂಡುಬಂದಿದೆ. ಬಣ್ಣಲೇಪನ ಮಾಡಲ್ಪಟ್ಟ ಅಕ್ಕಿಗಳಲ್ಲಿ ಮಾನವ ಎಲ್‌ಡಿಎಲ್ ಆಕ್ಸಿಡೇಷನ್ ಪ್ರತಿರೋಧಕತೆ ಚಟುವಟಿಕೆಯೂ ಕೂಡ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದಿತು. ಆಥರೊಸ್ಕ್ಲೆರೋಸಿಸ್, ಹೈಪರ್‌ಟೆನ್ಷನ್ ಮತ್ತು ಹೈಪರ್‌ಕೊಲೆಸ್ಟ್ರೋಲೆಮಿಯಾ ತೊಂದರೆಗಳನ್ನು ಹೊಂದಿರುವ ರೋಗಿಗಳು ಹೆಚ್ಚಿನ ಪ್ರಮಾಣದ ಅಸಿಮೆಟ್ರಿಕಲ್ ಡೀಮೀಥೈಲಾರ್ಜಿನಿನ್ (ಎಡಿಎಮ್‌ಎ), ಸಿಮೆಟ್ರಿಕಲ್ ಡೀಮೀಥೈಲಾರ್ಜಿನಿನ್ ಲೆವೆಲ್ (ಎಸ್‌ಡಿಎಮ್‌ಎ) ಗಳನ್ನು ಹೊಂದಿರುತ್ತಾರೆ. ಪ್ಲಾಸ್ಮಾದಲ್ಲಿ ಕಾರ್ಡಿಯೋಮೆಟಾಬೊಲಿಕ್ ಅಸ್ವಸ್ಥತೆಗಳನ್ನು ಗುರುತಿಸುವ ಚಿಹ್ನೆಗಳು, ಹೋಮೋಕೈಸ್ಟೈನ್, ಆರ್ಜಿನಿನ್, ಹೋಮೋಆರ್ಜಿನಿನ್, ಎಡಿಎಮ್‌ಎ, ಎಸ್‌ಡಿಎಮ್‌ಎ ಮತ್ತು ಹೋಮೋಕೈಸ್ಟಿನ್‌ಗಳನ್ನು ಪ್ರಮಾಣೀಕೃತಗೊಳಿಸಲಾಗಿದೆ. ಹೆಚ್ಚಿನ ಪ್ರಮಾಣದ ಆರ್ಜಿನಿನ್ ಅನ್ನು ಹೊಂದಿರುವ ಪ್ರೋಟೀನ್‌ಗಳು ಮತ್ತು ಪೆಪ್ಟೈಡ್‌ಗಳು ಅವುಗಳ ಕಾರ್ಡಿಯೋಪ್ರೊಟೆಕ್ಟೀವ್ (ಹೃದಯಸಂರಕ್ಷಕ) ಪರಿಣಾಮಗಳಿಗಾಗಿ ಪ್ರಖ್ಯಾತವಾಗಿವೆ. ಪ್ರೋಟೀನ್ ಹೈಡ್ರೋಲೈಸೇಟ್‌ಗಳ ಉತ್ಪಾದನೆ ಮತ್ತು ಸ್ವರೂಪವರ್ಗೀಕರಣಕ್ಕೆ ಸಂಬಂಧಿಸಿದಂತೆ ಎಳ್ಳು, ಶೇಂಗಾಬೀಜ, ಮೊರಿಂಗಾ ಮತ್ತು ಫ್ಲ್ಯಾಕ್ಸ್ ಬೀಜಗಳ ಪ್ರೋಟೀನ್‌ಗಳನ್ನು ಪರಿಶೀಲಿಸುವುದು ಜೊತೆಗೆ ವಾಣಿಜ್ಯ ಪ್ರೊಟೀಸಸ್ ಮತ್ತು ಗ್ಯಾಸ್ಟ್ರೋಇಂಟೆಸ್ಟಿನಲ್ ಕಿಣ್ವಗಳನ್ನು ಬಳಸಿಕೊಂಡು ಹೆಚ್ಚಿನ ಪ್ರಮಾಣದ ಆರ್ಗ್:ಲಿಸ್ ಅನುಪಾತದ ಜೊತೆಗೆ ಈ ಚಟುಟಿಕೆಯನ್ನು ನಿರ್ವಹಿಸಲಾಯಿತು. ಇವುಗಳಲ್ಲಿ ಇತರ ಪ್ರೋಟೀನ್‌ಗಳಿಗೆ ಹೋಲಿಸಿ ನೋಡಿದಾಗ ಮೊರಿಂಗಾ ಬೀಜದ ಪ್ರೊಟೀನ್ ಹೆಚ್ಚಿನ ಪ್ರಮಾಣದ ಆರ್ಗ್:ಲಿಸ್ ಅನುಪಾತವನ್ನು ಪ್ರದರ್ಶಿಸಿತು. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅಂಶಗಳ ವರ್ಗೀಕರಣವು ಪ್ರಗತಿಯ ಹಂತದಲ್ಲಿದೆ.

ಹೆಚ್ಚಿನ ಗ್ಲೂಕೋಸ್ ಇರುವ ಆಹಾರಗಳಲ್ಲಿ ನಿರ್ವಹಿಸಲ್ಪಟ್ಟಿರುವಂತಹ ಸಿ. ಎಲಿಗ್ಯಾನ್‌ಗಳಲ್ಲಿನ ಶಾರೀರಿಕ / ನಡವಳಿಕೆ ಸಂಬಂಧಿಸಿದ ಮತ್ತು ಜೀವರಾಸಾಯನಿಕ ಪ್ರತಿಕ್ರಿಯೆಗಳ ಮೇಲೆ ಮೋನೋಕ್ರೋಟೋಫಸ್ (ಎಮ್‌ಸಿಪಿ) ನ ಪರಿಣಾಮದ ಬಗ್ಗೆ ಅಧ್ಯಯನವನ್ನು ನಡೆಸಲಾಯಿತು. ಹೆಚ್ಚಿನ ಗ್ಲೂಕೋಸ್ ಆಹಾರಕ್ಕೆ (ಜಿಎಫ್, 2%) ಸಂಬಂಧಿಸಿದಂತೆ ಅಭಿವೃದ್ಧಿಯ ಮೂಲಕ ಹುಳುಗಳನ್ನು ಗುರುತಿಸಲಾಯಿತು ಮತ್ತು ನಂತರದಲ್ಲಿ ಅವುಗಳನ್ನು ಎಮ್‌ಸಿಪಿಯ (0.5, 0.75, 1.5ಎಮ್‌ಎಮ್) ಸಬ್‌ಲೆಥಾಲ್ ಸಂಯುಕ್ತಗಳಲ್ಲಿ ಸಂಸ್ಕರಿಸಲಾಯಿತು. ಚಲನೆಗೆ ಸಂಬಂಧಿಸಿದಂತೆ ನಡುವಳಿಕೆಗೆ ಸಂಬಂಧಿಸಿದ ಪ್ರತಿಕ್ರಿಯೆಗಳು, ಎಗ್ ಲೈಯಿಂಗ್, ಬ್ರೂಡ್ ಗಾತ್ರ, ಲೈಫ್‌ಸ್ಪ್ಯಾನ್‌ಗಳಿಗೆ ಸಂಬಂಧಿಸಿದಂತೆ ಶಾರೀರಿಕ ಪ್ರತಿಕ್ರಿಯೆಗಳು; ರೂಪವೈಜ್ಞಾನಿಕ ಬದಲಾವಣೆಗಳು; ಮತ್ತು ಗ್ಲೂಕೋಸ್ ಅಂಶವನ್ನು ಒಳಗೊಂಡಂತೆ ಜೀವರಾಸಾಯನಿಕ ಪ್ರತಿಕ್ರಿಯೆಗಳನ್ನು ಮಾಪನ ಮಾಡಲಾಯಿತು. ಹೆಚ್ಚಿನ ಗ್ಲೂಕೋಸ್ ಆಹಾರಕ್ಕೆ ಅಭಿವೃದ್ಧಿ ವಿಧಾನದ ಮೂಲಕ ಪಡೆದುಕೊಳ್ಳಲ್ಪಟ್ಟ ಎಗ್ ಸ್ಟೇಜ್‌ನಿಂದ ಹೊರತರಲ್ಪಟ್ಟ ಹುಳುಗಳು ಶಾರೀರಿಕ, ನಡುವಳಿಕಾತ್ಮಕ ಮತ್ತು ಜೀವರಾಸಾಯನಿಕ ಪ್ರತಿಕ್ರಿಯೆಗಳಿಗೆ ಸಂಬಂಧಿಸಿದಂತೆ ಎಮ್‌ಸಿಪಿ ಯ ವರ್ಧಿತ ವಿಷಯುಕ್ತ ಪರಿಣಾಮವನ್ನು ಪ್ರದರ್ಶಿಸಿದವು. ಗ್ಲೂಕೋಸ್–ಓಪಿಐ ಕ್ರಿಯಾಶೀಲ ನ್ಯೂರೋಟಾಕ್ಸಿಟಿಯ ಬಗ್ಗೆ ತಿಳಿಯುವುದಕ್ಕೆ ಸಿ. ಎಲಿಗ್ಯಾನ್‌ಗಳು ಒಂದು ಅತ್ಯುತ್ತಮ ಮಾದರಿಗಳಾಗಿವೆ ಎಂಬ ಅಂಶವನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ, ಅದರ ನಂತರದಲ್ಲಿ ಈ ಸೂಕ್ಷ್ಮಜೀವಿಗಳಲ್ಲಿ ಎಲ್ಲಾ ಪ್ರತಿಕ್ರಿಯೆಗಳನ್ನು ಸುಲಭವಾಗಿ ಅನುಸರಿಸಲಾಗುತ್ತಿದೆ ಮತ್ತು ಇದರ ಫಲಿತಾಂಶವನ್ನು ಉತ್ತಮವಾಗಿ ಬಹಿರ್ಗತಗೊಳಿಸಲಾಗುತ್ತದೆ ಅದರಲ್ಲಿಯೂ ಇದು ಪ್ರಾಣಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಎಂಬುದಾಗಿ ಅಂದಾಜಿಸಲಾಗಿದೆ.

**ಸಂಸ್ಕರಣ ಮತ್ತು ವಿತರಣಾ ವ್ಯವಸ್ಥೆಗಳ ಮೂಲಕ ನ್ಯೂಟ್ರಿಯೆಂಟ್‌ಗಳು/ನ್ಯೂಟ್ರಾಸ್ಯುಟಿಕಲ್‌ಗಳ ಸುಧಾರಿತ ಜೈವಿಕ ಲಭ್ಯತೆ ಮತ್ತು ಸ್ಥಿರತೆ**

ಆಯ್ದ ನ್ಯೂಟ್ರಾಸ್ಯುಟಿಕಲ್‌ಗಳ ವಿತರಣೆ ಮಾಡುವಿಕೆಯು ಅತ್ಯಂತ ಕಷ್ಟಕರವಾದ ಸಂಗತಿಯಾಗಿದೆ ಏಕೆಂದರೆ ಆಹಾರದ ಷೆಲ್ಫ್‌ಲೈಫ್, ಜೈವಿಕಲಭ್ಯತೆ ಮತ್ತು ಸಂವೇದಕ ಗುಣಮಟ್ಟಗಳು ಈ ಅಣುಗಳ ಹೆಚ್ಚಿನ ಸಾಂದ್ರತೆಯ ಮೂಲಕ ಪರಿಣಾಮಕ್ಕೆ ಒಳಗಾಗಲ್ಪಡುತ್ತವೆ. ಸಂಸ್ಕರಣೆ ಮತ್ತು ಷೆಲ್ಫ್ ಲೈಫ್‌ನ ಸಮಯದಲ್ಲಿ ಬಯೋಮಾಲಿಕ್ಯೂಲ್ ಅನ್ನು ಸ್ಥಿರಗೊಳಿಸುವಲ್ಲಿ, ಆಹಾರದ ಮಾತೃಕೆಯಲ್ಲಿ ಇತರ ಅಂಶಗಳ ಜೊತೆಗಿನ ಅಡ್ಡ–ಪರಿಣಾಮವನ್ನು ನಿಯಂತ್ರಿಸುವಲ್ಲಿ, ಉತ್ಪನ್ನದ ಸಂವೇದಕ ಗುಣಮಟ್ಟದ ಮೇಲೆ ಯಾವುದೇ ರೀತಿಯ ವ್ಯತಿರಿಕ್ತವಾದ ಪರಿಣಾಮವನ್ನೂ ಬೀರದೇ ಜೈವಿಕ ಲಭ್ಯತೆಯನ್ನು ಹೆಚ್ಚಿಸುವುದು ಮುಂತಾದ ಚಟುವಟಿಕೆಗಳ ಸಮಯದಲ್ಲಿ ವಿತರಣಾ ವ್ಯವಸ್ಥೆಗಳು ನಿರ್ಣಾಯಕವಾಗಿವೆ. ನ್ಯೂಟ್ರಿಯೆಂಟ್‌ಗಳು / ನ್ಯೂಟ್ರಾಸ್ಯುಟಿಕಲ್‌ಗಳ ಜೈವಿಕಲಭ್ಯತೆ ಮತ್ತು ಸ್ಥಿರತೆಯನ್ನು ಹೆಚ್ಚಿಸುವುದಕ್ಕೆ ಸಂಸ್ಕರಣಾ ಪ್ರಕ್ರಿಯೆಗಳು, ನ್ಯಾನೋಎಮಲ್ಷನ್ಸ್, ಕೋಟಿಂಗ್ ಮತ್ತು ಇತರ ತಂತ್ರಗಾರಿಕೆಗಳನ್ನು ಬಳಸಲಾಗುತ್ತದೆ.

ಒಟ್ಟಾರೆ ಫಿನೋಲಿಕ್ ಮತ್ತು ಫ್ಲಾವೊನಾಯ್ಡ್ ಅಂಶಗಳನ್ನು ಗುರುತಿಸುವುದಕ್ಕೆ ಹಾಗೆಯೇ ಅವುಗಳ ಜೈವಿಕ ಲಭ್ಯತೆಯನ್ನು ನಿರ್ಧರಿಸುವುದಕ್ಕೆ ಫಿಂಗರ್ ಮಿಲ್ಲೆಟ್ (Eleucine coracana) ಮತ್ತು ಪರ್ಲ್ ಮಿಲ್ಲೆಟ್ (Pennisetum glaucum) ಇವುಗಳನ್ನು ಪರಿಶೀಲನೆಗೆ ಒಳಪಡಿಸಲಾಯಿತು. ಮೂಲ ಫಿಂಗರ್ ಮಿಲ್ಲೆಟ್‌ನ ಒಟ್ಟೂ ಪಾಲಿಫಿನಾಲ್‌ಗಳು 10.2 ಎಮ್‌ಜಿ/ಜಿ ಇತ್ತು ಅದು ಸ್ಪ್ರೌಟಿಂಗ್ ಅಥವಾ ಪ್ರೆಷರ್ ಕುಕಿಂಗ್ ನಂತರದಲ್ಲಿ 50% ಕಡಿಮೆಯಾಗಲ್ಪಟ್ಟಿತು. ತೆರೆದ–ಪಾತ್ರೆಯ ಕುದಿಸುವಿಕೆಯ ನಂತರದಲ್ಲಿ ಸುಮಾರು 12–19% ಕಡಿಮೆಯಾಗುವಿಕೆಯು ಕಂಡುಬಂದಿತು. ಧಾನ್ಯಗಳ ಸ್ಪ್ರೌಟಿಂಗ್ ಮತ್ತು ರೋಸ್ಟಿಂಗ್ ಸಮಯದಲ್ಲಿ ಸಾಮಾನ್ಯವಾಗಿ ಫಿನೋಲಿಕ್ ಆಮ್ಲಗಳು ಹೆಚ್ಚಾಗಿರುವುದು ಕಂಡುಬಂದಿತು. ಸ್ಯಾಲಿಸೈಕ್ಲಿಕ್ ಆಮ್ಲದ ಸಾಂದ್ರತೆಯು ಸ್ಪ್ರೌಟಿಂಗ್ ನಂತರದಲ್ಲಿ ನಿಖರವಾಗಿ ಹೆಚ್ಚಾಗಲ್ಪಟ್ಟಿತು. ಪ್ರೆಷರ್ ಕುಕಿಂಗ್, ಓಪನ್–ಪ್ಯಾನ್ ಬಾಯ್ಲಿಂಗ್ ಮತ್ತು ಮೈಕ್ರೋವೇವ್ ಹೀಟಿಂಗ್ ಈ ಪ್ರಕ್ರಿಯೆಗಳು ಜೈವಿಕಲಭ್ಯ ಪಾಲಿಫಿನಾಲ್ ಅಂಶವನ್ನು ಸುಮಾರು 30–35% ದವರೆಗೆ ಕಡಿಮೆಗೊಳಿಸಿದವು. ಸ್ಪ್ರೌಟಿಂಗ್‌ನ ಪರಿಣಾಮವಾಗಿ ಜೈವಿಕಲಭ್ಯ ಫಿನೋಲಿಕ್ಸ್‌ನ 67% ಹೆಚ್ಚಳವು ಅಲ್ಲಿ ಕಂಡುಬಂದಿತು. ಜೈವಿಕ ಲಭ್ಯ ಜೆಂಟಿಸಿಕ್ ಮತ್ತು ಸಿರಿಂಜಿಕ್ ಆಮ್ಲಗಳು ಸ್ಪ್ರೌಟಿಂಗ್ ನಂತರ >100% ದಷ್ಟು ಹೆಚ್ಚಾಗಲ್ಪಟ್ಟವು. ಮೊಳಕೆ ತರಿಸಲ್ಪಟ್ಟ, ಒತ್ತಡದಲ್ಲಿ–ಅಡಿಗೆ ಮಾಡಲ್ಪಟ್ಟ ಮತ್ತು ಮೈಕ್ರೋವೇವ್‌ನಲ್ಲಿ ಹೀಟ್ ಮಾಡಲ್ಪಟ್ಟ ಮಾದರಿಗಳು ಗಣನೀಯವಾಗಿ ಕಡಿಮೆ ಪ್ರಮಾಣದಲ್ಲಿ ಜೈವಿಕವಾಗಿ ಪಡೆದುಕೊಳ್ಳಬಹುದಾದಂತಹ ಫ್ಲ್ಯಾವೊನಾಯ್ಡ್ ಅಂಶವನ್ನು

ಪ್ರದರ್ಶಿಸಿದವು. ಪರ್ಲ್ ಮಿಲ್ಲೆಟ್‌ನ ಗುರುತಿಸಲ್ಪಟ್ಟ ಫಿನೊಲಿಕ್ ಆಮ್ಲಗಳಲ್ಲಿ ಸಿನಾಪಿಕ್ ಆಮ್ಲದ (501 μg/g) ಸಾಂದ್ರತೆಯು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿತ್ತು, ನಂತರದಲ್ಲಿ ಸ್ಯಾಲಿಸೈಲಿಕ್ ಆಮ್ಲದ (182 μg/g) ಪ್ರಮಾಣವನ್ನು ಗುರುತಿಸಲಾಯಿತು. ಪರ್ಲ್ ಮಿಲ್ಲೆಟ್‌ನ ಸ್ಪ್ರೌಟಿಂಗ್ ನಂತರ ಫ್ಲ್ಯಾವೊನಾಯ್ಡ್‌ಗಳನ್ನು ಒಳಗೊಂಡಂತೆ ಜೈವಿಕಲಭ್ಯವಿರುವ ಪಾಲಿಫಿನಾಲ್‌ಗಳಲ್ಲಿ 20% ಹೆಚ್ಚಳವು ಕಂಡುಬಂದಿತು.

ಸಂಸ್ಕರಣ, ಸಂಗ್ರಹ ಮತ್ತು ವಿತರಣೆಯ ಸಮಯದಲ್ಲಿ ನ್ಯಾನೋಟೆಕ್ನಾಲಜಿಯ ಮೂಲಕ ಜೈವಿಕಕ್ರಿಯಾಶೀಲ ಸಂಯುಕ್ತಗಳಾದ ಡೋಕೋಸಾಹೆಕ್ಸಾಯೆನೊಯಿಕ್ ಆಮ್ಲ (ಡಿಎಚ್‌ಎ), ಇಕೋಸಾಪೆಂಟಾಯೆನೊಯಿಕ್ ಆಮ್ಲ (ಇಪಿಎ) ಮತ್ತು ಆಲ್ಫಾ-ಟೋಕೋಫೆರಾಲ್‌ಗಳ ಸ್ಥಿರತೆಯನ್ನು ಸಾಧಿಸಬಹುದು. ನ್ಯೂಟ್ರಾಸ್ಯುಟಿಕಲ್‌ಗಳ ಹೀರಿಕೆಯ ಮಟ್ಟವನ್ನು ನ್ಯಾನೋಕ್ಯಾರಿಯರ್ ಆಗಿ ಬದಲಾಯಿಸುವ ಮೂಲಕ ಹೆಚ್ಚಿಸಬಹುದು, ಈ ಪ್ರಕ್ರಿಯೆಯು ಈ ಜೈವಿಕ ಕ್ರಿಯಾಶೀಲ ಸಂಯುಕ್ತಗಳು ಕರುಳಿನ ಭಾಗದಿಂದ ರಕ್ತವಾಹಿನಿಯೊಳಕ್ಕೆ ಪ್ರವೇಶಿಸುವುದಕ್ಕೆ ಸಹಾಯ ಮಾಡುತ್ತದೆ. ನ್ಯಾನೋಎಮಲ್ಷನ್‌ನ ಡ್ರಾಪ್‌ಲೆಟ್ ಸೈಜ್ ವಿತರಣೆಯು 0.2–20 ವ್ಯಾಪ್ತಿಯಲ್ಲಿತ್ತು ಮತ್ತು ಆಕೃತಿ ಅಥವಾ ರೂಪವಿಜ್ಞಾನ (ಮಾರ್ಫಾಲಜಿ) ವು ತುಂಬಾ ಉತ್ತಮವಾದ ಮತ್ತು ಸಮಾನವಾದ ಗ್ಲೋಬ್ಯುಲರ್ ಡ್ರಾಪ್‌ಲೆಟ್‌ಗಳನ್ನು ಹೊರಗೆಡವಿತು. ಎಫ್‌ಟಿಐಆರ್ ಸ್ಪೆಕ್ಟ್ರಾವು ಎಮಲ್ಷನ್‌ನಲ್ಲಿ ಡಿಎಚ್‌ಎ ಯ ಅಸ್ತಿತ್ವವನ್ನು ನಿಖರಪಡಿಸಿತು. ಆದ್ದರಿಂದ, ತಯಾರಿಸಲ್ಪಟ್ಟ ಡಿಎಚ್‌ಎ ನ್ಯಾನೋಎಮಲ್ಷನ್ ಅನ್ನು ಡಿಎಚ್‌ಎ ಯ ಜೈವಿಕಲಭ್ಯತೆಯನ್ನು ಉತ್ತಮಪಡಿಸುವುದಕ್ಕೆ ಆಹಾರ ಮತ್ತು ಫಾರ್ಮಾಸ್ಯುಟಿಕಲ್ ಅನ್ವಯಿಕೆಯಲ್ಲಿ ಬಳಸಿಕೊಳ್ಳಬಹುದಾಗಿದೆ.

ಸೂಪರ್‌ಕ್ರಿಟಿಕಲ್ $CO_2$ ದಿಂದ ಪಡೆದುಕೊಳ್ಳಲ್ಪಟ್ಟ ಟೀ ಕ್ಯಾಟೆಚಿನ್‌ಗಳನ್ನು ಲಿಪಿಡ್ ಆಧಾರಿತ ನ್ಯಾನೋಎಮಲ್ಷನ್ ವಿತರಣಾ ವ್ಯವಸ್ಥೆಗಳಲ್ಲಿ ಹೈಡ್ರೋಫಿಲಿಕ್ ಮತ್ತು ಹೈಡ್ರೋಫೋಬಿಕ್ ಎಮ್ಯುಲ್ಸಿಫೈಯರ್ ಸಂಯೋಜನದ ಜೊತೆಗೆ ಸೂರ್ಯಕಾಂತಿ ಎಣ್ಣೆ ಮತ್ತು ಪಾಮ್ ಆಯಿಲ್ ಅನ್ನು ಬಳಸಿಕೊಂಡು 0.1% (w/w) ನ ಸಾಂದ್ರತೆಯಲ್ಲಿ ಎನ್‌ಕ್ಯಾಪ್ಸ್ಯುಲೇಟ್ ಮಾಡಲಾಗಿದೆ. ನ್ಯಾನೋ ಎಮಲ್ಷನ್‌ಗಳನ್ನು ವರ್ಧಿತ ಸಂಗ್ರಹ ಸಂದರ್ಭಗಳಲ್ಲಿ ಅವುಗಳ ಭೌತರಾಸಾಯನಿಕ ಗುಣಗಳಾದ ಮೀನ್ ಎಮಲ್ಷನ್ ಸೈಜ್, ಕ್ರೀಮಿಂಗ್ ಇಂಡೆಕ್ಸ್, ಪಿಎಚ್, ಕಂಡಕ್ಟಿವಿಟಿ, ರಿಫ್ರಾಕ್ಟೀವ್ ಇಂಡೆಕ್ಸ್, ಬಣ್ಣ, ಪೆರೊಕ್ಸೈಡ್ ವ್ಯಾಲ್ಯೂ ಮತ್ತು ಭೌತಿಕ ಸ್ಥಿರತೆ ಮುಂತಾದವುಗಳನ್ನು ಗುರುತಿಸುವುದಕ್ಕೆ ವರ್ಗೀಕರಿಸಲಾಗುತ್ತದೆ. ಎನ್‌ಕ್ಯಾಪ್ಸುಲೇಟೆಡ್ ಮಾತೃಕೆಯಲ್ಲಿ ಕ್ಯಾಟೆಚಿನ್ ಸಂಯುಕ್ತಗಳ ಅಸ್ತಿತ್ವವು ವಿಭಿನ್ನ ರಾಸಾಯನಿಕ ಆ್ಯಸೇಗಳನ್ನು (ಒಟ್ಟು ಪಾಲಿಫಿನಾಲ್ ಅಂಶ, ಒಟ್ಟು ಫ್ಲ್ಯಾವೊನಾಯ್ಡ್ ಅಂಶ ಮತ್ತು ಎಫ್‌ಆರ್‌ಎಪಿ) ನಿರ್ವಹಿಸುವ ಮೂಲಕ ನಿಖರಪಡಿಸಲಾಗಿದೆ. ಎಲ್ಲಾ ಕ್ರಮಬದ್ಧ ವಿಧಾನಗಳಲ್ಲಿ ಕ್ಯಾಟೆಚಿನ್‌ಗಳ ಮೂಲಕ ನ್ಯಾನೋಎಮಲ್ಷನ್‌ಗಳ ಆಕ್ಸಿಡೇಷನ್ ಅನ್ನು ಯಶಸ್ವಿಯಾಗಿ ಕಂಡುಹಿಡಿಯಲಾಗಿದೆ. ಮೀನ್ ಡ್ರಾಪ್‌ಲೆಟ್ ಡಯಾಮೀಟರ್, ಕಂಡಕ್ಟಿವಿಟಿ, ರಿಫ್ರ್ಯಾಕ್ಟೀವ್ ಇಂಡೆಕ್ಸ್, ಪಿಎಚ್ ಮತ್ತು ಕ್ರೀಮಿಂಗ್ ಇಂಡೆಕ್ಸ್‌ಗಳಲ್ಲಿ 14 ದಿನಗಳವರೆಗೆ ಮತ್ತು 37°Cವರೆಗಿನ ಉಷ್ಣಾಂಶದವರೆಗೆ ಸೂರ್ಯಕಾಂತಿ ಎಣ್ಣೆ ಆಧಾರಿತ ನ್ಯಾನೋಎಮಲ್ಷನ್ ಇದು ಯಾವುದೇ ಗಮನಾರ್ಹವಾದ ಬದಲಾವಣೆಯಿಲ್ಲದೆಯೇ ಅತ್ಯುತ್ತಮವಾದ ಭೌತಿಕವಾಗಿ ಮತ್ತು ರಾಸಾಯನಿಕವಾಗಿ ಸ್ಥಿರತೆಯನ್ನು ತೋರ್ಪಡಿಸಿತು.

**ಕಾರ್ಯಾತ್ಮಕ ಆಹಾರ ಉತ್ಪನ್ನಗಳನ್ನು ತಯಾರಿಸುವುದು**

ಚಿಕ್‌ಪೀ ಹಿಟ್ಟು ಇದು ಕಡಿಮೆ ಪ್ರಮಾಣದ ಗ್ಲೈಸಿಮಿಕ್ ಇಂಡೆಕ್ಸ್ (ಜಿಐ) ಅಂಶವನ್ನು ಹೊಂದಿರುವುದಾಗಿ ತಿಳಿಯಲ್ಪಟ್ಟಿದೆ. ಕಡಿಮೆ ಜಿಐ ಉತ್ಪನ್ನಗಳನ್ನು ತಯಾರಿಸುವುದಕ್ಕೆ ಇದನ್ನು ನೂಡಲ್ಸ್, ಮತ್ತು ಚಪಾತಿಗಳಲ್ಲಿ ಸಂಯೋಜಿಸಲಾಗುತ್ತದೆ. ಗರಿಷ್ಠೀಕರಣದ ನಂತರ, ಉತ್ಪನ್ನದ ಗುಣಮಟ್ಟವನ್ನು ಉತ್ತಮಗೊಳಿಸುವುದಕ್ಕೆ ಇತರ ಸಂಯೋಜಕಗಳ ಜೊತೆಗೆ, ಗೋಧಿ ಹಿಟ್ಟಿನ ಜೊತೆಗೆ ಸುಮಾರು 50% ಚಿಕ್‌ಪೀ ಹಿಟ್ಟಿನ ಸಂಯೋಜನೆಯು ಉತ್ತಮ ಫಲಿತಾಂಶವನ್ನು ಒದಗಿಸಿದೆ. ಇದಕ್ಕೆ ಜೊತೆಯಾಗಿ, ಅಡಿಗೆಯ ಸಮಯದಲ್ಲಿನ ನಷ್ಟ ಮತ್ತು ಇನ್ ವಿಟ್ರೋ ಸ್ಟಾರ್ಚ್ ಜೀರ್ಣಕಾರಿತ್ವಕ್ಕೆ ಸಂಬಂಧಿಸಿದಂತೆ ಗ್ವಾರ್ ಗಮ್ (ಅಂಟು) ನೂಡಲ್‌ನ ಗುಣಮಟ್ಟವನ್ನು ಹೆಚ್ಚಿಸಿತು. ಚಪಾತಿಗೆ ಸಂಬಂಧಿಸಿದಂತೆ, 15% ಕ್ಕೂ ಹೆಚ್ಚಿನ ಚಿಕ್‌ಪೀ ಹಿಟ್ಟಿನ ಸಂಯೋಜನೆಯು ಉತ್ಪನ್ನದ ಸಂವೇದಕತ್ವ ಗುಣವನ್ನು ಕಡಿಮೆಗೊಳಿಸಿತು. ಉತ್ತರ ಭಾರತದ ಕಡೆಗಿನ ಪರೋಟಾದ ಪೌಷ್ಟಿಕಾಂಶಕ್ಕೆ ಸಂಬಂಧಿಸಿದ ಅಂಶಗಳನ್ನು ಸುಧಾರಿಸುವುದಕ್ಕೆ ಚಿಕ್‌ಪೀ ಹಿಟ್ಟು ಸೀಲಿಯಮ್ ಹಸ್ಕ್ ಮತ್ತು ಫೆನ್ಯುಗ್ರೀಕ್ ಇವುಗಳನ್ನು ಬಳಸಿಕೊಳ್ಳಲಾಗುತ್ತದೆ. ವಿವಿಧ ಮಿಶ್ರಣಗಳಿಗೆ ಸಂಬಂಧಿಸಿದಂತೆ ನಾದಿದ ಹಿಟ್ಟಿನ ಪ್ರವಹನಶಾಸ್ತ್ರವು ಗಮನಾರ್ಹವಾದ ಬದಲಾವಣೆಯನ್ನು ಹೊಂದಿದೆ ಮತ್ತು 20–25% ಚಿಕ್‌ಪೀ ಹಿಟ್ಟಿನ ಸಂಯೋಜದ ಜೊತೆಯಲ್ಲಿ, ಒಟ್ಟಾರೆ ಗುಣಮಟ್ಟದಲ್ಲಿ ಸ್ವಲ್ಪ ಪ್ರಮಾಣದ ಇಳಿಕೆ ಕಂಡುಬಂದಿದೆ. ಚಿಕ್‌ಪೀ, ಸೀಲಿಯಮ್ ಹಸ್ಕ್ ಮತ್ತು ಫೆನ್ಯುಗ್ರೀಕ್‌ಗಳಲ್ಲಿ ಪ್ರೋಟೀನ್ ಮತ್ತು ಫೈಬರ್ ಅಂಶಗಳು ಅನುಕ್ರಮವಾಗಿ 1.2 ಮತ್ತು 1.8 ಪಟ್ಟು ಹೆಚ್ಚಾಗಲ್ಪಟ್ಟವು.

ಒಂದು ಸಿಹಿಯಾದ ಸವಿಯಲು-ಸಿದ್ಧವಾಗಿರುವ ತಿಂಡಿಯನ್ನು ತಯಾರಿಸುವುದಕ್ಕೆ ಪಫ್ ಮಾಡಲ್ಪಟ್ಟ ಇಡಿ ಕಡಲೆ ಬೇಳೆಗೆ ವೇ (ಹಾಲೊಡಕು) ಪ್ರೋಟೀನ್ ಸಾಂದ್ರಕ, ಗಮ್ ಅರೇಬಿಕ್ ಮತ್ತು ಸಕ್ಕರೆಯ ಪುಡಿಯನ್ನು ಸೇರಿಸಿ ಕೋಟ್ ಮಾಡಲಾಯಿತು. ಈ ಉತ್ಪನ್ನವು ಉತ್ತಮವಾದ ಬಂಧಕ ಸಾಮರ್ಥ್ಯವನ್ನು ಹೊಂದಿರುತ್ತದೆ ಮತ್ತು ಮ್ಯಾಕ್ರೋನ್ಯೂಟ್ರಿಯೆಂಟ್‌ಗಳು ಮತ್ತು ಮೈಕ್ರೋನ್ಯೂಟ್ರಿಯೆಂಟ್‌ಗಳನ್ನು ಹೇರಳವಾಗಿ ಹೊಂದಿರುತ್ತದೆ. ಉತ್ಪನ್ನದ ಗುಣಲಕ್ಷಣಗಳಲ್ಲಿನ ಸುಧಾರಣೆಗಳು ಮತ್ತು ಕೋಟಿಂಗ್ ಪ್ರಕ್ರಿಯೆಯ ಮಾದರಿಗಳು ಅಭಿವೃದ್ಧಿ ಹಂತದಲ್ಲಿವೆ.

**ಪೌಷ್ಟಿಕಾಂಶದ ಪೂರೈಕೆಗೆ ಪ್ರೀಬಯೋಟಿಕ್ಸ್ ಆಗಿ ಮೈಕ್ರೋಬ್‌ಗಳು ಮತ್ತು ಆಯ್ದ ಒಲಿಗೋ-, ಪ್ರೀಬಯೋಟಿಕ್ಸ್ ಆಗಿ ಪಾಲಿಸ್ಯಾಕರೈಡ್‌ಗಳು**

ಒಂದು ಉತ್ತಮ ಪ್ರೊಬಯೋಟಿಕ್ ಆಗಿರುವ ಎಲ್. ಪ್ಲ್ಯಾಂಟರಮ್ MTCC2156 (KoA1) ಅನ್ನು ಬಳಸಿಕೊಂಡು ಬೀಟಾ-ಗ್ಯಾಲಕ್ಟೋಸೈಡೇಸ್‌ನ ಕಿಣ್ವನಕಾರಿ ಉತ್ಪಾದನೆಗೆ ಮತ್ತು ಜೊತೆಗೆ ಎಲ್. ಪ್ಲ್ಯಾಂಟರಮ್ ಬೀಟಾ-ಗ್ಯಾಲಕ್ಟೋಸೈಡೇಸ್ ಅನ್ನು ಬಳಸಿಕೊಂಡು ಗ್ಯಾಲಕ್ಟೂಅಲಿಗೋಸ್ಯಾಕರೈಡ್ಸ್ (ಜಿಒಎಸ್) ನ ಉತ್ಪಾದನೆಗೆ ಒಂದು ಮಿತವ್ಯಯಕರ ಮೂಲವಾಗಿ ವೇ (ಹಾಲೊಡಕು) ಅನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನಗಳನ್ನು ನಡೆಸಲಾಗಿದೆ. ವೇ ಮಾಧ್ಯಮವು ಗ್ಯಾಲಕ್ಟೋಸ್ (0.2%) ಅನ್ನು ಹೊಂದಿದ್ದ ಪಕ್ಷದಲ್ಲಿ ಬೀಟಾ-ಗ್ಯಾಲಕ್ಟೋಸ್‌ನ ಸಂಯೋಜನವು ಅತ್ಯಂತ ಹೆಚ್ಚಿನ ಪ್ರಮಣದಲ್ಲಿರುತ್ತದೆ ಎಂಬುದನ್ನು ಫಲಿತಾಂಶಗಳು ಸೂಚಿಸಿದವು. ವೇ ಮಾಧ್ಯಮದಲ್ಲಿ ಎಲ್. ಪ್ಲ್ಯಾಂಟರಮ್‌ನ ಅಭಿವೃದ್ಧಿಯ ಚಲನಶಾಸ್ತ್ರ, ಬೀಟಾ-ಗ್ಯಾಲಕ್ಟೋಸೈಡೇಸ್ ಉತ್ಪಾದನೆ ಮತ್ತು ಲ್ಯಾಕ್ಟೋಸ್ ಬಳಸಿಕೊಳ್ಳುವಿಕೆಗಳು ಅಭಿವೃದ್ಧಿಯ ಹಂತದಲ್ಲಿವೆ. ಜಿಎಸ್‌ಇ ಯು 98% ಡಿಪಿಪಿಎಚ್ ಶುದ್ಧೀಕರಣ ಚಟುವಟಿಕೆಯ ಜೊತೆಗೆ ಸುಮಾರು 97.86% ಒಟ್ಟೂ ಪಾಲಿಫಿನಾಲ್‌ಗಳನ್ನು ಹೊಂದಿರುತ್ತವೆ. ಆಯ್ದ ಸ್ಟ್ರೇನ್‌ನ ಅಭಿವೃದ್ಧಿ ಮಾದರಿಯು ನಿಯಂತ್ರಿತ ಸನ್ನಿವೇಶಗಳಲ್ಲಿ (ಎಮ್‌ಆರ್‌ಎಸ್ ಮಾಧ್ಯಮ)

ಮತ್ತು ಜಿಒಎಸ್, ಜಿಎಸ್‌ಇ ಯಲ್ಲಿ ಮಾತ್ರ ಅಥವಾ ಒಂದು ಸಂಯೋಜನದಲ್ಲಿ ಸರಿಸುಮಾರು ಒಂದೇ ತೆರನಾಗಿರುತ್ತದೆ. ಸುಧಾರಿತ ಕಾರ್ಯಾತ್ಮಕ ಅಂಶಗಳ ಜೊತೆಗೆ ಜಿಎಸ್‌ಇ, ಜಿಒಎಸ್ ಮತ್ತು ಎಲ್. ಪ್ಲ್ಯಾಂಟರಮ್‌ಗಳನ್ನು ಬಳಸಿಕೊಂಡು ಇನ್ನೂ ಹೆಚ್ಚಿನ ಉತ್ಪನ್ನ ಸೂತ್ರಗಳನ್ನು ಅಭಿವೃದ್ಧಿಗೊಳಿಸಬಹುದು ಎಂಬುದನ್ನು ಇದು ಸೂಚಿಸುತ್ತದೆ.

ಶಿಶುವಿನ ಮಲ (ಫೀಕಲ್) ಮತ್ತು ಮಾನವರ ಎದೆಹಾಲಿನಿಂದ ಬಿಫಿಡೋಬ್ಯಾಕ್ಟೀರಿಯಾವನ್ನು (Bifidobacteria) ಪ್ರತ್ಯೇಕಗೊಳಿಸುವಿಕೆಯನ್ನು ಪ್ರಾರಂಭಿಸಲಾಗಿದೆ. ನಲವತ್ತೈದು ಐಸೋಲೇಟ್ (ಪ್ರತ್ಯೇಕಿತ ಅಂಶ) ಗಳನ್ನು ಬಿಫಿಡೋಬ್ಯಾಕ್ಟೀರಿಯಲ್ ಜೀನಸ್–ಸ್ಪೆಸಿಫಿಕ್ ಪಿಸಿಆರ್ ಗೆ ಒಳಪಡಿಸಲಾಯಿತು. ಬಿಫಿಡೋಬ್ಯಾಕ್ಟೀರಿಯಲ್ ಫ್ರುಕ್ಟೋಸ್ 6 ಫೊಸ್ಫೋಕೆಟೋಲೇಸ್ (Xfp) ಎನ್‌ಕೋಡಿಂಗ್ ಜೀನ್‌ಗೆ ಸಂಬಂಧಿಸಿದಂತೆ ಅತ್ಯಂತ ಹೆಚ್ಚು ನಿರ್ದಿಷ್ಟವಾದ ಪ್ರೈಮರ್‌ಗಳಿಗಾಗಿ ಪರೀಕ್ಷೆಗೆ ಒಳಪಡಿಸಲ್ಪಟ್ಟ ಐಸೋಲೇಟ್‌ಗಳಲ್ಲಿ ಆರು ಐಸೋಲೇಟ್‌ಗಳು ಸಕರಾತ್ಮಕವಾಗಿವೆ ಎಂಬ ಅಂಶವು ತಿಳಿದು ಬಂದಿತು. ಲ್ಯಾಕ್ಟೋಬ್ಯಾಸಿಲಸ್‌ನ ಏಳು ವಿಧಗಳು ಮತ್ತು ಬಿಫಿಡೋಬ್ಯಾಕ್ಟೀರಿಯಾದ ಎರಡು ವಿಧಗಳನ್ನು ಒಂದು ಸಬ್‌ಸ್ಟ್ರೇಟ್ ಆಗಿ ಪ್ರತಿರೋಧಕ ಸ್ಟಾರ್ಚ್‌ನಲ್ಲಿ ಬೆಳೆಯಲ್ಪಟ್ಟ ಎಕ್ಸ್ಟ್ರಾಸೆಲ್ಯುಲರ್ ಅಮೈಲೇಸ್ ಚಟುವಟಿಕೆ ಮತ್ತು ಇಂಟ್ರಾಸೆಲ್ಯುಲರ್ ಆಲ್ಫಾ ಗ್ಲ್ಯೂಕೋಸೈಡೇಸ್ ಚಟುವಟಿಕೆಗಳಿಗಾಗಿ ವಿಶ್ಲೇಷಣೆಗೆ ಒಳಪಟ್ಟವು. ಇವುಗಳಲ್ಲಿ ಲ್ಯಾಕ್ಟೋಬ್ಯಾಸಿಲಸ್ ಫರ್ಮೆಂಟಮ್ ಇದು ಸುಮಾರು 50 U (U = nanomoles/ml/minute) ಕಿಣ್ವ ಚಟುವಟಿಕೆಯನ್ನು ಪ್ರದರ್ಶಿಸಿತು. ಲ್ಯಾಕ್ಟೋಬ್ಯಾಸಿಲಸ್ ಫರ್ಮೆಂಟಮ್ 14–16 ಗಂಟೆಗಳ ಸ್ಥಿರ ಬೆಳವಣಿಗೆಯನ್ನು ತೋರಿಸಿತು. ಕಿಣ್ವಗಳ ಉತ್ಪಾದನೆಗೆ ಲ್ಯಾಕ್ಟೋಬ್ಯಾಸಿಲಸ್‌ನ ಫರ್ಮೆಂಟಮ್‌ನ ಬೆಳವಣಿಗೆಗೆ ಮಾಧ್ಯಮವನ್ನು ಅಥವಾ ವಿಧಾನವನ್ನು ಪ್ರಮಾಣೀಕರಿಸಲಾಗಿದೆ.

**III. ಲಿಪಿಡೋಮಿಕ್ಸ್ ಸೆಂಟರ್ (LIPIC) (ರಾಮ್ ರಾಜಶೇಖರನ್, ಮಾಲತಿ ಶ್ರೀನಿವಾಸನ್, ರಮೇಶ್ ಕುಮಾರ್ ಆರ್, ಶ್ರೀಧರ್ ಆರ್‌ವಿ, ಸನ್ನಿ ರುಪ್‌ವಾಟೆ)**

**ಸೌಕರ್ಯಗಳ ನಿರ್ಮಾಣ**

ದೇಶದಲ್ಲಿ ಸ್ಟೇಟ್–ಆಫ್–ದ–ಆರ್ಟ್ ಲಿಪಿಡ್ ಸಂಶೋಧನಾ ಕೇಂದ್ರವನ್ನು ನಿರ್ಮಾಣ ಮಾಡುವುದೇ XII ಪ್ಲ್ಯಾನ್ ಯೋಜನೆ ಲಿಪಿಡೊಮಿಕ್ ಸೆಂಟರ್ (LIPIC) ನ ಪ್ರಾಥಮಿಕ ಗುರಿಯಾಗಿದೆ. ಈ ನಿಟ್ಟಿನಲ್ಲಿ, ಬೆಂಗಳೂರಿನಲ್ಲಿ ನವ ಸೌಕರ್ಯಗಳ ನಿರ್ಮಾಣದ ಕಾರ್ಯವು ಪ್ರಗತಿಯಲ್ಲಿದೆ. ಈ ಕೇಂದ್ರವು ಸೂಪರ್ ರೆಸೊಲ್ಯೂಷನ್ ಲೈವ್ ಸೆಲ್ ಇಮೇಜಿಂಗ್‌ನ ಸೌಕರ್ಯವನ್ನು ಒದಗಿಸುವುದಕ್ಕೆ ಭಾರತದಲ್ಲಿ ಮೊಟ್ಟಮೊದಲನೆಯದಾದ ಒಂದು ಹೈ ಎಂಡ್ ಲೈಕಾ ಗೇಟೆಡ್ ಸೂಪರ್ ರೆಸ್ಲೊಲ್ಯೂಷನ್ ಮೈಕ್ರೋಸ್ಕೋಪ್ (STED) ಅನ್ನು ಸ್ಥಾಪಿಸಿದೆ. ಇದರ ಹೊರತಾಗಿ, ಸಂಶೋಧನೆಗೆ ಸಂಬಂಧಿಸಿದಂತೆ, ಯೀಸ್ಟ್ ಮತ್ತು ಸಸ್ಯಗಳ ಲಿಪಿಡೋಮ್‌ಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳಲ್ಲಿ ಪ್ರಗತಿಯನ್ನು ಸಾಧಿಸಲಾಗುತ್ತಿದೆ.

**ಸಸ್ಯಗಳ ಲಿಪಿಡೋಮ್**

ಓಸಿಮಮ್: ಬ್ಯಾಸಿಲ್ ಜರ್ಮ್‌ಪ್ಲಾಸ್ಮ್ ಲೈನ್‌ಗಳ ಮೂರು ವಿಧಗಳಿಗೆ ಸಂಬಂಧಿಸಿದಂತೆ ಅಂದರೆ ಓ. ಟೆನ್ಯೂಫ್ಲೋರಮ್ (OT), ಓ. ಬ್ಯಾಸಿಲಿಕಮ್ (OB) ಮತ್ತು ಓ. ಗ್ರಾಟಿಸಿಮಮ್‌ಗಳ (OG) ಜೆನೆಟಿಕ್ ನಿಯತಾಂಕಗಳು, ಬೀಜದ ಎಣ್ಣೆಯ ಅಂಶಗಳು ಮತ್ತು ಸಂಯೋಜನಕ್ಕೆ ಸಂಬಂಧಿಸಿದ ಸಹಸಂಬಂಧತೆ ಮತ್ತು ವೈವಿಧ್ಯತೆಯನ್ನು ತನಿಖೆಗೆ ಒಳಪಡಿಸಲಾಯಿತು.

ಸೀಡ್ ಲಿಪಿಡ್ ಅಂಶ ಮತ್ತು ಸಂಯೋಜನದ 3 ವಿಧಗಳ ಜೆನೆಟಿಕ್ ವೈವಿಧ್ಯತೆಯ ಅಧ್ಯಯನಗಳು ಬೆಸಿಲ್ ಆ್ಯಕ್ಸೆಷನ್ ಅನ್ನು ಎರಡು ವಿಶಾಲ ಗುಂಪುಗಳಾಗಿ ವಿಂಗಡಿಸಿವೆ – ಎ ಮತ್ತು ಬಿ. ಈ ಗುಂಪು ಮಾಡುವಿಕೆಯು ಬ್ಯಾಸಿಲಿಕಮ್ (ಗುಂಪು-A, OB) ಮತ್ತು ಸ್ಯಾಂಕ್ಟಮ್ (ಗುಂಪು B, OT ಮತ್ತು OG) ಎಂಬ ಎರಡು ಸಸ್ಯಶಾಸ್ತ್ರೀಯ ವಿಭಾಗಗಳ ಜೊತೆಗೆ ಸಮರ್ಪಕವಾಗಿದೆ ಎಂಬುದು ಕಂಡುಬಂದಿದೆ. ಬ್ಯಾಸಿಲಿಕಮ್ ಮತ್ತು ಸ್ಯಾಂಕ್ಟಮ್ ವಿಭಾಗಗಳು ಸೀಡ್ ಲಿಪಿಡ್‌ಗೆ ವ್ಯತಿರಿಕ್ತವಾಗಿವೆ ಮತ್ತು ಇದರ ಸಂಯೋಜನವು ಟ್ಯಾಕ್ಸೋನೊಮಿಕಲ್ ವಿಂಗಡನೆಯನ್ನು ಸಮರ್ಥಿಸುತ್ತದೆ ಎಂಬುದನ್ನು ನಮ್ಮ ಅಧ್ಯಯನಗಳು ಧೃಡಪಡಿಸಿವೆ. ಈ ವಿಭಿನ್ನವಾದ ಗುಂಪುಮಾಡುವಿಕೆಯು ಹೆಚ್ಚಿನ ಪ್ರಮಾಣದ ಎ–ಲಿನೋಲೆನಿಕ್ ಆಮ್ಲ (ಎಎಲ್‌ಎ), ಆರೋಗ್ಯ ವರ್ಧಕ ಒಮೆಗಾ–3 ಕೊಬ್ಬಿನ ಆಮ್ಲಗಳನ್ನು ಉತ್ಪಾದಿಸುವುದಕ್ಕೆ ಸಮರ್ಥವಾಗಿರುವ ವಿಧಗಳನ್ನು ಗುರುತಿಸುವುದರ ಅವಶ್ಯಕತೆಯನ್ನು ಪ್ರತಿಪಾದಿಸಿತು.

ಎಎಲ್‌ಎ ಯು ಎಲ್ಲಾ ಮೂರು ವಿಧಗಳಲ್ಲಿ ಕಂಡುಬರುವ ಪ್ರಮುಖವಾದ ಕೊಬ್ಬಿನ ಆಮ್ಲವಾಗಿದೆ (46.35%), ನಂತರದಲ್ಲಿ ಲಿನೋಲಿಯಿಕ್ ಆಮ್ಲ (ಎಲ್‌ಎ) (24.59%), ಓಲೆಯಿಕ್ ಆಮ್ಲ (ಒಎ) (12.45%), ಪಾಮಿಟಿಕ್ ಆಮ್ಲ (ಪಿಎ) (8.89%) ಮತ್ತು ಸ್ಟಿರಿಕ್ ಆಮ್ಲ (ಎಸ್‌ಎ) (4.05%) ಇವುಗಳು ಕಂಡುಬರುತ್ತವೆ. ಒಬಿ (54.40%) ಯಲ್ಲಿ ಎಎಲ್‌ಎ ಅಂಶವು ಒಟಿ (43.52%) ಮತ್ತು ಒಜಿ (47.22%) ಗಳಿಗಿಂತ ಗಮನಾರ್ಹವಾಗಿ ಹೆಚ್ಚಿರುವುದು ಕಂಡುಬಂದಿದೆ. ಸೀಡ್ ಲಿಪಿಡ್ ಸಂಯೋಜನಕ್ಕೆ ಸಂಬಂಧಿಸಿದಂತೆ ಸಸ್ಯಶಾಸ್ತ್ರೀಯ ವಿಭಾಗದ ಬ್ಯಾಸಿಲಿಕಮ್ ಮತ್ತು ಸ್ಯಾಂಕ್ಟಮ್‌ಗಳು ವಿಭಿನ್ನವಾಗಿರುತ್ತವೆ ಎಂಬುದರ ಬಗ್ಗೆ ನಮ್ಮ ಜೆನೆಟಿಕ್ ವೈವಿಧ್ಯತಾ ಅಧ್ಯಯನಗಳನ್ನು ಈ ಅವಲೋಕನವು ಬೆಂಬಲಿಸುತ್ತದೆ. ಒಟಿ ಯ (ಪಿಎ – 9.64% ಮತ್ತು ಎಸ್‌ಎ – 4.54%) ಸ್ಯಾಚುರೇಟೆಡ್ ಕೊಬ್ಬಿನ ಆಮ್ಲದ ಅಂಶಗಳು ಒಜಿ ಮತ್ತು ಒಬಿ ಗಿಂತ ಬಹಳಷ್ಟು ಪ್ರಮಾಣದಲ್ಲಿ ಹೆಚ್ಚಿದ್ದವು.

ಬೇಸಿಲ್ ಆ್ಯಕ್ಸೆಷನ್‌ಗಳ ಮೀನ್ ಸೀಡ್ ಆಯಿಲ್ ಅಂಶವು 14.31% ಇತ್ತು ಅಂದರೆ 9.51% ದಿಂದ 20.65% ವ್ಯಾಪ್ತಿಯಲ್ಲಿತ್ತು. ಮೂರು ವಿಧಗಳಲ್ಲಿ, ಪ್ರಬಲವಾದ ಕೊಬ್ಬಿನ ಆಮ್ಲ(ಎಎಲ್‌ಎ)ದ ಹೆಚ್ಚಿನ ಪ್ರಮಾಣವನ್ನು ಹೊಂದಿರುವ ಒಬಿ ಯು ಹೆಚ್ಚಿನ ಪ್ರಮಾಣದ ಸೀಡ್ ಆಯಿಲ್ ಅಂಶವನ್ನೂ (16.09%) ಒಳಗೊಂಡಿತ್ತು. ಒಬಿ ಯ (29.14 gm) ಸೀಡ್ ಯೀಲ್ಡ್/ಪ್ಲ್ಯಾಂಟ್ ಕೂಡ ಒಜಿ (25.42 gm) ಮತ್ತು ಒಟಿ (7.94 gm) ಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿತ್ತು. ಪರೀಕ್ಷೆ ನಡೆಸಲ್ಪಟ್ಟ ಮೂರು ವಿಧಗಳಲ್ಲಿ, ಒಬಿ ಯಲ್ಲಿ ಆರೋಗ್ಯ ಲಾಭದಾಯಕ ಒಮೆಗಾ–3 ಕೊಬ್ಬಿನ ಆಮ್ಲಗಳ ನಂಬಲರ್ಹ ಮೂಲಗಳಾಗಿ ಕಾರ್ಯನಿರ್ವಹಿಸುವಂತಹ ಹೆಚ್ಚಿನ ಪ್ರಮಾಣದ ಎಎಲ್‌ಎ, ಸೀಡ್ ಆಯಿಲ್ ಮತ್ತು ಸೀಡ್ ಯೀಲ್ಡ್‌ಗಳು ಕಂಡುಬಂದವು.

ಕಡಿಮೆ ಪ್ರಮಾಣದ ಜೆನೆಟಿಕ್ ಸುಧಾರಣೆಗಳ (23.03% ಮತ್ತು 17.29%) ಜೊತೆಗೆ ಸಂಯೋಜಿತವಾದ ಪಿಎ ಮತ್ತು ಒಎ ಗಳು ಕಡಿಮೆ ಪ್ರಮಾಣದ ಆನುವಂಶಿಕ ಅಂದಾಜುಗಳನ್ನು (0.4473 ಮತ್ತು 0.5906) ಸೂಚಿಸಿದವು ಎಂಬ ಅಂಶವನ್ನು ಎಣ್ಣೆಯ ಅಂಶಗಳಿಗೆ ಮತ್ತು ಐದು ಪ್ರಮುಖ ಕೊಬ್ಬಿನ

ಆಮ್ಲಗಳಿಗೆ ಸಂಬಂಧಿಸಿದಂತೆ ಜೆನೆಟಿಕ್ ಪರಿಮಾಣಗಳ ನಿರ್ಧಾರಣವು ಸೂಚಿಸಿತು, ಬೇಸಿಲ್ ಪರಿಮಾಣದಲ್ಲಿ ಈ ಕೊಬ್ಬಿನ ಆಮ್ಲಗಳಿಗೆ ಆಯ್ಕೆಯ ಪ್ರಕ್ರಿಯೆಯು ಕನಿಷ್ಠ ಮಟ್ಟದ ಜೆನೆಟಿಕ್ ಲಾಭದ ಕಾರಣದಿಂದಾಗಿ ಯಾವುದೇ ರೀತಿಯ ಜೆನೆಟಿಕ್ ಸುಧಾರಣೆಗೆ ಕಾರಣವಾಗುವುದಿಲ್ಲ ಎಂಬ ಅಂಶವನ್ನು ಇದು ಸೂಚಿಸಿತು. ಉಳಿದ ಮೂರು ಕೊಬ್ಬಿನ ಆಮ್ಲಗಳಾದ ಎಸ್‌ಎ, ಎಲ್‌ಎ ಮತ್ತು ಎಎಲ್‌ಎ ಗಳು ಹೆಚ್ಚಿನ ಪ್ರಮಾಣದ ಜೆನೆಟಿಕ್ ಸುಧಾರಣೆಯ (43.06%, 29.24% ಮತ್ತು 30.85%) ಸಂಯೋಜನದ ಜೊತೆಗೆ ಹೆಚ್ಚಿನ ಪ್ರಮಾಣದ ಆನುವಂಶಿಕ ಅಂದಾಜುಗಳನ್ನು (0.8309, 0.8037 ಮತ್ತು 0.8632) ಬಹಿರಂಗಗೊಳಿಸಿದವು, ಈ ಮಾದರಿಗಳು ವಿಶ್ವಾಸಾರ್ಹವಾಗಿವೆ ಮತ್ತು ಈ ಕೊಬ್ಬಿನ ಆಮ್ಲಗಳಿಗೆ ಆಯ್ಕೆಮಾಡುವ ಪ್ರಕ್ರಿಯೆಯು ಲಾಭದಾಯಕವಾಗಿರುತ್ತದೆ ಎಂಬ ಅಂಶವನ್ನು ಇದು ಸೂಚಿಸುತ್ತದೆ. ಇದೇ ರೀತಿಯಾಗಿ, ಹೆಚ್ಚಿನ ಆನುವಂಶಿಕತೆ (0.7914) ಮತ್ತು ಮಧ್ಯಮ ರೀತಿಯ ಜೆನೆಟಿಕ್ ಸುಧಾರಣೆಯನ್ನು (24.06%) ಹೊಂದಿರುವಂತಹ ಎಣ್ಣೆಯ ಅಂಶಗಳಿಗೆ ಆಯ್ಕೆಯ ಪ್ರಕ್ರಿಯೆಯು ಪರಿಣಾಮಕಾರಿಯಾಗಿರುತ್ತದೆ.

ಪ್ರಬಲವಾದ ಕೊಬ್ಬಿನ ಆಮ್ಲ ಎಎಲ್‌ಎ ಯ ಸಂಯೋಜನವು ಎಣ್ಣೆಯ ಅಂಶ (0.5436) ಮತ್ತು ಸೀಡ್ ಯೀಲ್ಡ್ (0.6390) ಜೊತೆಗೆ ಗಮನಾರ್ಹವಾದ ಪ್ರಮಾಣದಲ್ಲಿ ಸಕಾರಾತ್ಮಕವಾಗಿದೆ ಎಂಬ ಅಂಶವನ್ನು ಪರಸ್ಪರ ಕ್ರಿಯೆಯು (ಕೊರಿಲೇಷನ್) ಅಂದಾಜುಗಳು ಬಹಿರಂಗಪಡಿಸಿದವು. ಎಣ್ಣೆಯ ಅಂಶ (0.5436) ಮತ್ತು ಸೀಡ್ ಯೀಲ್ಡ್ (0.6390) ಗಳು ಒಂದಕ್ಕೊಂದು ಸಕಾರಾತ್ಮಕವಾದ ಸಂಬಂಧವನ್ನು ಹೊಂದಿರುವುದು ಕಂಡುಬಂದಿತು (0.4655). ಎಎಲ್‌ಎ, ಎಣ್ಣೆಯ ಅಂಶ ಮತ್ತು ಸೀಡ್ ಯೀಲ್ಡ್‌ಗಳ ಕೊರಿಲೇಷನ್ ಉಳಿದ ನಾಲ್ಕು ಕೊಬ್ಬಿನ ಆಮ್ಲಗಳೊಂದಿಗೆ ನಕಾರಾತ್ಮಕವಾಗಿರುವುದು ಕಂಡುಬಂದಿತು. ಎಣ್ಣೆಯ ಅಂಶ ಮತ್ತು ಸೀಡ್ ಯೀಲ್ಡ್‌ಗಳೊಂದಿಗೆ ಎಎಲ್‌ಎ ಯ ಸಕಾರಾತ್ಮಕ ಕೊರಿಲೇಷನ್ ಇದು ಪರೋಕ್ಷ ಆಯ್ಕೆಯ ಮೂಲಕ ಅಂದರೆ ತುಲನಾತ್ಮಕವಾಗಿ ಸುಲಭವಾಗಿರುವ ಮತ್ತು ಪರೀಕ್ಷೆಗೆ ತ್ವರಿತವಾಗಿ ಒಳಪಡುವ ಎಣ್ಣೆಯ ಅಂಶ ಮತ್ತು ಸೀಡ್ ಯೀಲ್ಡ್‌ಗಳ ಮೂಲಕ ಒಮೆಗಾ–3 ಕೊಬ್ಬಿನ ಆಮ್ಲವನ್ನು ಪಡೆಯುವುದಕ್ಕೆ ಜೆನೆಟಿಕ್ ಸುಧಾರಣೆಯನ್ನು ಸೂಚಿಸುತ್ತದೆ.

**ಚಿಯಾ (Chia): ಚಿಯಾದ ಜೆನೆಟಿಕ್ ಸುಧಾರಣೆ (Salvia hispanica)**

ಚಿಯಾದ ಮೊಟ್ಟಮೊದಲ ಟ್ರಾನ್ಸ್ಕ್ರಿಪ್ಟೋಮ್ ಮಾಹಿತಿಯು ಪ್ರಸ್ತುತದಲ್ಲಿ ಲಿಪ್ಡಿಯೋಮಿಕ್ ಕೇಂದ್ರದಲ್ಲಿ ಲಭ್ಯವಿದೆ, ಈ ಕೇಂದ್ರವು ಚಿಯಾ ಬೀಜದ ವಿಭಿನ್ನವಾದ ಅಭಿವೃದ್ಧಿ ಹಂತಗಳಿಗೆ ಸಂಬಂಧಿಸಿದಂತೆ ಟ್ರಾನ್ಸ್ಕ್ರಿಪ್ಟೋಮ್‌ನ ಗಣಿಗಾರಿಕೆಗೆ ಸಹಾಯ ಮಾಡುತ್ತದೆ. 5 ವಿಭಿನ್ನ ಅಭಿವೃದ್ಧಿ ಹಂತಗಳಿಂದ (3, 7, 14, 21, ಮತ್ತು 28 ಡಿಎಎಫ್ (ಹೂವು ಅರಳಿದ ನಂತರದ ದಿನಗಳು)) ಪಡೆದುಕೊಂಡ ಬೀಜಗಳ ಆರ್‌ಎನ್‌ಎ ಅನ್ನು ಪ್ರತ್ಯೇಕಿಸಲಾಯಿತು ಮತ್ತು ಒಂದು ಇಲ್ಯುಮಿನಾ ಪ್ಲ್ಯಾಟ್‌ಫಾರ್ಮ್ ಅನ್ನು ಬಳಸಿಕೊಂಡು ಅದನ್ನು ಕ್ರಮಾನುಗತಗೊಳಿಸಲಾಯಿತು. ಈ ಮಾಹಿತಿಯನ್ನು ಎನ್‌ಸಿಬಿಐ (PRJNA196477) ನಲ್ಲಿ ದಾಖಲಿಸಲಾಗಿದೆ.

